ಕರುನಾಡು ಎಗ್ಸಾಂ

# ಪ್ರಚಲಿತ ವಿದ್ಯಮಾನಗಳು

ಜುಲೈ

2013

ಸಂಪರ್ಕಿಸಿ: KARUNADUEXAMS.COM

# ರಾಜ್ಯ

**ಜುಲೈ 1: ಕರ್ನಾಟಕ ಪತ್ರಿಕಾ ದಿನ, "ಮಂಗಳೂರು ಸಮಾಚಾರ"ಕ್ಕೆ 170 ರ ಸಂಭ್ರಮ**

ಜುಲೈ 1 ಕನ್ನಡದ ಮೊದಲ ಪತ್ರಿಕೆ "ಮಂಗಳೂರು ಸಮಾಚಾರ" ಆರಂಭವಾದ ದಿನ. ಈ ದಿನವನ್ನು ಕರ್ನಾಟಕದಲ್ಲಿ ಪತ್ರಿಕಾ ದಿನವನ್ನಾಗಿ ಆಚರಿಸಲಾಗುತ್ತದೆ. ಕನ್ನಡ ಪತ್ರಿಕೋದ್ಯಮದ ಇಂದಿನ ಸ್ಥಿತಿ ಗತಿ, ಮುಂದಿನ ಕಾರ್ಯಗಳ ಬಗ್ಗೆ ವಿಮರ್ಶೆ, ಪತ್ರಿಕಾ ಮಾಧ್ಯಮದ ಭವಿಷ್ಯ ಹಾಗೂ ಪತ್ರಿಕೋದ್ಯಮವನ್ನು ಜನ ಸಾಮಾನ್ಯರಿಗೆ ಪರಿಚಯಿಸುವ ಸಲುವಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಈ ದಿನದಂದು ವಿಚಾರ ವಿನಿಮಯವನ್ನು ನಡೆಸಲಾಗುವುದು.

**ಕರ್ನಾಟಕ ಪತ್ರಿಕ ದಿನದ ಹಿನ್ನಲೆ:**

- ಇಂದು ಮುದ್ರಣ ಮಾಧ್ಯಮ ನಾಗರಿಕ ಸಮಾಜದ ಒಂದು ಅವಿಭಾಜ್ಯ ಅಂಗ. ನಾಗರಿಕತೆಯ ಬೆಳವಣಿಗೆಯಲ್ಲಿ ಮುದ್ರಣ ಮಾಧ್ಯಮದ ಕೊಡುಗೆ ಅಪಾರ. ಇಂತಹ ಮಾಧ್ಯಮದ ಇತಿಹಾಸ ಮೊದಲು ಪ್ರಾರಂಭವಾದದ್ದು 1440 ರಲ್ಲಿ. ಜರ್ಮನಿಯ ಜೊಹಾನ್ ಗುಟೆಂನ್ ಬರ್ಗ್ 1440 ರಲ್ಲಿ ಅಚ್ಚುಮೊಳೆ ತಯಾರಿಸಿ, ಪವಿತ್ರ ಗ್ರಂಥ ಬೈಬಲ್ ಅನ್ನು ಮುದ್ರಿಸಿದಾಗ ಅಂದಿನ ದಿನಗಳಲ್ಲಿ ಅದು ಪ್ರತಿಕಾ ಮಾಧ್ಯಮದಲ್ಲಿ ಆದ ಮೊದಲ ಆವಿಷ್ಕಾರವೇ ಸರಿ.
- ಕರ್ನಾಟಕದಲ್ಲಿ ಮೊದಲು ಕನ್ನಡ ದಿನ ಪತ್ರಿಕೆಯನ್ನು ಆರಂಭಿಸಿದ ಕೀರ್ತಿ ಹರ್ಮನ್ ಫ್ರೆಡರಿಕ್ ಮೊಗ್ಲಿಂಗ್ ಗೆ ಸಲ್ಲುತ್ತದೆ. ಈತ ಕನ್ನಡ ಪತ್ರಿಕೋದ್ಯಮದ ಮೂಲ ಪುರುಷ, ಲೇಖಕ ಸಾಹಿತಿ, ಇತಿಹಾಸಕಾರ, ತರ್ಜುಮೆದಾರ ಹಾಗೂ ಸಂಗ್ರಹಕಾರ.
- "ಮಂಗಳೂರು ಸಮಾಚಾರ" 1843 ಜುಲೈ 1 ರಂದು ಮೊದಲ ಬಾರಿಗೆ ಮುದ್ರಣಗೊಂಡಿತು. ಈ ಮೂಲಕ ಕನ್ನಡ ಪತ್ರಿಕೋದ್ಯಮಕ್ಕೆ ಮುನ್ನಡೆ ಬರೆಯಿತು. ಮುಂದೆ 1844 ರಲ್ಲಿ ಈ ಪತ್ರಿಕೆ ಬಳ್ಳಾರಿಗೆ ವರ್ಗಾವಣೆಗೊಂಡಿತಲ್ಲದೇ "ಕನ್ನಡ ಸಮಾಚಾರ"ವೆಂದು ಮರುನಾಮಕರಣಗೊಂಡಿತು.
- 1837 ರಲ್ಲಿ ಧಾರಾವಾಡಕ್ಕೆ ಆಗಮಿಸಿ ಅಲ್ಲಿ ಆಂಗ್ಲ ಶಾಲೆಯನ್ನು ಆರಂಭಿಸಿದ್ದ ಮೊಗ್ಲಿಂಗ್ ಮುಂದೆ ಧರ್ಮ ಪ್ರಸಾರದ ಜತೆಗೆ ಒಂದು ಪತ್ರಿಕೆಯನ್ನು ಜನತೆಗೆ ನೀಡಬೇಕೆಂಬ ಹಂಬಲದಿಂದ ಬಾಸೆಲ್ ಮಿಷನ್ ನಿಂದ 1843 ರಲ್ಲಿ ಪ್ರಕಟಗೊಂಡ ಮಂಗಳೂರು ಸಮಾಚಾರಕ್ಕೆ ಜುಲೈ 1 ಕ್ಕೆ 170 ವರ್ಷದ ಸಂಭ್ರಮ.

**ತುಮಕೂರಿನಲ್ಲಿ "ರಾಷ್ಟ್ರೀಯ ಹೂಡಿಕೆ ಉತ್ಪಾದನ ವಲಯ" ಸ್ಥಾಪನೆಗೆ ಕೇಂದ್ರ ಸರ್ಕಾರ ಅಸ್ತು**

ತುಮಕೂರಿನ 12,000 ಎಕರೆ ಪ್ರದೇಶದಲ್ಲಿ "ರಾಷ್ಟ್ರೀಯ ಹೂಡಿಕೆ ಉತ್ಪಾದನ ವಲಯ (National Investment Manufacturing Zone)" ಸ್ಥಾಪಿಸಲು ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದೆ. ಇದೇ ವೇಳೆ ರಾಜ್ಯದ ಇತರೆ ಎರಡು ಕಡೆ "ರಾಷ್ಟ್ರೀಯ ಹೂಡಿಕೆ ಉತ್ಪಾದನ ವಲಯ" ಸ್ಥಾಪಿಸಲು ಕೇಂದ್ರದ ಅನುಮತಿ ಕೋರಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

- ರಾಜ್ಯದ ಕೋಲಾರ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲೂ "ರಾಷ್ಟ್ರೀಯ ಹೂಡಿಕೆ ಉತ್ಪಾದನ ವಲಯ"ವನ್ನು ಸ್ಥಾಪಿಸಲು ಅನುಮತಿ ನೀಡಲು ಕೇಂದ್ರಕ್ಕೆ ಮನವಿ ಸಲ್ಲಿಸಲಾಗಿದೆ.
- ತುಮಕೂರು ರಾಜ್ಯದ ರಾಜಧಾನಿಯಿಂದ 70 ಕಿ.ಮೀ ದೂರದಲ್ಲಿದ್ದರೆ, ಕೋಲಾರ 100 ಕಿ.ಮೀ ಮತ್ತು ಗುಲ್ಬರ್ಗ 650 ಕಿ.ಮೀ ದೂರದಲ್ಲಿವೆ. ಉತ್ಪಾದನ ವಲಯವನ್ನು ಸ್ಥಾಪಿಸಲು ಪ್ರತಿಕೂಲ ವಾತಾವರಣವಿರುವ ಕಾರಣ ಈ ಜಿಲ್ಲೆಗಳನ್ನು ಆಯ್ಕೆಮಾಡಲಾಗಿದೆ.
- ರಾಜ್ಯದ ಒಟ್ಟು ಜಿಡಿಪಿಯಲ್ಲಿ ಉತ್ಪಾದನ ವಲಯದ ಪಾಲನ್ನು ಶೇ 25 ರಷ್ಟು ಹೆಚ್ಚಿಸುವ ಸಲುವಾಗಿ ಹಾಗೂ ಮುಂದಿನ ದಶಕದಲ್ಲಿ 100 ಮಿಲಿಯನ್ ಉದ್ಯೋಗವನ್ನು ಸೃಷ್ಟಿಸುವ ದೂರದೃಷ್ಟಿಯೊಂದಿಗೆ ರಾಜ್ಯದಲ್ಲಿ "ರಾಷ್ಟ್ರೀಯ ಹೂಡಿಕೆ ಉತ್ಪಾದನ ವಲಯ"ವನ್ನು ಸ್ಥಾಪಿಸಲಾಗುತ್ತಿದೆ.

**ಸೀಮೆಎಣ್ಣೆ ಬಳಕೆ ಮುಕ್ತ ನಗರವಾಗಿ ಬೆಂಗಳೂರು:**

ರಾಜ್ಯದ ರಾಜಧಾನಿ ಬೆಂಗಳೂರನ್ನು ಸೀಮೆಎಣ್ಣೆ ಮುಕ್ತ ನಗರವಾಗಿಸುವ ಸಲುವಾಗಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಎಲ್ಲಾ ರೀತಿಯ ರೇಷನ್ ಕಾರ್ಡ್ ಹೊಂದಿರುವ ಬೆಂಗಳೂರಿನ ನಿವಾಸಿಗಳಿಗೆ LPG ಸಂಪರ್ಕ ಒದಗಿಸುವ ಮೂಲಕ ರಾಜಧಾನಿಯನ್ನು ಸೀಮೆಎಣ್ಣೆ ಬಳಕೆಯಿಂದ ಮುಕ್ತವಾಗಿಸಲು ಪ್ರಯತ್ನಿಸುವುದಾಗಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಸೀಮೆಎಣ್ಣೆ ಖರೀದಿಸಲು ರಾಜಧಾನಿಯ ಜನತೆ 4-5 ಗಂಟೆಗಳ ಕಾಲ ರೇಷನ್ ಅಂಗಡಿಗಳ ಮುಂದೆ ಸಾಲುಗಟ್ಟಿ ನಿಂತಿರುತ್ತಾರೆ. ಅಲ್ಲದೇ, ಸೀಮೆಎಣ್ಣೆ ಬಳಕೆಯನ್ನು ನಿಲ್ಲಿಸಿದರೆ ಪರಿಸರ ಮಾಲಿನ್ಯ ನಿಯಂತ್ರಣದಲ್ಲೂ ಪ್ರಗತಿ ಸಾಧಿಸಬಹುದಾಗಿದೆ. ಈ ದಿಸೆಯಲ್ಲಿ ಈಗಾಗಲೇ ಚಿಂತನೆ ನಡೆಸಿರುವುದಾಗಿ ಸಚಿವರು ಹೇಳಿದ್ದಾರೆ.

**ರಾಜ್ಯದಲ್ಲಿ "ಅನ್ನ ಭಾಗ್ಯ" ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ**

"ಹಸಿವು ಮುಕ್ತ ಕರ್ನಾಟಕ" ಎಂಬ ಘೋಷಣೆಯಡಿ ರಾಜ್ಯದ ಬಿಪಿಎಲ್ ಕುಟುಂಬಗಳಿಗೆ 1 ರೂಪಾಯಿಗೆ 1 ಕೆಜಿ ಅಕ್ಕಿ ನೀಡುವ "ಅನ್ನ ಭಾಗ್ಯ" ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು. ರಾಜಧಾನಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಮೂರು ಕುಟುಂಬಗಳಿಗೆ ಅಕ್ಕಿ ವಿತರಿಸುವ ಮೂಲಕ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗೆ ಚಾಲನೆ ನೀಡಲಾಯಿತು.

**ಅನ್ನಭಾಗ್ಯ ಯೋಜನೆ ಬಗ್ಗೆ:**

- ಅಂತ್ಯೋದಯ ಮತ್ತು ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬಗಳು ಈ ಯೋಜನೆಯ ಫಲಾನುಭವಿಗಳು

- ಈ ಯೋಜನೆಯಡಿ ಕುಟುಂಬದ ಸದಸ್ಯರಿಗೆ ತಲಾ 1 ಕೆಜಿಯಂತೆ ಗರಿಷ್ಠ 30 ಕೆಜಿ ಅಕ್ಕಿಯನ್ನು ಪ್ರತಿ ಕೆಜಿಗೆ 1 ರೂಪಾಯಿಯಂತೆ ನೀಡಲಾಗುವುದು. ಅಂದರೆ ಒಬ್ಬ ಸದಸ್ಯನಿದ್ದರೆ 10 ಕೆಜಿ, 2 ಸದಸ್ಯರಿದ್ದರೆ 20 ಕೆಜಿ ಹಾಗೂ ಇಬ್ಬರಿಗಿಂತ ಹೆಚ್ಚಿದ್ದರೆ 30 ಕೆಜಿ ಅಕ್ಕಿಯನ್ನು ನೀಡಲಾಗುವುದು.
- ರಾಜ್ಯ ಸರ್ಕಾರ ಈ ಉದ್ದೇಶಿತ ಯೋಜನೆಯಡಿ ಅಕ್ಕಿಯನ್ನು ಪೂರೈಸುವ ಸಲುವಾಗಿ ಚತ್ತೀಸ್ ಗರ್ ರಾಜ್ಯದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಇದಕ್ಕಾಗಿ ಸರ್ಕಾರದ ಮೇಲೆ ಸುಮಾರು ರೂ 4500 ಕೋಟಿ ಹೊರೆ ಬೀಳಲಿದೆ.

**ಕೋಲಾರದಲ್ಲಿ ಮತ್ತೆ ಸುವರ್ಣಯುಗ: ಚಿನ್ನದ ಗಣಿಗಳಿಗೆ ಮರು ಜೀವ ನೀಡಿದ "ಸುಪ್ರೀಂ ಕೋರ್ಟ್"**

ಸುಮಾರು 130 ವರ್ಷ ವಾಣಿಜ್ಯ ಉತ್ಪಾದನೆಯ ಇತಿಹಾಸವುಳ್ಳ ಕೋಲಾರದ ಚಿನ್ನದ ಗಣಿಗಳಿಗೆ ಸುಪ್ರೀಂ ಕೋರ್ಟ್ ಮತ್ತೆ ಮರುಜೀವ ನೀಡಿದೆ. ಆರ್ಥಿಕ ಸಂಕಷ್ಟಕ್ಕೆ ತುತ್ತಾಗಿ 2001 ರಲ್ಲಿ ಮುಚ್ಚಲ್ಪಟ್ಟಿದ್ದ ಈ ಗಣಿಗಳನ್ನು ಪುನರಾರಂಭಿಸಲು ಸುಪ್ರೀಂಕೋರ್ಟ್ ಜಾಗತಿಕ ಟೆಂಡರ್ ಪ್ರಕ್ರಿಯೆಗೆ ಅನುಮೋದನೆ ನೀಡಿದೆ. 2006 ರಲ್ಲಿ ಸಚಿವ ಸಂಪುಟದಲ್ಲಿ ತೆಗೆದುಕೊಂಡ ನಿರ್ಧಾರಗಳನ್ನು ಪಾಲಿಸಬೇಕೆಂದು ಸುಪ್ರೀಂ ಕೋರ್ಟ್ ಸೂಚಿಸಿರುವುದರಿಂದ ಟೆಂಡರ್ ಕ್ರಿಯೆಗೆ ಶೀಘ್ರದಲ್ಲೇ ಚಾಲನೆ ದೊರೆಯಲಿದೆ. ಎಲ್ಲಾ ನಿಗದಿಯಾದಂತೆ ನಡೆದರೆ ಇನ್ನಾರು ತಿಂಗಳಲ್ಲಿ ಗಣಿಗಾರಿಕೆ ಪುನರಾರಂಭವಾಗಲಿದೆ. ಇದರಿಂದಾಗಿ ಸುಮಾರು 5000 ಕ್ಕೂ ಹೆಚ್ಚು ಕಾರ್ಮಿಕರ ಬದುಕು ಮತ್ತೆ ಗರಿಗೆದರಲಿದೆ. ಕೋಲಾರ ಚಿನ್ನದ ಗಣಿಗಳ ಒಂದು ನೋಟ ಇಲ್ಲಿದೆ.

- ಶತಮಾನಗಳ ಹಿಂದೆಯೇ ಕೋಲಾರದ ಗಣಿಗಳು ದೊಡ್ಡಮಟ್ಟದಲ್ಲಿ ಚಿನ್ನವನ್ನು ಉತ್ಪಾದಿಸುತ್ತಿದ್ದವು. ಹರಪ್ಪ ಮತ್ತು ಮೆಹೆಂಜೋದರಾ ನಾಗರಿಕತೆಗಳ ಜನರು ಕೋಲಾರದ ಚಿನ್ನವನ್ನು ಬಳಸಿರುವುದಾಗಿ ಇತಿಹಾಸದಿಂದ ತಿಳಿದು ಬಂದಿದೆ. ಇದಲ್ಲದೇ ಗುಪ್ತಾ ಸಂತತಿ ಸೇರಿದಂತೆ ಟಿಪ್ಪು ಸುಲ್ತಾನ್ ಕಾಲದವರೆಗೂ ಕೋಲಾರದ ಚಿನ್ನದ ಗಣಿಗಳು ಚಿನ್ನವನ್ನು ಉತ್ಪಾದಿಸಿರುವ ನಿದರ್ಶನಗಳಿವೆ. ಕೋಲಾರದ ಚಿನ್ನದ ಗಣಿಗಳು ಜಗತ್ತಿನ ಎರಡನೇ ಅತಿ ಆಳವಾದ ಗಣಿಗಳೆಂಬ ಖ್ಯಾತಿಯನ್ನು ಹೊಂದಿವೆ.
- 1873 ರಲ್ಲಿ ಬೆಂಗಳೂರಿನ ನಿವಾಸಿಯಾದ ಎಂ.ಎಫ್.ಲೆವೆಲ್ಲೆರವರು 1884ರಲ್ಲಿ ಚಿನ್ನದ ಗಣಿಗಾರಿಕೆ ಪರವಾನಗಿ ಕೋರಿ ಅಂದಿನ ಮೈಸೂರು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದರು. ಅದರಂತೆ 1873 ರಲ್ಲಿ ಕೋಲಾರದಲ್ಲಿ ಚಿನ್ನದ ಗಣಿಗಾರಿಕೆ ಸಣ್ಣ ಪ್ರಮಾಣದಲ್ಲಿ ಪ್ರಾರಂಭವಾಯಿತು. ಆದರೆ ಸಣ್ಣ ಪ್ರಮಾಣದಲ್ಲಿ ಶುರುವಾದ ಈ ಉತ್ಪಾದನೆ ಅಷ್ಟೇನೂ ತೃಪ್ತಿತರದ ಕಾರಣ ಲೆವೆಲ್ಲೆ ಅವರು ಪರವಾನಗಿಯನ್ನು ಜಾನ್ ಟೇಲರ್ಸ್ ಕಂಪನಿಗೆ ಮಾರಿದರು. ಮುಂದೆ ಜಾನ್ಸ ಟೇಲರ್ ಕಂಪನಿ ಸುಮಾರು 74 ವರ್ಷಗಳ ಕಾಲ ಗಣಿಗಾರಿಕೆ ನಡೆಸಿತು. ಸ್ವಾತಂತ್ರ್ಯ ಬಂದ ನಂತರ 1956 ರಲ್ಲಿ ಈ ಗಣಿಗಾರಿಕೆಯನ್ನು ಸರ್ಕಾರಕ್ಕೆ ಹಸ್ತಾಂತರಿಸಲಾಯಿತು. 1972 ರಲ್ಲಿ ಗಣಿಗಳ ರಾಷ್ಟ್ರೀಕರಣವಾಗಿ ಕೇಂದ್ರ ಸರ್ಕಾರದ ಸಾರ್ವಜನಿಕ ಸ್ವಾಮ್ಯದ ಸಂಸ್ಥೆಯಾದ ಭಾರತ್ ಗೋಲ್ಡ್ ಮೈನ್ಸ್ ಕಂಪನಿಗಳ ಜವಾಬ್ದಾರಿ ವಹಿಸಿಕೊಂಡಿತು.
- ಗಣಿಗಾರಿಕೆಗೆಂದೇ ಏಷ್ಯದ ಮೊಟ್ಟ ಮೊದಲ ವಿದ್ಯುತ್ ಉತ್ಪಾದನಾ ಘಟಕವನ್ನು ಮಂಡ್ಯ ಜಿಲ್ಲೆಯ ಶಿವನಸಮುದ್ರದಲ್ಲಿ 1902 ರಲ್ಲಿ ಪ್ರಾರಂಭಿಸಲಾಯಿತು.

- ವಾಣಿಜ್ಯ ಉತ್ಪಾದನೆಯಲ್ಲಿ ಕೋಲಾರದ ಚಿನ್ನದ ಗಣಿಗಳು ಉತ್ಪಾದಿಸಿದ ಚಿನ್ನ 7 ಲಕ್ಷ ಸಾವಿರದ 738 ಕೆ.ಜಿ. ಇಂತಹ ಇತಿಹಾಸ ಹೊಂದಿರುವ ಈ ಗಣಿಗಳು ಸತತ ನಷ್ಟ, ಅಸಮರ್ಪಕ ನಿರ್ವಹಣೆ ಹಾಗೂ ಬಂಡವಾಳದ ಕೊರತೆಯಿಂದ 2001 ರಲ್ಲಿ ಮುಚ್ಚಲ್ಪಟ್ಟಿದ್ದವು.
- ಈಗ ಚಿನ್ನದ ಬೆಲೆ ಹೆಚ್ಚಿರುವ ಹಿನ್ನಲೆಯಲ್ಲಿ ಗಣಿಗಳು ಮತ್ತೆ ಪುನರಾರಂಭಗೊಳ್ಳಲಿದ್ದು, ಮತ್ತೆ ಕೋಲಾರದಲ್ಲಿ ಸುವರ್ಣಯುಗದ ಶಕೆ ಪ್ರಾರಂಭವಾಗಲಿದೆ.

**ಬೆಂಗಳೂರಿನಲ್ಲಿ ದೇಶದ ಪ್ರಥಮ ಪ್ರಾಣಿ ಚಿತಾಗಾರ**

ಮನುಷ್ಯನಂತೆ ಪ್ರಾಣಿಗಳಿಗೂ ಇನ್ನು ಮುಂದೆ ಬೆಂಗಳೂರಿನಲ್ಲಿ  ಶವಸಂಸ್ಕಾರ ನಡೆಯಲಿದೆ. ದೇಶದಲ್ಲೇ ಮೊದಲು ಎನ್ನಲಾದ ಪ್ರಾಣಿಗಳ ಚಿತಾಗಾರಕ್ಕೆ ಶಂಕುಸ್ಥಾಪನೆ ನೆರವೇರಿದೆ. ಹಾಗಾಗಿ ಇನ್ನು ಮುಂದೆ ಎಲ್ಲೆಂದರಲ್ಲಿ ಸತ್ತ ಪ್ರಾಣಿಗಳನ್ನು ಹೂಳುವುದಾಗಲಿ, ಸುಡುವುದಾಗಲಿ ಅಥವಾ ಎಸೆಯುವುದಾಗಲಿ ಮಾಡುವಂತಿಲ್ಲ. ಮನುಷ್ಯನಂತೆ ಪ್ರಾಣಿಗಳಿಗೂ ಅಂತ್ಯಕ್ರಿಯೆ ನಡೆಸಲು 'ಪ್ರಾಣಿ ಚಿತಾಗಾರ' ಇನ್ನೊಂದು ವರ್ಷದಲ್ಲಿ ತಲೆ ಎತ್ತಲಿದೆ. ನಗರದ ಮಾಗಡಿ ರಸ್ತೆಯಲ್ಲಿನ ಸುಮನಹಳ್ಳಿ ಭಿಕ್ಷುಕರ ಕಾಲೋನಿಯ ಮಾನವ ಚಿತಾಗಾರದ ಪಕ್ಕದಲ್ಲಿ ಪ್ರಾಣಿ ಚಿತಾಗಾರಕ್ಕೆ ಶಂಕುಸ್ಥಾಪನೆ ಈಗಾಗಲೇ ನೆರವೇರಿದೆ. ಎರಡುವರೆ ಕೋಟಿ ಬಜೆಟಿನಲ್ಲಿ ಇದನ್ನು ನಿರ್ಮಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಉದ್ದೇಶಿಸಿದೆ. ಇದು ಸುಸಜ್ಜಿತ ಚಿತಾಗಾರವಾಗಲಿದ್ದು, ಇಲ್ಲಿ ವೈದ್ಯರ ಕೊಠಡಿ, ಸ್ಟೋರ್ ರೂಂ, ಭದ್ರತಾ ಸಿಬ್ಬಂದಿ, ಚಿಕ್ಕ ಮತ್ತು ದೊಡ್ಡ ಪ್ರಾಣಿಗಳನ್ನು ಸುಡಲು ಪ್ರತ್ಯೇಕ ವ್ಯವಸ್ಥೆ ಇರುತ್ತದೆ. ಈ ಹಿಂದೆ 2008ರಲ್ಲಿ ದಿನಕರನ್ ಮುಖ್ಯ ನ್ಯಾಯಮೂರ್ತಿಯಾಗಿದ್ದ ಅವಧಿಯಲ್ಲಿ ಸತ್ತ ಪ್ರಾಣಿಗಳನ್ನು ವಿಲೇವಾರಿ ಮಾಡಲು ಚಿತಾಗಾರ ನಿರ್ಮಿಸಲು ಸೂಕ್ತ ಸ್ಥಳ ನಿಗದಿ ಪಡಿಸುವಂತೆ ಬಿಬಿಎಂಪಿಗೆ ಸೂಚಿಸಿದ್ದರು. ಕೋರ್ಟ್ ಆದೇಶಕ್ಕೆ ಪ್ರತಿಯಾಗಿ ಬಿಬಿಎಂಪಿ ಪ್ರಾಣಿ ಚಿತಾಗಾರ ನಿರ್ಮಿಸುವ ಬಗ್ಗೆ ಮುಚ್ಚಳಿಕೆಯನ್ನೂ ನೀಡಿತ್ತು. ಐದು ವರ್ಷಗಳ ಬಳಿಕ ಇದು ಕಾರ್ಯರೂಪಕ್ಕೆ ಬರುತ್ತಿದೆ.

**ಮುಖ್ಯಮಂತ್ರಿ ಸಿದ್ಧರಾಮಯ್ಯನವರಿಂದ ರಾಜ್ಯದ ಪರಿಷ್ಕೃತ ಬಜೆಟ್ ಮಂಡನೆ**

ರಾಜ್ಯದಲ್ಲಿ  ಕಾಂಗ್ರೆಸ್ ಸರ್ಕಾರ ಆರ್ಥಿಕ ವರ್ಷದಲ್ಲಿ ಉಳಿಕೆ 8 ತಿಂಗಳ ಅವಧಿಗೆ ಅನ್ವಯವಾಗುವಂತೆ ಹಣಕಾಸು ಇಲಾಖೆಯ ಜವಾಬ್ದಾರಿಯನ್ನೂ ಹೊತ್ತಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಪರಷ್ಕೃತ ಬಜೆಟ್ ಮಂಡಿಸಿದರು. ಇದು ಅವರು ಮಂಡಿಸುತ್ತಿರುವ 8 ನೇ ಬಜೆಟ್ ಆಗಿದೆ, ಈ ಹಿಂದೆ ಅವರು ಹಣಕಾಸು ಸಚಿವರಾಗಿ 7 ಬಾರಿ ಬಜೆಟ್ ಮಂಡಿಸಿದ್ದರು. ಯಾವುದೇ ಜನಪ್ರಿಯ ಯೋಜನೆಗಳನ್ನು ಒಳಗೊಳ್ಳದ ವರಮಾನ ಕೊರತೆ  ಬಜಟ್ ಅನ್ನು ಮಂಡಿಸಿದ್ದಾರೆ.

**ಈ ಬಜೆಟ್ ನ ಕೆಲವು ಮುಖ್ಯಾಂಶಗಳು ಹೀಗಿವೆ:-**

- ಸಹಕಾರ ಸಂಸ್ಥೆಗಳ ಮೂಲಕ ರೈತರು ಪಡೆಯುವ ಬಡ್ಡಿ ರಹಿತ ಬೆಳೆ ಸಾಲದ ಮಿತಿಯನ್ನು  2 ಲಕ್ಷಕ್ಕೆ ಏರಿಸಲಾಗಿದೆ
- ಸರ್ಕಾರಿ ಶಾಲೆಗಳಲ್ಲಿ 1ನೇ ತರಗತಿಗೆ ಹೆಣ್ಣು ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಉತ್ತೇಜಿಸಲು ಹೆಣ್ಣು ಮಕ್ಕಳಿಗೆ ಪ್ರತಿ ದಿನದ ಹಾಜರಾತಿಗೆ ರೂ. 2 ಪ್ರೋತ್ಸಾಹಧನ ನೀಡುವುದಾಗಿದೆ ಘೋಷಿಸಿದ್ದಾರೆ
- 40 ವರ್ಷ ದಾಟಿದ ಅವಿವಾಹಿತ ಮತ್ತು ವಿಚ್ಛೇದಿತ ಮಹಿಳೆಯರಿಗೆ 500 ಮಾಸಾಶನ ಒದಗಿಸುವ 'ಮನಸ್ವಿನಿ' ಯೋಜನೆ ಮತ್ತು ಲೈಂಗಿಕ ಅಲ್ಪಸಂಖ್ಯಾತರಿಗೆ 500 ಮಾಸಾಶನ ಒದಗಿಸುವ 'ಮೈತ್ರಿ' ಯೋಜನೆ ಘೋಷಣೆ

- ಎಲ್ಲಾ ಅಂಗನವಾಡಿ ಮಕ್ಕಳಿಗೆ ಹಾಲು ವಿತರಣೆ - ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕರ ಗೌರವಧನ ಕ್ರಮವಾಗಿ 500, 250 ಹೆಚ್ಚಳ
- ಬೆಳಕು ಯೋಜನೆಯಡಿ ಅಂತ್ಯೋದಯ ಅನ್ನ ಯೋಜನೆ ಫಲಾನುಭವಿಗಳಿಗೆ ಸಿಎಫ್ಎಲ್ ಬಲ್ಬ್ - ಗೃಹಬಳಕೆ ಸೌರಶಕ್ತಿ ಉಪಕರಣ ಖರೀದಿಗೆ ಶೇ. 75ರಷ್ಟು ಸಬ್ಸಿಡಿ, ಹೊಸ ಸೌರಶಕ್ತಿ ಯೋಜನೆ ಜಾರಿ
- ಕುಡಿಯುವ ನೀರಿನಲ್ಲಿ ಫ್ಲೋರೈಡ್ ಮತ್ತು ಆರ್ಸೆನಿಕ್ ರಾಸಾಯನಿಕ ಅಂಶವಿರುವ ಒಂದು ಸಾವಿರ ಹಳ್ಳಿಗಳಲ್ಲಿ ಶುದ್ಧ ಕುಡಿಯುವ ನೀರು ಪೂರೈಕೆ ಘಟಕ ಸ್ಥಾಪನೆ
- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೃಷಿ ಭೂಮಿಗೆ ಸಂಪರ್ಕ ಕಲ್ಪಿಸಲು 'ನಮ್ಮ ಹೊಲ ನಮ್ಮ ದಾರಿ' ಯೋಜನೆ,
- ಅನ್ನ ಭಾಗ್ಯ ಪ್ರಚಾರಾಂದೋಲನ, ಸರ್ಕಾರ ಬಿ.ಪಿ.ಎಲ್ ಕಾರ್ಡ್‌ದಾರರಿಗೆ ಒಂದು ಕೆ.ಜಿಗೆ ರೂ.1ರಂತೆ ತಿಂಗಳಿಗೆ ಗರಿಷ್ಠ 30 ಕೆ.ಜಿ ಅಕ್ಕಿ ವಿತರಿಸುವ 'ಅನ್ನ ಭಾಗ್ಯ' ಯೋಜನೆ ಈಗಾಗಲೇ ಜಾರಿಗೊಳಿಸಿದೆ. ಗ್ರಾಹಕರಿಗೆ ಅನ್ನಭಾಗ್ಯ ಯೋಜನೆ ಮಾಹಿತಿ ಮತ್ತು ಗ್ರಾಹಕರ ಹಕ್ಕುಗಳ ಬಗ್ಗೆ ಅರಿವು ಮೂಡಿಸಲು ವಿಶೇಷ ಪ್ರಚಾರಾಂದೋಲನ ಕೈಗೊಳ್ಳಲು ನಿರ್ಧರಿಸಲಾಗಿದೆ.
- ಆಹಾರ ಇಲಾಖೆ ಗಣಕೀಕರಿಸಲು ಮತ್ತು ಬಯೋಮೆಟ್ರಿಕ್ ಇ- ಪಡಿತರ ಯಂತ್ರಗಳನ್ನು ಸ್ಥಾಪಿಸಲು ರೂ. 20 ಕೋಟಿ ವೆಚ್ಚ ಮಾಡಲು ಸರ್ಕಾರ ನಿರ್ಧರಿಸಿದೆ.
- ಪ್ರತಿ ಜಿಲ್ಲೆಯ ಒಂದು ತಾಲೂಕು ಆಸ್ಪತ್ರೆಯಲ್ಲಿ ಡಯಾಲಿಸಿಸ್ ಘಟಕ
- ಪ್ರತಿ ತಾಲೂಕಿಗೆ ಒಂದರಂತೆ ಕಡಿಮೆ ದರದಲ್ಲಿ ಔಷಧ ಒದಗಿಸಲು ಜನೆರಿಕ್ ಔಷಧ ಮಳಿಗೆ
- ಕ್ಷಯರೋಗಿಗಳು ಮತ್ತು ಎಚ್ಐವಿ ಪೀಡಿತರಿಗೆ ನ್ಯಾಯಬೆಲೆ ಅಂಗಡಿಗಳ ಮೂಲಕ ವಸ್ತುಗಳ ರೂಪದಲ್ಲಿ ಪೌಷ್ಠಿಕ ಆಹಾರದ ಬೆಂಬಲ.
- ಎಲ್ಲಾ ಸ್ವಾತಂತ್ರ್ಯ ಯೋಧರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಆರೋಗ್ಯ ಸೇವೆ ಮತ್ತು ಚಿಕಿತ್ಸೆ.
- ಹಂತಹಂತವಾಗಿ ಹೊಸ ತಾಲೂಕು ರಚನೆ ಸೇರಿದಂತೆ ಇನ್ನು ಮುಂದೆ ತಾಂಡಾ, ಹಟ್ಟಿಗಳನ್ನೂ ಕಂದಾಯ ಗ್ರಾಮಗಳೆಂದು ಘೋಷಿಸಲಾಗಿದೆ.
- ರಾಜ್ಯದಲ್ಲಿ ಸ್ಥಗಿತವಾಗಿದ್ದ ನೀರಾ ಉತ್ಪಾದನೆಗೆ ಕಾಂಗ್ರೆಸ್ ಸರ್ಕಾರ ಮತ್ತೆ ಜೀವ ನೀಡುವ ನಿರ್ಧಾರ ಮಾಡಿದೆ. ತೆಂಗಿನ ಮರಗಳಿಂದ ನೀರಾ ಉತ್ಪಾದಿಸಲು ಇರುವ ಅಡಚಣೆ ನಿವಾರಿಸಲು ಅಬಕಾರಿ ಕಾಯ್ದೆಗೆ ತಿದ್ದುಪಡಿ ತಂದು ನೀರಾ ಉತ್ಪಾದನಾ ಹಾದಿ ಸುಗಮಗೊಳಿಸುವುದಾಗಿ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದಾರೆ
- ಗಂಧದ ಮರ ಬೆಳೆಯುವ ನೈಸರ್ಗಿಕ ಪ್ರದೇಶಗಳನ್ನು ಸಂಪರ್ಕಿಸಲು ಮತ್ತು ನಿರ್ವಹಿಸಲು 'ಸಿರಿಚಂದನವನ' ಕಾರ್ಯಕ್ರಮವನ್ನು ಸಿಎಂ ಸಿದ್ದರಾಮಯ್ಯ ಘೋಷಿಸಿದ್ದಾರೆ.
- ಮನೆಗಳ ಘಟಕ ಸಹಾಯಧನವನ್ನು 75 ಸಾವಿರದಿಂದ 1.20 ಲಕ್ಷಕ್ಕೆ ಏರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಈ ಮೂಲಕ ವಸತಿ ಯೋಜನೆ ಫಲಾನುಭವಿಗಳಿಗೆ ಬಂಪರ್ ಕೊಡುಗೆ ಕೊಟ್ಟಿದ್ದಾರೆ. ಈ

ಹೆಚ್ಚಳ ರಾಜ್ಯದಲ್ಲಿ ಜಾರಿಗೊಳ್ಳುವ ಬಸವ ವಸತಿ ಯೋಜನೆ, ಅಂಬೇಡ್ಕರ್ ವಸತಿ ಯೋಜನೆ, ವಾಜಪೇಯಿ ನಗರ ವಸತಿ ಯೋಜನೆ ಹಾಗೂ ಇಂದಿರಾಗಾಂಧಿ ಆವಾಸ್ ಯೋಜನೆಗಳಿಗೆ ಅನ್ವಯವಾಗುತ್ತದೆ.

- ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡ ಭಾಷೆ ವ್ಯಾಪಕಗೊಳಿಸಲು ಜಾರಿಗೆ ತರಲುದ್ದೇಶಿಸಿದ್ದ ಯೂನಿಕೋಡ್ ತಂತ್ರಾಂಶ ಕಳೆದ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿತ್ತು. ಅದರ ಜಾರಿಗೆ ಈ ಬಾರಿ ಹೆಚ್ಚಿನ ಆದ್ಯತೆ ನೀಡಿ ಡಾ.ಚಿದಾನಂದಗೌಡ ಸಮಿತಿ ಶಿಫಾರಸ್ಸಿನಂತೆ ಲೋಕಾರ್ಪಣೆಗೊಳಿಸಲಾಗುವುದು ಎಂದು ಅವರು ಘೋಷಿಸಿದ್ದಾರೆ.

**ಹೊಸ ನೇಮಕಾತಿಗಳು:-**

- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಖಾಲಿ ಇರುವ 1,100 ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯ್ತಿ ಕಾರ್ಯದರ್ಶಿಗಳ ಹುದ್ದೆಗಳ ನೇರ ಭರ್ತಿ
- ಗ್ರಾಮ ಪಂಚಾಯಿತಿಗಳಲ್ಲಿ ಯುವಕರಿಗೆ ಹೊಸ ಉದ್ಯೋಗ ಸೃಷ್ಟಿಸುವು ಜತೆಗೆ ಕೃಷಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.
- 391 ಪಶುವೈದ್ಯರು ಹಾಗೂ 642 ಪಶುವೈದ್ಯಕೀಯ ಸಹಾಯಕರ ಹುದ್ದೆ ತುಂಬಲು ಕ್ರಮ ಕೈಗೊಳ್ಳುವುದಾಗಿ ಸಿದ್ದರಾಮಯ್ಯ ಹೇಳಿದ್ದಾರೆ
- ಅಬಕಾರಿ ನಿಯಮಗಳ ಪರಿಣಾಮಕಾರಿ ಜಾರಿ ಜತೆಗೆ ಆಡಳಿತ ಚುರುಕುಗೊಳಿಸಲು ಖಾಲಿ ಇರುವ ಎಲ್ಲ ಅಬಕಾರಿ ಉಪ ನಿರೀಕ್ಷಕರು ಮತ್ತು ಅಬಕಾರಿ ರಕ್ಷಕರ ಹುದ್ದೆಗಳನ್ನು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಭರ್ತಿಮಾಡಲು ನಿರ್ಧರಿಸಲಾಗಿದೆ.
- ರಾಜ್ಯದ ಶಾಲೆಗಳಲ್ಲಿ ಶಿಕ್ಷಕರ ಕೊರತೆ ನೀಗಿಸಲು ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ತುಂಬಲು ನಿರ್ಧಾರ
- ರಾಜ್ಯದ ನಾಗರಿಕ ಹಾಗೂ ಸಶಸ್ತ್ರ ಪೊಲೀಸ್ ಬಲ ವೃದ್ಧಿಸುವ ಸಲುವಾಗಿ ಪ್ರಸಕ್ತ ಸಾಲಿನಲ್ಲಿ 8,500 ಪೊಲೀಸ್ ಪೇದೆಗಳನ್ನು ನೇಮಕ ಮಾಡಿಕೊಳ್ಳುವುದಾಗಿ ಸರ್ಕಾರ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಘೋಷಿಸಿದೆ
- ಪ್ರವಾಸೋದ್ಯಮ ಇಲಾಖೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲು ಹೆಚ್ಚುವರಿ ಅನುದಾನದೊಂದಿಗೆ ಇಲಾಖೆಯಲ್ಲಿ ಹಲವಾರು ವರ್ಷಗಳಿಂದ ಖಾಲಿ ಇರುವ ಹುದ್ದೆಗಳ ಭರ್ತಿಗೆ ಕ್ರಮ
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಬ್ಯಾಕ್ ಲಾಗ್ ಹುದ್ದೆಗಳನ್ನು ಇಲಾಖಾವಾರು ಗುರುತಿಸಿ ಭರ್ತಿ ಮಾಡಿಕೊಳ್ಳಲು ಕ್ರಮ

**ಮೈಸೂರು ಮೃಗಾಲಯಕ್ಕೆ ಬರಲಿವೆ ಇಸ್ರೇಲ್ ನ ಜೀಬ್ರಾಗಳು**

ಮೈಸೂರಿನ ಹೆಸರಾಂತ ಜಯಚಾಮರಾಜೇಂದ್ರ ಮೃಗಾಲಯಕ್ಕೆ ಇಸ್ರೇಲ್ ನಿಂದ ನಾಲ್ಕು ಜೀಬ್ರಾಗಳನ್ನು ತರಲು ಸಿದ್ಧತೆ ನಡೆಸಲಾಗಿದೆ. ಈ ಸಂಬಂಧ ಈಗಾಗಲೇ ಇಸ್ರೇಲ್ ಮೃಗಾಲಯ ಪ್ರಾಧಿಕಾರದೊಂದಿಗೆ ಮಾತುಕತೆ ನಡೆಸಲಾಗಿದ್ದು, ಇಸ್ರೇಲ್ ನ "ರಮತ್ ಗನ್ ಸಫಾರಿ ಪಾರ್ಕ್ (Ramat Gan Safari Park)" ಮೈಸೂರು ಮೃಗಾಲಯಕ್ಕೆ ನಾಲ್ಕು ಜೀಬ್ರಾಗಳನ್ನು ನೀಡಲು ಒಪ್ಪಿಗೆ ಸೂಚಿಸಿದೆ. ಇದರಲ್ಲಿ ಎರಡು ಗಂಡು ಮತ್ತು ಎರಡು ಹೆಣ್ಣು ಜೀಬ್ರಾಗಳನ್ನು ಇರಲಿವೆ.

- "ಕೇಂದ್ರ ಮೃಗಾಲಯ ಪ್ರಾಧಿಕಾರ (Central Zoo Authority of India)" ಈಗಾಗಲೇ ಜೀಬ್ರಾಗಳನ್ನು ತರಿಸಿಕೊಳ್ಳಲು ಹಸಿರು ನಿಶಾನೆ ತೋರಿದೆ. ಆದರೆ ಅರಣ್ಯ ಮತ್ತು ಪರಿಸರ ಸಚಿವಾಲಯದ ಒಪ್ಪಿಗೆ ಇದಕ್ಕೆ ಅಗತ್ಯವಿರುವ ಕಾರಣ ಇದರ ಒಪ್ಪಿಗೆ ಪಡೆಯಲು ಮೈಸೂರು ಮೃಗಾಲಯ ಸಿದ್ಧತೆ ನಡೆಸಿದೆ.
- ಪರಿಸರ ಸಚಿವಾಲಯ ಒಪ್ಪಿಗೆ ಸೂಚಿಸಿದರೆ, ತದನಂತರ ಡೈರೆಕ್ಟರ್ ಜನರಲ್ ಆಫ್ ಫಾರಿನ್ ಟ್ರೇಡ್ ಮತ್ತು ಡೈರೆಕ್ಟರ್ ಆಫ್ ವೈಲ್ಡ್ ಲೈಫ್ ಪ್ರಿಸರ್ವೇಶನ್ ಇಲಾಖೆಯಿಂದ ಒಪ್ಪಿಗೆ ಪಡೆಯಬೇಕು. ಇದಕ್ಕೆ ಸುಮಾರು ಎರಡು ತಿಂಗಳ ಸಮಯ ಹಿಡಿಯಲಿದೆ. ಈ ಎಲ್ಲಾ ಕಾರ್ಯವಿಧಾನಗಳು ಪೂರ್ಣಗೊಂಡ ಬಳಿಕವೇ ಮೃಗಾಲಯಕ್ಕೆ ಜೀಬ್ರಾಗಳನ್ನು ಹಸ್ತಾಂತರಗೊಳಿಸಲಾಗುವುದು.
- ಇದೇ ವೇಳೆ ಪ್ರಾಣಿ ವಿನಿಮಯ ನಿಯಮದಡಿ ಎರಡು ಗಂಡು ಮತ್ತು ಒಂದು ಹೆಣ್ಣು ಚಿಂಪಾಂಜಿಯನ್ನು ಸಿಂಗಾಪುರ ಮೃಗಾಲಯದಿಂದ ಪಡೆಯಲು ಮೈಸೂರು ಮೃಗಾಲಯ ಸಿದ್ದತೆ ನಡೆಸಿದೆ. ಚಿಂಪಾಂಜಿಯ ಬದಲಾಗಿ ಮೈಸೂರು ಮೃಗಾಲಯ "ಲಯನ್ ಟೈಲ್ಡ್ ಮಕೂ (Lion Tailed Macau)" ವನ್ನು ಸಿಂಗಾಪುರ ಮೃಗಾಲಯಕ್ಕೆ ನೀಡಲಿದೆ.

## ಕರ್ನಾಟಕದಲ್ಲಿರುವ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಅರಬ್ ದೇಶಗಳ ಸಹಾಯ ಹಸ್ತ

ಕರ್ನಾಟಕದಲ್ಲಿರುವ ಅಲ್ಪಸಂಖ್ಯಾತ ಮಹಿಳೆಯರ ಸಬಲೀಕರಣಕ್ಕಾಗಿ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಯಲ್ಲಿ ತೊಡಗಿರುವ ಅಲ್ಪಸಂಖ್ಯಾತ ಯುವ ಉದ್ಯಮಿಗಳ ಅಭಿವೃದ್ಧಿಗೆ ಸುಮಾರು 20 ಅರಬ್ ದೇಶಗಳು ಸಹಾಯ ಹಸ್ತ ನೀಡುವುದಾಗಿ ಭರವಸೆ ನೀಡಿವೆ. ಪಶ್ಚಿಮ ಏಷ್ಯಾ ಮತ್ತು ಆಫ್ರಿಕಾದ ಸುಮಾರು 20 ಅರಬ್ ದೇಶಗಳು ಅಲ್ಪಸಂಖ್ಯಾತ ಮಹಿಳೆಯರ ಸಬಲೀಕರಣಕ್ಕಾಗಿ, ಯುವ ಜನತೆಯ ಶಿಕ್ಷಣಕ್ಕಾಗಿ ಮತ್ತು ಯುವ ಉದ್ಯಮಿಗಳಿಗೆ ಪ್ರೋತ್ಸಾಹ ನೀಡಲು 2013 ರಲ್ಲಿ 8 ಮಿಲಿಯನ್ ರೂಪಾಯಿಗಳನ್ನು ನೀಡಲು ಉದ್ದೇಶಿವೆ. ಅರಬ್ ರಾಷ್ಟ್ರಗಳಾದ ಬಹ್ರೇನ್, ಈಜಿಪ್ಟ್, ಇರಾನ್, ಇರಾಕ್, ಜೋರ್ಡನ್, ಕುವೈತ್, ಲೆಬನಾನ್, ಮೊರಾಕೋ, ಓಮನ್, ಕತಾರ್, ಸೌದಿ ಅರೇಬಿಯಾ ಮತ್ತು ಯು.ಎ.ಇ., ಈ ರಾಷ್ಟ್ರಗಳ ನಿಯೋಗವೊಂದು ಇತ್ತೀಚೆಗೆ ಕರ್ನಾಟಕಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಅಲ್ಪಸಂಖ್ಯಾತರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಈ ಅನುದಾನವನ್ನು ಉಪಯೋಗಿಸಲು ಸಮ್ಮತಿಸಿದೆ. ಈ ಮಂಡಳಿಯಲ್ಲಿ ಸುಮಾರು 330 ಸದಸ್ಯರಿದ್ದು 130 ಸದಸ್ಯರು ಅರಬ್ ರಾಷ್ಟ್ರಗಳಿಗೆ ಸೇರಿದವರಾಗಿದ್ದಾರೆ. ಇದರ ಮುಖ್ಯ ಕಚೇರಿಗಳು ದುಬೈ ಮತ್ತು ಮಸ್ಕಟ್ ನಲ್ಲಿವೆ.

## ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಡಪ್ರಭು "ಕೆಂಪೇಗೌಡ" ಹೆಸರು

ದೇಶದ ಪ್ರತಿಷ್ಠಿತ ವಿಮಾನ ನಿಲ್ದಾಣಗಳಲ್ಲಿ ಒಂದಾಗಿರುವ ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಡಪ್ರಭು ಕೆಂಪೇಗೌಡ ಅವರ ಹೆಸರಿಡಬೇಕು ಎಂಬ ಕನ್ನಡಿಗರ ಬಹುದಿನದ ಬೇಡಿಕೆಗೆ ಮನ್ನಣೆ ದೊರೆತಿದೆ. 'ಸಿಲಿಕಾನ್ ಸಿಟಿ' ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಮರುನಾಮಕರಣ ಮಾಡಬೇಕು ಎಂಬ ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯದ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟ ಸಮ್ಮತಿ ಸೂಚಿಸಿದೆ. ದೇಶದ 5ನೇ ಅತಿ ಕಾರ್ಯಶೀಲ ವಿಮಾನ ನಿಲ್ದಾಣವಾಗಿರುವ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ

ನಾಡಪ್ರಭು ಕೆಂಪೇಗೌಡರ ಹೆಸರಿಡಬೇಕು ಎಂಬ ಕೂಗು ರಾಜ್ಯದೆಲ್ಲೆಡೆಯಿಂದ ಕೇಳಿ ಬಂದಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಕೇಂದ್ರ ವಿಮಾನಯಾನ ಸಚಿವಾಲಯಕ್ಕೆ ಪ್ರಸ್ತಾವ ಸಲ್ಲಿಸಿತ್ತು. ವಿಮಾನಯಾನ ಸಚಿವಾಲಯ ಈ ಪ್ರಸ್ತಾವನೆಯನ್ನು ಕೇಂದ್ರ ಸಂಪುಟಕ್ಕೆ ಕಳುಹಿಸಿಕೊಟ್ಟಿತ್ತು. ಇದೇ ವೇಳೆ ಪ್ರಧಾನಿ ಮನಮೋಹನ್ ಸಿಂಗ್ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಮರು ನಾಮಕರಣದ ಪ್ರಸ್ತಾವನೆಗೆ ಅನುಮೋದನೆ ನೀಡಲಾಯಿತು. ಇದರಿಂದಾಗಿ ರಾಜ್ಯ ರಾಜಧಾನಿಯನ್ನು ದೇಶ, ವಿದೇಶಗಳೊಂದಿಗೆ ಬೆಸೆಯುವ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಇನ್ನು ಮುಂದೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾಗಲಿದೆ.

**2008ರಲ್ಲಿ ಚಾಲನೆ:**

ಬೆಂಗಳೂರು ಹೊರವಲಯದ ದೇವನಹಳ್ಳಿಯಲ್ಲಿ 2008ರ ಮೇ 24ರಂದು ಕಾರ್ಯಾಚರಣೆ ಆರಂಭಿಸಿದ್ದ ವಿಮಾನ ನಿಲ್ದಾಣ, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರೈವೇಟ್ ಲಿಮಿಟೆಡ್ (ಬಿಐಎಎಲ್)ನ ಒಡೆತನಕ್ಕೆ ಸೇರಿದೆ. ಇದರಲ್ಲಿ ರಾಜ್ಯ ಸರ್ಕಾರ, ಭಾರತೀಯ ವಿಮಾನ ಪ್ರಾಧಿಕಾರ, ಜಿವಿಕೆ ಗ್ರೂಪ್, ಸಿಮನ್ಸ್ ಮತ್ತು ಜ್ಯೂರಿಚ್ ಏರ್‌ಪೋರ್ಟ್‌ಗಳು ತಮ್ಮ ಶೇರು ಹೊಂದಿವೆ. 2012ರಲ್ಲಿ ವಿಧಾನ ಮಂಡಲದ ಉಭಯ ಸದನಗಳಲ್ಲಿ ಸರ್ವಾನುಮತದ ನಿರ್ಣಯ ಕೈಗೊಂಡು ಬೆಂಗಳೂರು ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರಿಡುವಂತೆ ಕೇಂದ್ರಕ್ಕೆ ಆಗ್ರಹಿಸಲಾಗಿತ್ತು. ಅಲ್ಲದೆ, ರಾಷ್ಟ್ರಪತಿ, ಪ್ರಧಾನಿ ಸೇರಿದಂತೆ ಸಂಬಂಧಪಟ್ಟ ಇಲಾಖೆಯ ಸಚಿವರುಗಳನ್ನು ದಿಲ್ಲಿಯಲ್ಲಿ ಭೇಟಿ ಮಾಡಿ, ಈ ಬಗ್ಗೆ ಒತ್ತಡ ಕೂಡ ಹೇರಲಾಗಿತ್ತು. ರಾಜ್ಯದ ಆಗ್ರಹಕ್ಕೆ ಈಗ ಸಮ್ಮತಿ ನೀಡುವುದರೊಂದಿಗೆ ಕನ್ನಡಿಗರ ಬಹುದಿನದ ಕೋರಿಕೆಯನ್ನು ಕೇಂದ್ರ ಸರ್ಕಾರ ಒಪ್ಪಿದಂತಾಗಿದೆ. ದೇಶಕ್ಕೆ ಸೇವೆ ಸಲ್ಲಿಸಿದವರಿಗೆ ಅವರ ಕಾರ್ಯಸ್ಥಳದಲ್ಲೇ ಆದ್ಯತೆ ನೀಡಬೇಕು ಎಂಬ ನಿಟ್ಟಿನಲ್ಲಿ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರಿಡುವ ತೀರ್ಮಾನವನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ.

**ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿಗೆ ನೀಲನಕ್ಷೆ ಸಲ್ಲಿಸಿದೆ ಸಚಿವ ಸಂಪುಟ ಉಪ ಸಮಿತಿ**

ಹೈದರಾಬಾದ್-ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸುವ ಸಂವಿಧಾನದ ತಿದ್ದುಪಡಿ 371(ಜೆ) ವಿಧಿಗೆ ನಿಯಮಗಳನ್ನು ರೂಪಿಸುವ ಸಂಬಂಧ ರಚಿಸಲಾಗಿದ್ದ ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ. ಪಾಟೀಲ್ ನೇತೃತ್ವದ ಸಚಿವ ಸಂಪುಟ ಉಪ ಸಮಿತಿಯು ತನ್ನ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸಲ್ಲಿಸಿದೆ. ಸಮಿತಿ ಅಧ್ಯಕ್ಷರಾದ ಎಚ್.ಕೆ. ಪಾಟೀಲ್ ನೇತೃತ್ವದ ನಿಯೋಗವು ಹೈದರಾಬಾದ್-ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ಸಂಬಂಧ ರೂಪಿಸಬೇಕಾದ ನಿಯಮಾವಳಿ ಕುರಿತು ಅನೇಕ ಶಿಫಾರಸುಗಳನ್ನು ಒಳಗೊಂಡ ವಿಸ್ತೃತ ವರದಿಯನ್ನು ಸಿದ್ದರಾಮಯ್ಯನವರಿಗೆ ಸಲ್ಲಿಸಿತು.

**ವರದಿಯಲ್ಲಿ ಏನಿದೆ?:**

- ಸಮಿತಿ ಸಲ್ಲಿಸಿರುವ ವರದಿಯಲ್ಲಿ ಪ್ರಮುಖವಾಗಿ ಹೈದರಾಬಾದ್-ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸುವ ಸಂವಿಧಾನದ ತಿದ್ದುಪಡಿ 371(ಜೆ) ವಿಧಿ ಅನುಷ್ಠಾನದಲ್ಲಿ ಶಿಕ್ಷಣ, ಉದ್ಯೋಗಾವಕಾಶದಲ್ಲಿ ಎಷ್ಟು ಪ್ರಮಾಣದಲ್ಲಿ ಮೀಸಲಾತಿ ಕಲ್ಪಿಸಬೇಕು ಎನ್ನುವ ಅಂಶ ಅಡಕವಾಗಿದೆ.

- ಹೈ-ಕ ಭಾಗದಲ್ಲಿ ನಡೆಯುವ ಸರ್ಕಾರದ 'ಡಿ' ಗ್ರೂಪ್ ಹುದ್ದೆಯಿಂದ ಹಿಡಿದು ಕೆಎಎಸ್ ಹುದ್ದೆಗಳ ವರೆಗಿನ ನೇಮಕಾತಿಗಳಲ್ಲಿ ಶೇ.70ರಷ್ಟು ಮೀಸಲಾತಿಯನ್ನು ಹೈದರಾಬಾದ್ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೇ ನೀಡಬೇಕು ಎನ್ನುವ ಶಿಫಾರಸು ಮಾಡಿದೆ ಎನ್ನಲಾಗಿದೆ.
- ಈ ವಿಶೇಷ ಸ್ಥಾನಮಾನದಡಿ ಉದ್ಯೋಗ, ಶಿಕ್ಷಣದಲ್ಲಿ ಮೀಸಲಾತಿ ಸೇರಿದಂತೆ ವಿವಿಧ ರೀತಿಯ ಸವಲತ್ತುಗಳನ್ನು ಕಲ್ಪಿಸಬೇಕಾದರೆ ಯಾರನ್ನು ಫಲಾನುಭವಿಗಳನ್ನಾಗಿ ಮಾಡಬೇಕು, ಅದಕ್ಕೆ ಯಾವ ರೀತಿಯ ಅರ್ಹತೆ ಮತ್ತು ಮಾನದಂಡಗಳನ್ನು ನಿಗದಿಪಡಿಸಬೇಕು ಹಾಗೂ ಹೈದರಾಬಾದ್ ಕರ್ನಾಟಕದ ನಿವಾಸಿಗಳೆಂದು ಪರಿಗಣಿಸಬೇಕಾದರೆ ಏನೆಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು ಎನ್ನುವ ವಿಚಾರಗಳನ್ನು ವರದಿಯಲ್ಲಿ ಸ್ಪಷ್ಟಪಡಿಸಲಾಗಿದೆ ಎನ್ನಲಾಗಿದೆ.
- ಆ ಭಾಗದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಮಾಡುವುದಕ್ಕೆ ವೃತ್ತಿಪರ ಕಾಲೇಜುಗಳು, ವಿವಿಗಳಲ್ಲಿ ಎಷ್ಟು ಪ್ರಮಾಣದ ಮೀಸಲಾತಿ ಕಲ್ಪಿಸುವ ಬಗ್ಗೆಯೂ ಸಮಿತಿ ಶಿಫಾರಸುಗಳನ್ನು ನೀಡಿದೆ.
- ಅಲ್ಲದೆ, ಕೇಂದ್ರ ಸರ್ಕಾರದಿಂದ ನೀಡಬೇಕಾದ ಅನುದಾನ, ಅದಕ್ಕೆ ರಾಜ್ಯ ಸರ್ಕಾರದ ಪಾಲು ಎಷ್ಟಿರಬೇಕು ಎನ್ನುವ ಅಂಶಗಳು ಕೂಡ ವರದಿಯಲ್ಲಿ ಅಡಕವಾಗಿದೆ ಎಂದು ಮೂಲಗಳು ತಿಳಿಸಿವೆ.

**<u>ಅಂತಿಮ ವರದಿ ಕೇಂದ್ರಕ್ಕೆ ಸಲ್ಲಿಕೆ:</u>**

ಹೈ-ಕ ವಿಶೇಷ ಸ್ಥಾನಮಾನಕ್ಕೆ ನಿಯಮಾವಳಿ ರೂಪಿಸುವ ಬಗ್ಗೆ ಸಚಿವ ಎಚ್.ಕೆ. ಪಾಟೀಲ್ ನೇತೃತ್ವದ ಸಚಿವ ಸಂಪುಟ ಉಪ ಸಮಿತಿ ಸಲ್ಲಿಸಿರುವ ಈ ವರದಿಯನ್ನು ಸಚಿವ ಸಂಪುಟದಲ್ಲಿ ಮಂಡಿಸಿ ಸಮಗ್ರವಾಗಿ ಚರ್ಚಿಸಲಾಗುತ್ತದೆ. ಸಮಿತಿ ರೂಪಿಸಿರುವ ನಿಯಮಾವಳಿಯಲ್ಲಿ ಮಾಡಬೇಕಾದ ಬದಲಾವಣೆಗಳ ಬಗ್ಗೆ ಚರ್ಚಿಸಿ ನಿಯಮಾವಳಿಗಳ ಅಂತಿಮ ವರದಿ ಸಿದ್ಧಪಡಿಸಲಾಗುತ್ತದೆ. ನಂತರ ಈ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ. ಕೇಂದ್ರ ಸರ್ಕಾರ ನಿಯಮಗಳಿಗೆ ಒಪ್ಪಿಗೆ ನೀಡುವುದರೊಂದಿಗೆ ಹೈ-ಕ ವಿಶೇಷ ಸ್ಥಾನಮಾನ ನೀಡುವ ಸಂವಿಧಾನದ ತಿದ್ದುಪಡಿ 371(ಜೆ) ವಿಧಿ ಈ ಭಾಗದ 6 ಜಿಲ್ಲೆಗಳಲ್ಲಿ ಅನುಷ್ಠಾನಕ್ಕೆ ಬರಲಿದೆ.

**<u>ವಿಶ್ವದ ಅತಿದೊಡ್ಡ ವಿದ್ಯುತ್ ಪೂರೈಕೆ ಮತ್ತು ಸರಬರಾಜು ಸಮ್ಮೇಳನ-2014: ಬೆಂಗಳೂರಿನಲ್ಲಿ</u>**

ವಿಶ್ವದ ಅತಿದೊಡ್ಡ ವಿದ್ಯುತ್ ಪೂರೈಕೆ ಮತ್ತು ಸರಬರಾಜು ಸಂಬಂಧಿತ ಸಮ್ಮೇಳನ ELECRAMA-2014 ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರ ಜ.8-12 2014ರವರೆಗೂ ನಡೆಯಲಿದೆ. ಇದು, ಭಾರತೀಯ ಉತ್ಪನ್ನಗಳು ಜಾಗತಿಕ ಸ್ಪರ್ಧೆಯನ್ನು ಎದುರಿಸಲು, ಸ್ಥಳೀಯ ಉತ್ಪಾದಕರು ತಮ್ಮ ಸಾಮರ್ಥ್ಯವನ್ನು ಬಿಂಬಿಸಲು ವೇದಿಕೆ ಕಲ್ಪಿಸಲಿದೆ. ಇದೇ ಮೊದಲ ಬಾರಿಗೆ ELECRAMA-2014 ಸಮ್ಮೇಳನ ಬೆಂಗಳೂರಿನಲ್ಲಿ ನಡೆಯಲಿದೆ

**<u>ಬಿಗ್ ಬಾಸ್ಕೆಟ್ ಡಾಟ್ ಕಾಮ್ ಭಾರತದ ಮೊಟ್ಟಮೊದಲ ಸಮಗ್ರ ಆನ್ ಲೈನ್ ದಿನಸಿ ಮಳಿಗೆ:</u>**

ಭಾರತದ ಸಮಗ್ರ ಆನ್‌ಲೈನ್ ದಿನಸಿ ಮಳಿಗೆ ಬಿಗ್ ಬಾಸ್ಕೆಟ್ ಡಾಟ್ ಕಾಮ್ ಭಾರತದ ಮೊಟ್ಟಮೊದಲ ಸಮಗ್ರ ಆನ್‌ಲೈನ್ ದಿನಸಿ ಮಳಿಗೆಯಾಗಿ ಬಿಗ್ ಬಾಸ್ಕೆಟ್ ಡಾಟ್ ಕಾಮ್ ಹೊರಹೊಮ್ಮಿದೆ. ಸಾವಿರಕ್ಕೂ ಹೆಚ್ಚಿನ ಬ್ರಾಂಡ್‌ಗಳು ಮತ್ತು ಹತ್ತು

ಸಾವಿರಕ್ಕೂ ಹೆಚ್ಚಿನ ಉತ್ಪನ್ನಗಳನ್ನು ಹೊಂದಿದೆ. ದಿನಸಿ ವಸ್ತುಗಳು, ತಾಜಾ ಹಣ್ಣುಗಳು ಮತ್ತು ತರಕಾರಿಗಳು, ಬ್ರಾಂಡೆಡ್ ಆಹಾರ ಮತ್ತು ಆಹಾರೇತರ ಉತ್ಪನ್ನಗಳು, ಬ್ರೆಡ್ ಮತ್ತು ಬೇಕರಿ, ಡೈರಿ ಉತ್ಪನ್ನಗಳು, ಮಾಂಸ ಮುಂತಾದವುಗಳನ್ನು ಈ ಮಳಿಗೆ ಹೊಂದಿದೆ. ಪ್ರತಿ ತಿಂಗಳು ನಿಮಗೆ ಬೇಕಾಗುವ ಎಲ್ಲಾ ದಿನಸಿ ವಸ್ತುಗಳು ಇಲ್ಲಿ ಲಭ್ಯ. ನಗರದಲ್ಲಿ ಕೇಂದ್ರ ಕಚೇರಿ ಹೊಂದಿರುವ ಬಿಗ್ ಬಾಸ್ಕೆಟ್ ಡಾಟ್ ಕಾಮ್, ಬೆಂಗಳೂರು, ಮುಂಬಯಿ, ಹೈದ್ರಾಬಾದ್‌ಗಳಲ್ಲಿ ಕಾರ್ಯಾಚರಣೆ ಹೊಂದಿದೆ.

**ಉತ್ತರ ಕರ್ನಾಟಕದ ಆಭಿವೃದ್ಧಿಗೆ ಏಷ್ಯಾ ಅಭಿವೃದ್ಧಿ ಬ್ಯಾಂಕ್ ನೊಂದಿಗೆ ಒಪ್ಪಂದ ಮಾಡಿಕೊಂಡ ಕೇಂದ್ರ ಸರ್ಕಾರ**

ಉತ್ತರ ಕರ್ನಾಟಕದ ಹಲವಾರು ನಗರ ಮತ್ತು ಪಟ್ಟಣ ಯೋಜನೆಗಳ, ಪೌರಾಡಳಿತ ಸಂಸ್ಥೆ ಪ್ರದೇಶಗಳ ಮತ್ತು ನಗರ ಪ್ರದೇಶಗಳ ಸೇವೆಗಳನ್ನು ಅಭಿವೃದ್ಧಿಗೊಳಿಸಲು 60 ಮಿಲಿಯನ್ ಡಾಲರ್ ಗಳ ಸಾಲ ಕೋರಿ ಏಷ್ಯಾ ಅಭಿವೃದ್ಧಿ ಬ್ಯಾಂಕ್ ನೊಂದಿಗೆ ಕೇಂದ್ರ ಸರ್ಕಾರ ಒಪ್ಪಂದ ಮಾಡಿಕೊಂಡಿದೆ. ಈ ಒಪ್ಪಂದವು 'ಉತ್ತರ ಕರ್ನಾಟಕ ನಗರ ಪ್ರದೇಶದ ಹೂಡಿಕೆ ಕಾರ್ಯಕ್ರಮದ' (North Karnataka Urban Sector Investment Programme-NKUSIP) ಮೂರನೇ ಯೋಜನೆಯಾಗಿದ್ದು, ಇದರ ಒಟ್ಟಾರೆ ಅನುದಾನದ ಮೊತ್ತ 270 ಮಿಲಿಯನ್ ಡಾಲರ್ ಗಳಾಗಿವೆ.

**ಉತ್ತರ ಕರ್ನಾಟಕ ನಗರ ಪ್ರದೇಶದ ಹೂಡಿಕೆ ಕಾರ್ಯಕ್ರಮದ ವಿಶೇಷತೆಗಳು:**

- ಈ ಕಾರ್ಯಕ್ರಮದ ಅನುದಾನವನ್ನು ಉತ್ತರ ಕರ್ನಾಟಕದ ಆರು ನಗರಗಳ ಒಳಚರಂಡಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಮತ್ತು ಎರಡು ನಗರಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಉಪಯೋಗಿಸಲಾಗುವುದು, ಇದರಿಂದ 1 ಲಕ್ಷಕ್ಕೂ ಹೆಚ್ಚಿನ ಕುಟುಂಬಗಳಿಗೆ ಅನುಕೂಲವಾಗಲಿದೆ.
- ಉತ್ತರ ಕರ್ನಾಟಕದ ನಗರಗಳಾದ ಬೀದರ್, ದಾವಣಗೆರೆ,ಧಾರವಾಡ, ಗದಗ-ಬೆಟಗೇರಿ, ಗುಲ್ಬರ್ಗ, ಜಮಖಂಡಿ, ಸಿಂಧನೂರು ಮತ್ತು ಯಾದಗಿರಿ ನಗರಗಳ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವುದರ ಜೊತೆಗೆ, ರಾಜ್ಯ ಸರ್ಕಾರ ಈ ಭಾಗದ ಜನರ ಜೀವನವನ್ನು ಸುಧಾರಿಸಲು ರೂಪಿಸುವ ಕಾರ್ಯಕ್ರಮಗಳಿಗೆ ಪೂರಕವಾಗಿದೆ.
- ಈ ಯೋಜನೆಯಿಂದ ಉದ್ದೇಶಿತ ಎಂಟು ನಗರಗಳಿಗೆ ಉತ್ತಮ ನಗರ ಸೇವೆಗಳನ್ನು ಒದಗಿಸಲು ಸಹಾಯಕವಾಗಲಿದೆ
- ಈ ನಗರಗಳನ್ನು ಸುವ್ಯವಸ್ಥೆಗೊಳಿಸಿದಲ್ಲಿ ರಾಜ್ಯ ಸರ್ಕಾರಕ್ಕೆ ಕ್ರಮವಾದ ಭೌಗೋಳಿಕ ಮಾಹಿತಿ ಲಭ್ಯವಾಗಲಿದೆ, ಇದಲ್ಲದೆ ಈ ನಗರಗಳ ತೆರಿಗೆ ವಸೂಲಿ ಮತ್ತು ಆದಾಯ ಪ್ರಮಾಣಗಳು ಹೆಚ್ಚಾಗಲಿವೆ.
- ರಾಜ್ಯ ಸರ್ಕಾರವು ಈ ಅನುದಾನದ ಜೊತೆಗೆ 41.6 ಮಿಲಿಯನ್ ಡಾಲರ್ ಗಳಷ್ಟು ಮೊತ್ತವನ್ನು ಈ ಪ್ರದೇಶಗಳಿಗೆ ವಿನಿಯೋಗಿಸಲಿದೆ
- ಈ ಅನುದಾನದ ಮರು ಪಾವತಿ ಅವಧಿಯು 25 ವರ್ಷಗಳಾಗಿದ್ದು , ಇದರ ಮೇಲಿನ ಬಡ್ಡಿ ದರವನ್ನು ಏಷ್ಯಾ ಅಭಿವೃದ್ಧಿ ಬ್ಯಾಂಕ್ ನಿರ್ಧರಿಸಲಿದೆ

**ಏಷ್ಯಾ ಅಭಿವೃದ್ಧಿ ಬ್ಯಾಂಕ್ ಬಗ್ಗೆ:**

ಏಷ್ಯಾ ಅಭಿವೃದ್ಧಿ ಬ್ಯಾಂಕ್ 1966 ರಲ್ಲಿ ಸ್ಥಾಪನೆಗೊಂಡಿದ್ದು, ಇದು 67 ಸದಸ್ಯ ಮಾಲಿಕತ್ವವನ್ನು ಹೊಂದಿದೆ, ಇದರ ಕೇಂದ್ರ ಕಚೇರಿ ಮನಿಲಾದಲ್ಲಿ ಇದೆ. ಈ ಬ್ಯಾಂಕ್ ಏಷ್ಯಾ ಮತ್ತು ಫಸಿಫಿಕ್ ಪ್ರದೇಶ ರಾಷ್ಟ್ರಗಳ ಬಡತನ ನಿರ್ಮೂಲನೆ ಮಾಡುವುದರ ಜೊತೆಗೆ ಆರ್ಥಿಕ ಪ್ರದೇಶಾಭಿವೃದ್ಧಿ ಮತ್ತು ಪರಿಸರ ಸುಸ್ಥಿರತೆಯನ್ನು ಸಾಧಿಸಲು ಶ್ರಮಿಸಿತ್ತಿದೆ.

**ಔದ್ಯಮಿಕ ಪ್ರವಾಸೋದ್ಯಮದಲ್ಲಿ ದೇಶದಲ್ಲಿಯೇ ಬೆಂಗಳೂರಿಗೆ ನಂ.1 ಸ್ಥಾನ**

ಔದ್ಯಮಿಕ ಪ್ರವಾಸದಲ್ಲಿ ಬೆಂಗಳೂರು ಭಾರತದಲ್ಲಿಯೇ ನಂ.1 ಸ್ಥಾನ ಸಂಪಾದಿಸಿದೆ. ಅಲ್ಲದೆ ಜಾಗತಿಕವಾಗಿ ಅತಿ ಹೆಚ್ಚು ಔದ್ಯಮಿಕ ಭೇಟಿ ನೀಡುವ 25 ನಗರಗಳ ಪಟ್ಟಿಯಲ್ಲಿ ಬೆಂಗಳೂರು 12ನೇ ಸ್ಥಾನದಲ್ಲಿದೆ. ಈ ಸಾಲಿನಲ್ಲಿ ಮುಂಬೈ 20ನೇ ಸ್ಥಾನದಲ್ಲಿದೆ. ಉದ್ಯಮಿಗಳು ರಾತ್ರಿ ಉಳಿದುಕೊಳ್ಳುವ ಹೋಟೆಲ್‌ಗಳನ್ನು ಲೆಕ್ಕಹಾಕಿ ಔದ್ಯಮಿಕ ಪ್ರವಾಸದ ಸ್ಥಾನವನ್ನು ನಿಗದಿಗೊಳಿಸಲಾಗಿದ್ದು, 2011ರಲ್ಲಿ 11ನೇ ಸ್ಥಾನ ಪಡೆದಿದ್ದ ಬೆಂಗಳೂರು, 2012ನೇ ಸಾಲಿನಲ್ಲಿ 12ನೇ ಸ್ಥಾನಕ್ಕೆ ಕುಸಿದಿದೆ. ಜತೆಗೆ ವಸತಿ, ಭೂ ಸಾರಿಗೆ, ಊಟ ಮನೋರಂಜನೆ ವಿಭಾಗದಲ್ಲಿನ ಸರಾಸರಿ ವೆಚ್ಚ 15 ಸಾವಿರದಿಂದ 13 ಸಾವಿರಕ್ಕೆ ಕುಸಿದಿದೆ ಎಂದು ಔದ್ಯಮಿಕ ಪ್ರವಾಸ ಮತ್ತು ಮನೋರಂಜನೆಗೆ ಸಂಬಂಧಿಸಿದ ವರದಿಯೊಂದು ಹೇಳಿದೆ. ಜಗತ್ತಿನಾದ್ಯಂತ 9 ರಾಷ್ಟ್ರಗಳ ಔದ್ಯಮಿಕ ಸರಾಸರಿ ವೆಚ್ಚವನ್ನು ವಿಶ್ಲೇಷಿಸಿ ವರದಿ ಸಿದ್ಧಪಡಿಸಲಾಗಿದ್ದು, ಇದರಲ್ಲಿ ಭಾರತ, ಅಮೆರಿಕ, ಇಂಗ್ಲೆಂಡ್, ಕೆನಡಾ, ಆಸ್ಟ್ರೇಲಿಯಾ, ಜರ್ಮನಿ, ಫ್ರಾನ್ಸ್, ಹಾಂಕ್‌ಕಾಂಗ್ ಮತ್ತು ಜಪಾನ್ ಸೇರಿದೆ.

**ಕರ್ನಾಟಕ ರಾಜ್ಯ ಸರ್ಕಾರದಿಂದ 'ಅನ್ನಭಾಗ್ಯ'ದ ನಂತರ ಈಗ "ಕ್ಷೀರಭಾಗ್ಯ" ಯೋಜನೆ**

ರಾಜ್ಯದ 64 ಸಾವಿರ ಅಂಗನವಾಡಿ, 51 ಸಾವಿರ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಒಟ್ಟು 1 ಕೋಟಿಗೂ ಹೆಚ್ಚು ಮಕ್ಕಳಿಗೆ ಆಗಸ್ಟ್ 1 ರಿಂದ ನಂದಿನಿ ಕೆನಭರಿತ ಹಾಲಿನ ಭಾಗ್ಯ ಲಭ್ಯವಾಗಲಿದೆ. ಬಿಪಿಎಲ್ ವರ್ಗದವರಿಗೆ 'ಅನ್ನಭಾಗ್ಯ' ನೀಡಿದ ಮಾದರಿಯಲ್ಲಿ ಶಾಲಾ ಮಕ್ಕಳಿಗೆ ರಾಜ್ಯ ಸರ್ಕಾರ ರೂಪಿಸಿರುವ 'ಕ್ಷೀರ ಭಾಗ್ಯ' ಯೋಜನೆ ರಾಜ್ಯಾದ್ಯಂತ ಜಾರಿಗೆ ಬರಲಿದೆ.

**ಏನಿದು ಯೋಜನೆ?**

1 ರಿಂದ 10 ನೇ ತರಗತಿವರೆಗಿನ 65 ಲಕ್ಷ ಮಕ್ಕಳು ಹಾಗೂ ಅಂಗನವಾಡಿಗಳ 39 ಲಕ್ಷ ಮಕ್ಕಳು ಸೇರಿದಂತೆ ಒಟ್ಟು 1.4 ಕೋಟಿ ಮಕ್ಕಳಿಗೆ ಇನ್ನು ಮುಂದೆ ವಾರದಲ್ಲಿ ಮೂರು ದಿನ ಪ್ರತಿ ಮಗುವಿಗೆ 150 ಎಂ.ಎಲ್ ಹಾಲು ದೊರೆಯಲಿದೆ.

**ಸಂಘಗಳಿಗೆ ಪುಡಿ, ಮಕ್ಕಳಿಗೆ ಹಾಲು:**

- ಮಕ್ಕಳ ಆರೋಗ್ಯ ಮತ್ತು ಸುರಕ್ಷತೆ ಹಾಗೂ ಕಲಬೆರಕೆಯ ಸಾಧ್ಯತೆಗಳನ್ನು ತಡೆಯುವ ದೃಷ್ಟಿಯಿಂದ ಮಕ್ಕಳಿಗೆ ಹಾಲು ಉತ್ಪಾದಕ ಸಹಕಾರ ಸಂಘಗಳಿಂದ ಕಚ್ಚಾ ಹಾಲು ಪೂರೈಸುವ ಬದಲು ಕ್ಷೀರಭಾಗ್ಯ ಯೋಜನೆಯಡಿ ಹಾಲಿನ ಎಲ್ಲಾ ಉತ್ಕೃಷ್ಟತೆ ಹಾಗೂ ಪೋಷಕಾಂಶಗಳನ್ನು ಹೊಂದಿರುವ ಪರಿಶುದ್ಧ ನಂದಿನಿ ಹಾಲಿನ ಪುಡಿಯನ್ನು ಸರಬರಾಜು ಮಾಡಲಾಗುತ್ತದೆ.
- ಕರ್ನಾಟಕ ಹಾಲು ಮಹಾಮಂಡಳಿ ಹಾಗೂ ರಾಜ್ಯದ ಎಲ್ಲಾ 13 ಜಿಲ್ಲಾ ಹಾಲು ಒಕ್ಕೂಟಗಳ ಮೂಲಕ ಹಾಲಿನ ಪುಡಿಯನ್ನು ನಿರ್ದಿಷ್ಟ ದಿನಕ್ಕೊಮ್ಮೆ ಪೂರೈಕೆಯಾಗುತ್ತದೆ.
- ಕೆಎಂಎಫ್ ಅಧಿಕಾರಿಗಳ ಪ್ರಕಾರ ಈಗಾಗಲೇ ಬಹುತೇಕ ರಾಜ್ಯದ ಎಲ್ಲಾ ಅಂಗನವಾಡಿ ಹಾಗೂ ಶಾಲೆಗಳಿಗೆ ಒಂದು ತಿಂಗಳಿಗೆ ಅಗತ್ಯವಿರುವಷ್ಟು ಹಾಲಿನ ಪುಡಿಯನ್ನು ಸರಬರಾಜು ಮಾಡಲಾಗಿದೆ.

- ಅಂಗನವಾಡಿಗಳಿಗೆ ನೇರವಾಗಿ ಹಾಲಿನಪುಡಿಯ ಪ್ಯಾಕ್‌ಗಳು ಸರಬರಾಜಾದರೆ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಬಿಸಿಯೂಟ ಸರಬರಾಜು ಮಾಡುವ ಕೇಂದ್ರಗಳಿಗೆ ರವಾನೆಯಾಗುತ್ತದೆ.
- 150 ಮಿ.ಲೀ ಹಾಲನ್ನು ಪರಿವರ್ತಿಸಿದರೆ 18 ಗ್ರಾಂ. ಹಾಲಿನ ಪುಡಿ ದೊರೆಯುತ್ತದೆ. ಈ ಲೆಕ್ಕದಲ್ಲಿ ಒಬ್ಬ ವಿದ್ಯಾರ್ಥಿಗೆ ತಿಂಗಳಿಗೆ ಅರ್ಧ ಕೆ.ಜಿಯಂತೆ ಹಾಲಿನ ಪುಡಿಯನ್ನು ಶಾಲೆಗೆ ವಿತರಿಸಿದರೆ, ಅದನ್ನು ಮತ್ತೆ ಹಾಲು ಮಾಡಿ ನೀಡಲಾಗುತ್ತದೆ.

**ಯೋಜನೆಯ ರೂಪರೇಷೆ:**

- ಕೆಎಂಎಫ್ ನಿಂದ ಈ ಯೋಜನೆಯಡಿ ಪ್ರತಿ ದಿನ 70 ರಿಂದ 80 ಮೆಟ್ರಿಕ್ ಟನ್ ಹಾಲಿನ ಪುಡಿ ಪೂರೈಕೆಯಾಗಲಿದ್ದು, ಸರಬರಾಜಾಗುವ ಹಾಲಿ ಪುಡಿಯನ್ನು ಶಾಲೆಗಳು ಹಾಲಾಗಿ ಪರಿವರ್ತಿಸಿ, ಕುದಿಸಿ, ಆರಿಸಿ ಮಕ್ಕಳಿಗೆ ನೀಡಬೇಕಾಗುತ್ತದೆ.
- ಕೆಎಂಎಫ್ ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ 12,037 ನೋಂದಾಯಿತ ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ಪ್ರತಿ ದಿನ 55 ಲಕ್ಷ ಲೀಟರ್ ಹಾಲು ಶೇಖರಣೆಯಾಗುತ್ತಿದೆ. ಇದರಲ್ಲಿ 35 ಲಕ್ಷ ಲೀಟರ್ ಹಾಲು ನಿತ್ಯ ಮಾರಾಟವಾಗುತ್ತಿದೆ. ಇನ್ನೂ 20 ಲಕ್ಷ ಲೀಟರ್ ಹಾಲು ಹೆಚ್ಚುವರಿಯಾಗಿ ಉಳಿಯುತ್ತಿದೆ.
- ಇದೀಗ ಕ್ಷೀರ ಭಾಗ್ಯ ಯೋಜನೆಯಿಂದ 5 ಲಕ್ಷ ಲೀಟರ್ ಹೆಚ್ಚುವರಿ ಹಾಲಿನ ವಿಲೇವಾರಿಗೆ ಸಹಕಾರಿಯಾಗಲಿದೆ.
- ರಕ್ಷಿಸಿಡಲು ಸೂಕ್ತ ವ್ಯವಸ್ಥೆ ಹಾಲಿನ ಪುಡಿ ಪ್ಯಾಕೆಟ್‌ನ್ನು ತೆರೆದಿಟ್ಟ ನಂತರ ಅದನ್ನು ಹಾಳಾಗದಂತೆ ರಕ್ಷಿಸಿಡಲು ಸೀಲ್ಡ್ ಕಂಟೈನರ್ (ಗಾಳಿಯಾಡದ ಡಬ್ಬಗಳು)ಗಳನ್ನು ಖರೀದಿಸುವಂತೆ ಶಾಲೆಗಳಿಗೆ ಸೂಚನೆ ನೀಡಲಾಗಿದೆ. ಅದಕ್ಕೆ ಅನುದಾನ ಒದಗಿಸಿಕೊಡುವ ಬಗ್ಗೆಯೂ ತಿಳಿಸಲಾಗಿದೆ.
- ಒಮ್ಮೆ ಓಪನ್ ಮಾಡಿದ ಪ್ಯಾಕೆಟ್‌ಗಳನ್ನು ಹೆಚ್ಚೆಂದರೆ ಒಂದು ತಿಂಗಳು ಇಡಬಹುದು. ಆದರೆ ಈ ರೀತಿ ರಕ್ಷಿಸಿಡಲು ಸೀಲ್ಡ್ ಕಂಟೈನರ್ ಅಗತ್ಯವಿದೆ ಎಂದು ಶಿಕ್ಷಣ ಇಲಾಖಾಧಿಕಾರಿಗಳು ಹೇಳುತ್ತಾರೆ. ಇದರ ಜವಾಬ್ದಾರಿ ನೋಡಿಕೊಳ್ಳಲು ನೋಡೆಲ್ ಅಧಿಕಾರಿಗಳನ್ನು ಕೂಡ ಇಲಾಖೆ ನಿಯೋಜಿಸಿದೆ.
- ಹಾಲನ್ನು ಕುದಿಸದೆ ಸೇವಿಸಬಾರದು. ಹಾಲು ಉಕ್ಕುವ ಹಂತದವರೆಗೆ ಕಾಯಬೇಕು. ನಂತರ ಅದನ್ನು ಕುಡಿಯಲು ಅಗತ್ಯವಿರುವಷ್ಟು ತಣ್ಣಗಾದ ಮೇಲೆ ಮಕ್ಕಳಿಗೆ ವಿತರಿಸಬೇಕು. ಕುದಿಸಿ 3 ಗಂಟೆಯೊಳಗೆ ಮಕ್ಕಳಿಗೆ ನೀಡಬೇಕು ಎಂಬುದನ್ನು ಸ್ಪಷ್ಟವಾಗಿ ತಿಳಿಸಲಾಗಿದೆ.
- ಅಂತೆಯೇ ಬೇರೆ ಪದಾರ್ಥಗಳನ್ನು ಮಾಡುವ ಪಾತ್ರೆಗಳಲ್ಲಿ ಹಾಲನ್ನು ಕುದಿಸಬಾರದು. ಸ್ವಚ್ಛತೆ ಕಾಯ್ದುಕೊಳ್ಳಬೇಕು ಎಂಬುದನ್ನು ಇಲಾಖಾ ಸುತ್ತೋಲೆ ಸ್ಪಷ್ಟವಾಗಿ ತಿಳಿಸಿದೆ.

# ರಾಷ್ಟ್ರೀಯ

**ಆಹಾರ ಭದ್ರತೆ ಸುಗ್ರೀವಾಜ್ಞೆಗೆ ರಾಷ್ಟ್ರಪತಿ ಅಂಕಿತ**

ಯುಪಿಎ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಆಹಾರ ಭದ್ರತೆಗೆ ವಿರೋಧ ಪಕ್ಷಗಳ ವಿರೋಧದ ನಡುವೆಯೂ ಕೇಂದ್ರ ಸರ್ಕಾರ ಇತ್ತೀಚೆಗೆ ಹೊರೆಡಿಸಿದ್ದ ಸುಗ್ರೀವಾಜ್ಞೆಗೆ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ಅಂಕಿತ ಹಾಕಿದ್ದಾರೆ. ಈ ಮೂಲಕ ಸೋನಿಯಾ ಗಾಂಧಿ ಅವರ ಕನಸಿನ ಕೂಸು ಎನಿಸಿರುವ ಆಹಾರ ಭದ್ರತೆ ಯೋಜನೆ ಅನುಷ್ಠಾನದ ಹಾದಿ ಸುಗಮವಾಗಿದೆ. ಸುಗ್ರೀವಾಜ್ಞೆ ಜಾರಿಯಾದ 6 ತಿಂಗಳ ಒಳಗೆ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಮೂರನೇ ಒಂದರಷ್ಟು ಸರಳ ಬಹುಮತದಿಂದ ಅಂಗೀಕಾರವಾಗಬೇಕು.

**ಆಹಾರ ಭದ್ರತೆ ಸಂಕ್ಷಿಪ್ತ ಸುದ್ದಿ**:

- ದೇಶದ ಪ್ರತಿಯೊಬ್ಬನಿಗೂ ಅದರಲ್ಲೂ ಬಡವರಿಗೆ ಉತ್ತಮ ಮತ್ತು ಆರೋಗ್ಯವಂತ ಜೀವನಕ್ಕಾಗಿ ಸಾಕಷ್ಟು ಪ್ರಮಾಣದಲ್ಲಿ ಪೌಷ್ಟಿಕಾಂಶಯುಕ್ತ ಆಹಾರ ಒದಗಿಸುವ ಉದ್ದೇಶ ಹೊತ್ತು ತರಲಾದ ಯೋಜನೆಯೇ ಆಹಾರ ಭದ್ರತೆ ಯೋಜನೆ.

**ಯೋಜನೆಯಡಿ ಏನೇನು ಸಿಗಲಿದೆ**?

- ಯೋಜನೆಯಡಿ ಫಲಾನುಭವಿಯಾಗುವ ಪ್ರತಿ ಕುಟುಂಬಗಳಿಗೆ ಮಾಸಿಕವಾಗಿ 5 ಕಿಲೋ ಅಕ್ಕಿ, ಗೋಧಿ ಮತ್ತು ಬೇಳೆಕಾಳುಗಳನ್ನು ವಿತರಿಸಲಾಗುವುದು.

**ದರವೆಷ್ಟು**?

- ಅಕ್ಕಿ ಮೂರು ರೂ/ಕೆ.ಜಿ, ಗೋಧಿ ಎರಡು ರೂ/ಕೆ.ಜಿ ಮತ್ತು ಬೇಳೆಕಾಳುಗಳು ಒಂದು ರೂ/ಕೆ.ಜಿ ಗೆ ನೀಡಲಾಗುವುದು.

**ಯೋಜನೆಯ ಉದ್ದೇಶ**:

- ದೇಶದ ಮೂರನೇ ಎರಡರಷ್ಟು ಜನರಿಗೆ ಅತ್ಯಂತ ಕಡಿಮೆ ದರದಲ್ಲಿ ಆಹಾರ ಧಾನ್ಯವನ್ನು ಒದಗಿಸುವುದು.
- ಆದ್ಯತಾ ವರ್ಗದಲ್ಲಿರುವ ಪ್ರತಿ ಕುಟುಂಬದ ವ್ಯಕ್ತಿಗೆ ಪ್ರತಿ ತಿಂಗಳು ಏಳು ಕೆ.ಜಿ ಆಹಾರ ಧಾನ್ಯ
- ದೇಶದ ಜನರಿಗೆ ಸಾಧ್ಯವಾದಷ್ಟು ಉತ್ತಮ ಪೌಷ್ಟಿಕಾಂಶವಿರುವ ಆಹಾರ ನೀಡಿ ಹಸಿವೆಯಿಂದ ಪಾರುಮಾಡುವುದು.
- ಅಂತ್ಯೋದಯ ಯೋಜನೆಯಡಿ ಲಾಭ ಪಡೆಯುತ್ತಿರುವ ದೇಶದ 2.43 ಕೋಟಿ ಕಡು ಬಡವ ಕುಟುಂಬಗಳು ಪ್ರತಿ ತಿಂಗಳು ತಲಾ 35 ಕೆ.ಜಿ ಆಹಾರ ಧಾನ್ಯ ಪಡೆಯಲಿವೆ.
- ಪಡಿತರ ವ್ಯವಸ್ಥೆಯಲ್ಲಿ ಶೇ.75 ರಷ್ಟು ಗ್ರಾಮೀಣ ಜನಸಂಖ್ಯೆ (ಕನಿಷ್ಟ ಶೇ.46 ರಷ್ಟು ಆದ್ಯತಾ ವರ್ಗ) ಶೇ.50 ರಷ್ಟು ನಗರ ಜನಸಂಖ್ಯೆ (ಕನಿಷ್ಟ ಶೇ 28 ರಷ್ಟು ಆದ್ಯತಾ ವರ್ಗ) ಒಳಗೊಳ್ಳಲಿದೆ.
- ಆಹಾರ ಪೂರೈಕೆಯಾಗದೇ ಇದಲ್ಲಿ ಆಹಾರ ಭತ್ಯೆ ಲಭ್ಯ.

**ಯೋಜನೆಯ ಅನುಷ್ಠಾನ ವೆಚ್ಚ**:

- ಆಹಾರ ಭದ್ರತೆ ಯೋಜನೆ ಜಗತ್ತಿನ ಅತಿ ದೊಡ್ಡ ಯೋಜನೆಯಲ್ಲಿ ಒಂದಾಗಿದೆ. ಈ ಯೋಜನೆಯಡಿ ದೇಶದ 81 ಕೋಟಿ ಜನರಿಗೆ ಅನುಕೂಲವಾಗಲಿದೆ. ಯೋಜನೆಯ ಜಾರಿಗೆ ಮೊದಲ ವರ್ಷ ಸುಮಾರು 1,25,000 ಕೋಟಿ ಖರ್ಚು ಆಗಬಹುದು ಎಂದು ಅಂದಾಜಿಸಲಾಗಿದೆ.

**ಭಾರತೀಯ ಗಡಿ ಭದ್ರತಾ ಪಡೆಯಲ್ಲಿ ಮಹಿಳೆಯರ ನೇಮಕಾತಿಗೆ ಕೇಂದ್ರ ಸರ್ಕಾರ ಅಸ್ತು**

ಇದೇ ಪ್ರಥಮ ಬಾರಿಗೆ ಭಾರತೀಯ ಗಡಿ ಭದ್ರತಾ ಪಡೆಗೆ (BSF) ಮಹಿಳಾ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಗಡಿ ಭದ್ರತಾ ಪಡೆಯ ಮಾಹಿತಿಯಂತೆ, 25 ವರ್ಷ ಅಥವಾ ಅದರೊಳಗಿನ ವಯೋಮಾನದ ಮಹಿಳೆಯರನ್ನು ನೇರ ಪ್ರವೇಶದ ಮೂಲಕ ಸಹಾಯಕ ಕಮಾಂಡರ್ ದರ್ಜೆಯ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗುವುದು ಹಾಗೂ ಹೀಗೆ ನೇಮಕಗೊಂಡ ಮಹಿಳಾ ಅಧಿಕಾರಿಗಳನ್ನು ದೇಶದ ಎರಡು ಅತ್ಯಂತ ಸೂಕ್ಷ್ಮ ಗಡಿ ಪ್ರದೇಶಗಳಾದ ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಗಡಿಗಳಲ್ಲಿ ತಮ್ಮ ಸೈನ್ಯವನ್ನು ಮುನ್ನಡೆಸಲು ನಿಯೋಜಿಸಲಾಗುವುದು ಎಂಬ ಮಾಹಿತಿ ನೀಡಿದೆ.

ಸದ್ಯ ಭಾರತದಲ್ಲಿ ಕೇಂದ್ರ ಮೀಸಲು ಪೊಲೀಸ್ ಪಡೆ (CRPF) ಮತ್ತು ಕೇಂದ್ರ ಉದ್ಯಮಗಳ ರಕ್ಷಣಾ ಪಡೆಗಳಲ್ಲಿ (CISF) ಮಾತ್ರ ಮಹಿಳೆಯರು ಕಾರ್ಯನಿರ್ವಹಿಸುತ್ತಿದ್ದಾರೆ, ಇವು ದೇಶದ ಆಂತರಿಕ ಭದ್ರತೆ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಹಾಗೂ ಈ ಪಡೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು ಗಡಿ ಪ್ರದೇಶಗಳಿಗೆ ನಿಯೋಜನೆ ಮಾಡಲು ಯಾವುದೇ ಅವಕಾಶವಿಲ್ಲ. ಪ್ರಸ್ತುತ ಪುರುಷರು ಗಡಿ ಪ್ರದೇಶಗಳಲ್ಲಿ ಭದ್ರತೆಯ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದು ಕೇಂದ್ರ ಸರ್ಕಾರದ ಈ ನಿರ್ಧಾರದಿಂದ ಮಹಿಳೆಯರೂ ಸಹ ಸೈನ್ಯವನ್ನು ಮುನ್ನಡೆಸುವ ಶಕ್ತಿ ಹೊಂದಿದ್ದಾರೆ ಎಂಬ ಸಂದೇಶವನ್ನು ಜಗತ್ತಿಗೇ ಸಾರಲಿದ್ದಾರೆ. ಮಹಿಳೆಯರ ನೇಮಕಾತಿಯು ಡಿಸೆಂಬರ್ 2013 ರಲ್ಲಿ ನಡೆಯಲಿದ್ದು, 2014 ರೊಳಗೆ ಮಹಿಳಾ ಕಮಾಂಡರ್ ಗಳ ಮೊದಲ ತಂಡ ಕಾರ್ಯನಿರ್ವಹಿಸಲಿದೆ. ಅದೇ ರೀತಿ ಭಾರತದ ಗಡಿ ಪ್ರದೇಶಗಳನ್ನು ಕಾಯುತ್ತಿರುವ ಇತರ ಪಡೆಗಳಾದ ಇಂಡೋ-ಟಿಬೇಟಿಯನ್ ಗಡಿ ಪೊಲೀಸ್ ಪಡೆ ಮತ್ತು ಸಶಸ್ತ್ರ ಸೀಮಾ ಪಡೆಯಲ್ಲೂ ಸಹ ಕಾನ್ಸ್ ಸ್ಟೇಬಲ್ ವೃಂದದ ಮಹಿಳಾ ಸಿಬ್ಬಂದಿ ಇದ್ದು ಸೈನ್ಯ ಮುನ್ನಡೆಸುವ ಅಧಿಕಾರಿ ದರ್ಜೆಯ ಹುದ್ದೆಗಳಲ್ಲಿ ಯಾರೂ ಕಾರ್ಯನಿರ್ವಹಿಸುತ್ತಿಲ್ಲ.

**ಕೆಲವು ಮುಖ್ಯ ಮಾಹಿತಿಗಳು:**

- ಗಡಿ ಭದ್ರತಾ ಪಡೆಯಲ್ಲಿ ಮಹಿಳೆಯರನ್ನು ಕಾನ್ಸ್ ಸ್ಟೇಬಲ್ ದರ್ಜೆಯ ಹುದ್ದೆಗಳಿಗೆ ಪ್ರಥಮ ಬಾರಿಗೆ 2009 ರಲ್ಲಿ ನೇಮಕ ಮಾಡಿಕೊಳ್ಳಲಾಯಿತು. ಸದ್ಯ ಇವರ ಸಂಖ್ಯೆ 700 ಗಡಿ ದಾಟಿದೆ
- ಈ ವರ್ಷ ಗಡಿ ಭದ್ರತಾ ಪಡೆಗೆ ಅಧಿಕಾರಿ ದರ್ಜೆಯ 110 ಹುದ್ದೆಗಳಿಗೆ ಹೊಸ ನೇಮಕಾತಿ ನಡೆಯಲಿದೆ ಹಾಗೇ CRPF ನಲ್ಲಿ 138 ಹುದ್ದೆಗಳಿಗೆ ಮತ್ತು CISF ನ 56 ಹುದ್ದೆಗಳಿಗೆ ನೇಮಕಾತಿ ನಡೆಯಲಿದೆ
- ಕೇಂದ್ರ ಲೋಕ ಸೇವಾ ಆಯೋಗವು ಒಟ್ಟು ಹುದ್ದೆಗಳ ನೇಮಕಾತಿಯಲ್ಲಿ ಮಹಿಳೆಯರಿಗಾಗಿ ಇಂತಿಷ್ಟೇ ಹುದ್ದೆಗಳನ್ನು ಮೀಸಲು ಇರಿಸಿಲ್ಲ, ಆದ್ದರಿಂದ ಮೆರಿಟ್ ಆಧಾರದಲ್ಲಿ ಎಷ್ಟು ಮಹಿಳೆಯರಾದರೂ ಆಯ್ಕೆಗೊಳ್ಳಬಹುದಾಗಿದೆ

- ಸಹಾಯಕ ಕಮಾಂಡರ್ ಆಗಿ ನೇಮಕಗೊಂಡ ಬಳಿಕ ಈ ಮಹಿಳಾ ಅಧಿಕಾರಿಗಳಿಗೆ ಸೇವೆಯನ್ನಾಧರಿಸಿ ಮುಂಬಡ್ತಿ ಸಹ ದೊರೆಯಲಿದೆ.

**ದೇಶದ ಮೊದಲ ರಾಷ್ಟ್ರೀಯ ಮಹಿಳಾ ವಿಶ್ವವಿದ್ಯಾಲಯ ಮತ್ತು ವಿಮಾನಯಾನ ವಿಶ್ವವಿದ್ಯಾಲಯ ಸ್ಥಾಪನೆಗೆ ಕೇಂದ್ರ ಒಪ್ಪಿಗೆ**

ದೇಶದ ಮೊದಲ ರಾಷ್ಟ್ರೀಯ ಮಹಿಳಾ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟ ಸಮ್ಮತಿ ಸೂಚಿಸಿದೆ. ಉತ್ತರ ಪ್ರದೇಶದ ರಾಯ್ ಬರೇಲಿಯಲ್ಲಿ ಈ ವಿಶ್ವವಿದ್ಯಾಲಯ ತಲೆಯತ್ತಲಿದೆ.

**ವಿಶ್ವವಿದ್ಯಾಲಯದ ಬಗ್ಗೆ:**

- ಇದೇ ಮೊದಲ ಬಾರಿಗೆ ಮಹಿಳೆಯರಿಗಾಗಿಯೇ ನಿರ್ಮಿಸಲಾಗುತ್ತಿರುವ ಈ ರಾಷ್ಟ್ರೀಯ ವಿಶ್ವವಿದ್ಯಾಲಯಕ್ಕೆ "ಇಂದಿರಾ ಗಾಂಧಿ ರಾಷ್ಟ್ರೀಯ ಮಹಿಳಾ ವಿಶ್ವವಿದ್ಯಾಲಯ" ಎಂದು ಹೆಸರಿಡಲಾಗಿದೆ.
- "ಇಂದಿರಾ ಗಾಂಧಿ ರಾಷ್ಟ್ರೀಯ ಮಹಿಳಾ ವಿಶ್ವವಿದ್ಯಾಲಯ ಮಸೂದೆ-2013" ನ್ನು ಮುಂಗಾರು ಅಧಿವೇಶನದಲ್ಲಿ ಮಂಡಿಸುವ ಮೂಲಕ ವಿಶ್ವವಿದ್ಯಾಲಯದ ಸ್ಥಾಪನೆಗೆ ಚಾಲನೆ ನೀಡಲಾಗುವುದು.
- ಈ ಉದ್ದೇಶಿತ ವಿಶ್ವವಿದ್ಯಾಲಯಕ್ಕಾಗಿ ಕೇಂದ್ರ ಸರ್ಕಾರ 12 ನೇ ಪಂಚವಾರ್ಷಿಕ ಯೋಜನೆಯಲ್ಲಿ ರೂ 500 ಕೋಟಿ ಭರಿಸಲು ಯೋಜನೆ ರೂಪಿಸಿದೆ.
- ಮಹಿಳೆಯ ಸಮಗ್ರ ಅಭಿವೃದ್ಧಿ ಮತ್ತು ಸಬಲೀಕರಣಕ್ಕಾಗಿ ಈ ವಿಶ್ವವಿದ್ಯಾಲಯ ಸಹಕಾರಿಯಾಗಲಿದೆ.
- ದೇಶದ ಒಟ್ಟು 121 ಕೋಟಿ ಜನಸಂಖ್ಯೆಯಲ್ಲಿ 58.6 ಕೋಟಿ ಮಹಿಳೆಯರಿದ್ದಾರೆ. ಉತ್ತರ ಪ್ರದೇಶ ಒಂದರಲ್ಲೇ 9.8 ಕೋಟಿ ಮಹಿಳೆಯರು ಇರುವುದು ಗಮನಾರ್ಹ.

**ರಾಷ್ಟ್ರೀಯ ವಿಮಾನಯಾನ ವಿಶ್ವವಿದ್ಯಾಲಯ:**

- ದೇಶದ ಮೊದಲ ರಾಷ್ಟ್ರೀಯ ವಿಮಾನಯಾನ ವಿಶ್ವವಿದ್ಯಾಲಯ ಸ್ಥಾಪನೆಗೆ ಸಂಬಂಧಿಸಿದ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟ ಹಸಿರು ನಿಶಾನೆ ತೋರಿದೆ. ಇದೇ ವೇಳೆ "ರಾಷ್ಟ್ರೀಯ ವಿಮಾನಯಾನ ವಿಶ್ವವಿದ್ಯಾಲಯ ಮಸೂದೆ-2013" ರನ್ನು ಮುಂದಿನ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲು ಸಹ ಅನುಮತಿ ನೀಡಲಾಗಿದೆ.

**ರಾಷ್ಟ್ರೀಯ ವಿಮಾನಯಾನ ವಿಶ್ವವಿದ್ಯಾಲಯ:**

- "ರಾಜೀವ್ ಗಾಂಧಿ ರಾಷ್ಟ್ರೀಯ ವಿಮಾನಯಾನ ವಿಶ್ವವಿದ್ಯಾಲಯ" ಹೆಸರಿನಡಿ ಸ್ಥಾಪಿಸಲಾಗುತ್ತಿರುವ ಈ ವಿವಿಯು ಕೇಂದ್ರಿಯ ವಿಶ್ವವಿದ್ಯಾಲಯದ ಮಾನ್ಯತೆಯನ್ನು ಹೊಂದಿರಲಿದೆ. ಅಲ್ಲದೇ ಇದೊಂದು ಸ್ವಾಯುತ್ತತೆ ಸಂಸ್ಥೆಯಾಗಿ ಕಾರ್ಯನಿರ್ವಹಿಸಲಿದೆ.
- ಈ ವಿಶ್ವವಿದ್ಯಾಲಯದ ನಿರ್ಮಾಣಕ್ಕೆ ಮೊದಲ ಹಂತದಲ್ಲಿ (2013-14 2018-19) ಕೇಂದ್ರ ಸರ್ಕಾರ ರೂ 202 ಕೋಟಿ ಮೀಸಲಿಡಲಿದೆ.

- ವಿಮಾನಯಾನ ಕ್ಷೇತ್ರದಲ್ಲಿ ಶಿಕ್ಷಣ ಪ್ರೋತ್ಸಾಹ, ತರಬೇತಿ ಮತ್ತು ಸಂಶೋಧನೆಯನ್ನು ಉತ್ತೇಜಿಸುವ ಗುರಿಯೊಂದಿಗೆ ಈ ವಿವಿಯನ್ನು ಸ್ಥಾಪಿಸಲಾಗುತ್ತಿದೆ. ಇದಲ್ಲದೇ ವಿಮಾನಯಾನ ನಿಯಂತ್ರಣ ಮತ್ತು ನಿಯಮ, ವಿಮಾನಯಾನ ಇತಿಹಾಸ, ವಿಜ್ಞಾನ, ಸುರಕ್ಷತೆ ಮುಂತಾದವುಗಳ ಬಗ್ಗೆ ಅಧ್ಯಯನ ನಡೆಸಲು ಈ ವಿಶ್ವವಿದ್ಯಾಲಯ ಅಡಿಪಾಯವಾಗಲಿದೆ.
- 2006 ರಲ್ಲಿ "ಕಾ (Kaw) ಸಮಿತಿ" ರಾಷ್ಟ್ರೀಯ ವಿಮಾನಯಾನ ವಿಶ್ವವಿದ್ಯಾಲಯವನ್ನು ಸ್ಥಾಪಿಸುವಂತೆ ಶಿಫಾರಸ್ಸು ಮಾಡಿತ್ತು.

**ಗಲ್ಫ್ ರಾಷ್ಟ್ರದ ಭಾರತೀಯ ಶ್ರಮಿಕ ವರ್ಗಕ್ಕೆ ಮಹಾತ್ಮ ಗಾಂಧಿ ಪ್ರವಾಸಿ ಸುರಕ್ಷಾ ಯೋಜನೆ (MGPSY)**

ಗಲ್ಫ್ ರಾಷ್ಟ್ರಗಳಲ್ಲಿ ಕೆಲಸ ಮಾಡುತ್ತಿರುವ ಭಾರತೀಯ ಶ್ರಮಿಕ ವರ್ಗಕ್ಕೆ (ಕೂಲಿ ಕಾರ್ಮಿಕರಿಗೆ) ಕೇಂದ್ರ ಸರ್ಕಾರ ಮಹಾತ್ಮ ಗಾಂಧಿ ಪ್ರವಾಸಿ ಸುರಕ್ಷಾ ಯೋಜನೆ ಎಂಬ ಪಿಂಚಣಿ ಯೋಜನೆಯನ್ನು ಆಗಸ್ಟ್ 2013 ರಲ್ಲಿ ಜಾರಿಗೊಳಿಸಲಿದೆ. ಸಾಗರೋತ್ತರ ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರತೀಯರಿಗೆ ಜೀವ ವಿಮೆ ಮತ್ತು ಪಿಂಚಣಿ ನೀಡುವ ಯೋಜನೆ ಇದಾಗಲಿದೆ.

ಸಾಗರೋತ್ತರ ಮಂತ್ರಾಲಯದ ಪ್ರಧಾನ ಕಾರ್ಯದರ್ಶಿ ರಾಜೀವ್ ಮೆಹರ್ಷಿ ಯವರು ಈ ಬಗ್ಗೆ ಹೇಳಿಕೆಯನ್ನು ನೀಡಿದ್ದಾರೆ. ಗಲ್ಫ್ ರಾಷ್ಟ್ರಗಳಾದ ಇರಾಕ್, ಇರಾನ್, ಕುವೈತ್, ಸೌದಿ ಅರೇಬಿಯ, ಬೆಹರೇನ್, ಕತಾರ್, ಯು.ಎ.ಇ., ಮತ್ತು ಓಮನ್ ದೇಶಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಭಾರತೀಯ ಶ್ರಮಿಕ ವರ್ಗಕ್ಕೆ ನಿವೃತ್ತಿವರೆಗಿನ ಹಣ ಉಳಿತಾಯಕ್ಕಾಗಿ, ನಿವೃತ್ತಿ ನಂತರ ಭಾರತದಲ್ಲಿ ಬಂದು ನೆಲೆಸಲು ಮತ್ತು ಯಾವುದೇ ರೀತಿಯ ಅವಘಡಗಳಲ್ಲಿ ಮೃತರಾದಾಗ ಜೀವ ವಿಮೆ ಒದಗಿಸಲು ಅನುಕೂಲವಾಗುವಂತೆ ಈ ಯೋಜನೆ ರೂಪಸಿಲಾಗಿದೆ.

**ಮಹಾತ್ಮ ಗಾಂಧಿ ಪ್ರವಾಸಿ ಸುರಕ್ಷಾ ಯೋಜನೆಯ ವಿಶೇಷತೆಗಳು:**

- ಕೇಂದ್ರ ಸರ್ಕಾರ ಪ್ರತಿ ತಿಂಗಳು ರೂ.1000 ವಂತಿಗೆ ನೀಡಿದರೆ ಸಂಬಂಧಿಸಿದ ಕಾರ್ಮಿಕರಿಂದ ಕನಿಷ್ಟ ತಲಾ ರೂ.1000 ಸಂಗ್ರಹಿಸಿ ನೂತನ ಪಿಂಚಣಿ ಯೋಜನೆ (NPS) ನಲ್ಲಿ ವಿನಿಯೋಗಿಸಲಿದೆ
- ಅಲ್ಲದೆ ನಿಯಮಿತವಾಗಿ ಉಳಿತಾಯ ಮಾಡುವ ಕಾರ್ಮಿಕರಿಗೆ ಪ್ರತಿ ವರ್ಷ ಹೆಚ್ಚುವರಿಯಾಗಿ ರೂ. 1000 ಕಾರ್ಮಿಕರ ಪಿಂಚಣಿ ಯೋಜನೆಗೆ ನೀಡಲಿದೆ
- ಒಂದು ವರ್ಷದಲ್ಲಿ ರೂ.4000 ಕ್ಕಿಂತ ಹೆಚ್ಚು ಉಳಿತಾಯ ಮಾಡಿದ ಕಾರ್ಮಿಕರ ಖಾತೆಗೆ ಕೇಂದ್ರ ಸರ್ಕಾರ ರೂ.900 ಹೆಚ್ಚುವರಿಯಾಗಿ ನೀಡಲಿದೆ
- ಈ ಯೋಜನೆಯು ಸದುಪಯೋಗ ಗರಿಷ್ಠ 5 ವರ್ಷಗಳಿಗೆ ಅಥವಾ ಚಂದಾದಾರನು ಭಾರತಕ್ಕೆ ಹಿಂದಿರುಗುವ (ಎರಡರಲ್ಲಿ ಯಾವುದೋ ಮೊದಲೋ) ವರೆಗೆ ಚಾಲ್ತಿಯಲ್ಲಿರುತ್ತದೆ.

**ಆ್ಯಸಿಡ್ ಮಾರಟಕ್ಕೆ ಸೂಕ್ತ ನೀತಿ ರೂಪಿಸಲು ಕೇಂದ್ರ ಸರ್ಕಾರಕ್ಕೆ ಸರ್ವೋಚ್ಛ ನ್ಯಾಯಾಲಯ ಆದೇಶ**

ದೇಶದಲ್ಲಿ ಮಹಿಳೆಯರ ಮೇಲೆ ವ್ಯಾಪಕವಾಗಿ ನಡೆಯುತ್ತಿರುವ ಆ್ಯಸಿಡ್ ದಾಳಿಗಳ ಹಿನ್ನೆಲೆಯಲ್ಲಿ ಸರ್ವೋಚ್ಛ ನ್ಯಾಯಲಯ ಆ್ಯಸಿಡ್ ಮಾರಾಟವನ್ನು ನಿರ್ಬಂಧಿಸಲು ಮತ್ತು ನಿಷೇಧಿಸಲು ಸೂಕ್ತ ನೀತಿ-ನಿರ್ದೇಶನವನ್ನು ರೂಪಿಸುವಂತೆ ಕೇಂದ್ರ ಸರ್ಕಾರಕ್ಕೆ ತಾಕೀತು ಮಾಡಿದೆ. ಇದೇ ವೇಳೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಆ್ಯಸಿಡ್ ಮಾರಾಟವನ್ನು ನಿಷೇಧಿಸುವುದಾಗಿ ಸರ್ವೋಚ್ಛ ನ್ಯಾಯಾಲಯಕ್ಕೆ ಮುಚ್ಚಳಿಕೆ ಸಲ್ಲಿಸಲು ಸೂಚಿಸಿ, ಕರಡು ನೀತಿಯ ಕರಡನ್ನು ಕೂಡಲೇ ರಚಿಸಿಕೊಡಲು ಆದೇಶಿಸಿದೆ.

ಆ್ಯಸಿಡ್ ಮಾರಾಟವನ್ನು ನಿಷೇಧಿಸುವುದಾಗಿ ಸರ್ವೋಚ್ಛ ನ್ಯಾಯಾಲಯಕ್ಕೆ ಮುಚ್ಚಳಿಕೆ ಸಲ್ಲಿಸಲು ಕೇಂದ್ರ ಸರ್ಕಾರಕ್ಕೆ, ರಾಜ್ಯಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಈ ಹಿಂದೆಯೇ ಸೂಚಿಸಿದ್ದರೂ ಸಹ ಈ ಬಗ್ಗೆ ಯಾವುದೇ ಯೋಜನೆಗಳನ್ನು ಹಾಕಿಕೊಂಡಿರುವುದಿಲ್ಲವೆಂದು ಬೇಸರ ವ್ಯಕ್ತಪಡಿಸಿತು. ಆದ್ದರಿಂದ ಮುಂದಿನ ವಿಚಾರಣೆ ವೇಳೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ವೋಚ್ಛ ನ್ಯಾಯಾಲಯ ಆದೇಶ ನೀಡಿದೆ.

ಸಾಮಾನ್ಯ ಜನರಿಗೆ ಅತೀ ಸುಲಭದಲ್ಲಿ ಆ್ಯಸಿಡ್ ಲಭ್ಯವಾಗುತ್ತಿರುವುದೇ ದೇಶದಲ್ಲಿ ಆ್ಯಸಿಡ್ ದಾಳಿಗಳಿಗೆ ಮೂಲ ಕಾರಣವಾಗಿದೆ. ಸುಮಾರು ಏಳು ವರ್ಷಗಳಿಂದ ಈ ವಿಷಯ ಸರ್ವೋಚ್ಛ ನ್ಯಾಯಾಲಯದಲ್ಲಿದ್ದರೂ ಸಹ ಕೇಂದ್ರ/ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳು ಯಾವುದೇ ನಿರ್ಧಿಷ್ಟವಾದ ಕ್ರಮ ಕೈಗೊಳ್ಳಲು ವಿಫಲವಾಗಿವೆ.

ಸದ್ಯ ದೇಶದಲ್ಲಿ ಭಾರತೀಯ ದಂಡ ಸಂಹಿತೆ 326A ಮತ್ತು 326B ಅನ್ವಯ ಆ್ಯಸಿಡ್ ದಾಳಿ ನಡೆಸಿದವರಿಗೆ ಗರಿಷ್ಟ ಜೀವಾವಧಿ ಶಿಕ್ಷೆ ವಿಧಿಸಬಹುದಾಗಿದೆ.

**ಜಾತಿಯಾಧಾರಿತ ಸಮ್ಮೇಳನಗಳನ್ನು ನಿಷೇಧಿಸಿದ ಉತ್ತರಪ್ರದೇಶ ಉಚ್ಛನ್ಯಾಯಾಲಯ**

ಉತ್ತರ ಪ್ರದೇಶ ಉಚ್ಛನ್ಯಾಯಾಲಯವು ರಾಜಕೀಯ ಪಕ್ಷವೊಂದು ನಡೆಸಲು ಉದ್ದೇಶಿಸಿದ್ದ ಜಾತಿಯಾಧಾರಿತ ಸಮ್ಮೇಳನವನ್ನು ನಿಷೇಧಿಸಿ ಆದೇಶ ಹೊರಡಿಸಿದೆ. ಇದೇ ವೇಳೆ ಉಚ್ಛನ್ಯಾಯಾಲಯವು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು, ಚುನಾವಣಾ ಆಯೋಗ ಮತ್ತು ನಾಲ್ಕು ಪ್ರಮುಖ ರಾಜಕೀಯ ಪಕ್ಷಗಳಿಗೆ ನೋಟಿಸ್ ಕಳುಹಿಸಿದೆ. ಇತ್ತೀಚೆಗೆ ಬಹುಜನ ಸಮಾಜವಾದಿ ಪಕ್ಷವು ತನ್ನ ರಾಜ್ಯದ 40 ಜಿಲ್ಲೆಗಳಲ್ಲಿ ನಡೆಸಲು ಉದ್ದೇಶಿಸಿದ್ದ "ಬ್ರಾಹ್ಮಣ್ ಬೈಚಾರ ಸಮ್ಮೇಳನ್" ಬಗ್ಗೆ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ಈ ಆದೇಶವನ್ನು ಹೊರಡಿಸಿದೆ. ಸಮಾಜವಾದಿ ಪಕ್ಷವೂ ಸಹ ಇಂತಹುದೇ ಜಾತಿಯಾಧಾರಿತ ಸಮ್ಮೇಳನವನ್ನು ನಡೆಸಲು ಉದ್ದೇಶಿಸಿತ್ತು.

ಇದೇ ವೇಳೆ ಉಚ್ಛನ್ಯಾಯಾಲಯವು ಕಾಂಗ್ರೆಸ್ ಮತ್ತು ಭಾರತೀಯ ಜನತಾ ಪಕ್ಷಗಳಿಗೂ ಸಹ ನೋಟಿಸ್ ನೀಡಿದೆ. ಇತ್ತೀಚಿನ ದಿನಗಳಲ್ಲಿ ವಿವಿಧ ರಾಜಕೀಯ ಪಕ್ಷಗಳು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹೀಗೆ ಹಲವಾರು ಜಾತಿಯಾಧಾರಿತ ಸಮ್ಮೇಳನಗಳನ್ನು ನಡೆಸುತ್ತಿದ್ದು ಇದು ಭಾರತದಂತಹ ಜ್ಯಾತ್ಯಾತೀತ ರಾಷ್ಟ್ರದಲ್ಲಿ ಸಮಾಜದ ಏಕತೆ ಮತ್ತು ಶಾಂತಿಯನ್ನು ಕದಡಲು ಅವಕಾಶ ಮಾಡಿಕೊಡುತ್ತದೆ ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ಆರೋಪಿಸಿದ್ದರು.

**2,500 ಮಾದರಿ ಶಾಲೆಗಳನ್ನು ತೆರೆಯಲು ಕೇಂದ್ರ ಸರ್ಕಾರ ಒಪ್ಪಿಗೆ**

ದೇಶದಾದ್ಯಂತ ಸಾರ್ವಜನಿಕ ಖಾಸಗಿ ಪಾಲುದಾರಿಕೆ ಮೂಲಕ 2,500 ಮಾದರಿ ಶಾಲೆಗಳನ್ನು ಸ್ಥಾಪಿಸುವ ಪ್ರಸ್ತಾವನೆಗೆ ಮಾನವ ಸಂಪನ್ಮೂಲ ಸಚಿವಾಲಯ ಮತ್ತು ಯೋಜನಾ ಆಯೋಗ ಒಪ್ಪಿಗೆ ಸೂಚಿಸಿವೆ. ಯೋಜನಾ ಆಯೋಗದ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಶಿಕ್ಷಣ ಸಂಸ್ಥೆಗಳೊಂದಿಗೆ ಈಗಾಗಲೇ ಈ ವಿಷಯದ ಬಗ್ಗೆ ಚರ್ಚಿಸಲಾಗಿದ್ದು, ಈ ವಿಷಯವನ್ನು ಕೇಂದ್ರ ಮಾನವ ಸಂಪನ್ಮೂಲ ಖಾತೆ ಸಚಿವ ಪಲ್ಲಂ ರಾಜು ಅವರು ತಿಳಿಸಿದ್ದಾರೆ.

**ಯೋಜನೆ ಅನುಷ್ಠಾನ?**

- ಈ ಯೋಜನೆಯಡಿ ಶೈಕ್ಷಣಿಕವಾಗಿ ಹಿಂದುಳಿದಿರುವ 41 ವಲಯಗಳಲ್ಲಿ ಮಾದರಿ ಶಾಲೆಗಳನ್ನು ತೆರೆಯಲಾಗುವುದು. ಈ 41 ವಲಯಗಳಲ್ಲಿ ಕರ್ನಾಟಕ ಸೇರಿದಂತೆ 9 ರಾಜ್ಯಗಳನ್ನು ಗುರುತಿಸಲಾಗಿದೆ.
- ಆಂಧ್ರಪ್ರದೇಶ (1), ಹರಿಯಾಣ (13), ರಾಜಸ್ಥಾನ (11), ಮಧ್ಯಪ್ರದೇಶ (6), ಪಂಜಾಬ್ (3), ಉತ್ತರ ಪ್ರದೇಶ (2), ಕರ್ನಾಟಕ (2), ಗುಜರಾತ್ (1) ಮತ್ತು ಮಹಾರಾಷ್ಟ್ರ (1) ಹಿಂದುಳಿದ ಶೈಕ್ಷಣಿಕ ವಲಯಗಳಲ್ಲಿ ಈ ಮಾದರಿ ಶಾಲೆಗಳನ್ನು ಸ್ಥಾಪಿಸಲಾಗುವುದು.

**ಶಾಲೆ ನಿರ್ಮಾಣ**:

- ಖಾಸಗಿ ಷೇರುದಾರರು ಬಂಡವಾಳ ಹೂಡಿ ಕಟ್ಟಡ ನಿರ್ಮಿಸುವುದು ಮತ್ತು ಅದರ ನಿರ್ವಹಣೆ ನೋಡಿಕೊಳ್ಳಲಿದ್ದಾರೆ. ಶಾಲೆ ನಿರ್ಮಾಣಕ್ಕೆ ಬೇಕಾಗುವ ಭೂಮಿಯನ್ನು ಸರ್ಕಾರ ಒದಗಿಸಲಿದೆ.
- ಶಾಲೆಯಲ್ಲಿ ಶೇ 40% ಆಯ್ದ ವಿದ್ಯಾರ್ಥಿಗಳಿಗೆ ಉಚಿತವಾಗಿ ಶಿಕ್ಷಣವನ್ನು ನೀಡಲಾಗುವುದು. ಈ ವಿದ್ಯಾರ್ಥಿಗಳ ಕಲಿಕಾ ವೆಚ್ಚವನ್ನು ಸರ್ಕಾರವೇ ಭರಿಸಲಿದೆ.
- ಉಳಿದ ಶೇ 60 ರಷ್ಟು ವಿದ್ಯಾರ್ಥಿಗಳು ನಿಗದಿಪಡಿಸಿದ ಶುಲ್ಕವನ್ನು ಪಾವತಿಸಿ ನೋಂದಣಿ ಮಾಡಿಕೊಳ್ಳಬೇಕು.

**ನವದೆಹಲಿಯಲ್ಲಿ 14 ನೇ ಭಾರತ ಮತ್ತು ಬಾಂಗ್ಲದೇಶ ಗೃಹ ಕಾರ್ಯದರ್ಶಿಗಳ ಸಭೆ**

ಭಾರತ ಮತ್ತು ಬಾಂಗ್ಲದೇಶ ನಡುವಿನ 14 ನೇ ಗೃಹ ಕಾರ್ಯದರ್ಶಿಗಳ ಸಭೆಯು ಜುಲೈ 19 ರಿಂದ ಜುಲೈ 22 ರವರೆಗೆ ನವದೆಹಲಿಯಲ್ಲಿ ನಡೆಯಿತು. ಭಾರತದ ಪರವಾಗಿ ಕೇಂದ್ರ ಗೃಹ ಕಾರ್ಯದರ್ಶಿಗಳಾದ ಅನಿಲ್ ಗೋಸ್ವಾಮಿ ಅವರು ಪ್ರತಿನಿಧಿಸಿದ್ದರೆ, ಬಾಂಗ್ಲದ ಪ್ರತಿನಿಧಿಯಾಗಿ ಸಿ.ಕೆ.ಕ್ಯೂ.ಮಸ್ತಕ್ ಅಹ್ಮೆದ್ ಅವರು ಪಾಲ್ಗೊಂಡಿದ್ದರು. ಸಭೆಯಲ್ಲಿ ಚರ್ಚಿಸಲಾದ ಕೆಲವು ಪ್ರಮುಖ ಅಂಶಗಳ ಇಲ್ಲಿವೆ.

- ಉಭಯ ದೇಶಗಳ ನಡುವಿನ ಬಾಂಧ್ಯವ ಮತ್ತು ದ್ವಿಪಕ್ಷೀಯ ಸಹಕಾರ ವೃದ್ಧಿಸುವ ಸಲುವಾಗಿ ಎರಡು ದೇಶಗಳ ಪ್ರತಿನಿಧಿಗಳು ಆಳವಾಗಿ ಚರ್ಚಿಸಿದರು.

- ಗಡಿ ಭದ್ರತೆ ಮತ್ತು ಗಡಿ ನಿರ್ವಹಣೆಯನ್ನು ಮತ್ತಷ್ಟು ಉತ್ತಮಗೊಳಿಸಲು ಈ ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ಸಂಬಂಧ ಭದ್ರತೆ ಸಹಕಾರ ಮತ್ತು ಗಡಿಪಾರು ವಿಚಾರವಾಗಿ ಎರಡು ದೇಶಗಳ ನಡುವೆ ನಾಲ್ಕು ಒಪ್ಪಂದಕ್ಕೆ ಸಹಿ ಹಾಕಲಾಯಿತು.
- 13 ನೇ ಭಾರತ ಮತ್ತು ಬಾಂಗ್ಲಾದೇಶಗಳ ಗೃಹ ಕಾರ್ಯದರ್ಶಿಗಳ ಸಭೆಯಲ್ಲಿ ಕೈಗೊಳ್ಳಲಾಗಿದ್ದ ನಿರ್ಣಯಗಳ ಬಗ್ಗೆ ಮೆಲುಕು ಹಾಕಲಾಯಿತು. ಉಭಯ ದೇಶಗಳ ಹಿತಾಸಕ್ತಿ ಕಾಯುವುದಕ್ಕಾಗಿ ಗಡಿಭಾಗವನ್ನು ಬಳಸಿಕೊಳ್ಳಲು ಚಿಂತಿಸಲಾಯಿತು.
- ಉಭಯ ದೇಶಗಳ ಗಡಿ ಭಾಗದಲ್ಲಿ ಕಳ್ಳಸಾಗಣಿಕೆ, ಗಡಿ ನುಸುಳುವಿಕೆ, ಅಕ್ರಮ ಶಸ್ತ್ರಾಸ್ತ್ರ ಸಾಗಾಣಿಕೆ ಸೇರಿದಂತೆ ಇತರೆ ಕಾನೂನು ಬಾಹಿರ ಚಟುವಟಿಕೆಗಳ ಸಂಪೂರ್ಣವಾಗಿ ತಡೆಯಲು ಕ್ರಮಕೈಗೊಳ್ಳುವುದಾಗಿ ಎರಡು ದೇಶಗಳ ಪ್ರತಿನಿಧಿಗಳು ತೀರ್ಮಾನಿಸಿದರು.

<u>**ಭಾರತಕ್ಕೆ ಪ್ರವಾಸಿಗರ ಭೇಟಿ: ಇತ್ತೀಚಿನ ಅಂಕಿ ಅಂಶಗಳ ಒಂದು ನೋಟ**</u>

ಭಾರತೀಯ ಪ್ರವಾಸೋದ್ಯಮ ಸಚಿವಾಲಯ ಇತ್ತೀಚೆಗೆ ಬಿಡುಗಡೆಗೊಳಿಸಿರುವ ಅಂಕಿ ಅಂಶಗಳ ಪ್ರಕಾರ 2011 ನೇ ಸಾಲಿಗೆ ಹೋಲಿಸಿದರೆ 2012 ನೇ ಸಾಲಿನಲ್ಲಿ ಸ್ಥಳೀಯ ಪ್ರವಾಸಿಗರ ಭೇಟಿ (Domestic Tourist Visit) ಸಂಖ್ಯೆಯಲ್ಲಿ ಶೇ 19.87% ರಷ್ಟು ಹೆಚ್ಚಳವಾಗಿರುವುದು ಕಂಡು ಬಂದಿದೆ. 2010 ನೇ ಸಾಲಿಗೆ ಹೋಲಿಸಿದರೆ 2011 ನೇ ಸಾಲಿನಲ್ಲಿ ಈ ಪ್ರಮಾಣ ಶೇ 15.6 ರಷ್ಟು ದಾಖಲಾಗಿತ್ತು.

- ಅಂಕಿ ಅಂಶಗಳ ಪ್ರಕಾರ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ 1036 ಮಿಲಿಯನ್ ಸ್ಥಳೀಯ ಪ್ರವಾಸಿಗರು ಭೇಟಿ ನೀಡಿದ್ದಾರೆ. 2011 ರಲ್ಲಿ 865 ಮಿಲಿಯನ್ ಹಾಗೂ 2010 ರಲ್ಲಿ 748 ಮಿಲಿಯನ್ ಪ್ರವಾಸಿಗರು ಭೇಟಿ ನೀಡಿದ್ದರು.
- 2012 ನೇ ಸಾಲಿನಲ್ಲಿ ಅತಿ ಹೆಚ್ಚು ಸ್ಥಳೀಯ ಪ್ರವಾಸಿಗರು ಭೇಟಿ ನೀಡಿರುವ ರಾಜ್ಯಗಳ ಪೈಕಿ ಆಂಧ್ರಪ್ರದೇಶ ಪ್ರಥಮ ಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ತಮಿಳುನಾಡು, ಉತ್ತರ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ಮಧ್ಯಪ್ರದೇಶ ಕಾಣಿಸಿಕೊಂಡಿವೆ.
- 2011 ನೇ ಸಾಲಿನಲ್ಲಿ ಉತ್ತರ ಪ್ರದೇಶ ಮೊದಲ ಸ್ಥಾನದಲ್ಲಿತ್ತು. ಆದರೆ ಈ ಬಾರಿ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. 2011 ನೇ ಸಾಲಿನಲ್ಲಿ ಮೂರನೇ ಸ್ಥಾನದಲ್ಲಿದ್ದ ತಮಿಳುನಾಡು, 2012 ನೇ ಸಾಲಿನಲ್ಲಿ ಎರಡನೇ ಸ್ಥಾನಕ್ಕೆ ಏರಿದೆ.
- ಇನ್ನು ವಿದೇಶಿ ಪ್ರವಾಸಿಗರ ಭೇಟಿಯಲ್ಲಿ ಈ ಬಾರಿ ಕೊಂಚ ಏರಿಕೆ ಕಂಡಿದೆ. ಅಂಕಿ ಅಂಶಗಳ ಪ್ರಕಾರ 2012 ನೇ ಸಾಲಿನಲ್ಲಿ 20.7 ಮಿಲಿಯನ್ ವಿದೇಶಿ ಪ್ರವಾಸಿಗರು ಭಾರತಕ್ಕೆ ಭೇಟಿ ನೀಡಿದ್ದಾರೆ. 2011 ರಲ್ಲಿ 19.5 ಮಿಲಿಯನ್ ಮತ್ತು 2010 ರಲ್ಲಿ 17.9 ಮಿಲಿಯನ್ ವಿದೇಶಿ ಪ್ರವಾಸಿಗರು ಭಾರತಕ್ಕೆ ಭೇಟಿ ನೀಡಿದ್ದರು.
- ವಿದೇಶಿ ಪ್ರವಾಸಿಗರು ಹೆಚ್ಚು ಭೇಟಿ ನೀಡಿರುವ ರಾಜ್ಯಗಳ ಪೈಕಿ "ಮಹಾರಾಷ್ಟ್ರ" ಅಗ್ರಸ್ಥಾನದಲ್ಲಿದೆ. ತಮಿಳು ನಾಡು. ದೆಹಲಿ, ಉತ್ತರ ಪ್ರದೇಶ, ರಾಜಸ್ತಾನ, ಪಶ್ಚಿಮ ಬಂಗಾಳ, ಬಿಹಾರ ನಂತರದ ಸ್ಥಾನದಲ್ಲಿವೆ.

**ಪ್ರವಾಸಿಗರನ್ನು ಸೆಳೆಯುವ ರಾಜ್ಯಗಳ ಪೈಕಿ ಆಂಧ್ರಪ್ರದೇಶ ನಂ.1**

ಅತ್ಯಂತ ಹೆಚ್ಚು ಪ್ರವಾಸಿಗರನ್ನು ಸೆಳೆಯುವ ರಾಜ್ಯಗಳ ಪೈಕಿ ಆಂಧ್ರಪ್ರದೇಶಕ್ಕೆ 1ನೇ ಸ್ಥಾನ ಸಿಕ್ಕಿದ್ದರೆ, ಕರ್ನಾಟಕ ರಾಜ್ಯ 4 ನೇ ಸ್ಥಾನ ಪಡೆದುಕೊಂಡಿದೆ. 2012ನೇ ಸಾಲಿನಲ್ಲಿ ಆಂಧ್ರಕ್ಕೆ 20.68 ಕೋಟಿ ಜನ ಪ್ರವಾಸಿಗರು ಭೇಟಿ ನೀಡಿದ್ದರೆ, ಕರ್ನಾಟಕಕ್ಕೆ 9.4 ಕೋಟಿ ಪ್ರವಾಸಿಗರು ಬಂದು ಹೋಗಿದ್ದಾರೆ.

**ಟಾಪ್ 10 ಪ್ರವಾಸಿ ರಾಜ್ಯಗಳು:**

ಆಂಧ್ರಪ್ರದೇಶ- 20.6 ಕೋಟಿ, ತಮಿಳುನಾಡು- 18.4 ಕೋಟಿ, ಉತ್ತರಪ್ರದೇಶ- 16.8 ಕೋಟಿ, ಕರ್ನಾಟಕ- 9.4 ಕೋಟಿ, ಮಹಾರಾಷ್ಟ್ರ- 6.6 ಕೋಟಿ, ಮಧ್ಯಪ್ರದೇಶ- 5.3 ಕೋಟಿ, ರಾಜಸ್ಥಾನ- 2.8 ಕೋಟಿ, ಉತ್ತರಾಖಂಡ- 2.6 ಕೋಟಿ, ಗುಜರಾತ್- 2.4 ಕೋಟಿ, ಪಶ್ಚಿಮಬಂಗಾಳ- 2.2 ಕೋಟಿ,

**ವಿದೇಶಿ ಪ್ರವಾಸಿಗರನ್ನು ಸೆಳೆಯುವಲ್ಲಿ ಮಹಾರಾಷ್ಟ್ರ ನಂ.1:**

ವಿದೇಶಿ ಪ್ರವಾಸಿಗರ ಮೆಚ್ಚಿನ ಆಯ್ಕೆಗೆ ಬಂದರೆ, ಮಹಾರಾಷ್ಟ್ರಕ್ಕೆ ಮೊದಲ ಸ್ಥಾನ ಸಿಕ್ಕಿದ್ದರೆ, ಕರ್ನಾಟಕಕ್ಕೆ 9ನೇ ಸ್ಥಾನ ಪ್ರಾಪ್ತವಾಗಿದೆ. ಕೇಂದ್ರ ಪ್ರವಾಸೋದ್ಯಮ ಇಲಾಖೆಯ ಮಾಹಿತಿ ಅನ್ವಯ, ತಿರುಪತಿ ತಿಮ್ಮಪ್ಪನಿಂದಾಗಿ ಆಂಧ್ರಪ್ರದೇಶಕ್ಕೆ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ಹೀಗಾಗಿಯೇ ಆಂಧ್ರಕ್ಕೆ ನಂ.1 ಸ್ಥಾನ ಸಿಕ್ಕಿದೆ. ಇನ್ನು ತಮಿಳುನಾಡು ಪಟ್ಟಿಯಲ್ಲಿ 2ನೇ ಸ್ಥಾನ ಪಡೆದುಕೊಂಡಿದ್ದರೆ, ಉತ್ತರಪ್ರದೇಶಕ್ಕೆ ಮೂರನೇ ಸ್ಥಾನ ಸಿಕ್ಕಿದೆ. 2010ರಲ್ಲಿ ದೇಶದಲ್ಲಿ 74 ಕೋಟಿ ಪ್ರವಾಸಿಗರು ದೇಶದ ವಿವಿಧ ರಾಜ್ಯಗಳಿಗೆ ಭೇಟಿ ನೀಡಿದ್ದರೆ, 2011ರಲ್ಲಿ ಈ ಸಂಖ್ಯೆ 86 ಕೋಟಿಗೆ ಏರಿದೆ. ಇನ್ನು 2012ನೇ ಸಾಲಿನಲ್ಲಿ ಒಟ್ಟಾರೆ 103 ಕೋಟಿ ಜನ ವಿವಿಧ ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡಿರುವುದು ಕಂಡುಬಂದಿದೆ.

**ವಿದೇಶಿ ಪ್ರವಾಸಿಗರ ಮೆಚ್ಚಿನ ಆಯ್ಕೆ:**

ಮಹಾರಾಷ್ಟ್ರ- 5 ಲಕ್ಷ, ತಮಿಳುನಾಡು- 3.6 ಲಕ್ಷ, ಉತ್ತರಪ್ರದೇಶ- 2 ಲಕ್ಷ, ರಾಜಸ್ಥಾನ- 1.5 ಲಕ್ಷ, ಪಶ್ಚಿಮ ಬಂಗಾಳ- 1.2 ಲಕ್ಷ, ಬಿಹಾರ- 1.1 ಲಕ್ಷ, ಕೇರಳ- 80 ಸಾವಿರ, ಕರ್ನಾಟಕ- 60 ಸಾವಿರ, ಹಿಮಾಚಲಪ್ರದೇಶ- 50 ಸಾವಿರ.

**ಭಾರತೀಯ ಭಾಷೆ ಸಮೀಕ್ಷೆ: ವೈವಿಧ್ಯತೆಗೆ ಭಾರತ ಮಾದರಿ**

ದೇಶದಲ್ಲಿ ಸರಿಸುಮಾರು 780 ಭಾಷೆಗಳು ಮತ್ತು 66 ವಿವಿಧ ಲಿಪಿಗಳು ಬಳಕೆಯಲ್ಲಿರುವುದಾಗಿ ಇತ್ತೀಚೆಗೆ ನಡೆಸಿದ ಭಾಷೆ ಸಮೀಕ್ಷೆಯಿಂದ ತಿಳಿದು ಬಂದಿದೆ. "ಪೀಪಲ್ಸ್ ಲಿಂಗ್ವಿಸ್ಟಿಕ್ ಸರ್ವೇ ಆಫ್ ಇಂಡಿಯಾ (People's Linguistic Survey of India)" ಪ್ರಾಥಮಿಕವಾಗಿ ಈ ಸಮೀಕ್ಷೆಯನ್ನು ಕೈಗೊಂಡಿದ್ದು, ಸೆಪ್ಟೆಂಬರ್ 2013 ರ ವೇಳೆಗೆ ಅಧಿಕೃತವಾಗಿ ಪ್ರಕಟಗೊಳಿಸಲಿದೆ. ಇದರಿಂದ ದೇಶದ ಭಾಷಾ ವೈವಿಧ್ಯತೆಯ ಮೇಲೆ ಮತ್ತಷ್ಟು ಬೆಳಕು ಚೆಲ್ಲಲು ಸಾಧ್ಯವಾಗಲಿದೆ.

**ಸಮೀಕ್ಷೆಯಲ್ಲಿ ಏನಿದೆ?**

- ಅರುಣಾಚಲ ಪ್ರದೇಶ ಅತಿ ಹೆಚ್ಚು ಭಾಷೆಗಳನ್ನು ಹೊಂದಿರುವ ಖ್ಯಾತಿಯನ್ನು ಹೊಂದಿದೆ. ಸಮೀಕ್ಷೆಯ ಪ್ರಕಾರ ಅರುಣಾಚಲ ಪ್ರದೇಶದಲ್ಲಿ 90 ಕ್ಕೂ ಹೆಚ್ಚು ಭಾಷೆಗಳು ಬಳಕೆಯಲ್ಲಿವೆ.
- ಪಶ್ಚಿಮ ಬಂಗಾಳ 9 ಲಿಪಿಗಳೊಂದಿಗೆ ಅತಿ ಹೆಚ್ಚು ಲಿಪಿಗಳನ್ನು ಹೊಂದಿರುವ ರಾಜ್ಯವೆನಿಸಿದೆ.

- ಅಸ್ಸಾಂನಲ್ಲಿ 55 ಭಾಷೆಗಳು, ಗುಜರಾತ್ ನಲ್ಲಿ 48 ಭಾಷೆಗಳು, ಮಹಾರಾಷ್ಟ್ರ 39 ಮತ್ತು ಪಶ್ಚಿಮ ಬಂಗಾಳದಲ್ಲಿ 38 ಭಾಷೆಗಳು ಬಳಕೆಯಲ್ಲಿದ್ದು, ಭಾಷೆ ವೈವಿಧ್ಯತೆ ರಾಜ್ಯಗಳೆನಿಸಿವೆ.
- ಸಮೀಕ್ಷೆ ಪ್ರಕಾರ 10,000 ಕ್ಕಿಂತಲೂ ಹೆಚ್ಚು ಜನ ಮಾತನಾಡುವ 122 ಭಾಷೆಗಳು ಭಾರತದಲ್ಲಿವೆ. ಇದರಲ್ಲಿ 22 ಭಾಷೆಗಳನ್ನು ಈಗಾಗಲೇ ಸಂವಿಧಾನದಲ್ಲಿ ಅಧಿಕೃತ ಭಾಷೆ ಸ್ಥಾನ ಪಡೆದಿವೆ.
- ಕಳೆದ 50 ವರ್ಷಗಳಲ್ಲಿ ದೇಶದಲ್ಲಿ ಸುಮಾರು 250 ಭಾಷೆಗಳು ಕಣ್ಮರೆಯಾಗಿದೆ ಎಂದು ಸಮೀಕ್ಷೆ ತಿಳಿದು ಬಂದಿದೆ.
- ಈ ಸಮೀಕ್ಷೆ ಭಾರತ ಇತಿಹಾಸದಲ್ಲೇ ಅತಿ ದೊಡ್ಡ ಭಾಷೆ ಸಮೀಕ್ಷೆ ಎನಿಸಿರುವುದು ಮಹತ್ವದ ಸಂಗತಿ. ಈ ಹಿಂದೆ ಜಾರ್ಜ್ ಅಬ್ರಹಿಂ ಎಂಬುವವರು 1898 ರಿಂದ 1928 ರ ವರೆಗೆ ಭಾಷೆ ಸಮೀಕ್ಷೆಯನ್ನು ಭಾರತದಲ್ಲಿ ನಡೆಸಿದ್ದರು.

**2012-13 ನೇ ಸಾಲಿನಲ್ಲಿ 255.36 ಮಿಲಿಯನ್ ಟನ್ಸ್ ಆಹಾರ ಧಾನ್ಯಗಳನ್ನು ಉತ್ಪಾದಿಸಿದ ಭಾರತ**

2012-13 ನೇ ಸಾಲಿನ ಬೆಳೆ ವರ್ಷ ಜೂನ್ ಅಂತ್ಯಕ್ಕೆ ಕೊನೆಗೊಂಡಿದ್ದು, ಮುನ್ನೋಟದ ಪ್ರಕಾರ ಈ ಸಾಲಿನಲ್ಲಿ 18.45 ಮಿಲಿಯನ್ ಟನ್ ಬೇಳೆಕಾಳುಗಳನ್ನು ಉತ್ಪಾದಿಸುವ ಮೂಲಕ ಭಾರತ ದಾಖಲೆ ಬರೆದಿದೆ. ಆದರೆ ಒಟ್ಟಾರೆ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಶೇ 1.5 ರಷ್ಟು ಕುಸಿತ ಕಂಡಿದ್ದು, 255.36 ಮಿಲಿಯನ್ ಟನ್ಸ್ ಆಹಾರ ಧಾನ್ಯಗಳು ಉತ್ಪಾದನೆಯಾಗಲಿದೆ ಎಂದು ಅಂದಾಜಿಸಲಾಗಿದೆ. ಕೆಲವು ರಾಜ್ಯಗಳಲ್ಲಿ ತೀವ್ರವಾಗಿ ಬರ ಕಾಡಿದ ಹಿನ್ನಲೆಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಕುಸಿತ ಕಂಡುಬಂದಿರುವುದಾಗಿ ಹೇಳಲಾಗಿದೆ. 2011-12 ನೇ ಸಾಲಿನಲ್ಲಿ 259.29 ಮಿಲಿಯನ್ ಟನ್ಸ್ ಆಹಾರ ಧಾನ್ಯಗಳನ್ನು ಉತ್ಪಾದಿಸಲಾಗಿತ್ತು.

- ಮೇ ತಿಂಗಳಲ್ಲಿ ಬಿಡುಗಡೆಗೊಳಿಸಲಾದ ಮುನ್ನೋಟದ ಅಂಕಿ-ಅಂಶಗಳ ಪ್ರಕಾರ 2012-13 ನೇ ಸಾಲಿನಲ್ಲಿ ಬೇಳೆಕಾಳುಗಳ ಉತ್ಪಾದನೆ 18 ಮಿಲಿಯನ್ ಟನ್ ಇರಲಿದೆ ಎನ್ನಲಾಗಿತ್ತು. 2011-12 ನೇ ಸಾಲಿನಲ್ಲಿ 17.09 ಮಿಲಿಯನ್ ಟನ್ ಬೇಳೆಕಾಳುಗಳ ಉತ್ಪಾದನೆಯಾಗಿತ್ತು.
- ಭತ್ತ ಉತ್ಪಾದನೆ ಈ ಬಾರಿ 104.4 ಮಿಲಿಯನ್ ಟನ್ ಇರಲಿದೆ ಎಂದು ಅಂದಾಜಿಸಲಾಗಿದೆ. ಕಳೆದ ವರ್ಷ 105.3 ಮಿಲಿಯನ್ ಟನ್ ಭತ್ತ ಉತ್ಪಾದನೆಯಾಗಿತ್ತು.
- 2012-13 ನೇ ಸಾಲಿನಲ್ಲಿ ದ್ವಿದಳ ಧಾನ್ಯ ಉತ್ಪಾದನೆ 40.06 ಮಿಲಿಯನ್ ಟನ್ ಇರಲಿದೆ ಎನ್ನಲಾಗಿದೆ. ಕಳೆದ ಸಾಲಿನಲ್ಲಿ 42.01 ಮಿಲಿಯನ್ ಟನ್ ದ್ವಿದಳ ಧಾನ್ಯ ಉತ್ಪಾದನೆಯಾಗಿತ್ತು.
- ಗೋಧಿ ಉತ್ಪಾದನೆಯಲ್ಲೂ ಸಹ ಕಳೆದ ಸಾಲಿಗೆ ಹೋಲಿಸಿದರೆ ಈ ಬಾರಿ ಅಲ್ಪ ಕುಸಿತ ಕಂಡಿದೆ. ಪ್ರಸ್ತುತ ಸಾಲಿನಲ್ಲಿ ಗೋಧಿ ಉತ್ಪಾದನೆ 92.46 ಮಿಲಿಯನ್ ಟನ್ ಇರಲಿದೆ ಎಂದು ಅಂದಾಜಿಸಲಾಗಿದೆ. 2011-12 ನೇ ಸಾಲಿನಲ್ಲಿ 94.88 ಮಿಲಿಯನ್ ಟನ್ ಗೋಧಿ ಉತ್ಪಾದನೆ ಆಗಿತ್ತು.

**ಕ್ರಿಮಿನಲ್ ಪ್ರಕರಣಗಳಲ್ಲಿ ಶಿಕ್ಷೆಗೊಳಪಟ್ಟ ವ್ಯಕ್ತಿ ಸಂಸದ ಮತ್ತು ಶಾಸಕ ಸ್ಥಾನಕ್ಕೆ ಅನರ್ಹ: ಸುಪ್ರೀಂ ಕೋರ್ಟ್**

ದೇಶದ ಅನೇಕ ಜನ ಪ್ರತಿನಿಧಿಗಳು ಒಂದಲ್ಲಾ ಒಂದು ತರಹದ ಕ್ರಿಮಿನಲ್ ಪ್ರಕರಣ ಎದುರಿಸುತ್ತಿದ್ದು, ಇವರಿಂದಾಗಿ ಇಡೀ ರಾಜಕೀಯ ವ್ಯವಸ್ಥೆ ಕಲುಷಿತಗೊಂಡಿದೆ. ಇಂತಹ ಅಪರಾಧಿ ರಾಜಕಾರಣ ಮಟ್ಟಹಾಕಲು ಸುಪ್ರೀಂಕೋರ್ಟ್ ನೀಡಿರುವ ತೀರ್ಪು ಮಹತ್ವದ್ದಾಗಿದೆ. ಕ್ರಿಮಿನಲ್ ಪ್ರಕರಣಗಳಲ್ಲಿ 2 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ಜೈಲು ಶಿಕ್ಷೆಗೆ ಗುರಿಯಾಗುವ ಸಂಸದರು ಮತ್ತು ಶಾಸನ ಸಭೆಗಳ ಸದಸ್ಯರು ತೀರ್ಪು ಪ್ರಕಟವಾದ ತಕ್ಷಣದಿಂದಲೇ ತಮ್ಮ ಸ್ಥಾನದಿಂದ ಅನರ್ಹರಾಗುತ್ತಾರೆಂದು ಸರ್ವೋಚ್ಚ ನ್ಯಾಯಾಲಯ ಇತ್ತೀಚೆಗೆ ನೀಡಿರುವ ತೀರ್ಪು ಸ್ವಾಗತಾರ್ಹ ಹಾಗೂ ಸಮಯೋಚಿತವೂ ಆಗಿದೆ.

**ಪ್ರಜಾ ಪ್ರತಿನಿಧಿ ಕಾಯ್ದೆ ಕಲಂ 8(4) ಯನ್ನು ಅಸಿಂಧುಗೊಳಿಸದ ಸುಪ್ರೀಂ ಕೋರ್ಟ್:**

ಭಾರತೀಯ ರಾಜಕಾರಣದಲ್ಲಿ ರಾಜಕೀಯ ಪಾತಕೀಕರಣ ಹಲವಾರು ದಶಕಗಳಿಂದ ಹಾಸುಹೊಕ್ಕಾಗಿದೆ. ಸುಪ್ರೀಂಕೋರ್ಟಿನ ಈ ತೀರ್ಪು ಇನ್ನು ಮುಂದಾದರೂ, ಭಾರತೀಯ ರಾಜಕೀಯವನ್ನು ಪಾತಕೀಕರಣದಿಂದ ಮುಕ್ತಗೊಳಿಸಬಹುದಾಗಿದೆ. ಸುಪ್ರೀಂಕೋರ್ಟ್ , ಯಾವನೇ ಒಬ್ಬ ಜನ ಪ್ರತಿನಿಧಿ ಅಪರಾಧಿ ಎಂದು ತೀರ್ಪು ಬಂದ ಮೂರು ತಿಂಗಳವರೆಗೆ ಆತನನ್ನು ಸದಸ್ಯತ್ವದಿಂದ ಅನರ್ಹಗೊಳಿಸುವಂತಿಲ್ಲ ಎಂಬ ವಿವರಣೆಯುಳ್ಳ ಪ್ರಜಾ ಪ್ರತಿನಿಧಿ ಕಾಯ್ದೆ ಕಲಂ 8(4) ಯನ್ನು ಅಸಿಂಧುಗೊಳಿಸಿದೆ. ಈ ಮೂಲಕ ಅಪರಾಧಿ ರಾಜಕಾರಣಕ್ಕೆ ತಕ್ಕಮಟ್ಟಿಗೆ ಬ್ರೇಕ್ ಹಾಕಿದೆ.

**ಎಲ್ಲೆಲ್ಲಿ...? ಎಷ್ಟೆಷ್ಟು...?**

- ದೇಶದ ಅತ್ಯಂತ ದೊಡ್ಡ ರಾಜ್ಯ ಉತ್ತರ ಪ್ರದೇಶ 403 ಶಾಸಕರು ಹಾಗೂ 80 ಸಂಸದರನ್ನು ಹೊಂದಿದೆ. ಈ ಪೈಕಿ ಅರ್ಧದಷ್ಟು ಜನ ಪ್ರತಿನಿಧಿಗಳ ಮೇಲೆ ಕ್ರಿಮಿನಲ್ ಪ್ರಕರಣಗಳಿವೆ. ದರೋಡೆ, ಹತ್ಯೆ, ಹತ್ಯೆಯತ್ನ, ಅತ್ಯಾಚಾರ, ಅಪಹರಣದಂತಹ ಗಂಭೀರ ಸ್ವರೂಪದ ಆರೋಪಗಳನ್ನು ಎದುರಿಸುತ್ತಿದ್ದಾರೆ.
- ದೇಶದ ವಿವಿಧ ವಿಧಾನ ಸಭೆಗಳ 4,032 ಶಾಸಕರ ಪೈಕಿ 1,258 ಜನರು (ಶೇ.31) ಕ್ರಿಮಿನಲ್ ಪ್ರಕರಣ ಹೊಂದಿದ್ದಾರೆ. ಈ ಪೈಕಿ ಶೇ.15ರಷ್ಟು ಜನಪ್ರತಿನಿಧಿಗಳ ಮೇಲೆ ಗಂಭೀರ ಆರೋಪಗಳಿವೆ.
- 41 ರಾಜ್ಯ ಸಭಾ ಸದಸ್ಯರು ಹಾಗೂ 10 ಮಹಿಳಾ ಸಂಸದರ ಮೇಲೂ ಕ್ರಿಮಿನಲ್ ಮೊಕದ್ದಮೆಗಳಿವೆ.
- ದೇಶದಲ್ಲಿ ಅಪರಾಧ ಪ್ರಕರಣಗಳನ್ನು ಎದುರಿಸುತ್ತಿರುವ ಶಾಸಕರು ಹೆಚ್ಚಿನ ಸಂಖ್ಯೆಯಲ್ಲಿರುವುದು ಜಾರ್ಖಂಡ್‌ನಲ್ಲಿ. ಇಲ್ಲಿನ ಶೇ.74 ಶಾಸಕರ ಮೇಲೆ ಕ್ರಿಮಿನಲ್ ಪ್ರಕರಣಗಳಿವೆ.
- ಬಿಹಾರದ ಶೇ.58 ಹಾಗೂ ಉತ್ತರ ಪ್ರದೇಶದ ಶೇ.47 ಶಾಸಕರ ಮೇಲೆ ಕ್ರಿಮಿನಲ್ ಪ್ರಕರಣಗಳಿವೆ.
- ಅಪರಾಧ ರಾಜಕಾರಣದ ಕಳಂಕದಿಂದ ಹೊರತಾಗಿರುವ ರಾಜ್ಯ ಮಣಿಪುರವೊಂದೇ.

**ರಾಷ್ಟ್ರಪತಿಯಾಗಿ ಒಂದು ವರ್ಷ ಪೂರೈಸಿದ ಪ್ರಣಬ್ ಮುಖರ್ಜಿ: ವರದಿ**

ರಾಷ್ಟ್ರಪತಿಯಾಗಿ ಪ್ರಣಬ್ ಮುಖರ್ಜಿ ಒಂದು ವರ್ಷ ಪೂರೈಸಿದ್ದು. 89 ವರ್ಷದ ವ್ಯಕ್ತಿಯಿಂದ ನಿರ್ಮಾಣಗೊಂಡ ಮಹಾತ್ಮಾ ಗಾಂಧಿ ಅವರ ಕಂಚಿನ ಪ್ರತಿಮೆಯನ್ನು ಅನಾವರಣಗೊಳಿಸುವುದರ ಜೊತೆಗೆ ವಿರಳ ಛಾಯಾಚಿತ್ರಗಳ ಡಿಜಿಟಲೀಕರಣ ಯೋಜನೆಗೆ ಚಾಲನೆ ನೀಡಲಿದ್ದಾರೆ. ತಮ್ಮ ಆಡಳಿತಾವಧಿಯಲ್ಲಿ ಕೇವಲ ಎರಡು ಬಾರಿ ವಿದೇಶಗಳಿಗೆ ಭೇಟಿ ನೀಡಿ, ಅತಿಹೆಚ್ಚು ಬಾರಿ

ಸ್ವದೇಶದಲ್ಲಿಯೇ ವಿವಿಧ ಸ್ಥಳಗಳಿಗೆ ಭೇಟಿ ನೀಡಿರುವ ರಾಷ್ಟ್ರಪತಿ, ರಾಷ್ಟ್ರಪತಿ ಭವನದ ನಿವಾಸಿಗಳಿಗೆಗಾಗಿ ನಿರ್ಮಾಣವಾದ ಪ್ರಣಬ್ ಮುಖರ್ಜಿ ಸಾರ್ವಜನಿಕ ಗ್ರಂಥಾಲಯ ಉದ್ಘಾಟಿಸುವುದರ ಮೂಲಕ ತಮ್ಮ ದಿನದ ಕಾರ್ಯಕ್ರಮಗಳನ್ನು ಆರಂಭಿಸಲಿದ್ದಾರೆ.

- ಈ ಹಿಂದೆ ಹಾಳಾದ ಕಟ್ಟಡವನ್ನು ಕೆಡವಿ ಅಲ್ಲಿ ಗ್ರಂಥಾಲಯ ಕಟ್ಟಡವನ್ನು ನಿರ್ಮಾಣ ಮಾಡುವದರ ಮೂಲಕ ಹೊಸರೂಪವನ್ನು ನೀಡಲಾಗಿದೆ. ಈ ಗ್ರಂಥಾಲಯವು ರಾಷ್ಟ್ರಪತಿ ಭವನ ಪ್ರದೇಶದ ನಿವಾಸಿಗಳು ಹಾಗೂ ಅವರ ಮಕ್ಕಳಿಗಾಗಿ ನಿರ್ಮಿಸಲಾಗಿದೆ. ಹವಾನಿಯಂತ್ರಿತ ಗ್ರಂಥಾಲಯವು ಎಲ್ಲಾ ವಯೋಮಾನದ ಓದುಗರಿಗಾಗಿ ಹೆಚ್ಚಿನ ಸಂಖ್ಯೆಯ ಪುಸ್ತಕಗಳು, ನಿಯತಕಾಲಿಕಗಳು ಹಾಗೂ ದಿನಪತ್ರಿಕೆಗಳನ್ನು ಒದಗಿಸುತ್ತದೆ. ಹಾಗೆಯೇ ವಿಶೇಷ ಮಕ್ಕಳಿಗಾಗಿ ಒಂದು ವಿಭಾಗವನ್ನು ಸಹ ತೆರೆಯಲಾಗಿದೆ. ಅಲ್ಲದೇ, ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಇನ್ನಿತರ ಪರೀಕ್ಷೆಗಳ ತಯಾರಿಗಾಗಿ ಯುವಕರಿಗೆ ಓದುವ ಕೋಣೆಗಳ ವ್ಯವಸ್ಥೆಯನ್ನು ಸಹ ಮಾಡಲಾಗಿದೆ.
- ಸುಮಾರು 8 ಸಾವಿರದಷ್ಟಿರುವ ರಾಷ್ಟ್ರಪತಿ ಭವನ ಪ್ರದೇಶದ ನಿವಾಸಿಗಳಿಗಾಗಿ ಡಾ. ರಾಜೇಂದ್ರ ಪ್ರಸಾದ್ ಸರ್ವೋದಯ ವಿದ್ಯಾಲಯ ಆವರಣದಲ್ಲಿ ಕ್ರಿಕೆಟ್ ಮೈದಾನವನ್ನು ನಿರ್ಮಿಸಲಾಗಿದೆ. ಈ ಕ್ರೀಡಾಂಗಣವು ಬಿಸಿಸಿಐನ ಸಲಹೆಗಳ ಮೇರೆಗೆ ನಿರ್ಮಿಸಲಾಗಿದ್ದು, ಶಾಲಾ ವಿದ್ಯಾರ್ಥಿಗಳಿಗೆ ಉತ್ತಮ ರೀತಿಯಲ್ಲಿ ಸೌಲಭ್ಯಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ. ಈ ಶಾಲೆಯು 1949 ರಲ್ಲಿ ಸ್ಥಾಪನೆಯಾಗಿದ್ದು, 60 ಶಿಕ್ಷಕರು ಹಾಗೂ 1600 ವಿದ್ಯಾರ್ಥಿಗಳನ್ನು ಹೊಂದಿದೆ.
- ಮಹಾರಾಷ್ಟ್ರದ ರಾಮ್ ಸುತರ್ ಎಂಬ ವ್ಯಕ್ತಿ ನಿರ್ಮಿಸಿದ ಮಹಾತ್ಮಾ ಗಾಂಧಿಯವರ ಕಂಚಿನ ಪ್ರತಿಮೆಯನ್ನು ರಾಷ್ಟ್ರಪತಿ ಭವನದಲ್ಲಿ ಅನಾವರಣಗೊಳಿಸಲಿದ್ದಾರೆ. ರಾಮ್ ಸುತರ್ ರವರು ಮಾಹಾರಾಷ್ಟ್ರದ ಬಡ ಬಡಿಗ ಕುಟುಂಬದಲ್ಲಿ ಜನಿಸಿದವರು. ಆದರೆ ಕಲ್ಲು, ಮಾರ್ಬಲ್ ಮತ್ತು ಕಂಚಿನ ಪ್ರತಿಮೆಗಳ ನಿರ್ಮಾಣದಲ್ಲಿ ಅಪಾರ ಪರಿಣಿತಿಯನ್ನು ಸಾಧಿಸಿದ್ದಾರೆ. ಇವರಿಗೆ 1999ರಲ್ಲಿ ಪದ್ಮಶ್ರೀ ಗೌರವ ಲಭಿಸಿದ್ದು, ಇವರು ನಿರ್ಮಿಸಿದ ಪ್ರಮುಖ ಗಣ್ಯರ ಕಂಚಿನ ಪ್ರತಿಮೆಗಳು ಪಾರ್ಲಿಮೆಂಟ್ ಸೇರಿದಂತೆ, ಸರ್ಕಾರಿ ಕಚೇರಿಗಳು ಹಾಗೂ ಅನೇಕ ಸಾರ್ವಜನಿಕ ಸ್ಥಳಗಳನ್ನು ಅಲಂಕರಿಸಿವೆ.
- ಇದೇ ವೇಳೆ ವಿಡಿಯೋ ಕಾನ್ಫರೆನ್ಸ್‌ನಲ್ಲಿ ದೇಶದ ಎಲ್ಲಾ ರಾಜ್ಯಗಳ ರಾಜ್ಯಪಾಲರೊಂದಿಗೆ ರಾಷ್ಟ್ರಪತಿ ಸಂವಾದ ನಡೆಸಲಿದ್ದು, ಇದು ರಾಷ್ಟ್ರಪತಿ ಭವನದ ಹೊಸ ಸೌಲಭ್ಯಗಳಲ್ಲಿ ಒಂದಾಗಿದೆ.

## ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಫಲಾನುಭವಿಗಳಿಗೆ ಉಚಿತ ಮೊಬೈಲ್

ಕೇಂದ್ರ ಸರ್ಕಾರ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಫಲಾನುಭವಿಗಳಿಗೆ ಉಚಿತ ಮೊಬೈಲ್ ನೀಡುವ ಯೋಜನೆ ಜಾರಿಗೆ ಮುಂದಾಗಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಮುಂದಿನ ಕೆಲ ದಿನಗಳಲ್ಲಿ ಈ ಯೋಜನೆಯನ್ನು ಕೇಂದ್ರ ಸರ್ಕಾರ ಘೋಷಿಸಲಿದೆ.

**ಉಚಿತ ಮೊಬೈಲ್:**

ಕಳೆದ ಲೋಕಸಭಾ ಚುನಾವಣೆಯಲ್ಲಿ ರಾಷ್ಟ್ರೀಯ ಉದ್ಯೋಗ ಖಾತ್ರಿಯ ಫಲ ಉಂಡಿದ್ದ ಕೇಂದ್ರ ಸರ್ಕಾರ, ಇತ್ತೀಚೆಗಷ್ಟೇ ರಾಷ್ಟ್ರೀಯ ಆಹಾರ ಭದ್ರತಾ ಮಸೂದೆಯನ್ನು ಜಾರಿಗೊಳಿಸಿತ್ತು. ಇದರ ಮುಂದಿನ ಹಂತವಾಗಿ ಇದೀಗ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಫಲಾನುಭವಿಗಳಿಗೆ ಉಚಿತ ಮೊಬೈಲ್ ನೀಡಲು ಮುಂದಾಗಿದೆ.

**'ಭಾರತ್ ಮೊಬೈಲ್ ಯೋಜನೆ':**

- ಈ ಪ್ರಸ್ತಾವಿತ ಯೋಜನೆ ಅನ್ವಯ ಕುಟುಂಬವೊಂದರಲ್ಲಿ 100 ದಿನ ಉದ್ಯೋಗ ಪೂರೈಸಿದ ಒಬ್ಬ ವ್ಯಕ್ತಿಗೆ ಕೇಂದ್ರ ಸರ್ಕಾರ ಉಚಿತವಾಗಿ ಮೊಬೈಲ್ ವಿತರಿಸಲಿದೆ.
- ಈ ವಿತರಣೆಯಲ್ಲಿ ಮಹಿಳೆಯರಿಗೆ ಮೊದಲ ಆದ್ಯತೆ.
- ಈ ಮೊಬೈಲ್ ಮೂರು ವರ್ಷಗಳ ವಾರಂಟಿ ಹೊಂದಿರಲಿದೆ.
- ಈ ಮೊಬೈಲ್ ಅನ್ನು ಒಬ್ಬರಿಂದ ಇನ್ನೊಬ್ಬರಿಗೆ ವರ್ಗಾವಣೆ ಮಾಡುವಂತೆ ಇಲ್ಲ. ಕಾರಣ ಮೊಬೈಲ್‌ನ ನಂಬರ್ ಅನ್ನು ಕೇಂದ್ರ ಸರ್ಕಾರದ ನೇರ ಸಬ್ಸಿಡಿ ವರ್ಗಾವಣೆಗೆ ಜೋಡಣೆ ಮಾಡಲಾಗಿರುತ್ತದೆ.
- ಜೊತೆಗೆ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಮಾಹಿತಿಯನ್ನು ಮೊಬೈಲ್‌ಗೆ ರವಾನಿಸುವ ವ್ಯವಸ್ಥೆ ಮಾಡಲಾಗಿರುತ್ತದೆ.

ಈ ಯೋಜನೆ ಇನ್ನೂ ಮಾತು ಕತೆಯ ಹಂತದಲ್ಲಿದ್ದು, ಯೋಜನೆಯ ರೂಪುರೇಷೆ ಇನ್ನಷ್ಟೇ ಅಂತಿಮಗೊಳ್ಳಬೇಕಾಗಿದೆ. ಆ ಬಳಿಕ ಯೋಜನೆಯ ಸಮಗ್ರ ಚಿತ್ರಣ ತಿಳಿದುಬರಲಿದೆ. ಜಿಲ್ಲಾಡಳಿತದ ಸಹಾಯದಿಂದ ಟೆಲಿಕಾಂ ಕಂಪನಿಗಳು ಮೊಬೈಲ್‌ಗಳನ್ನು ವಿತರಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಅಖಂಡ ಆಂಧ್ರಪ್ರದೇಶ ಹೋಳು; ದೇಶದ 29 ನೇ ರಾಜ್ಯವಾಗಿ ತೆಲಂಗಾಣ ಉದಯ**

ಕೇಂದ್ರದ ಆಡಳಿತಾರೂಢ ಯುಪಿಎ ಮತ್ತು ಯುಪಿಎ ನೇತೃತ್ವ ವಹಿಸಿರುವ ಕಾಂಗ್ರೆಸ್, ಆಂಧ್ರಪ್ರದೇಶವನ್ನು ವಿಭಜಿಸಿ ಪ್ರತ್ಯೇಕ ತೆಲಂಗಾಣ ರಾಜ್ಯ ರಚಿಸುವುದಾಗಿ ಘೋಷಣೆ ಮಾಡಿದೆ. ಇದು ಸಾಕಾರವಾಗಬೇಕಿದ್ದರೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ಸೂಚಿಸಿದ ಪ್ರತ್ಯೇಕ ತೆಲಂಗಾಣ ರಾಜ್ಯ ರಚನೆ ಕುರಿತು ಮಸೂದೆಯು ಸಂಸತ್ತಿನಲ್ಲಿ ಅಂಗೀಕಾರ ಪಡೆದು ರಾಷ್ಟ್ರಪತಿ ಅಂಕಿತ ಬೀಳಬೇಕು. ಈ ಪ್ರಕ್ರಿಯೆಯು ಪೂರ್ಣಗೊಳ್ಳಬೇಕಿದ್ದರೆ ಕನಿಷ್ಠ ಐದು ತಿಂಗಳ ಕಾಲಾವಕಾಶ ಬೇಕು ಎಂಬುದು ಸಂವಿಧಾನ ತಜ್ಞರ ಅಭಿಪ್ರಾಯ.

**ಹೊಸ ರಾಜ್ಯವಾಗಲು ತೆಗೆದುಕೊಳ್ಳಬೇಕಾದ ಕ್ರಮಗಳು ಏನು?**

- ಕೇಂದ್ರ ಸಂಪುಟದ ಶಿಫಾರಸಿನಂತೆ ಕರಡು ಮಸೂದೆಯನ್ನು ಸಂಬಂಧಿಸಿದ ರಾಜ್ಯದ ವಿಧಾನಮಂಡಲಕ್ಕೆ ರಾಷ್ಟ್ರಪತಿಗಳು ಕಳುಹಿಸುತ್ತಾರೆ.
- ವಿಧಾನಮಂಡಲದ ಅಭಿಪ್ರಾಯ ಪಡೆಯುವುದು ಕಡ್ಡಾಯವಾದರೂ ಅದನ್ನು ಒಪ್ಪುವುದು ಇಲ್ಲವೇ ಬಿಡುವುದು ಕೇಂದ್ರ ಸಂಪುಟದ ಇಚ್ಛೆಗೆ ಬಿಟ್ಟಿದ್ದು
- ಸಂಸತ್ ಅಂಗೀಕರಿಸಿದ ಹೊಸ ರಾಜ್ಯ ರಚನೆಯ ಮಸೂದೆಯನ್ನು ಸಂವಿಧಾನದ 111 ವಿಧಿಯ ಅನ್ವಯ ರಾಷ್ಟ್ರಪತಿಗಳ ಅಂಕಿತಕ್ಕೆ ಕಳುಹಿಸಲಾಗುತ್ತದೆ.
- ರಾಷ್ಟ್ರಪತಿಗಳ ಅಂಕಿತ ಪಡೆದ ನಂತರ ಹೊಸ ರಾಜ್ಯವು ಅಧಿಕೃತವಾಗಿ ಅಸ್ತಿತ್ವಕ್ಕೆ ಬರುತ್ತದೆ

**ಸುಪ್ರೀಂ ಕೋರ್ಟ್ ತೀರ್ಪು ಏನು ಹೇಳುತ್ತದೆ?**

1960ರಲ್ಲಿ ಬಾಬುಲಾಲ್ ಮತ್ತು ಬಾಂಬೆ ರಾಜ್ಯದ ನಡುವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಮಹತ್ವದ ಮತ್ತು ಮಾರ್ಗದರ್ಶಿ ತೀರ್ಪನ್ನು ನೀಡಿದೆ. `ಕೇಂದ್ರ ಸರ್ಕಾರಕ್ಕೆ ಹೊಸ ರಾಜ್ಯ ರಚಿಸುವ ಮತ್ತು ರಾಜ್ಯದ ಗಡಿಯಲ್ಲಿ ಮಾರ್ಪಾಟು ಮಾಡುವ ಅಧಿಕಾರ ಇದೆ. ಆದರೆ, ಸಂಬಂಧಿಸಿದ ರಾಜ್ಯದ ವಿಧಾನಮಂಡಲದ ಅಭಿಪ್ರಾಯ ಪಡೆಯುವುದು ಕಡ್ಡಾಯವಾದರೂ ಈ ಅಭಿಪ್ರಾಯಕ್ಕೆ ಕೇಂದ್ರ ಸರ್ಕಾರ ಬದ್ಧವಾಗಿರಬೇಕು ಎಂಬ ಕಡ್ಡಾಯವೇನೂ ಇಲ್ಲ' ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

**ಸಂವಿಧಾನದಲ್ಲಿ ಏನಿದೆ?**

- ಹೊಸ ರಾಜ್ಯ ರಚನೆ ಇಲ್ಲವೆ ಗಡಿ ಮಾರ್ಪಾಟು ಕುರಿತಂತೆ ಸಂವಿಧಾನದ 2,3 ಮತ್ತು 4ನೇ ವಿಧಿಗಳಲ್ಲಿ ವಿವರಿಸಲಾಗಿದೆ.
- ಗೃಹ, ಹಣಕಾಸು, ಮಾನವ ಸಂಪನ್ಮೂಲ ಅಭಿವೃದ್ಧಿ, ಆರೋಗ್ಯ, ಜಲಸಂಪನ್ಮೂಲ, ಇಂಧನ, ಪರಿಸರ ಮತ್ತು ಅರಣ್ಯ, ರೈಲ್ವೆ ಹಾಗೂ ಯೋಜನಾ ಆಯೋಗದ ಉಪಾಧ್ಯಕ್ಷರನ್ನು ಒಳಗೊಂಡ ಉನ್ನತಾಧಿಕಾರದ ಸಚಿವರ ಗುಂಪು (ಜಿಒಎಂ) ಹೊಸ ರಾಜ್ಯ ರಚನೆ ಕುರಿತ ಸಮಗ್ರ ವಿಷಯಗಳನ್ನು ಪರಿಶೀಲಿಸಿ ರಾಜ್ಯ ಪುನರ್ವಿಂಗಡಣಾ ಕರಡು ಮಸೂದೆಗೆ ಸೂಚಿಸಿದ ಒಪ್ಪಿಗೆಯನ್ನು ಕೇಂದ್ರ ಸಚಿವ ಸಂಪುಟಕ್ಕೆ ಸಲ್ಲಿಸುತ್ತದೆ.
- ಸಚಿವ ಸಂಪುಟ ಸಭೆಯ ಅನಿಸಿಕೆಯಂತೆ ಪ್ರಧಾನಿ ಅವರು ಕರಡು ಮಸೂದೆಯನ್ನು ಸಂಬಂಧಿಸಿದ ರಾಜ್ಯದ ವಿಧಾನಮಂಡಲದ ಅಭಿಪ್ರಾಯಕ್ಕೆ ಕಳುಹಿಸುವಂತೆ ರಾಷ್ಟ್ರಪತಿಗಳಿಗೆ ಶಿಫಾರಸು ಮಾಡುತ್ತಾರೆ. ಇದಕ್ಕೆ ಒಂದು ತಿಂಗಳಲ್ಲಿ ಅಭಿಪ್ರಾಯ ಸಲ್ಲಿಕೆಯಾಗಬೇಕು.
- ರಾಜ್ಯದ ವಿಧಾನಮಂಡಲದ ಅಭಿಪ್ರಾಯವನ್ನು ಕರಡು ಮಸೂದೆಯಲ್ಲಿ ಅಳವಡಿಸಿ, ಕೇಂದ್ರ ಕಾನೂನು ಸಚಿವಾಲಯದ ಅಭಿಪ್ರಾಯಕ್ಕೆ ಕಳುಹಿಸಲಾಗುತ್ತದೆ.
- ಕಾನೂನು ಸಚಿವಾಲಯವೂ ತನ್ನ ಟಿಪ್ಪಣಿಯನ್ನು ಸಂಪುಟಕ್ಕೆ ಸಲ್ಲಿಸುತ್ತದೆ. ನಂತರ ಸಚಿವ ಸಂಪುಟದ ಒಪ್ಪಿಗೆ ಪಡೆದು ಸಂಸತ್ತಿನಲ್ಲಿ ಮಸೂದೆ ಮಂಡನೆಯಾಗುತ್ತದೆ.
- ರಾಜ್ಯ ಪುನರ್ವಿಂಗಡಣಾ ಮಸೂದೆಯ ಅಂಗೀಕಾರಕ್ಕೆ ಸರಳ ಬಹುಮತ ಸಾಕು. ಸಂವಿಧಾನ ತಿದ್ದುಪಡಿಗೆ ಅಗತ್ಯವಾದ ಮೂರನೇ ಎರಡರಷ್ಟು ಬಹುಮತದ ಅಗತ್ಯವಿಲ್ಲ.

**ಭೌಗೋಳಿಕ ವಿನ್ಯಾಸ:**

- ತೆಲಂಗಾಣವು ಕರಾವಳಿ ಆಂಧ್ರ, ರಾಯಲಸೀಮಾ (ಈಗಿನ ಆಂಧ್ರಪ್ರದೇಶದ ಕೆಲವು ಭಾಗಗಳು), ಕರ್ನಾಟಕ, ಮಹಾರಾಷ್ಟ್ರ ಹಾಗೂ ಛತ್ತೀಸಗಡ ಪ್ರದೇಶಗಳೊಂದಿಗೆ ಗಡಿಯನ್ನು ಹಂಚಿಕೊಂಡಿದೆ.
- ಆಂಧ್ರ ಪ್ರದೇಶ ರಾಜ್ಯ ಮೂರು ಪ್ರಮುಖ ಸಾಂಸ್ಕೃತಿಕ ಪ್ರದೇಶಗಳನ್ನು ಹೊಂದಿದೆ. ಅವು ಕರಾವಳಿ ಆಂಧ್ರ, ರಾಯಲಸೀಮಾ ಮತ್ತು ತೆಲಂಗಾಣ. ದೇಶದ ಶೇ. 20ರಷ್ಟು ಕಲ್ಲಿದ್ದಲು ನಿಕ್ಷೇಪ ತೆಲಂಗಾಣ ಪ್ರದೇಶದಲ್ಲಿದೆ.
- ಶೇ. 45 ಆಂಧ್ರದ ಶೇ. 45ರಷ್ಟು ಪ್ರಮಾಣದ ಅರಣ್ಯ ತೆಲಂಗಾಣ ಪ್ರದೇಶದ ಐದು ಜಿಲ್ಲೆಗಳಲ್ಲಿ ಹರಡಿಕೊಂಡಿದೆ.
- ಶೇ.41.6 ಆಂಧ್ರಪ್ರದೇಶದ ಒಟ್ಟು ಜನಸಂಖ್ಯೆಯ ಇಷ್ಟು ಪ್ರಮಾಣದ ಜನ ತೆಲಂಗಾಣದಲ್ಲಿ ನೆಲೆಸಿದ್ದಾರೆ.

**ಸ್ವಾತಂತ್ರ್ಯ ಪೂರ್ವ**

ನಿಜಾಮರ ಆಡಳಿತದಲ್ಲಿದ್ದ ಹೈದರಾಬಾದ್ ಭಾರತದ ಒಕ್ಕೂಟಕ್ಕೆ 1948ರಲ್ಲಿ ಬಲವಂತವಾಗಿ ಸೇರ್ಪಡೆಗೊಂಡಿತು. ಮದ್ರಾಸ್ ಪ್ರಾಂತ್ಯದಡಿ ಇದ್ದ ಹೈದರಾಬಾದ್ ಅನ್ನು ಪ್ರತ್ಯೇಕ ರಾಜ್ಯವನ್ನಾಗಿಸುವಂತೆ ಒತ್ತಾಯಿಸಿ ಸ್ವಾತಂತ್ರ್ಯ ಹೋರಾಟಗಾರ ಪೊಟ್ಟಿ ಶ್ರೀರಾಮುಲು ನಡೆಸಿದ ಆಮರಣಾಂತ ಉಪವಾಸ ನಡೆಸಿದರು. ಇದರಿಂದಾಗಿ ಕೇಂದ್ರವು ಅ.1, 1953ರಲ್ಲಿ ಪ್ರತ್ಯೇಕ ಆಂಧ್ರಪ್ರದೇಶ ರಾಜ್ಯ ಹುಟ್ಟುಹಾಕಿತು. ಕರ್ನೂಲ್ ರಾಜಧಾನಿಯಾಗಿತ್ತು. ಆದರೆ, ತೆಲಂಗಾಣ ಪ್ರತ್ಯೇಕವಾಗಿಯೇ ಉಳಿದಿತ್ತು.

ಈಗಿನ ಆಂಧ್ರಪ್ರದೇಶ ರಚನೆಯಾದದ್ದು ನ.1, 1956ರಲ್ಲಿ. ಈ ವೇಳೆ ತೆಲಂಗಾಣವನ್ನು ಆಂಧ್ರಕ್ಕೆ ಸೇರ್ಪಡೆ ಮಾಡಲಾಗಿತ್ತು. ಇದು ರಾಜ್ಯಪುನರ್ ವಿಂಗಡಣಾ ಆಯೋಗದ ವರದಿಗೆ ವಿರುದ್ಧವಾಗಿತ್ತು. ಆ ವರದಿಯಲ್ಲಿ ತೆಲಂಗಾಣ ಪ್ರಾಂತ್ಯದ ಜನ ಈಗಿನ ಆಂಧ್ರಕ್ಕೆ ಸೇರಲು ವಿರೋಧ ವ್ಯಕ್ತಪಡಿಸಿದ್ದರು ಎಂದು ಹೇಳಲಾಗಿತ್ತು. ಆದರೆ ಕೇಂದ್ರ ಒಪ್ಪಂದವೊಂದವನ್ನು ಏರ್ಪಡಿಸಿತ್ತು. ಅದರಲ್ಲಿ ತೆಲಂಗಾಣ ಪ್ರದೇಶಕ್ಕೆ ವಿಶೇಷ ಸೌಲಭ್ಯ ಕಲ್ಪಿಸುವ ಅವಕಾಶ ಕಲ್ಪಿಸಲಾಗಿತ್ತು. ಆದರೆ, ಈ ಒಪ್ಪಂದ 1969ರಲ್ಲಿ ರದ್ದಾಯಿತು.

**ತೆಲಂಗಾಣ ಹೋರಾಟದ ಪಕ್ಷನೋಟ**

ತೆಲಂಗಾಣ ರಾಜ್ಯ ರಚನೆ ಕೂಗು ತೀವ್ರಗೊಂಡಾಗ ಕೇಂದ್ರ ಸರ್ಕಾರ ಪ್ರತ್ಯೇಕ ರಾಜ್ಯ ರಚನೆ ಪ್ರಕ್ರಿಯೆಗೆ ಡಿಸೆಂಬರ್ 2009ರಂದು ಕೈಹಾಕಿತು. - ಆದರೆ ಇದಕ್ಕೆ ಆ ಕಾಲದಲ್ಲಿ ಸಂಸದರಾಗಿದ್ದ ಜಗನ್ಮೋಹನ ರೆಡ್ಡಿ ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಆದರೆ, ಅವರ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ತೆಲಂಗಾಣ ವಿಚಾರದಲ್ಲಿ ತಟಸ್ಥ ಅವರು ನೀತಿ ಅನುಸರಿಸಿದರು. - 2009ರಲ್ಲಿ ವೈಎಸ್‌ಆರ್ ನಿಧನಾ ಬಳಿಕ ಪ್ರತ್ಯೇಕ ರಾಜ್ಯ ರಚನೆಗೆ ತೀವ್ರ ಒತ್ತಡ ಕೇಳಿ ಬಂತು. - ಆರಂಭದಲ್ಲಿ ಖ್ಯಾತ ನಟ ಚಿರಂಜೀವಿ ನೇತೃತ್ವದ ಪ್ರಜಾ ರಾಜ್ಯಂ ಕೂಡ ರಾಜ್ಯವಿಭಜನೆಗೆ ವಿರೋಧ ವ್ಯಕ್ತಪಡಿಸಿತ್ತು. ಆದರೆ, 2012ರಲ್ಲಿ ಕಾಂಗ್ರೆಸ್‌ನೊಂದಿಗೆ ವಿಲೀನಗೊಂಡ ಬಳಿಕ ಅದು ತನ್ನ ನಿಲುವು ಬದಲಿಸಿತು. - 2012ರ ಡಿಸೆಂಬರ್‌ನಲ್ಲಿ ನಡೆದ ಸರ್ವಪಕ್ಷಗಳ ಸಭೆಯಲ್ಲಿ ಟಿಡಿಪಿಯು ಗೃಹ ಇಲಾಖೆಗೆ ಅದು ಇನ್ನೂ ತೆಲಂಗಾಣ ರಾಜ್ಯಕ್ಕೆ ಬೆಂಬಲ ನೀಡುತ್ತಿರುವುದಾಗಿ ಹೇಳಿ ಪತ್ರ ನೀಡಿತು. - ಎಂಐಎ ಮಾತ್ರ ರಾಜ್ಯವಿಭಜನೆಗೆ ತೀವ್ರ ವಿರೋಧ ಮುಂದುವರಿಸಿದೆ.

**ತೆಲಂಗಾಣದ ಅರ್ಥ ಏನು?**

ತೆಲುಗು ಮಾತನಾಡುವವರ ಭೂಮಿ ಆದಾಯದ ಮೂಲ ಸಿಂಗರೇನಿ ಕಲ್ಲಿದ್ದಲು ಗಣಿಗಳು ಹೈದರಾಬಾದ್‌ನಲ್ಲಿರುವ ಐಟಿ ಕಂಪನಿಗಳು ಔಷಧ ಕಂಪನಿಗಳು ನಲಗೊಂಡಾ, ಆದಿಲಾಬಾದ್, ನಿಜಾಮಾಬಾದ್, ವಾರಂಗಲ್‌ನಲ್ಲಿ ಬೆಳೆಯುವ ಅಕ್ಕಿ, ಮೆಣಸು, ಅರಶಿನ, ಹತ್ತಿ ಪ್ರಮುಖ ಆದಾಯದ ಮೂಲಗಳು.

**ತೆಲಂಗಾಣ ನೋಟ**

- ವಿಸ್ತೀರ್ಣ 1.14 ಲಕ್ಷ ಚದರ ಕಿ.ಮೀ. ಜಿಲ್ಲೆಗಳು 10 ಜನಸಂಖ್ಯೆ 3.52 ಕೋಟಿ
- ಕೃಷ್ಣಾ ನದಿ ನೀರು ಹಂಚಿಕೆ ತೆಲಂಗಾಣ ಶೇ. 35 ಆಂಧ್ರ ಶೇ. 65.
- ಹೈದರಾಬಾದ್ ವಿಸ್ತೀರ್ಣ 650 ಚದರ ಕಿ.ಮೀ. ಜಿಲ್ಲೆಗಳು 10, ಜನಸಂಖ್ಯೆ 70 ಲಕ್ಷ
- ಸೀಮಾಂಧ್ರ ವಿಸ್ತೀರ್ಣ 1.60 ಲಕ್ಷ ಚದರ ಕಿ.ಮೀ. ಜಿಲ್ಲೆಗಳು 13 ಜನಸಂಖ್ಯೆ 5 ಕೋಟಿಗೂ
- ಒಟ್ಟು ಲೋಕಸಭಾ ಸ್ಥಾನಗಳು 42, ತೆಲಂಗಾಣ-17, ಸೀಮಾಂಧ್ರ-25

## ಅಂತರರಾಷ್ಟ್ರೀಯ

**ಈಜಿಪ್ಟ್ ಹೋಸ್ನಿ ಮುಬಾರಕ್ ಪದಚ್ಯುತಿ, ಮುಖ್ಯ ನ್ಯಾಯಮೂರ್ತಿ ಮಹಮೂದ್ ಮನ್ಸೌರ್ ಹಂಗಾಮಿ ಅಧ್ಯಕ್ಷ**

ಇತ್ತೀಚೆಗೆ ಈಜಿಪ್ಟ್ ನಲ್ಲಿ ನಡೆದ ದಿಢೀರ್ ಮಿಲಿಟರಿ ಕ್ಷಿಪ್ರಕ್ರಾಂತಿಯಲ್ಲಿ ಅಧ್ಯಕ್ಷ ಮಹಮ್ಮದ್ ಮೋರ್ಸಿ ಅವರನ್ನು ಪದಚ್ಯುತಿಗೊಳಿಸಲಾಗಿದೆ. ಅಲ್ಲದೇ ಅವರನ್ನು ಬೆಂಬಲಿಸಿದ್ದ ಮುಸ್ಲಿಂ ಬ್ರದರ್ ಹುಡ್ ಪಕ್ಷದ ಪ್ರಮುಖ ನಾಯಕರನ್ನು ಸೇನೆ ಬಂಧನಕ್ಕೆ ಒಳಪಡಿಸಿದೆ. ಈ ನಡುವೆ ಸುಪ್ರೀಂಕೋರ್ಟ್ ನ ನ್ಯಾಯಾಧೀಶ ಆಡ್ಲಿ ಮಹಮ್ಮದ್ ಮನ್ಸೂರ್ ಅವರನ್ನು ದೇಶದ ಹಂಗಾಮಿ ಅಧ್ಯಕ್ಷರನ್ನಾಗಿ ನೇಮಕಮಾಡಲಾಗಿದೆ. ಇದೇ ವೇಳೆ ಈ ಕ್ಷಿಪ್ರ ಬೆಳವಣಿಗೆಯ ಕುರಿತು ಕಳವಳ ವ್ಯಕ್ತಪಡಿಸಿರುವ ವಿಶ್ವದ ವಿವಿಧ ರಾಷ್ಟ್ರಗಳು, ಆದಷ್ಟು ಬೇಗ ಈಜಿಪ್ಟ್ ನಲ್ಲಿ ಚುನಾಯಿತ ಸರ್ಕಾರವನ್ನು ರಚಿಸುವಂತೆ ಸೇನೆಗೆ ಕರೆ ನೀಡಿವೆ. ಈ ಮಧ್ಯೆ ಹೋಸ್ನಿ ಅವರು ತಾವೇ ದೇಶದ ಅಧ್ಯಕ್ಷರು ಎಂದು ಹೇಳಿಕೊಂಡಿದ್ದಾರೆ.

- ಹೋಸ್ನಿ ಮುಬಾರಕ್ ಅವರ 30 ವರ್ಷಗಳ ಸರ್ವಾಧಿಕಾರ ವಿರುದ್ಧ ಈಜಿಪ್ಟ್ ನ ಜನತೆ ಕಳೆದ ವರ್ಷ ದಂಗೆ ಎದ್ದಿದ್ದರು. ಪ್ರಜಾಪ್ರಭುತ್ವ ಸರ್ಕಾರಕ್ಕೆ ಮನ್ನಣೆ ಕೊಟ್ಟು ಸರ್ವಾಧಿಕಾರಕ್ಕೆ ಕೊನೆ ಹೇಳುವಂತೆ ಜನತೆ ನಡೆಸಿದ ಹೋರಾಟಕ್ಕೆ ಹೋಸ್ನಿ ಅವರು ಕೊನೆಗೂ ತಲೆಬಾಗಿದ್ದರು. ಈ ಹಿನ್ನಲೆಯಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಹೋಸ್ನಿ ಗೆಲುವು ಸಾಧಿಸುವ ಮೂಲಕ ಪ್ರಜಾಪ್ರಭುತ್ವ ಮಾದರಿಯಲ್ಲಿ ಆಯ್ಕೆಯಾದ ಅರಬ್ ದೇಶದ ಮೊದಲ ಅಧ್ಯಕ್ಷ ಎನಿಸಿಕೊಂಡಿದ್ದರು.
- ಚುನಾವಣೆ ಸಮಯದಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸಲು ವಿಫಲರಾಗಿದ್ದ ಹೋಸ್ನಿ ವಿರುದ್ಧ ಕಳೆದ ಎರಡು ವಾರಗಳಿಂದ ಪ್ರತಿಭಟನೆ ನಡೆಸಲಾಗುತ್ತಿತ್ತು. ಹೋಸ್ನಿ ಅವರಿಗೆ ಹುದ್ದೆಯಿಂದ ಕೆಳಗಿಳಿಯುವಂತೆ ಸೇನೆ 48 ಗಂಟೆಗಳ ಕಾಲವಕಾಶ ನೀಡಿತ್ತು, ಆದರೆ ಹೋಸ್ನಿ ಇದಕ್ಕೆ ಕಿವಿಕೊಡದ ಕಾರಣ ಸೇನೆ ಕ್ಷಿಪ್ರಕ್ರಾಂತಿ ನಡೆಸಿ ಅಧ್ಯಕ್ಷ ಸ್ಥಾನದಿಂದ ಪದಚ್ಯುತಿಗೊಳಿಸಿ ಗೃಹ ಬಂಧನದಲ್ಲಿ ಇಟ್ಟಿದೆ.

**ರಷ್ಯಾ-ಚೀನಾ ಜಂಟಿ ನೌಕ ಸಮರಭ್ಯಾಸಕ್ಕೆ ಚಾಲನೆ**

ರಷ್ಯಾ ಮತ್ತು ಚೀನಾ ನಡುವಿನ ಅತಿ ದೊಡ್ಡ ನೌಕ ಸಮರಭ್ಯಾಸ "Joint Sea-2013" ಕ್ಕೆ ಜಪಾನ್ ಸಮುದ್ರದಲ್ಲಿ ಇತ್ತೀಚೆಗೆ ಚಾಲನೆ ನೀಡಲಾಯಿತು. ಜುಲೈ 12 ರ ವರೆಗೆ ನಡೆಯಲಿರುವ ಈ ಸಮರಭ್ಯಾಸದಲ್ಲಿ ಉಭಯ ದೇಶಗಳ ಅತ್ಯಾಧುನಿಕ ಯುದ್ಧ ನೌಕೆಗಳು ಜಂಟಿಯಾಗಿ ಸಮರಭ್ಯಾಸ ನಡೆಸಲಿವೆ. ಶೀತಲ ಯುದ್ಧಕ್ಕೆ ಉದಾಹರಣೆಯಾಗಿದ್ದ ಈ ಎರಡು ರಾಷ್ಟ್ರಗಳು ಜಂಟಿಯಾಗಿ ಕೈಗೊಳ್ಳುತ್ತಿರುವ ನೌಕ ಸಮರಭ್ಯಾಸ ಕುತೂಹಲವನ್ನು ಹುಟ್ಟುಹಾಕಿದೆ.

- ಸಬ್ ಮೆರೈನ್ ಯುದ್ಧನೌಕೆಗಳು, ಸೂಕ್ಷ್ಮ ಕಣ್ಗಾವಲು ಯುದ್ಧನೌಕೆ, ಹೆಲಿಕಾಪ್ಟರ್ ಹೊತ್ತುಯ್ಯುವ ಸಾಮರ್ಥ್ಯವುಳ್ಳ ಯುದ್ಧನೌಕೆಗಳು ಈ ಸಮರಭ್ಯಾಸದಲ್ಲಿ ಭಾಗವಹಿಸಲಿವೆ.
- ಈ ಸಮರಭ್ಯಾಸವು ರಷ್ಯಾ ಮತ್ತು ಚೀನಾ ನಡುವಿನ ರಕ್ಷಣಾ ಸಂಬಂಧವನ್ನು ಉತ್ತಮಗೊಳಿಸಲಿದೆ ಎಂದು ಉಭಯ ದೇಶಗಳು ಹೇಳಿವೆ.

- ಈ ನೌಕ ಸಮರಭ್ಯಾಸದ ನಂತರ ಭಯೋತ್ಪಾದನೆ ನಿಗ್ರಹ ಅಭ್ಯಾಸವನ್ನು ರಷ್ಯಾ ಮತ್ತು ಚೀನಾ ಜಂಟಿಯಾಗಿ ನಡೆಸಲಿವೆ. ರಷ್ಯಾದ ಉರುಲ್ ಪರ್ವತದಲ್ಲಿ ಜುಲೈ 27 ರಿಂದ ಆಗಸ್ಟ್ 15 ರ ವರೆಗೆ ಈ ಅಭ್ಯಾಸ ನಡೆಯಲಿದೆ.

**ಹಾಜಿಮ್ ಎಲ್-ಬೆಬ್ಲೊವಿ: ಈಜಿಪ್ಟ್ ನ ಹೊಸ ಪ್ರಧಾನಿ**

ಈಜಿಪ್ಟ್ ನಲ್ಲಿ ಉದ್ಭವಿಸಿರುವ ರಾಜಕೀಯ ಬಿಕ್ಕಟ್ಟನ್ನು ಶಮನಗೊಳಿಸಲು ಸಾಕಷ್ಟು ಪ್ರಯತ್ನ ನಡೆಸಲಾಗುತ್ತಿದ್ದು, ಈಜಿಪ್ಟ್ ನ ಮಾಜಿ ಹಣಕಾಸು ಸಚಿವ ಹಾಜಿಮ್ ಎಲ್-ಬೆಬ್ಲೊವಿ ಅವರನ್ನು ದೇಶದ ಹೊಸ ಪ್ರಧಾನಿಯಾಗಿ ನೇಮಕ ಮಾಡಲಾಗಿದೆ. ದೇಶದಲ್ಲಿ ತಲೆದೋರಿರುವ ರಾಜಕೀಯ ಬಿಕ್ಕಟ್ಟಿಗೆ ಶೀಘ್ರವೇ ಪರಿಹಾರ ಕಂಡುಕೊಳ್ಳುವ ದಿಸೆಯಿಂದ ಹಾಜಿಮ್ ಅವರನ್ನು ಪ್ರಧಾನಿ ಹುದ್ದೆಗೆ ನೇಮಿಸಿರುವುದಾಗಿ ಮೂಲಗಳು ತಿಳಿಸಿವೆ.

- ಇದೇ ವೇಳೆ ನೊಬೆಲ್ ಪ್ರಶಸ್ತಿ ಪುರಸ್ಕೃತ ಮೊಹಮ್ಮದ್ ಎಲ್-ಬರದಾಯಿ ಅವರನ್ನು ಉಪಾಧ್ಯಕ್ಷರನ್ನಾಗಿ ನೇಮಕಮಾಡಲಾಗಿದೆ.
- ಈಜಿಪ್ಟ್ ಸಾಮಾಜಿಕ ಪ್ರಜಾಸತ್ತಾತ್ಮಕ ಪಕ್ಷದ ಸ್ಥಾಪಕ ಸದಸ್ಯರಾಗಿರುವ ಹಾಜಿಮ್ ಅವರು ಈ ಹಿಂದೆ ಎಸ್ಸಾಮ್ ಷರೀಫ್ ಅವರ ಸಂಪುಟದಲ್ಲಿ ಹಣಕಾಸು ಸಚಿವರಾಗಿ ಸೇವೆ ಸಲ್ಲಿಸಿದ್ದರು. ಅಲ್ಲದೇ 1995 ರಿಂದ 2000 ರ ಅವಧಿಯಲ್ಲಿ ವಿಶ್ವಸಂಸ್ಥೆಯಲ್ಲಿ ಅಧೀನ ಕಾರ್ಯದರ್ಶಿಯಾಗಿ ಅವರು ಸೇವೆ ಸಲ್ಲಿಸಿದ್ದಾರೆ.

**ಜುಲೈ 12: ವಿಶ್ವಸಂಸ್ಥೆ "ಮಲಾಲ ದಿನ"**

ಪಾಕಿಸ್ತಾನದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಹೋರಾಡುತ್ತಿರುವ ಯುವತಿ "ಮಲಾಲ ಯೂಸಫ್ ಝೈ" ಹುಟ್ಟಿದ ದಿನವಾದ ಜುಲೈ 12 ನ್ನು "ಮಲಾಲ ದಿನ" ವೆಂದು ವಿಶ್ವಸಂಸ್ಥೆ ಘೋಷಿಸಿದೆ. ಜಗತ್ತಿನಾದ್ಯಂತ ಹೆಣ್ಣು ಮಕ್ಕಳ ಶಿಕ್ಷಣದ ಹಕ್ಕನ್ನು ಎತ್ತಿಹಿಡಿಯುವ ಸಲುವಾಗಿ ಮಲಾಲ ದಿನವನ್ನಾಗಿ ಆಚರಿಸಲಾಗುತ್ತದೆ. ಬ್ರಿಟನ್ ನ ಮಾಜಿ ಪ್ರಧಾನಿ "ಗಾರ್ಡನ್ ಬ್ರೌನ್" ಅವರು ಈ ಮುಂಚೆ ನವೆಂಬರ್ 10 ನ್ನು ಮಲಾಲ ದಿನವೆಂದು ಘೋಷಿಸಿದ್ದರು. ಆದರೆ ಮಲಾಲ ಹುಟ್ಟುದಿನವಾದ ಜುಲೈ 12 ರಂದು ಮಲಾಲ ದಿನವೆಂದು ಆಚರಿಸಲು ನಿರ್ಧರಿಸಲಾಯಿತು.

**ವಿಶ್ವಸಂಸ್ಥೆಯ "ಯೂತ್ ಕರೇಜ್ ಆವಾರ್ಡ್"**: ಶೈಕ್ಷಣಿಕ ಸಾಧನೆಗಾಗಿ ನೀಡಲಾಗುವ ವಿಶ್ವಸಂಸ್ಥೆಯ ಯೂತ್ ಕರೇಜ್ ಪ್ರಶಸ್ತಿಯನ್ನು ಈ ಬಾರಿ ಬೆಂಗಳೂರಿನ ಅಶ್ವಿನಿ ಮತ್ತು ಉತ್ತರ ಪ್ರದೇಶದ ಮೀರತ್ ಜಿಲ್ಲೆಯ ರಜಿಯಾ ಸುಲ್ತಾನ ಸೇರಿದಂತೆ ಒಟ್ಟು ಏಳು ಯುವತಿಯರಿಗೆ ಈ ಪ್ರಶಸ್ತಿಯನ್ನು ಮಲಾಲ ದಿನದಂದ ವಿತರಿಸಲಾಯಿತು.

- ಮಲಾಲ ಜತೆಯಲ್ಲಿ ಗುಂಡೇಟು ತಿಂದು ಗಾಯಗೊಂಡಿದ್ದ ಮಲಾಲ ಗೆಳತಿ ಶಾಜಿಯಾ ಸೇರಿದಂತೆ ಬಾಂಗ್ಲದೇಶ, ನೇಪಾಳ, ಮೊರೊಕೊ ಮತ್ತು ಸೈರೆ ಲಿಯೊನ್ ಮೂಲದ ಯುವತಿಯರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ.

**ಅಶ್ವಿನಿ ಅಂಗಡಿ:**ಹುಟ್ಟಿನಿಂದಲೇ ದೃಷ್ಟಿಹೀನತೆಯಿಂದ ಬಳಲುತ್ತಿರುವ ಬೆಂಗಳೂರಿನ ಅಶ್ವಿನಿ ಅವರು ಸಾಧನೆಗೆ ತಮ್ಮ ದೃಷ್ಟಿಹೀನತೆ ಅಡ್ಡಿಯಿಲ್ಲ ಎಂದು ಸಾಧಿಸಿ ರುಜುವಾತು ಪಡಿಸಿದ್ದಕ್ಕೆ ಈ ಪ್ರಶಸ್ತಿಯನ್ನು ನೀಡಲಾಗಿದೆ. ಬಡ ಕುಟುಂಬದಲ್ಲಿ ಜನಿಸಿದ ಅಶ್ವಿನಿ, ಎಷ್ಟೇ

ಕಷ್ಟಬಂದರೂ ತಮ್ಮ ಓದನ್ನು ಮುಂದುವರಿಸಿ ಉತ್ತಮ ಶೈಕ್ಷಣಿಕ ಪ್ರಗತಿಯೊಂದಿಗೆ ಐಟಿ ಕಂಪನಿಯಲ್ಲಿ ಉದ್ಯೋಗವನ್ನು ಪಡೆದುಕೊಂಡರು. ಆದರೆ ತಮ್ಮ ಉದ್ಯೋಗವನ್ನು ತ್ಯಜಿಸಿ ಇತರೆ ದೃಷ್ಟಿಹೀನರಿಗೆ ಶೈಕ್ಷಣಿಕವಾಗಿ ಮುಂದುವರೆಯಲು ಸಹಾಯ ಮಾಡುತ್ತಿರುವುದು ಅಶ್ವಿನಿ ಅವರು ಮತ್ತೊಂದು ಸಾಧನೆ.

**ರಜಿಯಾ ಸುಲ್ತಾನ**:ಉತ್ತರ ಪ್ರದೇಶದ ಮೀರತ್ ಜಿಲ್ಲೆಯವರಾದ ರಜಿಯಾ ಸುಲ್ತಾನ ಅವರು ಸುಮಾರು 48 ಬಾಲ ಕಾರ್ಮಿಕರನ್ನು ಜೀತದಿಂದ ಮುಕ್ತಗೊಳಿಸಿ ಶಿಕ್ಷಣವನ್ನು ಕೊಡಿಸಿ ಸಾಧನೆ ತೋರಿದ್ದಾರೆ.

**ಭೂತಾನ್ ಚುನಾವಣೆ: “ಪೀಪಲ್ ಡೆಮಾಕ್ರೆಟಿಕ್ ಪಕ್ಷ”ಕ್ಕೆ ಜಯ**

ಭೂತಾನ್ ನಲ್ಲಿ ಇತ್ತೀಚೆಗೆ ನಡೆದ ಸಾರ್ವತ್ರಿಕ ಚುನಾವಣೆಯ ಫಲಿತಾಂಶವನ್ನು ಚುನಾವಣಾ ಆಯೋಗ ಪ್ರಕಟಿಸಿದ್ದು “ಪೀಪಲ್ ಡೆಮಾಕ್ರೆಟಿಕ್ ಪಕ್ಷ” ಜಯಭೇರಿ ಬಾರಿಸಿದೆ. ಭೂತಾನ್ ನ ಮತ್ತೊಂದು ಪ್ರಮುಖ ಪಕ್ಷವಾದ “ದಿ ಡ್ರಕ್ ಫ್ಯೂನ್ ಸಂ ಶೋಗ್ಪ(The Druk Phunesum Tshogpa (DPT))” ವಿರೋಧ ಪಕ್ಷವಾಗಿ ಹೊರಹೊಮ್ಮಿದೆ.

- ಭೂತಾನ್ ಸಂಸತ್ತಿಗೆ ನಡೆಯುತ್ತಿರುವ ಈ ಎರಡನೇ ಚುನಾವಣೆಯಲ್ಲಿ ಭಾರತ, ನ್ಯೂಜಿಲ್ಯಾಂಡ್ ಮತ್ತು ದಕ್ಷಿಣ ಕೊರಿಯಾದ ಅಧಿಕಾರಿಗಳು ಚುನಾವಣಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
- 2008 ರಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ DPT ಗೆಲುವು ಸಾಧಿಸಿತ್ತು. ಆದರೆ ಈ ಬಾರಿ ಎರಡನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ.
- ಒಟ್ಟು 47 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಪೀಪಲ್ ಡೆಮಾಕ್ರೆಟಿಕ್ ಪಕ್ಷ 32 ಸ್ಥಾನಗಳಲ್ಲಿ ಜಯಗಳಿಸಿ ಆಡಳಿತದ ಚುಕ್ಕಾಣಿ ಹಿಡಿಯಲು ಸಜ್ಜಾಗಿದೆ.
- 2008 ರಲ್ಲಿ ಭೂತಾನ್ ನ ರಾಜ ಅಧಿಕಾರವನ್ನು ತ್ಯಜಿಸುವ ಮೂಲಕ ರಾಜ ಮನೆತನದ ಆಳ್ವಿಕೆಗೆ ಇತಿಶ್ರೀ ಹಾಡಿ ಪ್ರಜಾಪ್ರಭುತ್ವ ಮಾದರಿಯನ್ನು ಜಾರಿಗೊಳಿಸಿದ್ದರು.

**ನೈಜೀರಿಯಾದಿಂದ ಕಚ್ಚಾತೈಲ ಆಮದು ಅಮೆರಿಕಾವನ್ನು ಹಿಂದಿಕ್ಕಿದ ಭಾರತ**

ನೈಜೀರಿಯಾದಿಂದ ಅತಿ ಹೆಚ್ಚು ಕಚ್ಚಾತೈಲವನ್ನು ಖರೀದಿ ಮಾಡುವ ರಾಷ್ಟ್ರವಾಗಿ ಭಾರತ ಸುದ್ದಿಮಾಡಿದೆ. ಇದುವರೆಗೂ ಅಮೆರಿಕಾ ನೈಜೀರಿಯಾದಿಂದ ಅತಿ ಹೆಚ್ಚು ಕಚ್ಚಾ ತೈಲವನ್ನು ಖರೀದಿ ಮಾಡುವ ರಾಷ್ಟ್ರವಾಗಿತ್ತು.

- ಇತ್ತೀಚಿನ ಅಂಕಿ ಅಂಶಗಳ ಪ್ರಕಾರ 2013ರಲ್ಲಿ ಭಾರತ ಅಮೆರಿಕಕ್ಕಿಂತಲೂ ಅತಿ ಹೆಚ್ಚು ಕಚ್ಚಾ ತೈಲವನ್ನು ನೈಜೀರಿಯಾದಿಂದ ಆಮದು ಮಾಡಿಕೊಂಡಿದೆ.
- ನೈಜೀರಿಯಾದ ಜೊತೆಗಿನ ಬಾಂಧವ್ಯವನ್ನು ಹೀಗೇ ಮುಂದುವರಿಸಿಕೊಂಡು ಹೋಗಲು ಭಾರತ ಬದ್ಧವಾಗಿದ್ದು, ನೈಜೀರಿಯಾದೊಂದಿಗೆ ಪರಸ್ಪರ ಸಹಕಾರಕ್ಕೆ ಯಾವಾಗಲೂ ಸಿದ್ಧವಾಗಿರುವುದಾಗಿ ಭಾರತ ಹೇಳಿದೆ.

- ಕೃಷಿ, ಆರೋಗ್ಯ ವಲಯದಲ್ಲಿ ಸಹಕಾರ ಮತ್ತು ನೈಜೀರಿಯಾದ ಯುವ ಜನತೆಗೆ ಕೌಶಲ್ಯ ತರಬೇತಿ ನೀಡುವ ಸಲುವಾಗಿ ನೈಜೀರಿಯಾ ಭಾರತದೊಂದಿಗೆ ಈಗಾಗಲೇ ಒಪ್ಪಂದವನ್ನು ಮಾಡಿಕೊಂಡಿದೆ.
- ಕಚ್ಚಾತೈಲಕ್ಕಾಗಿ ಭಾರತ ಇದುವರೆಗೂ ಇರಾನ್ ಮೇಲೆ ಅತಿ ಹೆಚ್ಚು ಅವಲಂಬಿತವಾಗಿತ್ತು. ಆದರೆ ಯುರೋಪಿಯನ್ ಒಕ್ಕೂಟ ಮತ್ತು ಅಮೆರಿಕಾ ಇರಾನ್ ಮೇಲೆ ನಿರ್ಬಂಧ ಹೇರಿರುವ ಹಿನ್ನೆಲೆಯಿಂದಾಗಿ ಇರಾನ್ ಮೇಲಿನ ಅವಲಂಬನೆಯನ್ನು ಭಾರತ ಕಾಲಕ್ರಮೇಣ ಕಡಿಮೆಗೊಳಿಸುತ್ತಿದೆ.

**ಜುಲೈ 18: ಅಂತರರಾಷ್ಟ್ರೀಯ ನೆಲ್ಸನ್ ಮಂಡೇಲಾ ದಿನ**

ಅಂತರರಾಷ್ಟ್ರೀಯ ನೆಲ್ಸನ್ ಮಂಡೇಲಾ ದಿನವನ್ನು ವಿಶ್ವದಾದ್ಯಂತ ಜುಲೈ 18 ರಂದು ಆಚರಿಸಲಾಯಿತು. ಸ್ವಾತಂತ್ರ್ಯ, ನ್ಯಾಯ ಮತ್ತು ಪ್ರಜಾಪ್ರಭುತ್ವದ ಮಹತ್ವವನ್ನು ಸಾರುವ ಸಲುವಾಗಿ ವಿಶ್ವದಾದ್ಯಂತ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಜಗತ್ತಿನ ಪ್ರತಿಯೊಬ್ಬರನ್ನು ಸಮಾಜದ ಉನ್ನತಿಗೆ ಶ್ರಮಿಸುವಂತೆ ಮಾಡುವುದು ಈ ದಿನದ ಪ್ರಮುಖ ಉದ್ದೇಶ.

**"ಮಂಡೇಲಾ ದಿನ"**:

- ವಿಶ್ವದ ಮತ್ತೊಬ್ಬ ಗಾಂಧಿ ಎಂದೇ ಬಣ್ಣಿತರಾಗಿರುವ ದಕ್ಷಿಣ ಆಫ್ರಿಕಾದ ಮಾಜಿ ಅಧ್ಯಕ್ಷ ನೆಲ್ಸನ್ ಮಂಡೇಲಾ ಅವರ ಜನ್ಮದಿನವನ್ನು ಅಂತರರಾಷ್ಟ್ರೀಯ ಮಂಡೇಲಾ ದಿನವೆಂದು ವಿಶ್ವಸಂಸ್ಥೆ 2009 ರಲ್ಲಿ ಘೋಷಿಸಿತು.
- ಜಾಗತಿಕ ಶಾಂತಿ, ಮಾನವ ಹಕ್ಕು ರಕ್ಷಣೆ, ಲಿಂಗ ಅಸಮಾನತೆ ಮತ್ತು ಸ್ವಾತಂತ್ರ್ಯಕ್ಕೆ ಮಂಡೇಲಾ ಅವರು ನೀಡಿರುವ ಕೊಡುಗೆಯನ್ನು ಗಮನಿಸಿ ಈ ಮನ್ನಣೆ ನೀಡಲಾಗಿದೆ.
- 2013 ಜುಲೈ 19 ರಂದು ಮಂಡೇಲಾ ಅವರ 95 ನೇ ಹುಟ್ಟು ಹಬ್ಬವನ್ನು ವಿಶ್ವದಾದ್ಯಂತ ಸಂಭ್ರಮದಿಂದ ಆಚರಿಸಲಾಯಿತು. ಪ್ರಸ್ತುತ ಅನಾರೋಗ್ಯದ ಕಾರಣ ಮಂಡೇಲಾ ಅವರು ಆಸ್ಪತ್ರೆಯಲ್ಲಿ ಹಲವು ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದಾರೆ.

**ಆರ್ಥಿಕ ಸಂಕಷ್ಟದಿಂದ ಅಮೆರಿಕಾದ ಡೆಟ್ರಾಯಿಟ್ ನಗರ ದಿವಾಳಿ: ಘೋಷಣೆ**

ವಿಶ್ವದ ಆಟೋ ರಾಜಧಾನಿ ಎಂದೇ ಖ್ಯಾತಿ ಪಡೆದಿರುವ ಡೆಟ್ರಾಯಿಟ್ ನಗರ 18 ಶತಕೋಟಿ ಅಮೆರಿಕನ್ ಡಾಲರ್ ಸಾಲದ ಹೊರೆಯಿಂದ ತತ್ತರಿಸಿ 'ದಿವಾಳಿ' ಘೋಷಣೆಗೆ ಕ್ರಮ ಕೈಗೊಂಡಿರುವ ಅಮೆರಿಕದ ಅತಿ ದೊಡ್ಡ ನಗರ ಎನಿಸಿದೆ. ನಗರದ ಜನ ಗುಳೇ ಹೋಗುತ್ತಿದ್ದು ಜನಸಂಖ್ಯೆ 20 ಲಕ್ಷದಿಂದ 70,000ಕ್ಕೆ ಇಳಿದಿದೆ.

**'ಡೆಟ್ರಾಯಿಟ್ ನಗರಕ್ಕೆ 'ದಿವಾಳಿ ಕಾಯ್ದೆ' (ಫೆಡರಲ್ ಬ್ಯಾಂಕ್ರಪ್ಟಸಿ ಲಾ) ಅಡಿ ರಕ್ಷಣೆ:**

ಒಂದು ಕಾಲದಲ್ಲಿ ಎರಡು ದಶಲಕ್ಷದಷ್ಟು ಇದ್ದ ಡೆಟ್ರಾಯಿಟ್ ನಗರದ ಜನಸಂಖ್ಯೆ ಈಗ ಕೇವಲ 70,000ಕ್ಕೆ ಇಳಿದಿದೆ. 'ಡೆಟ್ರಾಯಿಟ್ ನಗರವನ್ನು ಬಾಧಿಸುತ್ತಿದ್ದ ಆರ್ಥಿಕ ವಾಸ್ತವಾಂಶಗಳನ್ನು ದೀರ್ಘಕಾಲದಿಂದ ನಿರ್ಲಕ್ಷಿಸುತ್ತಾ ಬರಲಾಗಿದೆ. ಡೆಟ್ರಾಯಿಟ್ ನಗರದ ಜನತೆಗೆ ಲಭ್ಯವಾಗಬೇಕಾದ ಮೂಲಭೂತ ಸೇವೆಗಳು ತಪ್ಪದಂತಾಗಲು ದಿವಾಳಿ ಕಾಯ್ದೆಯಂತರಹ ಕಠಿಣ ನಿರ್ಧಾರವನ್ನು

ತೆಗೆದುಕೊಳ್ಳಲಾಗಿದೆ. ಈ ಮೂಲಕ ಡೆಟ್ರಾಯಿಟ್ ನಗರಕ್ಕೆ ಸುಭದ್ರ ಆರ್ಥಿಕ ನೆಲೆ ಒದಗಿಸಿಕೊಟ್ಟು ಅದು ಭವಿಷ್ಯದಲ್ಲಿ ಸಂಪದ್ಭರಿತ ನಗರವಾಗಿ ಬೆಳೆಯುವಂತೆ ಮಾಡಲು ಸಾಧ್ಯವಾಗಬಹುದಾಗಿದೆ.

**ದಿವಾಳಿ ಕಾಯ್ದೆ (ಫೆಡರಲ್ ಬ್ಯಾಂಕ್ರಪ್ಟಸಿ ಲಾ) ಯಲ್ಲೇನಿದೆ ?**

ಈ ನಿರ್ಧಾರದ ಪರಿಣಾಮವಾಗಿ ದಿವಾಳಿ ಕಾಯ್ದೆಯ (ಫೆಡರಲ್ ಬ್ಯಾಂಕ್ರಪ್ಟಸಿ ಲಾ) 9ನೇ ಅಧ್ಯಾಯದ ಅಡಿಯಲ್ಲಿ ದಿವಾಳಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದೆ. ಕಾಯ್ದೆಯ 9ನೇ ಅಧ್ಯಾಯವು ಆರ್ಥಿಕ ದುಃಸ್ಥಿತಿಯಲ್ಲಿ ಇರುವ ನಗರ ಸಭೆಗಳಿಗೆ ಸಾಲಗಾರರ ಕಾಟದಿಂದ ರಕ್ಷಣೆ ಒದಗಿಸುತ್ತದೆ. ಈ ಕಾಯ್ದೆಯ ಪ್ರಕಾರ ಸಾಲದ ವಿಚಾರವನ್ನು ದಿವಾಳಿ ನ್ಯಾಯಾಧೀಶರ ನಿರ್ದೇಶನ ಪ್ರಕಾರವೇ ಪರಿಹಾರಿಸಬೇಕಾಗುತ್ತದೆ. ಡೆಟ್ರಾಯಿಟ್ ನಗರದ ಸಾಲದ ಹೊರೆ 18 ಶತಕೋಟಿ ಅಮೆರಿಕನ್ ಡಾಲರ್ ಗಳಿಗೂ ಹೆಚ್ಚಾಗಿದ್ದು, ಸಾಮಾನ್ಯ ಕರ್ತವ್ಯಗಳ ನಿರ್ವಹಣೆಗೆ ಹಣ ಇಲ್ಲದ ಪರಿಸ್ಥಿತಿ ಉಂಟಾಗಿದೆ. ಮಿಷಿಗನ್ ರಾಜಧಾನಿಯಲ್ಲಿ ಅತ್ಯಂತ ಹೆಚ್ಚು ತೆರಿಗೆ ಪಾವತಿ ಮಾಡುತ್ತಿರುವ ಡೆಟ್ರಾಯಿಟ್ ನಗರದ ಜನತೆಗೆ ಈ ಆರ್ಥಿಕ ಕೊರತೆಯ ಕಾರಣದಿಂದಾಗಿ ಅತ್ಯಗತ್ಯ ಮೂಲಭೂತ ಸೇವೆಗಳನ್ನು ಒದಗಿಸುವುದೂ ದುರ್ಭರವಾಗಿದೆ.

**<u>"ಫ್ಲೈಯಿಂಗ್ ಫಿಷ್" ಚಲನಚಿತ್ರ ಪ್ರದರ್ಶನವನ್ನು ನಿಷೇಧಿಸಿದ ಶ್ರೀಲಂಕಾ ಸರ್ಕಾರ</u>**

ಶ್ರೀಲಂಕಾ ಸರ್ಕಾರವು "ಫ್ಲೈಯಿಂಗ್ ಫಿಷ್" ಎಂಬ ಶ್ರೀಲಂಕಾ ಸಿನಿಮಾದ ಪ್ರದರ್ಶನವನ್ನು ನಿಷೇಧಿಸಿ ಆದೇಶ ಹೊರಡಿಸಿದೆ. ಈ ಚಲನಚಿತ್ರದಲ್ಲಿ ಶ್ರೀಲಂಕಾ ಸರ್ಕಾರ ಮತ್ತು ಶ್ರೀಲಂಕಾದ ಸೈನ್ಯವನ್ನು ಅವಹೇಳನಕಾರಿಯಾಗಿ ಚಿತ್ರಿಸಲಾಗಿದೆ ಎಂದು ದೂರಿದೆ. ಅಲ್ಲದೆ ಶ್ರೀಲಂಕಾ ಸರ್ಕಾರದ ಅನುಮತಿ ಪಡೆಯದೆ ಸಿನಿಮಾದಲ್ಲಿ ಶ್ರೀಲಂಕಾ ಸೈನ್ಯದ ಸಮವಸ್ತ್ರವಿರುವ ದೃಶ್ಯಗಳನ್ನು ಚಿತ್ರಿಸಲಾಗಿದೆ ಎನ್ನಲಾಗಿದೆ. ಇದಕ್ಕೂ ಮೊದಲು ಕೊಲಂಬೊದಲ್ಲಿರುವ ಫ್ರೆಂಚ್ ರಾಯಭಾರಿ ಕಚೇರಿಯಲ್ಲಿ ಏರ್ಪಡಿಸಲಾಗಿದ್ದ ಚಲನಚಿತ್ರೋತ್ಸವದಲ್ಲಿ ಈ ಚಲನಚಿತ್ರದ ಪ್ರದರ್ಶನವನ್ನು ತಡೆಹಿಡಿಯಲಾಗಿತ್ತು. ಸಂಜೀವ ಪುಷ್ಪಕುಮಾರ ಎಂಬುವವರು ಈ ಚಿತ್ರದ ನಿರ್ದೇಶಕರಾಗಿದ್ದು ಇದು 2011 ರಲ್ಲಿ ತೆರೆಕಂಡಿತ್ತು, ಅಲ್ಲದೆ ಹಲವಾರು ಅಂತರರಾಷ್ಟ್ರೀಯ ಚಲನಚಿತ್ರೋತ್ಸದ ಪ್ರಶಸ್ತಿಗಳನ್ನೂ ಸಹ ಪಡೆದಿತ್ತು.

**<u>ಇಂದಿರಾ-ಮುಜಿಬ್ ಒಪ್ಪಂದವನ್ನು ಅನುಮೋದಿಸಲು ಭಾರತಕ್ಕೆ ಸೂಚಿಸಿದ ಬಾಂಗ್ಲಾದೇಶ</u>**

ಭಾರತ 1974 ರ ಇಂದಿರಾ-ಮುಜಿಬ್ ಒಪ್ಪಂದವನ್ನು ಅನುಮೋದಿಸಬೇಕೆಂದು ಭಾರತ ಮತ್ತು ಬಾಂಗ್ಲಾದೇಶದ ಗೃಹ ಕಾರ್ಯದರ್ಶಿ ಅಧಿಕಾರಿ ಮಟ್ಟದ ಸಭೆಯಲ್ಲಿ ಬಾಂಗ್ಲಾದೇಶಕ್ಕೆ ತಿಳಿಸಿದೆ. ಭಾರತ ಮತ್ತು ಬಾಂಗ್ಲಾದೇಶದ ಗಡಿ ಪ್ರದೇಶವನ್ನು ಗುರುತಿಸಲು ಮತ್ತು 50000 ಕ್ಕೂ ಹೆಚ್ಚು ಜನಸಂಖ್ಯೆ ಇರುವ ಸುಮಾರು 161 ಗಡಿ ಪ್ರದೇಶಗಳ ವಿನಿಮಯ ಮಾಡಿಕೊಳ್ಳಲು ಇಂದಿರಾ-ಮುಜಿಬ್ ಒಪ್ಪಂದವನ್ನು ಅನುಮೋದಿಸಲು ತಿಳಿಸಿದೆ.

ಇಂದಿರಾ-ಮುಜಿಬ್ ಒಪ್ಪಂದವನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರವು ಮೊದಲು ಭಾರತದ ಸಂವಿಧಾನದ ಪ್ರಕಾರ ಸಂವಿಧಾನದ ತಿದ್ದುಪಡಿಯನ್ನು ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರವು ಈ ಸಂವಿಧಾನ ತಿದ್ದುಪಡಿಯನ್ನು ಮುಂಬರುವ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲು ಸಿದ್ಧತೆ ನಡೆಸಿದೆ. ಈ ಮೂಲಕ ಇಂಡೋ-ಬಾಂಗ್ಲಾ ಭೂ ಗಡಿ ಪ್ರದೇಶ ಒಪ್ಪಂದವನ್ನು

ಅನುಷ್ಠಾನಗೊಳಿಸುತ್ತಿದೆ. ಬಾಂಗ್ಲಾದೇಶ ಸರ್ಕಾರ ಈಗಾಗಲೇ ಈ ಒಪ್ಪಂದಕ್ಕೆ ಒಪ್ಪಿಗೆ ಸೂಚಿಸಿದೆ, ಆದರೆ ಇದು ಎರಡು ರಾಷ್ಟ್ರಗಳ ಭೂಭಾಗಗಳ ವಿನಿಮಯಕ್ಕೆ ಸಂಬಂಧಿಸಿರುವುದರಿಂದ ಭಾರತವು ಸಂವಿಧಾನದ ತಿದ್ದುಪಡಿ ಮೂಲಕವೇ ನಿರ್ಧಾರ ಕೈಗೊಳ್ಳಬೇಕಾಗಿದೆ.

**ಇಂದಿರಾ-ಮುಜಿಬ್ ಕರಾರು 1974:**

- ಭಾರತ ಮತ್ತು ಬಾಂಗ್ಲಾದೇಶ 1974 ರಲ್ಲಿ ತಮ್ಮ ಗಡಿ ಪ್ರದೇಶಗಳಿಗೆ ಸಂಬಂಧಿಸಿದಂತೆ ಒಂದು ಒಪ್ಪಂದಕ್ಕೆ ಬರಲಾಯಿತು ಇದೇ "ಇಂದಿರಾ-ಮುಜಿಬ್ ಕರಾರು" ಎಂದು ಹೆಸರು ಪಡೆದಿದೆ. ಭಾರತದ ಅಂದಿನ ಪ್ರಧಾನ ಮಂತ್ರಿಗಳಾದ ಇಂದಿರಾಗಾಂಧಿ ಮತ್ತು ಬಾಂಗ್ಲಾದೇಶದ ಪ್ರಧಾನ ಮಂತ್ರಿಗಳಾದ ಮುಜಿಬ್-ಉರ್-ರೆಹಮಾನ್ ರವರು ಈ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.
- ಎರಡೂ ರಾಷ್ಟ್ರಗಳ ಗಡಿ ಭಾಗಗಳ ಗುರುತಿಸುವಿಕೆಗೆ ಮತ್ತು ಇತರೆ ಗಡಿ ವಿವಾದಗಳನ್ನು ಬಗೆಹರಿಸಲು ಈ ಒಪ್ಪಂದ ಸಹಕಾರಿಯಾಗಲಿದೆ
- ಈ ಕರಾರಿನ 5 ನೇ ವಿಧಿಯನ್ವಯ: ಈ ಕಾರಾರು ಅನುಷ್ಠಾನಗೊಳಿಸಲು ಭಾರತ ಮತ್ತು ಬಾಂಗ್ಲಾದೇಶ ಸರ್ಕಾರಗಳು ಆದಷ್ಟು ಬೇಗ ಅನುಮೋದಿಸಿ "ವಿನಿಮಯ ಅನುಮೋದನೆ ಕರಾರನ್ನು" ಎರಡೂ ದೇಶಗಳು ವಿನಿಮಯ ಮಾಡಿಕೊಳ್ಳಬೇಕೆಂದು ಹೇಳಿದೆ
- "ವಿನಿಮಯ ಅನುಮೋದನೆ ಕರಾರನ್ನು ಎರಡೂ ರಾಷ್ಟ್ರಗಳು ವಿನಿಮಯ ಮಾಡಿಕೊಂಡ ದಿನದಿಂದ ಈ ಒಪ್ಪಂದ ಜಾರಿಗೆ ಬರುತ್ತದೆಂದು ಹೇಳಿದೆ
- ಬಾಂಗ್ಲಾದೇಶ ಸರ್ಕಾರ 28 ನವೆಂಬರ್, 1974ರಲ್ಲಿ ಸಂವಿಧಾನದ 3ನೇ ತಿದ್ದುಪಡಿ ತರುವ ಮೂಲಕ ಇಂದಿರಾ-ಮುಜಿಬ್ ಕರಾರಿಗೆ ಅನುಮೋದನೆ ಸೂಚಿಸಿದೆ.

# ವ್ಯವಹಾರ

**"ವಿತ್ತೀಯ ಸೇರ್ಪಡೆ (Financial Inclusion)" ದಕ್ಷಿಣ ಭಾರತ ಮೇಲುಗೈ: ಕ್ರಿಸಿಲ್ ಸಮೀಕ್ಷೆ**

ಬ್ಯಾಕಿಂಗ್ ಸೇವೆ, ಸೌಲಭ್ಯ ಹಾಗೂ ವಿತ್ತೀಯ ಸೇರ್ಪಡೆ ವಿಸ್ತರಣೆಯಲ್ಲಿ ದಕ್ಷಿಣ ಭಾರತದ ರಾಜ್ಯಗಳು ಇತರೆ ರಾಜ್ಯಗಳಿಗಿಂತ ಮುಂದಿವೆ ಎಂದು ರೇಟಿಂಗ್ ಮತ್ತು ಅನಾಲಿಟಿಕ್ಸ್ ಸಂಸ್ಥೆ "ಕ್ರಿಸಿಲ್ (CRISIL)" ತನ್ನ ವರದಿಯಲ್ಲಿ ಬಹಿರಂಗಪಡಿಸಿದೆ. ಕ್ರಿಸಿಲ್ ಹೊರತಂದಿರುವ "ವಿತ್ತೀಯ ಸೇರ್ಪಡೆ (Financial Inclusion)" ಸೂಚ್ಯಂಕದಲ್ಲಿ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರುವ ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳು ಸಹ ಬ್ಯಾಕಿಂಗ್ ಸೇವೆ ಕಲ್ಪಿಸುವಲ್ಲಿ ಹಿಂದೆ ಬಿದ್ದಿವೆ.

- ವಿತ್ತೀಯ ಸೇರ್ಪಡೆ ಸೂಚ್ಯಂಕ ಪಟ್ಟಿಯಲ್ಲಿ **ಪುದುಚೇರಿ** ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ. ನಂತರದ ಸ್ಥಾನವನ್ನು ಚತ್ತೀಸ್ ಗಢ್ ಮತ್ತು ಕೇರಳ ರಾಜ್ಯಗಳು ಪಡೆದುಕೊಂಡಿವೆ.
- ಕೈಗಾರಿಕಾ ಮತ್ತು ತಲಾ ಆದಾಯದಲ್ಲಿ ಮೊದಲಿರುವ ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳು ಕಳಪೆ ಸಾಧನೆ ಮಾಡಿವೆ. ಈ ಪಟ್ಟಿಯಲ್ಲಿ ಗುಜರಾತ್ 18 ಮತ್ತು ಮಹಾರಾಷ್ಟ್ರ 19 ನೇ ಸ್ಥಾನವನ್ನು ಪಡೆದುಕೊಂಡು ರಾಷ್ಟ್ರದ ಸರಾಸರಿ ಮಟ್ಟಕ್ಕಿಂತ ಕಡಿಮೆ ಸಾಧನೆ ಮಾಡಿವೆ.
- ವಿತ್ತೀಯ ಸೇರ್ಪಡೆಯಲ್ಲಿ ಶ್ಲಾಘನೀಯ ಸಾಧನೆ ಮಾಡಿರುವ ಪ್ರಥಮ ಐದು ಜಿಲ್ಲೆಗಳ ಪೈಕಿ ಕೇರಳದ ನಾಲ್ಕು ಜಿಲ್ಲೆಗಳು ಸ್ಥಾನ ಪಡೆದುಕೊಂಡಿವೆ. ಕೇರಳದ **"ಪಥನಂಥಿತ್ತ (Pathanamthitta)"** ಜಿಲ್ಲೆ ದೇಶದಲ್ಲೇ ಪ್ರಥಮ ಸ್ಥಾನದಲ್ಲಿದೆ. ಪುದುಚೇರಿಯ ಕರೈಕಲ್ ಜಿಲ್ಲೆ ಎರಡನೇ ಸ್ಥಾನದಲ್ಲಿದೆ. ಕೇರಳದ ತಿರುವನಂತಪುರಂ, ಎರ್ನಾಕುಲಂ, ಕೊಟ್ಟಯಂ ಮತ್ತು ತ್ರಿಸುರ್ ಕ್ರಮವಾಗಿ ನಂತರದ ಸ್ಥಾನದಲ್ಲಿವೆ.
- ಇನ್ನು ಈ ಪಟ್ಟಿಯಲ್ಲಿ ಬಿಹಾರ್ ಅತ್ಯಂತ ಕಳಪೆ ಸಾಧನೆ ಮಾಡುವ ಮೂಲಕ ಕಡೆಯ ಸ್ಥಾನದಲ್ಲಿದೆ. ಬಿಹಾರ್ ನಂತರ ನಾಗಾಲ್ಯಾಂಡ್ ಹಾಗೂ ಮಣಿಪುರ ರಾಜ್ಯಗಳು ಕೆಳಮಟ್ಟದಲ್ಲಿವೆ.

**ಸಮೀಕ್ಷೆ ಹೇಗೆ?**

- ಕ್ರಿಸಿಲ್ ಸಂಸ್ಥೆ ಈ ಸಮೀಕ್ಷೆಯನ್ನು ಮೂರು ಮಾನದಂಡಗಳನ್ನು ಆಧರಿಸಿ ನಡೆಸಿದೆ. ಅವುಗಳೆಂದರೆ ಪ್ರತಿ ಲಕ್ಷ ಜನಸಂಖ್ಯೆಗೆ ಇರಬಹುದಾದ ಬ್ಯಾಂಕ್ ಬ್ರಾಂಚ್, ಸಾಲ ವಿತರಣೆ ಮತ್ತು ಠೇವಣೆ ಇಡುವಿಕೆಯನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

**ವಿತ್ತೀಯ ಸೇರ್ಪಡೆ**:

- ದೇಶದ ಪ್ರತಿಯೊಬ್ಬರಿಗೂ ಬ್ಯಾಂಕಿಂಗ್ ಸೇವೆಯನ್ನು ಒದಗಿಸುವ ಸಲುವಾಗಿ ಎರಡು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಪ್ರತಿ ಹಳ್ಳಿಗಳಿಗೆ ಬ್ಯಾಂಕ್ ಶಾಖೆಯನ್ನು ತೆರೆಯಲು ಸರ್ಕಾರ ನಿರ್ಧರಿಸಿತ್ತು. ದೇಶದಲ್ಲಿ 2000 ಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಸುಮಾರು 70,000 ಹಳ್ಳಿಗಳು ಇರುವುದಾಗಿ ಹೇಳಲಾಗಿತ್ತು. ಈ ಹಳ್ಳಿಗಳಲ್ಲಿ ಮಾರ್ಚ್

31, 2012 ರೊಳಗೆ ಬ್ಯಾಂಕ್ ಶಾಖೆಯನ್ನು ತೆರೆಯುವಂತೆ RBI ನಿರ್ದೇಶನವನ್ನು ನೀಡಿತ್ತು. ಆದರೆ ಸಾಧನೆ ಮಾತ್ರ ಅಷ್ಟಕಷ್ಟೇ ಎನ್ನುವುದು ವಿಪರ್ಯಾಸ.

**ನೋಂದಣಿ ನಿಯಮ ಸಡಿಲಗೊಳಿಸಿದ "ಸೆಬಿ (SEBI)"**

ಭಾರತದ ಷೇರುಪೇಟೆಗೆ ದೊಡ್ಡ ಸಂಖ್ಯೆಯಲ್ಲಿ ಹೂಡಿಕೆದಾರರನ್ನು ಆಕರ್ಷಿಸುವ ಸಲುವಾಗಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಕೆಲವು ನಿಯಮ ಮತ್ತು ನಿಬಂಧನೆಗಳಲ್ಲಿ ಮಹತ್ವದ ಬದಲಾವಣೆ ತಂದಿದೆ.

- ವಿದೇಶಿ ಹೂಡಿಕೆದಾರರ ನೋಂದಣಿ ಪ್ರಕ್ರಿಯೆ ಸರಳಗೊಳಿಸಲಾಗಿದೆ. ಕೆಲವು ಕಡ್ಡಾಯ ನಿಯಮಗಳನ್ನು ಸಡಿಲಗೊಳಿಸಲಾಗಿದೆ. ಹೂಡಿಕೆದಾರ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿದ್ದ ನಿಯಮಗಳಲ್ಲಿ ಕೆಲವನ್ನು ಪರಸ್ಪರ ವಿಲೀನಗೊಳಿಸಲಾಗಿದೆ. ಅಲ್ಲದೇ ವಿದೇಶಿ ಸಾಂಸ್ಥಿಕ ಹೂಡಿಕೆ (Foreign Institutional Investors)ದಾರರು ಮತ್ತು ಅವರ ಉಪಖಾತೆಗಳು, ಅರ್ಹ ವಿದೇಶಿ ಹೂಡಿಕೆದಾರರಿಗೆ ಹೊಸದಾಗಿ ಪ್ರತ್ಯೇಕ ಶ್ರೇಣಿಯೊಂದನ್ನು ರೂಪಿಸಲಾಗಿದೆ ಎಂದು ಸೆಬಿ ಹೇಳಿದೆ.
- ಮರು ಖರೀದಿ ಕೊಡುಗೆ ಯಲ್ಲಿ ಶೇ 50 ರಷ್ಟನ್ನು ಸ್ವತಃ ಕಂಪನಿಗಳೇ ಖರೀದಿಸಬೇಕು ಎಂಬುದನ್ನು ಕಡ್ಡಾಯಗೊಳಿಸಲಾಗಿದೆ. ಅಲ್ಲದೇ ಈ ಪ್ರಕ್ರಿಯೆಯನ್ನು ಆರು ತಿಂಗಳೊಳಗೇ ಪೂರ್ಣಗೊಳಿಸಬೇಕು ಎಂದು ಸೆಬಿ ಹೇಳಿದೆ. ಆಕಸ್ಮಾತ್ ಗಡುವಿನೊಳಗೆ ಪ್ರಕ್ರಿಯೆ ಪೂರ್ಣಗೊಳಿಸದಿದ್ದರೆ ಅಂತಹ ಕಂಪನಿಗೆ ಮುಂದಿನ ಒಂದು ವರ್ಷ ಕಾಲ "ಮರು ಖರೀದಿ ಪ್ರಕ್ರಿಯೆ" ನಡೆಸಲು ಅವಕಾಶ ನೀಡುವುದಿಲ್ಲವೆಂದು ಸೆಬಿ ಹೇಳಿದೆ.

**ಕೆ.ಎಂ.ಚಂದ್ರಶೇಖರ್ ಸಮಿತಿ**:

- ಹೂಡಿಕೆ ಮಾರ್ಗಗಳು ಮತ್ತು ವಿದೇಶಿ ಹೂಡಿಕೆ ಖಾತೆಗಳ ನಿಯಂತ್ರಣದಲ್ಲಿ ಸುಧಾರಣಾ ಕ್ರಮಗಳಿಗೆ ಶಿಫಾರಸ್ಸು ಮಾಡುವಂತೆ ಸೆಬಿ ಸಂಪುಟ ಕಾರ್ಯದರ್ಶಿ ಕೆ.ಎಂ.ಚಂದ್ರಶೇಖರ್ ಅವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿತ್ತು. ಈ ಸಮಿತಿಯ ಶಿಫಾರಸ್ಸಿನಂತೆಯೇ ಮಾರ್ಪಾಡುಗಳನ್ನು ಮಾಡಲಾಗಿದೆ.

**"ಗ್ಲೋಬಲ್ ಇನ್ನೋವೇಶನ್ ಇಂಡೆಕ್ಸ್ (ಜಾಗತಿಕ ನಾವೀನ್ಯತೆ ಸೂಚ್ಯಂಕ)": ಭಾರತಕ್ಕೆ 66 ನೇ ಸ್ಥಾನ**

ಕಾರ್ನೆಲ್ ಯೂನಿವರ್ಸಿಟಿ, INSEAD, ವರ್ಲ್ಡ್ ಇಂಟೆಲೆಕ್ಚುಯಲ್ ಪ್ರಪರ್ಟಿ ಆರ್ಗನೈಸೇಷನ್" ಮತ್ತು "ಕಾನ್ ಫೆಡರೇಷನ್ ಆಫ್ ಇಂಡಿಯಾ ಇಂಡಸ್ಟ್ರೀಸ್" ಜೊತೆಯಾಗಿ ಹೊರತಂದಿರುವ "ಗ್ಲೋಬಲ್ ಇನ್ನೋವೇಶನ್ ಇಂಡೆಕ್ಸ್ 2013" ಪಟ್ಟಿಯಲ್ಲಿ ಭಾರತ 66 ನೇ ಸ್ಥಾನ ಗಳಿಸಿದೆ. ಆದರೆ ಕಳೆದ ಬಾರಿಗೆ ಹೋಲಿಸಿದರೆ ಈ ಬಾರಿ ಎರಡು ಅಂಕ ಕುಸಿತಗೊಂಡಿದೆ. ಕಳೆದ ವರ್ಷ ಭಾರತ 64ನೇ ಸ್ಥಾನವನ್ನು ಪಡೆದುಕೊಂಡಿತ್ತು.

- ನಾವೀನ್ಯತೆ ಸಾಮರ್ಥ್ಯ ಮತ್ತು ದಕ್ಷತೆಯ ಆಧಾರದ ಮೇಲೆ ಒಟ್ಟು 142 ರಾಷ್ಟ್ರಗಳನ್ನು ಈ ಸಮೀಕ್ಷೆಯಡಿ ತರಲಾಗಿದೆ.

- ಸ್ವಿಟ್ಜರ್ಲ್ಯಾಂಡ್, ಸ್ವೀಡನ್, ಯು.ಕೆ ಮತ್ತು ನೆದರ್ ಲ್ಯಾಂಡ್ ಈ ಪಟ್ಟಿಯಲ್ಲಿ ಮೊದಲ ನಾಲ್ಕು ಸ್ಥಾನದಲ್ಲಿರುವ ರಾಷ್ಟ್ರಗಳು.
- ಉಕ್ರೈನ್, ಟುನಿಷಿಯಾ, ಪೆರು, ಟರ್ಕಿ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿರುವ ನಾಲ್ಕು ದೇಶಗಳು.

**ಭಾರತ**:

- ಭಾರತ ಈ ಪಟ್ಟಿಯಲ್ಲಿ 66 ನೇ ಸ್ಥಾನವನ್ನು ಗಳಿಸಿದೆ. ಕಳೆದ ವರ್ಷ 64 ನೇ ಸ್ಥಾನವನ್ನು ಗಳಿಸಿಕೊಂಡಿತ್ತು.
- ಮಧ್ಯ ಏಷ್ಯಾ ಮತ್ತು ದಕ್ಷಿಣ ಏಷ್ಯಾ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತ ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನವನ್ನು ಕಜಕಿಸ್ತಾನ ಮತ್ತು ಶ್ರೀಲಂಕಾ ಗಳಿಸಿವೆ. ಒಟ್ಟಾರೆ ನಾವೀನ್ಯತೆ ದಕ್ಷತೆ ಅನುಪಾತ. (Innovation Effeciency Ratio)ದಲ್ಲಿ ಭಾರತ 11 ನೇ ಸ್ಥಾನವನ್ನು ಪಡೆದುಕೊಂಡಿದೆ.
- ಒಟ್ಟು ಬಂಡವಾಳ ರಚನೆ (9 ನೇ ಸ್ಥಾನ), ಹೊಸ ಉದ್ಯಮದಲ್ಲಿ ಹೂಡಿಕೆ (20 ನೇ ಸ್ಥಾನ), ಕೈಗಾರಿಕಾ ಕ್ಲಸ್ಟರ್ ಅಭಿವೃದ್ಧಿ (29 ನೇ ಸ್ಥಾನ) ಮತ್ತು ಕಂಪ್ಯೂಟರ್ ಮತ್ತು ಮಾಹಿತಿ ಸೇವೆಗಳ ರಫ್ತು (1 ನೇ ಸ್ಥಾನ) ವಿಭಾಗಗಳು ಭಾರತದ ಶಕ್ತಿದಾಯಕ ವಿಭಾಗಗಳೆನಿಸಿವೆ.

**ಫಾರ್ಚೂನ್ ಪ್ರಶಂಸನೀಯ ಕಂಪನಿಗಳ ಪಟ್ಟಿಯಲ್ಲಿ TCS ಗೆ ಮೊದಲ ಸ್ಥಾನ**

ದೇಶದ ಪ್ರಶಂಸನೀಯ ಕಂಪನಿಗಳ (Admirable Companies) ಪಟ್ಟಿಯನ್ನು ಫಾರ್ಚೂನ್ ನಿಯತಕಾಲಿಕೆ ಹೊರತಂದಿದ್ದು, ಟಾಟಾ ಕನ್ಸಲ್ಟೆನ್ಸಿ ಸರ್ವೀಸ್ (ಟಿಸಿಎಸ್) ಸಂಸ್ಥೆ ಪ್ರಶಂಸನೀಯ ಕಂಪನಿಗಳ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಪಡೆದುಕೊಂಡಿದೆ.

- ಟಿಸಿಎಸ್ ನಂತರ ಹಿಂದೂಸ್ತಾನ್ ಯೂನಿಲೀವರ್, ಐಟಿಸಿ, ಇನ್ ಫೊಸಿಸ್ ಮತ್ತು SBI ಪಟ್ಟಿಯಲ್ಲಿರುವ ಟಾಪ್ ಐದು ಸಂಸ್ಥೆಗಳು.
- ಕಳೆದ ಬಾರಿ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದ ಟಾಟಾ ಸ್ಟೀಲ್ ಈಗ 7 ನೇ ಸ್ಥಾನಕ್ಕೆ ಕುಸಿದಿದೆ.
- ಐಟಿಸಿ ಮತ್ತು ಇನ್ ಫೋಸಿಸ್ ಎರಡೂ ಕಂಪನಿಗಳು ಮೂರನೇ ಸ್ಥಾನವನ್ನು ಪಡೆದುಕೊಂಡಿವೆ.
- ಬಹು ರಾಷ್ಟ್ರೀಯ ಕಂಪನಿಗಳಾದ ಕೊಕ-ಕೊಲಾ, ಡೆಲ್, ಪೆಪ್ಸಿ ಸಹ ಈ ಬಾರಿ ಪಟ್ಟಿಯಲ್ಲಿ ಕಾಣಿಸಿಕೊಂಡಿವೆ.
- ಪಟ್ಟಿಯಲ್ಲಿರುವ ಇತರೆ ಪ್ರಮುಖ ಕಂಪನಿಗಳೆಂದರೆ ಎಲ್ ಅಂಡ್ ಟಿ (6 ನೇ ಸ್ಥಾನ), ಮಾರುತಿ ಸುಝುಕಿ (9 ನೇ ಸ್ಥಾನ) ಮತ್ತು ಐಸಿಐಸಿಐ ಬ್ಯಾಂಕ್ (10 ನೇ ಸ್ಥಾನ)ಗಳಿಸಿವೆ.

**ಸಮೀಕ್ಷೆ ಹೇಗೆ?**

- ಕಂಪನಿಗಳ ಆಡಳಿತ ವ್ಯವಸ್ಥೆ, ತಾಂತ್ರಿಕತೆ, ನಾಯಕತ್ವ ಮತ್ತು ನಾವೀನ್ಯತೆಯನ್ನು ಮಾನದಂಡವನ್ನಾಗಿಟ್ಟುಕೊಂಡು ಫಾರ್ಚೂನ್ ನಿಯತಕಾಲಿಕೆ ಈ ಪಟ್ಟಿಯನ್ನು ಸಿದ್ದಪಡಿಸಿದೆ.

**"ಸ್ಟೇಟ್ ಬ್ಯಾಂಕ್ ಎಕ್ಸ್ ಪ್ರೆಸ್ ಮನಿ ಕಾರ್ಡ್" ಬಿಡುಗಡೆ ಗೊಳಿಸಿದ ಭಾರತೀಯ ಸ್ಟೇಟ್ ಬ್ಯಾಂಕ್**

ಭಾರತೀಯ ಸ್ಟೇಟ್ ಬ್ಯಾಂಕ್ , ಬ್ಯಾಂಕ್ ಯೇತರ ಹಣಕಾಸು ಸಂಸ್ಥೆಯಾದ ಯು.ಎ.ಇ. ಹಣಕಾಸು ಮತ್ತು ವಿನಿಮಯ ಸೇವೆ (UAE Exchange and Financial Services) ಕಂಪನಿಯ ಸಹಭಾಗಿತ್ವದೊಂದಿಗೆ "ಸ್ಟೇಟ್ ಬ್ಯಾಂಕ್ ಎಕ್ಸ್ ಪ್ರೆಸ್ ಮನಿ ಕಾರ್ಡ್" ನ್ನು ಹೊರತಂದಿದೆ. ಈ ಕಾರ್ಡನ್ನು ಹೊಂದಿರುವವರು ಹಣವನ್ನು ನೇರವಾಗಿ ಈ ಕಾರ್ಡ್ ಗೆ ರವಾನೆ ಮಾಡಬಹುದಾಗಿದೆ. ಈ ಕಾರ್ಡ್ ನಲ್ಲಿ ಗರಿಷ್ಠ ರೂ.50000 ವರೆಗೆ ಒಂದು ಆರ್ಥಿಕ ವರ್ಷದಲ್ಲಿ ಗರಿಷ್ಠ 30 ಬಾರಿ ಠೇವಣಿ ಮಾಡಬಹುದಾಗಿದೆ, ಈ ಒಪ್ಪಂದದನ್ವಯ ಠೇವಣಿದಾರನು ಯು.ಎ.ಇ. ಹಣಕಾಸು ಮತ್ತು ವಿನಿಮಯ ಸೇವೆಯ ಯಾವುದಾದರೂ ಶಾಖೆಯಲ್ಲಿ ಠೇವಣಿ ಮಾಡಬಹುದಾಗಿದೆ.

**"ಸ್ಟೇಟ್ ಬ್ಯಾಂಕ್ ಎಕ್ಸ್ ಪ್ರೆಸ್ ಮನಿ ಕಾರ್ಡ್"ನ ಉಪಯೋಗಗಳು:-**

- ಈ ಕಾರ್ಡ್ ನ್ನು ಯಾವುದೇ ಬ್ಯಾಂಕಿನ ಎ.ಟಿ.ಎಂ.ನ್ನು ಬಳಸಿ ಹಣ ಪಡೆಯಬಹುದಾಗಿದೆ, ಅಲ್ಲದೆ ಈ-ಕಾಮರ್ಸ್ ವ್ಯವಹಾರಗಳಿಗೂ ಸಹ ಉಪಯೋಗಿಸಬಹುದಾಗಿದೆ
- ಈ ಕಾರ್ಡನ್ನು ಪಡೆಯಲು ಗ್ರಾಹಕನು ಯಾವುದೇ ಬ್ಯಾಂಕ್ ನಲ್ಲಿ ಖಾತೆ ತೆರೆಯುವಂತಿಲ್ಲ
- ಸದ್ಯ ಈ ಕಾರ್ಡ್ ಕೇರಳ ರಾಜ್ಯದಲ್ಲಿ ಉಚಿತವಾಗಿದೆ ದೊರೆಯಲಿದೆ, ಮುಂದಿನ ದಿನಗಳಲ್ಲಿ ದೇಶಾದ್ಯಂತ ವಿತರಿಸಲಾಗುವುದು ಎಂದು ತಿಳಿಸಿದೆ

**ನಾಗರಿಕ ವಿಮಾನಯಾನ ನಿರ್ದೇಶನಾಲಯವನ್ನು (Director General of Civil Aviation-DGCA) ವಿಸರ್ಜಿಸಲು ಕೇಂದ್ರ ಸರ್ಕಾರ ನಿರ್ಧಾರ**

ಕೇಂದ್ರ ಸರ್ಕಾರ ನಾಗರಿಕ ವಿಮಾನಯಾನ ನಿರ್ದೇಶನಾಲಯವನ್ನು ವಿಸರ್ಜಿಸಿ ಹೊಸದೊಂದು ಪ್ರಾಧಿಕಾರವನ್ನು ಸ್ಥಾಪಿಸುವ ಮಹತ್ವದ ನಿರ್ಧಾರವನ್ನು ತೆಗೆದುಕೊಂಡಿದೆ. ಈ ಸಂಸ್ಥೆಗೆ ಸಂಪೂರ್ಣ ಕಾರ್ಯನಿರ್ವಹಣಾ ಮತ್ತು ಹಣಕಾಸು ಸ್ವಾಯತ್ತತೆಯನ್ನು ನೀಡಲಾಗುವುದು ಎಂದು ಮಾಹಿತಿ ನೀಡಿದೆ. ಈಗಿರುವ ನಾಗರಿಕ ವಿಮಾನಯಾನ ನಿರ್ದೇಶನಾಲಯವನ್ನು ವಿಸರ್ಜಿಸಿ ನಾಗರಿಕ ವಿಮಾನಯಾನ ಪ್ರಾಧಿಕಾರ (Civil Aviation Authority) ವನ್ನು ಸ್ಥಾಪಿಸಲಾಗುವುದು.

ನಾಗರಿಕ ವಿಮಾನಯಾನ ಪ್ರಾಧಿಕಾರವು ಅಂತರರಾಷ್ಟ್ರೀಯ ಗುಣಮಟ್ಟವನ್ನು ಸರಿಹೊಂದುವಂತೆ ರಚಿಸಲಾಗುವುದು ಹಾಗೂ ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆ (International Civil Aviation Organisation) ನಿಗದಿ ಪಡಿಸಿರುವ ಮಾದರಿಯನ್ನು ಹೋಲುವಂತೆ ರಚಿಸಲು ಚಿಂತಿಸಲಾಗಿದೆ. ನಾಗರಿಕ ವಿಮಾನಯಾನ ನಿರ್ದೇಶನಾಲಯವು ಕಡಿಮೆ ಹಣಕಾಸು ಸ್ವಾಯತ್ತತೆ ಮತ್ತು ಅಧಿಕಾರ ಹೊಂದಿರುವ ಕಾರಣ ಪ್ರಸಕ್ತ ಕ್ರಿಯಾತ್ಮಕ ಪರಿಸ್ಥಿತಿಗೆ ಹೊಂದಿಕೊಳ್ಳುವುದು ತ್ರಾಸದಾಯಕವಾಗಿತ್ತು, ಆದ್ದರಿಂದ ಈ ಹೊಸ ವ್ಯವಸ್ಥೆಯನ್ನು ಸ್ಥಾಪಿಸಲು ನಿರ್ಧರಿಸಲಾಯಿತು.

**ನಾಗರಿಕ ವಿಮಾನಯಾನ ಪ್ರಾಧಿಕಾರದ ಕರ್ತವ್ಯಗಳು:**

- ಈ ಪ್ರಾಧಿಕಾರವು ವಿಮಾನಯಾನ ಸಂಸ್ಥೆಗಳ ಕಾರ್ಯನಿರ್ವಹಣೆ, ಹಣಕಾಸು ಸಂದಿಗ್ಧತೆ ಕುರಿತ ವಿಷಯಗಳನ್ನು ನೋಡಿಕೊಳ್ಳಲಿದೆ ಉದಾ: ಕಿಂಗ್ ಫಿಷರ್ ಏರ್ ಲೈನ್ಸ್ ನ ಹಣಕಾಸು ವಿಷಮ ಸ್ಥಿತಿ.

- ಅಷ್ಟೇ ಅಲ್ಲದೆ ಈ ಪ್ರಾಧಿಕಾರವು ನಾಗರಿಕ ವಿಮಾನಯಾನ ಕ್ಷೇತ್ರದ ಗ್ರಾಹಕರ ಹಿತರಕ್ಷಣೆ ಜೊತೆಗೆ ಪರಿಸರ ಸಂರಕ್ಷಣೆ ಹೊಣೆಯನ್ನೂ ಹೊರಲಿದೆ
- ಈ ಪ್ರಾಧಿಕಾರವು ನಾಗರಿಕ ವಿಮಾನಯಾನದ ಆಡಳಿತವನ್ನು ಮತ್ತು ಅದರ ಸುರಕ್ಷತೆ ಬಗ್ಗೆಯೂ ಗಮನ ಹರಿಸಲಿದೆ.

**ಷೇರು ಪೇಟೆ ನಿಯಂತ್ರಣ ಮಂಡಳಿ (ಸೆಬಿ) ತಿದ್ದುಪಡಿ ಕಾಯಿದೆ-2013 ಕ್ಕೆ ರಾಷ್ಟ್ರಪತಿ ಅಂಕಿತ**

ಪಶ್ಚಿಮ ಬಂಗಾಳದಲ್ಲಿ ಚಿಟ್ ಫಂಡ್ ಕಂಪನಿಯೊಂದು ಜನರಿಗೆ ಕೋಟ್ಯಾಂತರ ರೂಪಾಯಿ ವಂಚಿಸಿದ ಪ್ರಕರಣದ ಬಳಿಕ ಎಚ್ಚೆತ್ತುಕೊಂಡಿರುವ ಕೇಂದ್ರ ಸರ್ಕಾರ, ಸಾರ್ವಜನಿಕರನ್ನು ವಂಚಿಸುವ ಬೋಗಸ್ ಹಣಕಾಸು ಸಂಸ್ಥೆಗಳಿಗೆ ಕಡಿವಾಣ ಹಾಕುವ ಸಲುವಾಗಿ ಷೇರುಪೇಟೆ ನಿಯಂತ್ರಣ ಮಂಡಳಿ ಕಾಯಿದೆಗೆ ತಂದಿದ್ದ ತಿದ್ದುಪಡಿಗೆ ರಾಷ್ಟ್ರಪತಿಗಳು ಅಧಿಕೃತವಾಗಿ ಸಹಿಮಾಡಿದ್ದಾರೆ. ಈ ಹಿನ್ನಲೆ ಈ ಕಾಯಿದೆ ಹೊಸ ಕಾನೂನು ಆಗಿ ಜಾರಿಗೊಳ್ಳಲಿದೆ. ಹೊಸ ಕಾಯಿದೆಯಿಂದ 'ಸೆಬಿ' ಗೆ ಹೆಚ್ಚಿನ ಬಲ ನೀಡಲಾಗಿದ್ದು, ಬೋಗಸ್ ಹಣಕಾಸು ಸಂಸ್ಥೆಗಳನ್ನು ಮಟ್ಟಹಾಕಲು ಇದು ಸಹಕಾರಿಯಾಗಲಿದೆ.

**ಕಾಯಿದೆಯಲ್ಲಿ ಏನಿದೆ?**

- ಸೆಬಿ-1992, SCRA-1956 ಮತ್ತು ಡಿಪಾಸಿಟರಿ ಆಕ್ಟ್-1996 ಗೆ ಈ ತಿದ್ದುಪಡಿಯಲ್ಲಿ ಬದಲಾವಣೆ ತರಲಾಗಿದೆ.
- ಅಕ್ರಮ ಬಂಡವಾಳ ಹೂಡಿಕೆ, ಒಳಾಂತರ ವ್ಯಾಪಾರಗಳ ಮೇಲೆ ಸೆಬಿ ನಿಯಂತ್ರಣ ಸಾಧಿಸಲು ಇದರಡಿ ಅವಕಾಶ ಕಲ್ಪಿಸಲಾಗಿದೆ. ಕಾಯಿದೆ ಅನ್ವಯ ಸುಮಾರು 100 ಕೋಟಿಗಿಂತಲೂ ಹೆಚ್ಚು ಬಂಡವಾಳ ಹೂಡುವ ಹಣಕಾಸು ಸಂಸ್ಥೆಗಳನ್ನು ನಿಯಂತ್ರಿಸಲು ಸೆಬಿ ಅರ್ಹತೆ ಹೊಂದಿದೆ.
- ಹೊಸ ಕಾಯಿದೆಯು ಸೆಬಿಯ ಕಾರ್ಯವಿಸ್ತರಣೆಯನ್ನು ಮತ್ತಷ್ಟು ಹೆಚ್ಚಿಸಿದೆ. ಶಂಕಿತ ಹಣಕಾಸು ಸಂಸ್ಥೆಗಳ ದೂರವಾಣಿ ಕರೆಗಳ ಮೇಲೆ ಮೇಲ್ವಿಚಾರಣೆ ನಡೆಸುವ ಅಧಿಕಾರವನ್ನು ಸೆಬಿಗೆ ನೀಡಲಾಗಿದೆ.
- ಶಂಕಿತ ಹಣಕಾಸು ಸಂಸ್ಥೆಗಳ ಮೇಲೆ ಏಕಾಏಕಿ ದಾಳಿ ನಡೆಸಿ ವ್ಯವಹಾರಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಮತ್ತು ದಾಖಲೆಗಳನ್ನು ವಶಕ್ಕೆ ತೆಗೆದುಕೊಳ್ಳುವ ಅಧಿಕಾರವನ್ನು ಸೆಬಿ ಗೆ ನೀಡಲಾಗಿದೆ.

**ಬೆಂಗಳೂರಿನಲ್ಲಿ ದೇಶದ ಮೊದಲ MSME ಟೆಕ್ನಾಲಜಿ ಸೆಂಟರ್**

ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆ (Micro, Small and Medium Enterprises (MSME)) ಸಚಿವಾಲಯದ ಉದ್ದೇಶಿತ MSME ಟೆಕ್ನಾಲಜಿ ಸೆಂಟರ್ ಅನ್ನು ದೇವನಹಳ್ಳಿ ಏರೋಸ್ಪೇಸ್ ಪಾರ್ಕ್ ಪ್ರದೇಶದ ಬಳಿ ಸ್ಥಾಪಿಸಲಾಗುವುದಾಗಿ ಮೂಲಗಳು ತಿಳಿಸಿವೆ. ದೇಶದಲ್ಲೇ ಇದೇ ಪ್ರಥಮ ಬಾರಿಗೆ ಸ್ಥಾಪಿಸಲಾಗುತ್ತಿರುವ ಈ ಉದ್ದೇಶಿತ ಟೆಕ್ನಾಲಜಿ ಸೆಂಟರ್ ನಲ್ಲಿ ಪ್ರತಿವರ್ಷ 10,000 ಜನರಿಗೆ ತರಭೇತಿಯನ್ನು ನೀಡಲಾಗುವುದು.

- ಎಲೆಕ್ಟ್ರಾನಿಕ್ ಮತ್ತು ವೈಮಾನಿಕ ಸಂಬಂಧಿತ ಉಪಕರಣಗಳ ತಯಾರಿಕೆ, ಪರೀಕ್ಷೆ ಮತ್ತು ಬಳಕೆ ಬಗ್ಗೆ ಈ ಸೆಂಟರ್ ನಲ್ಲಿ ತರಬೇತಿ ನೀಡಲಾಗುವುದು.

- ಇಂತಹ 14 ಮಾದರಿ ಸೆಂಟರ್ ಗಳನ್ನು ದೇಶದ ವಿವಿಧಡೆ ಸ್ಥಾಪಿಸಲು ಸಚಿವಾಲಯ ಚಿಂತಿಸಿರುವುದಾಗಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ರಾಜ್ಯ ಖಾತೆ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದ್ದಾರೆ.
- ಕರ್ನಾಟಕದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ವೈಮಾನಿಕ ಸಂಬಂಧಿಸಿದ ಸಂಸ್ಥೆಗಳು ಹೆಚ್ಚಾಗಿದ್ದು, ಈ ಸೆಂಟರ್ ನ ಸ್ಥಾಪನೆಯಿಂದ ಸಂಶೋಧನೆಗೆ ಅನುಕೂಲವಾಗಲಿದೆ.

## ನಾಲ್ಕನೇ ತಲೆಮಾರಿನ (4G) ಪ್ರೊಸೆಸರ್ ಬಿಡುಗಡೆಗೊಳಿಸಿದ ಇಂಟೆಲ್ ಕಂಪೆನಿ

ಗಣಕದ ಮಿದುಳು ಎನಿಸಿಕೊಂಡಿರುವ ತಂತ್ರಾಂಶ(ಸಾಫ್ಟ್‌ವೇರ್) ಇರಲಿ, ಯಾಂತ್ರಿಕಾಂಶ (ಹಾರ್ಡ್‌ವೇರ್) ಆಗಿರಲಿ ಬದಲಾವಣೆಗೆ ಒಳಗಾಗುತ್ತಲೇ ಇರುತ್ತವೆ. ಸದ್ಯ ಗಣಕದ ಯಾಂತ್ರಿಕಾಂಶ ತಯಾರಕರಲ್ಲಿ ವಿಶ್ವದಲ್ಲೇ ಮುಂಚೂಣಿಯಲ್ಲಿರುವ ಅಮೆರಿಕದ ಬಹುರಾಷ್ಟ್ರೀಯ ಕಂಪೆನಿ `ಇಂಟೆಲ್' ತನ್ನ ನಾಲ್ಕನೇ ತಲೆಮಾರಿನ ಗಣಕದ ಪ್ರಧಾನ ಸಂಸ್ಕಾರಕ ಅಂದರೆ `ಪ್ರೊಸೆಸರ್' (ಇಂಟೆಲ್ ಕೋರ್) ಭಾರತದಲ್ಲಿ ವಾರದ ಹಿಂದಷ್ಟೇ ಬಿಡುಗಡೆ ಮಾಡಿದೆ.

**ಗಮನಾರ್ಹ ಪ್ರಮಾಣದಲ್ಲಿ ವಿದ್ಯುತ್ ಉಳಿತಾಯ ಎಂಬುದೇ ಈ ಪ್ರೊಸೆಸರ್ ಹೆಚ್ಚುಗಾರಿಕೆ:**

ಭಾರತದಂತಹ ದೇಶಗಳಲ್ಲಿ ತೀವ್ರ ಕೊರತೆಯಾಗಿರುವ ಸಂಪನ್ಮೂಲಗಳಲ್ಲಿ ವಿದ್ಯುತ್ ಕೂಡ ಒಂದು. ಇದನ್ನು ಮನಗಂಡೇ ವಿದ್ಯುತ್ ಉಳಿತಾಯದ ಪ್ರೊಸೆಸರ್ ಸಂಶೋಧನೆ- ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗಿದೆ. ಕಳೆದ ತಲೆಮಾರಿನ ಪ್ರೊಸೆಸರ್ ಗಿಂತ ಇದು ಸರಾಸರಿ ಶೇ 15ಕ್ಕೂ ಹೆಚ್ಚು ಕ್ಷಮತೆ ಹೊಂದಿದೆ ಎನ್ನುತ್ತದೆ ಕಂಪೆನಿ. ಬಹಳ ಭಿನ್ನ ಗುಣದ ಬ್ಯಾಟರಿ ಒಳಗೊಂಡಿದ್ದು, ಶೇ 15ರಷ್ಟು ವಿದ್ಯುತ್ ಉಳಿತಾಯ ಇದರಿಂದ ಸಾಧ್ಯ. ಬ್ಯಾಟರಿಯ ಕಾರ್ಯಕ್ಷಮತೆ ಇದರಲ್ಲಿ ಅಧಿಕ. ಸದ್ಯ ಬಳಕೆಯಲ್ಲಿರುವ ಪ್ರೊಸೆಸರ್‌ಗಳಿಗಿಂತ ಶೇ 50ರಷ್ಟು ಅಧಿಕ ಕಾರ್ಯಕ್ಷಮತೆ ಇದಕ್ಕಿದೆ .

**ಪ್ರೊಸೆಸರ್ ನ ಇತರೆ ವಿಶೇಷತೆಗಳು:**

- ಪರ್ಸನಲ್ ಕಂಪ್ಯೂಟರ್ ಹಾಗೂ ಟ್ಯಾಬ್ಲೆಟ್‌ಗಳಿಗೆ ಹೊಂದಿಕೆಯಾಗುವಂತಹ `2-ಇನ್-1' ಪ್ರೊಸೆಸರ್ ಇದಾಗಿದೆ. ಈವರೆಗೆ ಸಿದ್ಧಗೊಂಡ ಕಂಪ್ಯೂಟರ್‌ಗಳೆಲ್ಲದಕ್ಕಿಂತಲೂ ಎರಡು ಪಟ್ಟು ಅಧಿಕ ವೇಗದ ಪ್ರೊಸೆಸರ್ ಇದಾಗಿದೆ
- ಹೈ-ಡೆಫೆನಿಷನ್ ವಿಡಿಯೊ, ಅಂದರೆ ಅತ್ಯಧಿಕ ಪ್ರಮಾಣದ ರೆಸಲ್ಯೂಷನ್ ಹಾಗೂ ಹೆಚ್ಚು ಸ್ಫುಟವಾದ ವಿಡಿಯೊ-ಚಿತ್ರ ದೃಶ್ಯಾವಳಿ ವೀಕ್ಷಣೆ ಇದರಿಂದ ಸಾಧ್ಯ
- ಸದ್ಯದ ಪ್ರೊಸೆಸರ್‌ಗಳಿಗೆ ಹೋಲಿಸಿದರೆ ಚಿತ್ರಗಳನ್ನು 20 ಪಟ್ಟು ವೇಗದಲ್ಲಿ ಪರಿಷ್ಕರಿಸಬಹುದು(ಎಡಿಟ್), ಇತರೆ ಫೋಲ್ಡರ್‌ಗೆ ಅಥವಾ ಗಣಕದೊಟ್ಟಿಗೆ ಹಂಚಿಕೊಳ್ಳಬಹುದು(ಶೇರ್ ಮಾಡಬಹುದು)
- ಜಿ.ಟಿ 3 ಗ್ರಾಫಿಕ್ ವಿನ್ಯಾಸವನ್ನು ಇದಕ್ಕೆ ಅಳವಡಿಸಿರುವುದರಿಂದ ಗ್ರಾಫಿಕ್‌ಗಳನ್ನು, ಚಿತ್ರಗಳನ್ನು ಇನ್ನಷ್ಟು ಸ್ಫುಟವಾಗಿ ನೋಡಬಹುದು
- ಭದ್ರತೆಯ ವಿಚಾರದಲ್ಲೂ ಅತ್ಯುತ್ತಮವಾಗಿದೆ. ಇದರಲ್ಲಿನ ವ್ಯವಸ್ಥೆಯನ್ನು ಮೇಲ್ದರ್ಜೆಗೆ ಏರಿಸಲಾಗಿದೆ. ಇಂಟೆಲ್ ಐಡೆಂಟಿಟಿ ಪ್ರೊಟೆಕ್ಷನ್ ಟೆಕ್ನಾಲಜಿ-4 ಹ್ಯಾಕರ್ಸ್‌ಗಳಿಂದ ಒಂದು ಹಂತದ ಸುರಕ್ಷೆ ನೀಡುತ್ತದೆ ಎಂದು ಕಂಪೆನಿ ಹೇಳಿಕೊಂಡಿದೆ. ವಿಶೇಷವಾಗಿ ಪಾಸ್‌ವರ್ಡ್, ಆನ್‌ಲೈನ್ ವ್ಯವಹಾರ ಹಾಗೂ ದತ್ತಾಂಶ ಅನ್ಯರ ಪಾಲಾಗುವುದನ್ನು ಹೆಚ್ಚು ಪರಿಣಾಮಕಾರಿಯಾಗಿ ತಡೆಯುತ್ತದೆ

- ಮಾಹಿತಿ ಚೋರರಿಗೆ ಸವಾಲೆಸೆಯುವಂತೆ ಹೊಸ ಪ್ರೊಸೆಸರ್ ರೂಪಿಸಲಾಗಿದೆ. ಇದರಲ್ಲಿ ಆಯಂಟಿ-ಥೆಫ್ಟ್ ಟೆಕ್ನಾಲಜಿ - 5, ಅಂದರೆ ಮಾಹಿತಿ ಕಳವು ನಿಬರ್ಂಧ ತಂತ್ರಜ್ಞಾನ ಅಳವಡಿಸಿರುವುದರಿಂದ ಕಳವು ನಡೆದರೂ ಸುಲಭದಲ್ಲಿ ಪತ್ತೆ ಹಚ್ಚಬಹುದಾಗಿದೆ ಎನ್ನುತ್ತದೆ ಇಂಟೆಲ್
- ವೈರ್‌ಲೆಸ್ ಹಾಟ್‌ಸ್ಪಾಟ್‌ಗಳಿಗೆ ವೇಗವಾಗಿ ಸಂಪರ್ಕ ಬೆಸೆಯುತ್ತದೆ. ಇದರಲ್ಲಿ ವೈರ್‌ಲೆಸ್ ಡಿಸ್‌ಪ್ಲೇ ಇರುವುದರಿಂದ ಟಿವಿ, ಇಲ್ಲವೇ ಪ್ರೊಜೆಕ್ಟರ್‌ಗಳಿಗೆ ಹೆಚ್ಚು ಸರಾಗವಾಗಿ ಸಂಪರ್ಕ ಕಲ್ಪಿಸಬಹುದು
- ಗಣಕವನ್ನು ಚಾಲು ಮಾಡಿದಾಗ ಹಳೆಯದಕ್ಕಿಂತ ಶೇ 8ರಷ್ಟು ಕ್ಷಿಪ್ರಗತಿಯಲ್ಲಿ ಕಾರ್ಯನಿರ್ವಹಿಸಲು ಆರಂಭಿಸುತ್ತದೆ
- ಸ್ಪರ್ಶ ಸಂವೇದಿ ಪರದೆಯಲ್ಲಿ ಪ್ರತಿ ಸ್ಪರ್ಶವೂ ಕೂಡ ಹೆಚ್ಚು ಸಹಜವಾಗಿರುತ್ತದೆ

**ಇಂಟೆಲ್ ಕಂಪೆನಿ ಬಗ್ಗೆ:**

ಗಣಕ ಯಾಂತ್ರಿಕಾಂಶಗಳ ತಯಾರಿಕಾ ಕ್ಷೇತ್ರದಲ್ಲಿ ದೊಡ್ಡ ಕಂಪೆನಿ ಇಂಟೆಲ್. ಆದಾಯ ದೃಷ್ಟಿಯಿಂದಲೂ ಮೊದಲ ಸ್ಥಾನದಲ್ಲಿ ನಿಲ್ಲುವಂತಹದ್ದು. ರಾಸಾಯನ ಶಾಸ್ತ್ರಜ್ಞ ಗೋರ್ಡನ್ ಮೋರ್ ಹಾಗೂ ಭೌತ ವಿಜ್ಞಾನಿ ರಾಬರ್ಟ್ ಜತೆಗೂಡಿ 1968ರಲ್ಲಿ ಈ ಕಂಪೆನಿಯನ್ನು ಸ್ಥಾಪಿಸಿದರು. `ಇಂಟೆಗ್ರೇಟೆಡ್ ಎಲೆಕ್ಟ್ರಾನಿಕ್ಸ್' ಎಂಬುದರ ಸಂಕ್ಷಿಪ್ತ ರೂಪವೇ `ಇಂಟೆಲ್'. 1971ರಲ್ಲಿ ಮೊದಲ ವಾಣಿಜ್ಯ ಮೈಕ್ರೊ ಪ್ರೊಸೆಸರ್ ಚಿಪ್‌ಗಳನ್ನು ಇದು ತಯಾರಿಸಿತು. ಪಿಸಿಗಳಿಗೆ ಮೈಕ್ರೊ ಪ್ರೊಸೆಸರ್ ಅಳವಡಿಸುವ ಮೂಲಕ ಕಂಪೆನಿ ಇನ್ನಷ್ಟು ಎತ್ತರಕ್ಕೆ ಬೆಳೆಯಿತು.

## ವಿದೇಶೀ ನೇರ ಬಂಡವಾಳ ಹೂಡಿಕೆಯ ಮಿತಿಯನ್ನು (Foreign Direct Investment) ಸಡಿಲಗೊಳಿಸಿದ ಕೇಂದ್ರ ಸರ್ಕಾರ

ಈಗಾಗಲೇ ಹಲವಾರು ಆರ್ಥಿಕ ಸುಧಾರಣಾ ಕ್ರಮಗಳನ್ನು ಕೈಗೊಂಡ ಹೊರತಾಗಿಯೂ ತೀವ್ರ ಆರ್ಥಿಕ ಸಂಕಷ್ಟದಲ್ಲಿರುವ ಭಾರತದ ಆರ್ಥಿಕ ವ್ಯವಸ್ಥೆಯನ್ನು ಉತ್ತೇಜಿಸುವ ಸಲುವಾಗಿ ಒಟ್ಟು 12 ವಲಯಗಳಲ್ಲಿ FDI ಹೂಡಿಕೆ ಕುರಿತ ನಿಯಮ ಸಡಿಲಗೊಳಿಸಿದೆ. ಈ ಮೂಲಕ ಬಂಡವಾಳ ಆಕರ್ಷಿಸಿ, ಅರ್ಥ ವ್ಯವಸ್ಥೆಗೆ ಚೇತರಿಕೆ ನೀಡುವ ಯತ್ನಕ್ಕೆ ಕೈ ಹಾಕಿದೆ. ಟೆಲಿಕಾಂ, ಚಿಲ್ಲರೆ ವಹಿವಾಟು, ವಿಮೆ, ರಕ್ಷಣೆ ಸೇರಿದಂತೆ ಹಲವು ವಲಯಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆಗೆ ಹೆಚ್ಚಿನ ಅವಕಾಶ ಮಾಡಿಕೊಡುವ ಮತ್ತು ಹೂಡಿಕೆಗೆ ಇರುವ ನಿಯಮಗಳನ್ನು ಸಡಿಲಗೊಳಿಸಲು ನಿರ್ಧರಿಸಲಾಗಿದೆ. ಇದರನ್ವಯ ಟೆಲಿಕಾಂ ವಲಯದಲ್ಲಿ ಶೇ.100ರಷ್ಟು FDI ಗೆ ಅವಕಾಶ ಕಲ್ಪಿಸಲಾಗಿದೆ. ರಕ್ಷಣಾ ವಲಯದಲ್ಲಿ ಶೇ.26ರಷ್ಟು ಎಫ್.ಡಿ.ಐ. ಮಿತಿಯನ್ನು ಉಳಿಸಿಕೊಳ್ಳಲಾಗಿದೆಯಾದರೂ, ಅತ್ಯುನ್ನತ ತಂತ್ರಜ್ಞಾನ ಕುರಿತ ಪ್ರಸ್ತಾವನೆಗಳಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆಗೆ ಅವಕಾಶ ನೀಡುವ ಪ್ರಸ್ತಾಪ ಮಾಡಿದೆ. ಕೆಲವು ವಲಯಗಳಲ್ಲಿ ಎಫ್.ಡಿ.ಐ. ಹೂಡಿಕೆಗೆ ಎಫ್‌ಐಪಿಬಿ (ವಿದೇಶಿ ಬಂಡವಾಳ ಹೂಡಿಕೆ ಉತ್ತೇಜನಾ ಮಂಡಳಿ) ಮಾರ್ಗದ ಬದಲಾಗಿ ಆಟೋಮ್ಯಾಟಿಕ್ (ಆರ್‌ಬಿಐ ಅಥವಾ ಕೇಂದ್ರದ ಪೂರ್ವಾನುಮತಿ ಪಡೆಯದೆಯೇ ಬಂಡವಾಳ ಸ್ವೀಕೃತಿ) ರೂಟ್‌ನಲ್ಲಿ ಹೂಡಿಕೆಗೆ ಅವಕಾಶ ಕಲ್ಪಿಸಲಾಗಿದೆ. ಮತ್ತೆ ಕೆಲವು ವಲಯಗಳಲ್ಲಿ ಎಫ್.ಡಿ.ಐ. ಮಿತಿಯನ್ನು ಹೆಚ್ಚಿಸಲಾಗಿದೆ.

**ಯಾವ ವಲಯದಲ್ಲಿ ಎಷ್ಟು ಎಫ್.ಡಿ.ಐ.?:**

- ಟೆಲಿಕಾಂ- ಶೇ.74ರ ಬದಲು ಶೇ.100
- ಹಣಕಾಸು ಸಲಹಾ ಕಂಪನಿ- ಶೇ.49ರಿಂದ ಶೇ.74
- ಸೆಲ್ಯುಲಾರ್ ಸರ್ವೀಸ್- ಶೇ.74ರಿಂದ ಶೇ.100
- ಆಸ್ತಿ ಪುನಃರ್ನಿರ್ಮಾಣ- ಶೇ.74 ರಿಂದ ಶೇ.100

- ರಕ್ಷಣೆ- ಶೇ.26 (ಆಯ್ದ ವಿಭಾಗಗಳಲ್ಲಿ ಹೆಚ್ಚಳಕ್ಕೆ ಅವಕಾಶ)
- ಸಿಂಗಲ್ ಬ್ರಾಂಡ್ ರಿಟೇಲ್- ಶೇ.49 (ಆಟೋಮ್ಯಾಟಿಕ್ ರೂಟ್)
- ಪೆಟ್ರೋಲಿಯಂ- ಶೇ.49 (ಎಫ್ಐಪಿಬಿ ಮಾರ್ಗದ ಬದಲಾಗಿ ಆಟೋಮ್ಯಾಟಿಕ್ ರೂಟ್)
- ವಿದ್ಯುತ್ ವಿನಿಮಯ- ಶೇ. 49 (ಎಫ್ಐಪಿಬಿ ಮಾರ್ಗದ ಬದಲಾಗಿ ಆಟೋಮ್ಯಾಟಿಕ್ ರೂಟ್)
- ವಿಮಾ ವಲಯ- ಶೇ.49 (ಆಟೋಮ್ಯಾಟಿಕ್ ರೂಟ್)
- ಕೊರಿಯರ್- ಶೇ.100 (ಆಟೋಮ್ಯಾಟಿಕ್ ರೂಟ್)

**ರುಪಾಯಿ ಮೌಲ್ಯ ಕುಸಿತ ತಡೆಗೆ ಭಾರತೀಯ ರಿಸರ್ವ್ ಬ್ಯಾಂಕ್ ಕೈಗೊಂಡ ಕ್ರಮಗಳು : ವರದಿ**

ರುಪಾಯಿ, ಡಾಲರ್ ಎದುರು ನಿರಂತರವಾಗಿ ಕುಸಿಯುತ್ತಿರುವುದು ಇಡೀ ಆರ್ಥಿಕ ವಲಯವನ್ನೇ ಚಿಂತೆಗೀಡುಮಾಡಿದೆ. ಕೇಂದ್ರ ಸರ್ಕಾರ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ ಸಾಕಷ್ಟು ಕ್ರಮಗಳನ್ನು ಕೈಗೊಂಡಿದ್ದರೂ ಡಾಲರ್ ಎದುರು ರುಪಾಯಿ ಕುಸಿತ ನಿಲ್ಲುತ್ತಿಲ್ಲ. ಈ ಹಿನ್ನೆಲೆಯಲ್ಲಿ ಆರ್‌ಬಿಐ ಮತ್ತಷ್ಟು ಕ್ರಮ ಕೈಗೊಳ್ಳಲು ಮುಂದಾಗಿದೆ. ಇದರಿಂದಾಗಿ ರುಪಾಯಿಯ ಕುಸಿತಕ್ಕೆ ಅಲ್ಪಪ್ರಮಾಣದ ತಡೆ ಸಾಧ್ಯವಾಗಲಿದೆ.

**ರುಪಾಯಿ ಕುಸಿತ ತಡೆಗೆ ಆರ್‌ಬಿಐ ಕೈಗೊಂಡ ಕ್ರಮ ಏನು?**

- ಆರ್‌ಬಿಐ ಹಣದ ಮಾರುಕಟ್ಟೆ ಮೇಲೆ ಚಿತ್ತಹರಿಸಿದೆ. ಇತರ ಬ್ಯಾಂಕ್‌ಗಳು ಆರ್‌ಬಿಐನಿಂದ ನಿತ್ಯ ಪಡೆಯುವ ಹಣದ (borrowing) ಪ್ರಮಾಣ ನಿಗದಿ ಮಾಡಲಾಗಿದೆ. ಬ್ಯಾಂಕ್‌ಗಳ ಒಟ್ಟು ಠೇವಣಿಯ ಶೇ.1 ಅಥವಾ 75 ಸಾವಿರ ಕೋಟಿ ರು.ಗಳನ್ನು ಮಾತ್ರ ಬ್ಯಾಂಕ್‌ಗಳು ದಿನವೊಂದಕ್ಕೆ ಆರ್‌ಬಿಐನಿಂದ ಪಡೆಯಬಹುದು.
- ಒಂದು ವೇಳೆ ಬ್ಯಾಂಕ್‌ಗಳಿಗೆ ಇದಕ್ಕಿಂತ ಹೆಚ್ಚಿನ ಹಣದ ಅಗತ್ಯವಿದ್ದರೆ ಮಾರ್ಜಿನಲ್ ಸ್ಟ್ಯಾಂಡಿಂಗ್ ಫೆಸಿಲಿಟಿ ಮೂಲಕ ಹಣ ಪಡೆಯಬಹುದು. ಆದರೆ ಇದಕ್ಕೆ ಬ್ಯಾಂಕ್‌ಗಳು ಹೆಚ್ಚಿನ ಬಡ್ಡಿ ತೆರಬೇಕಾಗುತ್ತದೆ. ಆರ್‌ಬಿಐ ಈ ಹಣಕ್ಕೆ ಶೇ. 10.25ರಷ್ಟು ಬಡ್ಡಿ ದರ ವಿಧಿಸಿದೆ. ಮೊದಲು ಇದು ಶೇ. 8.25 ರಷ್ಟಿತ್ತು. ಇದರಿಂದಾಗಿ ವಾಹನ, ಮನೆ, ವೈಯಕ್ತಿಕ ಮತ್ತಿತರ ಸಾಲದ ಮೇಲಿನ ಬಡ್ಡಿದರ ಅಧಿಕವಾಗುವ ಸಾಧ್ಯತೆ ಹೆಚ್ಚಾಗಿದೆ.
- ಆರ್‌ಬಿಐ ಪರ್ಯಾಯ ಮಾರುಕಟ್ಟೆ ಮೂಲಕ 12 ಸಾವಿರ ಕೋಟಿ ರು. ಮೊತ್ತದ ಸರ್ಕಾರಿ ಬಾಂಡ್‌ಗಳನ್ನು ಮಾರುವ ನಿರ್ಧಾರ ಕೈಗೊಂಡಿದೆ. ಮಾರ್ಜಿನಲ್ ಸ್ಟ್ಯಾಂಡಿಂಗ್ ಬ್ಯಾಂಕ್‌ಗಳಿಗೆ ಆರ್‌ಬಿಐ ನಿಗದಿಗೊಳಿಸಿದ ಪ್ರಮಾಣಕ್ಕಿಂತ ಅಧಿಕ ಹಣದ ಅಗತ್ಯವಿದ್ದಾಗ ಅಥವಾ ಹಣದ ಕೊರತೆ ಎದುರಾದಾಗ ಆರ್‌ಬಿಐ ಹೆಚ್ಚಿನ ಮೊತ್ತವನ್ನು ನೀಡುತ್ತದೆ. ಇದಕ್ಕೆ ಬ್ಯಾಂಕ್‌ಗಳು ಅಧಿಕ ಮೊತ್ತದ ಬಡ್ಡಿ ಹಣ ತೆರಲು ತಯಾರಿರಬೇಕಾಗುತ್ತದೆ.
- ಆರ್‌ಬಿಐನಲ್ಲಿ ಬ್ಯಾಂಕ್‌ಗಳು ಠೇವಣಿ ಇಟ್ಟಿರುವ ಚಿನ್ನ, ಬಾಂಡ್ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಆಸ್ತಿಯ ಆಧಾರದ ಮೇಲೆ ಹೆಚ್ಚಿನ ಹಣ ನೀಡಲಾಗುತ್ತದೆ. ಸ್ಟ್ಯಾಟ್ಯುಟರಿ ಲಿಕ್ವಿಡಿಟಿ ರೇಶಿಯೋ ಬ್ಯಾಂಕ್‌ಗಳು ಆರ್‌ಬಿಐನಲ್ಲಿ ನಿಗದಿತ ಹಣವನ್ನು ಠೇವಣಿ ಇಡುವ ಜತೆಗೆ ಪ್ರತಿ ವ್ಯವಹಾರಿಕ ದಿನದ ಅಂತ್ಯಕ್ಕೆ ನಿರ್ದಿಷ್ಟ ಪ್ರಮಾಣದ ಹಣ, ಚಿನ್ನ, ಬಾಂಡ್

ಅಥವಾ ಯಾವುದೇ ಮಾನ್ಯತೆ ಪಡೆದ ಆಸ್ತಿಯನ್ನು ಇಡಬೇಕಾಗುತ್ತದೆ. ಇದರ ಆಧಾರದ ಮೇಲೆ ಬ್ಯಾಂಕ್‌ಗಳಿಗೆ ಆರ್‌ಬಿಐ ಹೆಚ್ಚುವರಿ ಹಣ ನೀಡುತ್ತದೆ.

- ರುಪಾಯಿ ಕುಸಿತ ನಿಯಂತ್ರಣ ಮಾರ್ಜಿನಲ್ ಸ್ಟ್ಯಾಂಡಿಂಗ್ ಫೆಸಿಲಿಟಿ ಮೇಲಿನ ದರ ಏರಿಕೆಯಿಂದ ರುಪಾಯಿ ಮೇಲಿನ ಒತ್ತಡ ಕೊಂಚ ತಗ್ಗಲಿದೆ. ವಿದೇಶಿ ಕರೆನ್ಸಿಗಳ ವಿನಿಮಯಕ್ಕಾಗಿ ಬ್ಯಾಂಕ್‌ಗಳು ಸಾಕಷ್ಟು ಹಣವನ್ನು ತೆಗೆದಿರಿಸುತ್ತವೆ. ಮಾರ್ಜಿನಲ್ ಸ್ಟ್ಯಾಂಡಿಂಗ್ ಫೆಸಿಲಿಟಿ ಮೇಲಿನ ದರ ಹೆಚ್ಚಿದಂತೆ ಬ್ಯಾಂಕ್‌ಗಳು ಈ ಹಣವನ್ನು ಕಡಿಮೆ ಮಾಡುತ್ತವೆ. ಹೀಗಾಗಿ ಕರೆನ್ಸಿಗಳ ಮೇಲೆ ಒತ್ತಡ ಕಡಿಮೆ ಆಗುತ್ತದೆ.

ಮೇ ನಂತರ ರುಪಾಯಿ, ಡಾಲರ್ ಎದುರು ಶೇ.13ರಷ್ಟು ಕುಸಿದಿದೆ. ಇದರಿಂದ ಆಮದು ವಸ್ತುಗಳು ಹಾಗೂ ಕಚ್ಚಾ ತೈಲದ ಬೆಲೆಯಲ್ಲಿ ಗಮನಾರ್ಹ ಏರಿಕೆಯಾಗಿದೆ. ಇದು ಇತರ ಅಗತ್ಯ ವಸ್ತುಗಳ ಮೇಲೆ ಪರಿಣಾಮ ಬೀರಲಿದೆ. ಹೀಗಾಗಿ ಹಣದುಬ್ಬರ ನಿಯಂತ್ರಣವೂ ಅಗತ್ಯ. ಚಾಲ್ತಿ ಖಾತೆಯಲ್ಲಿನ ಕೊರತೆ (ಸಿಎಡಿ) ತುಂಬಿಕೊಳ್ಳಲು, ಆರ್ಥಿಕ ಸ್ಥಿತಿ ಸುಧಾರಿಸಲು ಕೇಂದ್ರ ಸರ್ಕಾರ ಶ್ರಮ ಪಡುತ್ತಿದೆ. ಹಲವು ಕ್ರಮಗಳನ್ನೂ ಕೈಗೊಂಡಿದೆ ಆದರೆ ಅಲ್ಪಾವಧಿಯಲ್ಲಿ ಅವುಗಳು ತೀವ್ರ ಪರಿಣಾಮ ಬೀರಲಾರವು.

## ಕಡಿಮೆ ತೂಕದ ಎಲ್.ಪಿ.ಜಿ. ಸಿಲಿಂಡರ್ ಗಳನ್ನು ಮಾರುಕಟ್ಟಗೆ ತರಲು ಕೇಂದ್ರ ಸರ್ಕಾರ ನಿರ್ಧಾರ

ಶೀಘ್ರದಲ್ಲೇ ಐದು ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್‌ಗಳು ಮಾರುಕಟ್ಟೆಗೆ ಬರಲಿವೆ. ಈ ಸಿಲಿಂಡರ್‌ಗಳ ದರ 360 ರಿಂದ 380 ಗಳಷ್ಟಿರಬಹುದು. ಅಂದರೆ, ಈ ಸಿಲಿಂಡರ್‌ಗಳಿಗೆ ಸರ್ಕಾರದ ಸಬ್ಸಿಡಿ ಇರುವುದಿಲ್ಲ. ಎಲ್‌ಪಿಜಿ ಮಾರುಕಟ್ಟೆ ದರವನ್ನೇ ನಿಗದಿ ಮಾಡಲಾಗುತ್ತದೆ. ಈ ಸಿಲಿಂಡರ್‌ಗಳನ್ನು ಪೆಟ್ರೋಲ್ ಬಂಕ್‌ಗಳ ಮೂಲಕ ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗುತ್ತಿದೆ. ಸಾರ್ವಜನಿಕ ವಲಯದ ತೈಲ ಮಾರುಕಟ್ಟೆ ಕಂಪನಿಗಳ ಮಾರಾಟ ಕೇಂದ್ರಗಳಲ್ಲಿ (ಪೆಟ್ರೋಲ್ ಬಂಕ್) ಐದು ಕೆ.ಜಿ. ತೂಕದ ಸಿಲಿಂಡರ್‌ಗಳನ್ನು ವಿತರಿಸಲು ಪೆಟ್ರೋಲಿಯಂ ಖಾತೆ ಸಚಿವ ವೀರಪ್ಪ ಮೊಯ್ಲಿ ಒಪ್ಪಿಗೆ ನೀಡಿದ್ದಾರೆ.

**ಉಪಯೋಗಗಳು:**

- ಎಲ್‌ಪಿಜಿಯನ್ನು ಮುಕ್ತವಾಗಿ ಮಾರುಕಟ್ಟೆ ಮಾಡಲು ಮತ್ತು ತಾತ್ಕಾಲಿಕ ಸಂಪರ್ಕ ಪಡೆಯುವವರಿಗೆ ಅನುಕೂಲ ಒದಗಿಸಲು ಈ ವ್ಯವಸ್ಥೆ ಜಾರಿಗೆ ತರಲಾಗುತ್ತಿದೆ.
- ಆರಂಭದಲ್ಲಿ ಬೆಂಗಳೂರು, ದೆಹಲಿ, ಮುಂಬೈ, ಚೆನ್ನೈ, ಕೋಲ್ಕತಾಗಳಲ್ಲಿ ಮಾರಾಟ ಮಾಡಲಾಗುತ್ತದೆ.
- ಸಿಲಿಂಡರ್ ಖರೀದಿಸುವವರು ಆರಂಭದಲ್ಲಿ ಡೊಮೆಸ್ಟಿಕ್ ಪ್ರೆಷರ್ ರೆಗ್ಯುಲೆಟರ್ ಕೊಳ್ಳಬಹುದು ಇಲ್ಲವೇ ಬರೀ ಸಿಲಿಂಡರ್ ಖರೀದಿಸಬಹುದು.
- ಗ್ರಾಹಕರಿಗೆ ಅನುಕೂಲ ಒದಗಿಸಲು ಸಿಲಿಂಡರ್ ಮಾರಾಟ ಮಾಡುವ ಪೆಟ್ರೋಲ್ ಪಂಪ್‌ಗಳು ನಿಗದಿತ ಸಮಯಕ್ಕಿಂತ ಹೆಚ್ಚು ಹೊತ್ತು ತೆರೆದಿರುತ್ತವೆ.
- ಆರಂಭದಲ್ಲಿ ಐದು ಕೆ.ಜಿ. ಸಿಲಿಂಡರ್ ಖರೀದಿಸಲು ಗ್ರಾಹಕರು ಗುರುತಿನ ಚೀಟಿ ತೋರಿಸುವುದು ಕಡ್ಡಾಯ. ಮತದಾರರ ಚೀಟಿ, ಚಾಲನಾ ಪರವಾನಗಿ ಪತ್ರ, ಪಾನ್ ಕಾರ್ಡ್, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ, ಎಂಪ್ಲಾಯಿ ಐಡಿ, ಪಾಸ್ ಪೋರ್ಟ್ ಸೇರಿದಂತೆ ಯಾವುದಾದರೂ ನಿಗದಿತ ಗುರುತಿನ ಚೀಟಿಯನ್ನು ಒದಗಿಸಬೇಕು.

- ಗ್ರಾಹಕರು ಮೊದಲು ಖರೀದಿಸುವ ವೇಳೆ ಸಿಲಿಂಡರ್ ಬಳಕೆ ಕುರಿತಂತೆ ಪ್ರಾತ್ಯಕ್ಷಿಕೆ ನೀಡಲಾಗುತ್ತದೆ. ಗ್ರಾಹಕರು ಬಯಸಿದರೆ ವಿಮೆಯನ್ನು ಮಾಡಿಸಬಹುದಾಗಿದೆ.

**ಜೆಟ್-ಎತಿಹಾದ್ ಏರ್ ವೇಸ್ ಒಪ್ಪಂದಕ್ಕೆ ವಿದೇಶಿ ಹೂಡಿಕೆ ಉತ್ತೇಜನ ಮಂಡಳಿ (FIPB) ಒಪ್ಪಿಗೆ**

ಸಾಕಷ್ಟು ವಿವಾದ, ಕುತೂಹಲ ಹುಟ್ಟಿಸಿದ್ದ 2,058 ಕೋಟಿಯ ಜೆಟ್- ಎತಿಹಾದ್ ಏರ್‌ವೇಸ್ ಒಪ್ಪಂದಕ್ಕೆ ವಿದೇಶಿ ಹೂಡಿಕೆ ಉತ್ತೇಜನ ಮಂಡಳಿ(ಎಫ್‌ಐಪಿಬಿ) ಷರತ್ತುಬದ್ಧ ಒಪ್ಪಿಗೆ ನೀಡಿದೆ. ಅದರಂತೆ ಜೆಟ್ ಏರ್‌ವೇಸ್‌ನ ಶೇ.24ರಷ್ಟು ಷೇರುಗಳು ಎತಿಹಾದ್ ಪಾಲಾಗಲಿದೆ. ಇದು ನಾಗರಿಕ ವಿಮಾನಯಾನ ಕ್ಷೇತ್ರದಲ್ಲಿ ಅತಿದೊಡ್ಡ ವಿದೇಶಿ ಹೂಡಿಕೆ ಒಪ್ಪಂದವಾಗಿದೆ. ಎಫ್‌ಬಿಪಿಐ ಸಭೆ ಬಳಿಕ ಮಾತನಾಡಿದ ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಅರವಿಂದ್ ಮಾಯಾರಾಮ್, ನಾವು ಜೆಟ್- ಎತಿಹಾದ್ ಒಪ್ಪಂದಕ್ಕೆ ಷರತ್ತುಬದ್ಧ ಒಪ್ಪಿಗೆ ಸೂಚಿಸಿದ್ದೇವೆ ಎಂದು ಮಾಹಿತಿ ನೀಡಿದ್ದಾರೆ.

**ಷರತ್ತಿನಲ್ಲಿ ಏನಿದೆ?**

- ಹೊಸ ನಿಯಮಗಳಂತೆ ಜೆಟ್ ಏರ್‌ವೇಸ್ ಎತಿಹಾದ್ ಜತೆಗೆ ಷೇರುದಾರರ ಒಪ್ಪಂದದಲ್ಲಿ ಹಾಗೂ ಷೇರುಹೊಂದುವ ವಿಚಾರದಲ್ಲಿ ಯಾವುದೇ ಬದಲಾವಣೆಗೆ ಕೈಹಾಕಬೇಕಿದ್ದರೂ ಸರ್ಕಾರದ ಅನುಮತಿ ಪಡೆಯಬೇಕಿದೆ.
- ಷೇರುದಾರರ ವಿವಾದ, ಷೇರುದಾರರ ಒಪ್ಪಂದದಲ್ಲಿನ ವಿವಾದ ಭಾರತೀಯ ಕಾನೂನು ವ್ಯಾಪ್ತಿಗೆ ಒಳಪಡಲಿದೆ.
- ಈ ಒಪ್ಪಂದದಿಂದಾಗಿ ಭಾರತೀಯ ಏರ್‌ಲೈನ್ ಸಂಸ್ಥೆ ಮೇಲೆ ಎತಿಹಾದ್ ನಿಯಂತ್ರಣ ಸಾಧಿಸುತ್ತದೆ ಎನ್ನುವ ಆತಂಕ ಹುಟ್ಟಿಕೊಂಡಿತ್ತು.. ಆದರೆ 12 ಮಂದಿ ಸದಸ್ಯರ ಆಡಳಿತ ಮಂಡಳಿಯಲ್ಲಿ ಎತಿಹಾದ್ ಸದಸ್ಯರ ಸಂಖ್ಯೆ 3ರಿಂದ 2ಕ್ಕಿಳಿಯಲಿದೆ.
- ಜೆಟ್‌ನ ಮುಖ್ಯಸ್ಥ ನರೇಶ್ ಗೋಯೆಲ್ ಅವರು ನಾಲ್ವರು ಆಡಳಿತ ಮಂಡಳಿ ಸದಸ್ಯರನ್ನು ನೇಮಿಸುವ ಅಧಿಕಾರ ಹೊಂದುವ ಜತೆಗೆ ಮುಖ್ಯಸ್ಥರನ್ನು ನಾಮನಿರ್ದೇಶನ ಮಾಡುವ ಅಧಿಕಾರವನ್ನೂ ಪಡೆಯಲಿದ್ದಾರೆ.
- ಎತಿಹಾದ್ ಕೇವಲ ಉಪಾಧ್ಯಕ್ಷರನ್ನು ಆಯ್ಕೆ ಮಾಡುವ ಅಧಿಕಾರಿ ಹೊಂದಲಿದೆ.

**ಲಾಭ ಏನು?**

- ವಾಯುಯಾನ ಕ್ಷೇತ್ರದಲ್ಲಿ ಹೆಚ್ಚಾಗಿದ್ದ ದರ ಸಮರದಿಂದಾಗಿ ಕೆಲ ವರ್ಷಗಳಿಂದ ಆಗುತ್ತಿದ್ದ ನಷ್ಟವನ್ನು ಸರಿದೂಗಿಸಲು ಜೆಟ್‌ಗೆ ಈ ಒಪ್ಪಂದ ಅವಕಾಶ ಮಾಡಿಕೊಡಲಿದೆ.
- ಜೆಟ್ ಏರ್‌ವೇಸ್‌ನ ವಿಸ್ತರಣೆಗೂ ಅವಕಾಶ. - ಆಫ್ರಿಕನ್ ನಗರಗಳು, ಅಮೆರಿಕ, ಯುರೋಪ್‌ನ ನಗರಗಳಿಗೆ ಪ್ರಯಾಣಿಸುವವರಿಗೆ ಹೊಸ ಮಾರ್ಗಗಳ ಸೌಲಭ್ಯ ಸಿಕ್ಕಂತಾಗುತ್ತದೆ.
- ಜೆಟ್- ಎತಿಹಾದ್‌ನ ಚಟುವಟಿಕೆ ಕೇಂದ್ರ ದುಬೈನಲ್ಲಿ ಕೇಂದ್ರೀಕೃತವಾಗಲಿರುವುದರಿಂದ ಕಡಿಮೆ ದರದಲ್ಲಿ ಜೆಟ್ ಏರ್ ವೇಸ್‌ಗೆ ಇಂಧನ ಲಭಿಸಲಿದೆ. ಪ್ರಯಾಣದರ ಇಳಿಮುಖವಾಗುವ ಸಾಧ್ಯತೆ ಇದೆ.
- ಇತರೆ ವೈಮಾನಿಕ ಸಂಸ್ಥೆಗಳೂ ಭಾರತದತ್ತ ಮುಖಮಾಡಲು ಅವಕಾಶ.

**ಅತ್ಯಂತ ಅಪಾಯಕಾರಿ ದೇಶಗಳ ಸಾಲಿನಲ್ಲಿ ಭಾರತಕ್ಕೆ ಸ್ಥಾನ ನೀಡಿದ ಬ್ರಿಟನ್**

ಭಾರತ ಸೇರಿದಂತೆ ಏಷ್ಯಾ ಹಾಗೂ ಆಫ್ರಿಕಾದ ಆರು `ಅತ್ಯಂತ ಅಪಾಯಕಾರಿ' ದೇಶಗಳ ಪ್ರವಾಸಿಗರಿಗೆ ವಿಧಿಸಲು ಉದ್ದೇಶಿಸಲಾದ 3,000 ಪೌಂಡ್ (2.75 ಲಕ್ಷ ರೂಪಾಯಿ) ಮೊತ್ತದ `ಮರುಪಾವತಿಸುವ ನಗದು ಬಾಂಡ್' ಕುರಿತ ಬ್ರಿಟನ್‌ನ ಗೃಹ ಇಲಾಖೆಯ ಪ್ರಸ್ತಾವ ಗೊಂದಲ ಮೂಡಿಸಿದೆ.

**ಏನಿದು ಯೋಜನೆ?**

- ಆರು ದೇಶಗಳ ಪ್ರವಾಸಿಗರು `ಪ್ರವಾಸಿ ವೀಸಾ' ಅರ್ಜಿ ಸಲ್ಲಿಸುವಾಗ ಬಾಂಡ್ ಅನ್ನು ಸಲ್ಲಿಸಬೇಕು ಎಂಬ ಪ್ರಾಯೋಗಿಕ ಯೋಜನೆ ರೂಪಿಸಲಾಗಿದೆ. ಭಾರತ ಮಾತ್ರವಲ್ಲದೇ, ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ, ನೈಜಿರಿಯಾ ಹಾಗೂ ಘಾನಾ ದೇಶಗಳ ಪ್ರವಾಸಿಗರಿಗೆ ಈ ನಿಯಮ ಅನ್ವಯವಾಗಲಿದೆ.
- ಇದೇ ನವೆಂಬರ್ ತಿಂಗಳಿನಿಂದ ಜಾರಿಗೆ ಬರಲಿರುವ ಪ್ರಾಯೋಗಿಕ ಯೋಜನೆಯು, ನಂತರ ಎಲ್ಲ ಬಗೆಯ ವೀಸಾಗಳಿಗೂ ಅನ್ವಯವಾಗಲಿದೆ. `ಆದರೆ ಯಾವ ದೇಶದ ಪ್ರವಾಸಿಗರನ್ನು ಈ ಯೋಜನೆ ವ್ಯಾಪ್ತಿಗೆ ತರಬೇಕು ಎಂಬುದು ಇನ್ನೂ ನಿರ್ಧಾರವಾಗಿಲ್ಲ' ಎಂದು ಗೃಹ ಇಲಾಖೆ ಸ್ಪಷ್ಟನೆ ನೀಡಿರುವುದರಿಂದ ಈ ವಿಷಯದಲ್ಲಿ ಗೊಂದಲ ಉಂಟಾಗಿದೆ.
- ಅವಧಿಗೂ ಹೆಚ್ಚು ಕಾಲ ಇಲ್ಲೇ ಉಳಿಯುವ ಪ್ರವಾಸಿಗರನ್ನು ಗಮನದಲ್ಲಿ ಇಟ್ಟುಕೊಂಡು ಯೋಜನೆ ರೂಪಿಸಲಾಗಿದೆ ಹಾಗೂ ಬಾಂಡ್ ಸಲ್ಲಿಕೆ ವಿಧಾನಗಳ ಕುರಿತು ಸಹ ಯೋಚನೆ ನಡೆಸಲಾಗುತ್ತಿದೆ.
- ಆರಂಭದಲ್ಲಿ ಪ್ರವಾಸಿ ವೀಸಾ ಪಡೆಯುವವರಿಗಷ್ಟೇ ಇದು ಅನ್ವಯವಾಗಲಿದ್ದು, ಒಂದು ವೇಳೆ ಯೋಜನೆ ಯಶಸ್ವಿಯಾದರೆ ಎಲ್ಲ ದೇಶಗಳ ಪ್ರವಾಸಿಗರ ಎಲ್ಲ ಬಗೆಯ ವೀಸಾಗಳಿಗೂ ವಿಸ್ತರಿಸಲಾಗುವುದು ಎಂದು ಗೃಹ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.
- ಬ್ರಿಟನ್ ಜತೆಗೆ ಹೊಂದಿರುವ ವಿಶೇಷ ನಂಟಿನ ಹೊರತಾಗಿಯೂ ಭಾರತವನ್ನು `ಅತಿ ಅಪಾಯಕರ' ಎಂದು ಪರಿಗಣಿಸಿರುವ ಉದ್ದೇಶಿತ ಯೋಜನೆಗೆ ತೀಕ್ಷ್ಣ ಪ್ರತಿಕ್ರಿಯೆ ವ್ಯಕ್ತವಾಗಿದೆ. ಭಾರತೀಯರ ಅಸಮಾಧಾನವನ್ನು ತಣಿಸುವ ಕುರಿತಂತೆ ಬ್ರಿಟನ್ ಹಾಗೂ ಭಾರತದ ಅಧಿಕಾರಿಗಳ ಮಧ್ಯೆ ಈ ಕುರಿತು ಮಾತುಕತೆ ನಡೆದಿದೆ.

# ವಿಜ್ಞಾನ-ತಂತ್ರಜ್ಞಾನ

**ಪೃಥ್ವಿ ಕ್ಷಿಪಣಿ ಬದಲಾಗಿ ಪ್ರಹಾರ್: DRDO ಚಿಂತನೆ**

ಸೇನಾ ಬಲವನ್ನು ಬಲಗೊಳಿಸುವತ್ತ ಸಕ್ರಿಯವಾಗಿ ತೊಡಗಿರುವ ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ (DRDO) 150 ಕಿ.ಮೀ ಶ್ರೇಣಿ ಸಾಮರ್ಥ್ಯದ ಪೃಥ್ವಿ ಕ್ಷಿಪಣಿ ಬದಲಾಗಿ ಅತ್ಯಂತ ಹೆಚ್ಚು ಕಾರ್ಯ ದಕ್ಷತೆ ಹೊಂದಿರುವ ಪ್ರಹಾರ್ ಕ್ಷಿಪಣಿಗಳನ್ನು ಬಳಸಿಕೊಳ್ಳಲು ಚಿಂತನೆ ನಡೆಸುತ್ತಿರುವುದಾಗಿ DRDO ನಿರ್ದೇಶಕ ಅವಿನಾಶ್ ಚಂದರ್ ಅವರು ಹೇಳಿದ್ದಾರೆ.

- ಏಕ ಹಂತದ (Single stage), ಘನ ಇಂಧನದ ಆಧಾರದ ಮೇಲೆ ಕಾರ್ಯ ನಿರ್ವಹಿಸುವ ಪ್ರಹಾರ್ ಕ್ಷಿಪಣಿಯು 90 ಕಿ.ಮೀ ಯಿಂದ 350 ಕಿ.ಮೀ ನಡುವೆ, ಚುರುಕಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿದೆ. ಶೀಘ್ರದಲ್ಲೇ ಈ ಕ್ಷಿಪಣಿಗಳನ್ನು ಸೇನೆಯ ಪ್ರಾಯೋಗಿಕ ಬಳಕೆಗೆ ನೀಡಲಾಗುವುದು.

**ಪೃಥ್ವಿ ಕ್ಷಿಪಣಿ**:

- ನೆಲದಿಂದ ನೆಲಕ್ಕೆ ಚಿಮ್ಮುವ ಪೃಥ್ವಿ ಕ್ಷಿಪಣಿಗಳನ್ನು DRDO 1983 ರಲ್ಲಿ ಆರಂಭಿಸಲಾದ "ಸಮಗ್ರ ಕ್ಷಿಪಣಿ ಅಭಿವೃದ್ಧಿ ಯೋಜನೆ"ಯಡಿ ಅಭಿವೃದ್ಧಿ ಪಡಿಸಿದೆ.
- ಪೃಥ್ವಿ ಕ್ಷಿಪಣಿಯು 150 ಕಿ.ಮೀ ಹಾರುವ ಸಾಮರ್ಥ್ಯವನ್ನು ಹೊಂದಿದ್ದು, ಈಗಾಗಲೇ ಸೇನೆಯಲ್ಲಿ ಬಳಸಿಕೊಳ್ಳಲಾಗಿದೆ.

**ದೇಶದ ಮೊದಲ ಸಂಚಾರ ಮಾರ್ಗದರ್ಶನ ಉಪಗ್ರಹ ಯಶಸ್ವಿ ಉಡಾವಣೆ**

ಭಾರತದ ಪ್ರಥಮ ಸಂಚಾರ ಮಾರ್ಗದರ್ಶಿ ವ್ಯವಸ್ಥೆಗೆಂದೇ ನಿರ್ಮಿಸಲಾಗಿರುವ IRNSS-1ಎ ಉಪಗ್ರಹವನ್ನು ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು. ಇದೇ ಮೊದಲ ಬಾರಿಗೆ ಮಧ್ಯರಾತ್ರಿ ಸುಮಾರು 11.41 ಕ್ಕೆ ಸರಿಯಾಗಿ ಆಂಧ್ರದ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ IRNSS-1ಎ ಉಪಗ್ರಹವನ್ನು ಹೊತ್ತ PSLV-C22 ರಾಕೆಟ್ ನಭಕ್ಕೆ ಚಿಮ್ಮಿತು.

**IRNSS ಉಪಗ್ರಹದ ಬಗ್ಗೆ**:

- ಭಾರತದ ಉದ್ದೇಶಿತ "ಇಂಡಿಯನ್ ರೀಜನಲ್ ನ್ಯಾವಿಗೇಷನ್ ಸೆಟಲೈಟ್ ಸಿಸ್ಟಮ್" ನ ಏಳು ಉಪಗ್ರಹಗಳ ಪೈಕಿ IRNSS-1ಎ ಮೊದಲನೆಯದಾಗಿದ್ದು, 2015-16 ರ ವೇಳೆಗೆ ಉಳಿದ ಉಪಗ್ರಹಗಳನ್ನು ಇಸ್ರೋ ಉಡಾಯಿಸಲಿದೆ. ಇದಕ್ಕಾಗಿ ಒಟ್ಟು 1,420 ಕೋಟಿ ರೂಪಾಯಿಯನ್ನು ಸರ್ಕಾರ ವ್ಯಯಿಸಲಿದೆ.
- ಭಾರತದ ಗಡಿ ಭಾಗ ಸೇರಿದಂತೆ ಗಡಿಯಾಚೆ 1500 ಕಿ.ಮೀ ಯ ವರೆಗಿನ ಪ್ರದೇಶವನ್ನು ಈ ಉಪಗ್ರಹ ಸ್ಪಷ್ಟವಾಗಿ ಸೆರೆಹಿಡಿಯಲಿದೆ.
- IRNSS-1ಎ ಮುಖ್ಯವಾಗಿ ಎರಡು ರೀತಿಯ ಸೇವೆಯನ್ನು ಒದಗಿಸಲಿದೆ. ಮೊದಲನೆಯದಾಗಿ ಪ್ರತಿಯೊಬ್ಬರು ಬಳಸಿಕೊಳ್ಳಬಹುದಾದ "ಸ್ಟಾಂಡರ್ಡ್ ಪೊಸಿಶನಿಂಗ್ ಸಿಸ್ಟನ್" ಮತ್ತು ಮತ್ತೊಂದು ಕೇವಲ ನಿರ್ದಿಷ್ಟ ಪ್ರಾಧಿಕಾರ ಮಾತ್ರ ಬಳಸಿಕೊಳ್ಳಬಹುದಾದ "ರಿಸ್ಟ್ರಿಕ್ಟೆಡ್ ಸರ್ವೀಸ್".

- 1,425 ಕೆ.ಜಿ ಭಾರದ "ಇಂಡಿಯನ್ ರೀಜನಲ್ ನ್ಯಾವಿಗೇಷನ್ ಸೆಟಲೈಟ್ ಸಿಸ್ಟಮ್ (Indian Regional Navigation Satellite System (IRNSS))" ಉಪಗ್ರಹ ನಿಗದಿತ ಕಕ್ಷೆಗೆ ಸೇರಿದ ನಂತರ ಹತ್ತು ವರ್ಷಗಳ ಕಾಲ ಕಾರ್ಯ ನಿರ್ವಹಿಸಲಿದೆ. ಈ ಉಪಗ್ರಹವು ಭೂಮಿಯಿಂದ ಸುಮಾರು 20,625 ಕಿ.ಮೀ ಎತ್ತರದಲ್ಲಿ ಕಾರ್ಯನಿರ್ವಹಿಸಲಿದೆ.
- ವಿಪತ್ತು ನಿರ್ವಹಣೆ, ನೌಕೆಗಳ ಸಂಚಾರ ಮಾರ್ಗದರ್ಶಿಗೆ ನೆರವಾಗಲಿರುವ ಈ ವ್ಯವಸ್ಥೆಯನ್ನು ಹೊಂದಿರುವ ರಾಷ್ಟ್ರಗಳ ಸಾಲಿಗೆ ಭಾರತವು ಸೇರ್ಪಡೆಯಾದಂತಾಗಿದೆ. ಅಮೆರಿಕಾದ "**ಗ್ಲೋಬಲ್ ಪೊಸಿಶನಿಂಗ್ ಸಿಸ್ಟಮ್**", ಯುರೋಪಿಯನ್ ಒಕ್ಕೂಟದ "**ಗೆಲಿಲಿಯೊ**", ಚೀನಾದ "**ಬೈಡು**" ಮತ್ತು ರಷ್ಯಾದ "**ಗ್ಲೊನಾಸ್**" ಇಂತಹ ವ್ಯವಸ್ಥೆಗೆ ಉದಾಹರಣೆಯಾಗಿವೆ.

## ವರ್ಣತಂತು ಪರಿಶೀಲನೆ ವಿಧಾನದ ಮೊದಲ ಪ್ರನಾಳ ಶಿಶು ಜನನ

ದೋಷಪೂರಿತ ವರ್ಣತಂತುಗಳನ್ನು ಭ್ರೂಣದ ಹಂತದಲ್ಲೇ ಶೋಧಿಸಿ ದೋಷರಹಿತ ಮಗುವನ್ನು ಸೃಷ್ಟಿಸುವಲ್ಲಿ ಅಮೆರಿಕಾದ ವಿಜ್ಞಾನಿಗಳು ಯಶಸ್ವಿಯಾಗಿದ್ದಾರೆ. ಈ ಅನ್ವೇಷಣೆ ಕೃತಕ ಗರ್ಭದಾರಣೆ ಬಯಸುವವರಿಗೆ ಇದೊಂದು ವರದಾನ ಎನಿಸಲಿದೆ. ಜೆನಿಟಿಕ್ ಸ್ಕ್ರೀನಿಂಗ್ ತಂತ್ರಜ್ಞಾನ ಬಳಸಿ ಸೃಷ್ಟಿಸಲಾದ ವಿಶ್ವದ ಮೊದಲ ಪ್ರನಾಳ ಶಿಶು ಎನಿಸಿಕೊಂಡಿದೆ.

ಏನಿದು ಜೆನಿಟಿಕ್ ಸ್ಕ್ರೀನಿಂಗ್:

- ಸಾಮಾನ್ಯವಾಗಿ ಕೃತಕ ಗರ್ಭದಾರಣೆ ಮೂಲಕ ಸೃಷ್ಟಿಸಿದ ಅಂಡಾಣುವಿನಲ್ಲಿ ಹಲವಾರು ವರ್ಣತಂತು ದೋಷಗಳಿರುತ್ತವೆ. ಈ ದೋಷಪೂರಿತ ವರ್ಣತಂತುಗಳಿಂದ ಕೆಲವೊಮ್ಮೆ ಅಂಡಾಣು ಗರ್ಭಕೋಶದಲ್ಲಿ ಸರಿಯಾಗಿ ಬೆಳವಣಿಗೆಯಾಗುವುದಿಲ್ಲ. ಹೀಗಾಗಿ ಕೃತಕ ಗರ್ಭದಾರಣೆ ಎಲ್ಲಾ ಸಮಯದಲ್ಲೂ ಯಶಸ್ವಿಯಾಗುತ್ತಿರಲಿಲ್ಲ.
- ವಿಜ್ಞಾನಿಗಳು ಸಂಶೋಧಿಸಿರುವ ಡಿಎನ್ಎ ಸ್ಕ್ರೀನಿಂಗ್ ತಂತ್ರಜ್ಞಾನದಿಂದ ಭ್ರೂಣ ಅವಸ್ಥೆಯಲ್ಲಿ ವರ್ಣತಂತುಗಳಲ್ಲಿರುವ ದೋಷಗಳನ್ನು ಪತ್ತೆಹಚ್ಚುವುದರಿಂದ ಕೃತಕ ಗರ್ಭದಾರಣೆ ನಿರೀಕ್ಷೆಯಂತೇ ಯಶಸ್ವಿಯಾಗಲಿದೆ. ಅಲ್ಲದೇ ಖರ್ಚು ಕಮ್ಮಿ ಎಂಬುದು ವಿಜ್ಞಾನಿಗಳ ಅನಿಸಿಕೆ.

## ಪ್ಲೂಟೋದ ಎರಡು ಉಪಗ್ರಹಗಳಿಗೆ ಅಧಿಕೃತ ನಾಮಕರಣ

ಅಂತರರಾಷ್ಟ್ರೀಯ ಖಗೋಳ ಒಕ್ಕೂಟ (International Astronomical Union) ಪ್ಲೂಟೋದ P4 ಮತ್ತು P5 ಎಂಬ ಎರಡು ಉಪಗ್ರಹಳಿಗೆ ಅಧಿಕೃತವಾಗಿ ನಾಮಕರಣ ಮಾಡಿದೆ. ಗ್ರೀಕ್ ಹೆಸರರಾದ ಕೆರ್ಬೆರೊಸ್ (Kerberos) ಮತ್ತು ಸ್ಟಿಕ್ಸ್ (Styx) ನ್ನು ಕ್ರಮವಾಗಿ P4 ಮತ್ತು P5 ಉಪಗ್ರಹಗಳಿಗೆ ಅಧಿಕೃತವಾಗಿ ನಾಮಕರಣ ಮಾಡಲಾಗಿದೆ.

- ಹಬಲ್ಸ್ ಟೆಲಿಸ್ಕೋಪ್ ಪ್ಲೂಟೋದ ನಾಲ್ಕು ಮತ್ತು ಐದನೇ ಚಂದ್ರಗಳೆನಿಸಿರುವ P4 ನ್ನು 2011 ರಲ್ಲಿ ಹಾಗೂ P5 ನ್ನು 2012 ರಲ್ಲಿ ಕಂಡುಹಿಡಿದಿತ್ತು.
- P4 ನ್ನು ಈ ಮುಂಚೆ S/2011 (134340) ಎಂತಲೂ ಮತ್ತು P5 ನ್ನು S/2012 (134340) ಎಂದು ಕರೆಯಲಾಗುತ್ತಿತ್ತು.

- ಗ್ರೀಕ್ ಭಾಷೆಯಲ್ಲಿ ಕೆರ್ಬೆರೊಸ್ ಎಂದರೆ ಮೂರು ತಲೆಯನ್ನು ಹೊಂದಿರುವ ನಾಯಿ ಎಂದರ್ಥ. ಸ್ಟಿಕ್ಸ್ ಎಂದರೆ ಸತ್ತಂತವರನ್ನು ಜೀವಂತ ವಿಶ್ವದಿಂದ ಬೇರ್ಪಡಿಸಿರುವ ನದಿ.
- ಚರಣ್, ನಿಕ್ಸ್ ಮತ್ತು ಹೈಡ್ರಾ ಪ್ಲೂಟೋದ ಇತರೆ ಉಪಗ್ರಹಗಳು

**<u>ನೆಪ್ಚೂನ್ ಗ್ರಹದ 14 ನೇ ಉಪಗ್ರಹವನ್ನು ಪತ್ತೆ ಹಚ್ಚಿದ ವಿಜ್ಞಾನಿಗಳು</u>**

ಸೌರವ್ಯೂಹದ ಕಟ್ಟಕಡೆಯ ಗ್ರಹವೆನಿಸಿರುವ ನೆಪ್ಚೂನ್ ನ 14 ನೇ ಉಪಗ್ರಹವನ್ನು ಪತ್ತೆಹಚ್ಚಿರುವುದಾಗಿ ಅಮೆರಿಕಾದ ಬಾಹ್ಯಕಾಶ ವಿಜ್ಞಾನಿಗಳು ತಿಳಿಸಿದ್ದಾರೆ. ಹಬ್ಬಲ್ ಟೆಲಿಸ್ಕೋಪ್ ಅಧ್ಯಯನದ ಮೂಲಕ ಈ ಉಪಗ್ರಹವನ್ನು ಪತ್ತೆಹಚ್ಚಲಾಗಿದೆ. ಈ ಉಪಗ್ರಹದ ಅನ್ವೇಷಣೆಯಿಂದಾಗಿ ನೆಪ್ಚೂನ್ ನ ಉಪಗ್ರಹಗಳ ಸಂಖ್ಯೆ 14ಕ್ಕೆ ಏರಿದೆ.

- ನೆಪ್ಚೂನ್ ನಿಂದ ಅಲ್ಪ ದೂರದಲ್ಲಿರುವ ಈ ಸಣ್ಣ ಉಪಗ್ರಹಕ್ಕೆ S/2004 N1 ಎಂದು ಹೆಸರಿಡಲಾಗಿದೆ.
- ಬಿಳಿ ಚುಕ್ಕೆಯಂತೆ ಕಂಡುಬಂದಿರುವ ಈ ಉಪಗ್ರಹವನ್ನು ಹಬ್ಬಲ್ ಟೆಲಿಸ್ಕೋಪ್ 2004 ರಿಂದ 2009 ರಿಂದ ತೆಗೆದಿರುವ ಫೋಟೊಗಳಿಂದ ಪತ್ತೆಹಚ್ಚಲಾಗಿದೆ.
- S/2004 N1 ಉಪಗ್ರಹವು ಅತ್ಯಂತ ಸಣ್ಣದಾಗಿದ್ದು, ಅಷ್ಟೇನೂ ಪ್ರಕಾಶಮಾನವಾಗಿಲ್ಲವೆಂದು ವಿಜ್ಞಾನಿಗಳು ಹೇಳಿದ್ದಾರೆ.

**<u>ವಿಕರಾಬಾದ್ ಮತ್ತು ಬೀದರ್ ನಡುವೆ ರೈಲು ಅಪಘಾತ ತಡೆ ವ್ಯವಸ್ಥೆ</u>**

ಭಾರತೀಯ ರೈಲು ಇಲಾಖೆಯ ಬಹು ನಿರೀಕ್ಷಿತ ಯೋಜನೆಯೆಂದೇ ಹೇಳಲಾಗುತ್ತಿರುವ "ರೈಲು ಅಪಘಾತ ತಡೆ ವ್ಯವಸ್ಥೆ (Train Collision Avoidance System)" ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಅಳವಡಿಸಲು ರೈಲು ಇಲಾಖೆ ನಿರ್ಧರಿಸಿದೆ. ಇದೇ ಮೊದಲ ಬಾರಿಗೆ ಬೀದರ್ ಮತ್ತು ವಿಕರಾಬಾದ್ ನಡುವೆ ಈ ರೈಲನ್ನು ಪ್ರಾಯೋಗಿಕವಾಗಿ ಸಂಚಾರ ನಡೆಸಲು ರೈಲು ಇಲಾಖೆ ಸಜ್ಜಾಗಿದೆ.

- ವಿಕರಾಬಾದ್-ಬೀದರ್ ರೈಲು ಮಾರ್ಗ 200 ಕಿ.ಮೀ ಉದ್ದದ ಮಾರ್ಗವಾಗಿದ್ದು, ಪ್ರಾಯೋಗಿಕ ಸಂಚಾರದ ಬಳಿಕ ಎಲ್ಲಾ ಮಾರ್ಗಗಳಲ್ಲೂ ಅಳವಡಿಸಲು ರೈಲ್ವೆ ಇಲಾಖೆ ಚಿಂತಿಸಿದೆ.
- ಈ ವಿನೂತನ ವ್ಯವಸ್ಥೆಯನ್ನು ಅಳವಡಿಸಲು ಮೇಧಾ ಸರ್ವೋ ಮತ್ತು ಕೆರ್ನೆಕ್ಸ್ ಮೈಕ್ರೋಸಿಸ್ಟಮ್ ಕಂಪನಿಗಳನ್ನು ಆರಿಸಿಕೊಳ್ಳಲಾಗಿದೆ.
- ಈ ಅಪಘಾತ ರಹಿತ ರೈಲು ಸಂಚಾರಕ್ಕೆ ರೂ 18 ಕೋಟಿಯನ್ನು ಭರಿಸಲಾಗುವುದು.

**<u>"ಕಲ್ಪಕಂ"ನಲ್ಲಿ ಪರಮಾಣು ಇಂಧನ ಪುನರ್ ಸಂಸ್ಕರಣಾ ಘಟಕ</u>**

ದೇಶದ ಮೊದಲ ತ್ವರಿತ ಪರಮಾಣು ಇಂಧನ ಪುನರ್ ಸಂಸ್ಕರಣ ಘಟಕ (Fast Reactor Fuel Recycling Facility (FRFRF))ವನ್ನು ತಮಿಳುನಾಡಿನ ಕಲ್ಪಕಂನಲ್ಲಿ ಸ್ಥಾಪಿಸಲು ಕೇಂದ್ರ ಸರ್ಕಾರ ಹಸಿರು ನಿಶಾನೆ ತೋರಿದೆ. ಸುಮಾರು 9,600

ಕೋಟಿ ರೂ ವೆಚ್ಚದಲ್ಲಿ ಈ ಘಟಕ ಸ್ಥಾಪನೆಗೊಳ್ಳಲಿರುವುದಾಗಿ ಪರಮಾಣು ಇಂಧನ ಆಯೋಗದ ಅಧ್ಯಕ್ಷರಾದ ಆರ್.ಕೆ. ಸಿನ್ಹಾ ಅವರು ಹೇಳಿದ್ದಾರೆ.

- ಈ ಯೋಜನೆಗೆ ಸಂಬಂಧಿಸಿದ ಅಗತ್ಯ ಕಾಮಗಾರಿಗಳು ಈ ವರ್ಷದ ಅಂತ್ಯದಲ್ಲಿ ಆರಂಭಗೊಳ್ಳಲಿದ್ದು, ಇದಕ್ಕಾಗಿ ಟೆಂಡರ್ ಹಾಗೂ ಇತರೆ ಪೂರ್ವಭಾವಿ ಸಿದ್ಧತೆಗಳನ್ನು ನಡೆಸಿಕೊಳ್ಳಲಾಗಿದೆ.
- ಕಲ್ಪಕಂನಲ್ಲಿ ಈಗಾಗಲೇ ರೂ 5,677 ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ 500 ಮೆಗಾ ವ್ಯಾಟ್ ಸಾಮರ್ಥ್ಯದ ರಿಯಾಕ್ಟರ್‌ಗೆ ಬೇಕಾಗಿರುವ ಅಗತ್ಯಗಳನ್ನು ಇದು ಪೂರೈಸಲಿದೆ.
- ತ್ವರಿತ ಸಂವರ್ಧನಾ ರಿಯಾಕ್ಟರ್ (PFBR Prototype Fast Breeder Reactor)" ಗಳು ಪ್ಲೋಟೋನಿಯಂ ಆಧಾರಿತ ಇಂಧನವನ್ನು ಬಳಸಿಕೊಳ್ಳಲಿವೆ. ಪ್ಲೋಟೋನಿಯಂ ಆಧಾರಿತ ಇಂಧನಗಳು ಭಾರತಕ್ಕೆ ಪ್ರಮುಖ ಇಂಧನ ಮೂಲಗಳಾಗಿದ್ದು, ಇವುಗಳ ಪುನರ್ ಸಂಸ್ಕರಣೆ ಅತ್ಯಂತ ಅಗತ್ಯವೆನಿಸಿದೆ.

**ಇಸ್ರೋದ ಮತ್ತೊಂದು ಕನಸು ನನಸು: "ಇನ್ಸಾಟ್-3ಡಿ" ಉಪಗ್ರಹ ಯಶಸ್ವಿ ಉಡಾವಣೆ**

ಹವಾಮಾನ ಮತ್ತು ಪ್ರಕೃತಿ ವಿಕೋಪದ ಕುರಿತು ನಿಖರವಾಗಿ ಮುನ್ಸೂಚನೆ ನೀಡುವ ಭಾರತದ ಅತ್ಯಾಧುನಿಕ ಇನ್ಸಾಟ್-3ಡಿ ಉಪಗ್ರಹವನ್ನು ಫ್ರೆಂಚ್ ಗಯಾನಾದ ಕೌರೊ ರಾಕೆಟ್ ಉಡಾವಣಾ ಕೇಂದ್ರದಿಂದ ಶುಕ್ರವಾರ ಯಶಸ್ವಿಯಾಗಿ ಹಾರಿಬಿಡಲಾಯಿತು. ಹವಾಮಾನ ಮುನ್ಸೂಚನೆ ಪಡೆಯುವ ಉದ್ದೇಶಕ್ಕಾಗಿ ಭಾರತ ಕಳುಹಿಸಿದ ಎರಡನೇ ಉಪಗ್ರಹ ಇದಾಗಿದೆ. ದಕ್ಷಿಣ ಅಮೆರಿಕದ ಫ್ರೆಂಚ್ ಗಯಾನಾದ ಕೌರೊ ಬಾಹ್ಯಾಕಾಶ ಕೇಂದ್ರದಿಂದ ಏರಿಯನ್-5 ರಾಕೆಟ್ ಸಹಾಯದಿಂದ ಉಪಗ್ರಹವನ್ನು ಉಡಾವಣೆ ಮಾಡಲಾಯಿತು. ಉಪಗ್ರಹವು ನಿಗದಿತ ಕಕ್ಷೆಗೆ ಸೇರಲು 32 ನಿಮಿಷ 48 ಸೆಕೆಂಡ್ ಕಾಲಾವಕಾಶ ತೆಗೆದುಕೊಂಡಿತು.

**ಉಪಗ್ರಹದ ವಿಶೇಷತೆಗಳು:**

- ಸತತ 56ನೇ ಬಾರಿಗೆ ಯಶಸ್ವಿಯಾಗಿ ಈ ಕೇಂದ್ರದಿಂದ ರಾಕೆಟ್ ಉಡಾವಣೆ ಮಾಡಲಾಗಿದೆ.
- ಏರಿಯನ್-5ರಲ್ಲಿ ಇನ್ಸಾಟ್-3ಡಿ ಜತೆ ಯೂರೋಪ್‌ನ ಅತಿದೊಡ್ಡ ದೂರಸಂಪರ್ಕ ಉಪಗ್ರಹ `ಅಲ್ಫಾಸ್ಯಾಟ್' ಕೂಡ ಕಳುಹಿಸಲಾಗಿದೆ.
- 2,060 ಕೆ.ಜಿ ತೂಕದ ಭಾರತದ ಇನ್ಸಾಟ್-3ಡಿ ತನ್ನ ಜೊತೆ ಚಿತ್ರ, ಶಬ್ದ ಸೆರೆಹಿಡಿಯುವ, ಅಂಕಿ ಅಂಶ ರವಾನಿಸುವ ಮತ್ತು ಶೋಧ ಹಾಗೂ ಇತರ ಉಪಗ್ರಹಗಳಿಗೆ ನೆರವು ಒದಗಿಸುವ ಸಾಧನವನ್ನು ಹೊತ್ತೊಯ್ದಿದೆ.

ಉಪಗ್ರಹವು ಕಕ್ಷೆಗೆ ಸೇರುತ್ತಿದ್ದಂತೆಯೇ ಅದರ ಮೇಲೆ ಹಾಸನದ ಮಾಸ್ಟರ್ ಕಂಟ್ರೋಲ್ ಫೆಸಿಲಿಟಿ (ಎಂಎಫ್‌ಆರ್) ನಿಯಂತ್ರಣ ಪಡೆದುಕೊಂಡಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಬೆಂಗಳೂರಿನ ಪ್ರಧಾನ ಕಚೇರಿ ತಿಳಿಸಿದೆ.. ಹವಾಮಾನ ಮುನ್ಸೂಚನೆ ಮತ್ತು ಪ್ರಕೃತಿ ವಿಕೋಪದ ಕುರಿತು ಮುಂದಿನ ಏಳು ವರ್ಷಗಳವರೆಗೆ ಇನ್ಸಾಟ್-3ಡಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವುದನ್ನು ಎದುರು ನೋಡುತ್ತಿದ್ದೇವೆ' ಎಂದು ಇಸ್ರೊ ಅಧ್ಯಕ್ಷ ಕೆ. ರಾಧಾಕೃಷ್ಣನ್ ತಿಳಿಸಿದ್ದಾರೆ. ಇನ್ಸಾಟ್ 3ಡಿಯನ್ನು ಉಡಾವಣೆ ಮಾಡಿರುವ ಐರೋಪ್ಯ ಬಾಹ್ಯಾಕಾಶ ಸಂಸ್ಥೆ ತಿಂಗಳೊಳಗೆ ಭಾರತದ ಮತ್ತೊಂದು ಉಪಗ್ರಹ

`ಜಿಸ್ಯಾಟ್-7' ಅನ್ನು ಉಡಾವಣೆ ಮಾಡಲಿದೆ. ಈಗಿರುವ ವೇಳಾಪಟ್ಟಿಯಂತೆ `ಜಿಸ್ಯಾಟ್-7' ಆಗಸ್ಟ್ 30ರಂದು ಉಡಾವಣೆಗೊಳ್ಳಲಿದೆ

**ದೇಶದ ಮೊದಲ ಚಾಲಕರಹಿತ ಮೆಟ್ರೋ ರೈಲು ಗುಜರಾತ್ ನಲ್ಲಿ ಕಾರ್ಯಾರಂಭ**

ಗುಜರಾತ್‌ನ ಅಹಮದಾಬಾದ್‌ನಲ್ಲಿ ಸಂಚರಿಸುವ ಮೆಟ್ರೋ ರೈಲು ಚಾಲಕ ರಹಿತವಾಗಲಿದ್ದು, ದೇಶದ ಮೊದಲ ಚಾಲಕರಹಿತ ರೈಲು ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಲಿದೆ. ಅಲ್ಲದೆ ಗಾಂಧಿನಗರ ಮತ್ತು ಅಹಮದಾಬಾದ್ ನಡುವಣ ಮೆಟ್ರೋ ಎಕ್ಸ್‌ಪ್ರೆಸ್ ಬ್ರಾಡ್ ಗೇಜ್ ಮಾರ್ಗ ನಿರ್ಮಿಸಲು ತೀರ್ಮಾನಿಸಲಾಗಿದೆ ಎಂದು ಯೋಜನೆಯ ಉನ್ನತ ಅಧಿಕಾರಿಗಳು ತಿಳಿಸಿದ್ದಾರೆ. ಬ್ರಾಡ್‌ಗೇಜ್ ನಿರ್ಮಾಣ ಕಾರ್ಯದ ಮೊದಲ ಹಂತ 2013ರ ಅಕ್ಟೋಬರ್‌ನಿಂದ ಆರಂಭವಾಗಲಿದ್ದು, 2017ರಲ್ಲಿ ಮುಕ್ತಾಯವಾಗಲಿದೆ. ಎರಡನೇ ಹಂತ ಸೇರಿದಂತೆ ಸಂಪೂರ್ಣ ಯೋಜನೆ 2021ರಲ್ಲಿ ಕಾರ್ಯಾರಂಭ ಮಾಡಲಿದೆ. ಬ್ರಾಡ್‌ಗೇಜ್ ನಿರ್ಮಾಣದಿಂದ 1000 ಕೋಟಿ ಬಂಡವಾಳ ಹೂಡಿಕೆ ಉಳಿತಾಯವಾಗಲಿದೆ ಮತ್ತು ಕಾರ್ಯಾಚರಣೆ ವೆಚ್ಚದಲ್ಲಿ ವಾರ್ಷಿಕವಾಗಿ 20 ಕೋಟಿ ಉಳಿತಾಯವಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಚಾಲಕರಹಿತ ಮೆಟ್ರೋ ರೈಲಿನ ಕಾರ್ಯನಿರ್ವಹಣೆ ವೆಚ್ಚ ಕಡಿಮೆ ಪ್ರಮಾಣದ್ದಾಗಿರಲಿದೆ ಮತ್ತು ಹೆಚ್ಚಿನ ಸುರಕ್ಷತೆ ಹೊಂದಿರಲಿದೆ.

**ಚಂದ್ರನ ಮೇಲೆ ಪ್ರಥಮ ರಾಷ್ಟ್ರೀಯ ಸ್ಮಾರಕ ನಿರ್ಮಿಸಲಿರುವ ಅಮೆರಿಕಾ**

ಭೂಮಿಯ ಮೇಲೆ ದೊಡ್ಡಣ್ಣ ಎಂಬ ಹೆಗ್ಗಳಿಕೆ ಹೊಂದಿರುವ ಅಮೆರಿಕ, ಇದೀಗ ಭೂಮಿಯನ್ನೂ ಮೀರಿ ಬೇರೊಂದು ಗ್ರಹದಲ್ಲೂ ತನ್ನ ಅಧಿಪತ್ಯ ಸ್ಥಾಪನೆಗೆ ಹೊರಟಿದೆ. ಚಂದ್ರನ ಮೇಲೆ ಮೊದಲ ಮಾನವನನ್ನು ಇಳಿಸಿದ ಖ್ಯಾತಿ ಹೊಂದಿರುವ ಅಮೆರಿಕ ಇದೀಗ ಅಲ್ಲೂ ತನ್ನ ಅಧಿಪತ್ಯ ಸ್ಥಾಪನೆಗೆ ನಿರ್ಧರಿಸಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಮುಂದಿನ ಕೆಲವೇ ವರ್ಷಗಳಲ್ಲಿ ಚಂದ್ರನ ಕುರಿತಾದ ಮತ್ತು ಅಲ್ಲಿಯ ಕೆಲ ಜಾಗಗಳ ಕುರಿತು ಕಾನೂನು ರೂಪಿಸಿದ ಮೊದಲ ರಾಷ್ಟ್ರ ಎಂಬ ಹಿರಿಮೆ ಅಮೆರಿಕಕ್ಕೆ ಸಲ್ಲಲಿದೆ. ಜೊತೆಗೆ ಚಂದ್ರನ ಮೇಲೆ ಇಳಿಯುವ ಮೊದಲು ಅಮೆರಿಕದ ಬಳಿ ಕೆಲವೊಂದು ಅನುಮತಿ ಪಡೆಯುವುದು ಕಡ್ಡಾಯವಾಗಲಿದೆ!

**ವಿವರಣೆ:**

1969ರಲ್ಲಿ ಅಮೆರಿಕ ಮೊದಲ ಬಾರಿ ಚಂದ್ರನ ಮೇಲೆ ಮಾನವನನ್ನು ಇಳಿಸಿತ್ತು. ಅಮೆರಿಕದ ಬಾಹ್ಯಾಕಾಶ ಯಾನಿ ನೀಲ್ ಆರ್ಮ್ ಸ್ಟ್ರಾಂಗ್ ಚಂದ್ರನ ಮೇಲೆ ಕಾಲಿಟ್ಟು, ಅಲ್ಲಿ ಓಡಾಡುವ ಮೂಲಕ ಹೊಸ ಶಕೆ ಆರಂಭಿಸಿದ್ದರು. ಹೀಗೆ ಚಂದ್ರನ ಮೇಲೆ ಕಾಲಿಟ್ಟ ಮೊದಲ ರಾಷ್ಟ್ರ ಎಂಬ ಹಿರಿಮೆಯನ್ನು ಹೊಂದಿರುವ ಅಮೆರಿಕ, ಇದೀಗ ಚಂದ್ರನ ಮೇಲೆ ತನ್ನ ಯಾನಿಗಳು ಓಡಾಡಿದ ಜಾಗ, ಅಲ್ಲಿ ತನ್ನ ಯಂತ್ರೋಪಕರಣಗಳು ಸುತ್ತಾಡಿದ ಜಾಗವನ್ನು ರಾಷ್ಟ್ರೀಯ ಸ್ಮಾರಕದ ಹೆಸರಲ್ಲಿ ಸಂರಕ್ಷಿಸಲು ಹೊರಟಿದೆ. ಈ ಕುರಿತು 'ಅಪೋಲೋ ಲೂನಾರ್ ಲ್ಯಾಂಡಿಂಗ್ ಲೆಗಸಿ ಆ್ಯಕ್ಟ್' ಎಂಬ ಕರಡು ಮಸೂದೆ ರೂಪಿಸಿರುವ ಅಮೆರಿಕದ ಸಂಸದರು, ಅದನ್ನು ಅನುಮೋದನೆಗಾಗಿ ಸಂಸತ್ತಿಗೆ ಕಳುಹಿಸಿಕೊಟ್ಟಿದ್ದಾರೆ. ಈ ಮಸೂದೆ ಅಂಗೀಕಾರವಾದರೆ ಸೂಚಿತ ಪ್ರದೇಶಗಳನ್ನು ರಾಷ್ಟ್ರೀಯ ಸ್ಮಾರಕ ಎಂದು ಘೋಷಿಸಲಾಗುವುದು. ಜೊತೆಗೆ ಈ ಸ್ಥಳ ಐತಿಹಾಸಿಕ ಮಹತ್ವದ ಸ್ಥಾನಮಾನ ಪಡೆದುಕೊಳ್ಳುತ್ತದೆ. ಆ ಬಳಿಕ ಯಾವುದೇ ದೇಶದ ಯಾನಿಗಳು ಚಂದ್ರನ ಮೇಲೆ ಕಾಲಿಟ್ಟರೂ, ಅಮೆರಿಕ ಸೂಚಿಸಿರುವ ಪ್ರದೇಶವನ್ನು ಹಿಂದಿನಂತೆಯೇ

ಕಾಪಾಡಿಕೊಳ್ಳುವುದು ಅನಿವಾರ್ಯವಾಗಲಿದೆ. ಈ ಪ್ರದೇಶಗಳಿಗೆ ಯಾವುದೇ ಹಾನಿ ಮಾಡುವಂತಿಲ್ಲ. ಈ ಸೂಚಿತ ಪ್ರದೇಶದ ವ್ಯಾಪ್ತಿಗೆ 1969ರಿಂದ 1972ರ ಅವಧಿಯಲ್ಲಿ ಅಮೆರಿಕ ಹಾರಿಬಿಟ್ಟ ಉಪಗ್ರಹಗಳು ಮತ್ತು ಯಾನಿಗಳು ಚಂದ್ರನ ಮೇಲೆ ಓಡಾಡಿದ ಸ್ಥಳಗಳು ಸೇರುತ್ತವೆ.

**ಕೇವಲ 15 ನಿಮಿಷಗಳಲ್ಲಿ ಭೂಮಿಯಿಂದ ಬಾಹ್ಯಾಕಾಶಕ್ಕೆ ಪಯಣ:**

ಮುಂದಿನ ದಿನಗಳಲ್ಲಿ ಬಾಹ್ಯಾಕಾಶಕ್ಕೆ ಜಿಗಿಯಲು ಕೇವಲ ಹದಿನೈದು ನಿಮಿಷಗಳ ಕಾಲಾವಧಿ ಸಾಕು….! ಭೂಮಂಡಲದಿಂದ ನಭೋಮಂಡಲ ಯಾತ್ರೆ ಕೇವಲ 15 ನಿಮಿಷಗಳಲ್ಲಿ ಸಾಧ್ಯವಾಗುವ ದಿನಗಳು ತೀರ ಹತ್ತಿರದಲ್ಲೇ ಇವೆ. ಇದು ಸಾಧ್ಯವಾಗಿದ್ದೇ ಆದರೆ ನಭೋಮಂಡಲಕ್ಕೆ ವಿಶೇಷವಾದ ಬಾಹ್ಯಾಕಾಶ ವಿಮಾನದಲ್ಲಿ ಯಾತ್ರೆ ಹೋಗುವವರ ಸಂಖ್ಯೆ ವಿಶ್ವಾದ್ಯಂತ ನಿರೀಕ್ಷೆಗೂ ಮೀರ ಅಧಿಕವಾಗಲಿದೆ.

**ಬ್ರಿಟನ್ ಸರ್ಕಾರದ ಯೋಜನೆ:**

ಇಂತಹ ಕ್ರಾಂತಿಕಾರಕ ಬಾಹ್ಯಾಕಾಶ ವಿಮಾನ ಗಂಟೆಗೆ 19,000 ಮೈಲುಗಳ ವೇಗದಲ್ಲಿ (ಗಂಟೆಗೆ 30,577.5 ಕಿ.ಮೀ. ವೇಗದಲ್ಲಿ) ಹಾರುವ ಸಾಮರ್ಥ್ಯ ಹೊಂದಿದೆ. ಎಂದರೆ ಇದು ಶಬ್ದದ ವೇಗಕ್ಕಿಂತ ಐದು ಪಟ್ಟು ಹೆಚ್ಚು ವೇಗದಲ್ಲಿ ಹೋಗಬಲ್ಲದು. ಇಂತಹ ಒಂದು ಕ್ರಾಂತಿಕಾರಕ ಬಾಹ್ಯಾಕಾಶ ವಿಮಾನವನ್ನು ವಿನ್ಯಾಸಗೊಳಿಸಿ ರೂಪಿಸುವ ಯೋಜನೆಗೆ ಬ್ರಿಟನ್ ಸರಕಾರ 600 ಕೋಟಿ ಪೌಂಡ್ ನೀಡಿದೆ. ಇದನ್ನು ಬಳಸಿ ಈ ವಿನೂತನ ವಿಮಾನದ ಹೊಚ್ಚ ಹೊಸ ಬಗೆಯ ರಾಕೆಟ್ ಎಂಜಿನ್ ಅನ್ನು ತಯಾರಿಸಲಾಗುತ್ತಿದೆ. ಈ ರಾಕೆಟ್ ಎಂಜಿನ್ ಮೂಲಕ ಬಾಹ್ಯಾಕಾಶ ವಿಮಾನವು ಭೂಮಂಡಲದಿಂದ ಬಾಹ್ಯಾಕಾಶಕ್ಕೆ ನುಗ್ಗಿ ಅಲ್ಲಿನ ಕೆಳಮಟ್ಟದ ಕಕ್ಷೆಯಲ್ಲಿ ಸಂಚರಿಸುವುದು ಸಾಧ್ಯವಾಗುತ್ತದೆ.

**ಸ್ಕೈಲಾನ್ ವಿಮಾನ, ಸೇಬರ್ ಇಂಜಿನ್:**

ಇದು ಭೂಸ್ಥಿರ ಕಕ್ಷೆಯನ್ನು ಗಂಟೆಗೆ 3500 ಮೈಲು ವೇಗದಲ್ಲಿ ಸಂಚರಿಸುವ "ಸ್ಕೈಲಾನ್" ಹೆಸರಿನ ಬಾಹ್ಯಾಕಾಶ ವಿಮಾನವು ಬಳಸಿಕೊಳ್ಳಲಿದೆ. "ಸೇಬರ್" ಎಂದು ಕರೆಯಲ್ಪಡುವ ಈ ಬಾಹ್ಯಾಕಾಶ ವಿಮಾನದ ಇಂಜಿನ್ ಅನ್ನು ರಿಯಾಕ್ಷನ್ ಇಂಜಿನ್ಸ್ ಎಂಬ ಬ್ರಿಟಿಷ್ ಸಂಸ್ಥೆಯು ತಯಾರಿಸಿದೆ. ಇದು "ಸಿನರ್ಜಿಟಿಕ್ ಏರ್ ಬ್ರೀದಿಂಗ್ ರಾಕೆಟ್ ಇಂಜಿನ್‌ಗೆ" ಪರ್ಯಾಯ ನಾಮವಾಗಿದೆ. ರಾಕೆಟ್ ಆಗಿ ಪರಿವರ್ತನೆಗೊಳ್ಳಬಲ್ಲ ಸ್ಕೈಲಾನ್ ವಿಮಾನದ ವಿನೂತನ ಹಾಗೂ ಕ್ರಾಂತಿಕಾರಕ ಸಾಮರ್ಥ್ಯದಿಂದಾಗಿ ಅತ್ಯಂತ ಕಡಿಮೆ ಅವಧಿ ತಗಲುವ ಹಾಗೂ ವರ್ಣಿಸಲು ಅಸಾಧ್ಯವಾದ ರೋಮಾಂಚಕ ಬಾಹ್ಯಾಕಾಶ ಯಾತ್ರೆಯಲ್ಲಿ ಹೊಸ ಅಧ್ಯಾಯವನ್ನೇ ಆರಂಭಿಸಲಿದೆ ಎಂದು ಆಕ್ಸ್‌ಫರ್ಡ್ ಶಯರ್‌ನ ಕ್ಯುಲ್ಹಾಮ್ ಎಂಬಲ್ಲಿರುವ ರಿಯಾಕ್ಷನ್ ಇಂಜಿನ್ಸ್ ಕಂಪೆನಿಯು ಹೇಳಿದೆ.

**ಅತೀ ತ್ವರಿತ ಗತಿಯಲ್ಲಿ ಕ್ಯಾನ್ಸರ್ ರೋಗ ಪತ್ತೇಹಚ್ಚಲು ಹೊಸ ಉಪಕರಣ ಸಂಶೋಧಿಸಿದ ವಿಜ್ಞಾನಿಗಳು**

ಕ್ಯಾನ್ಸರ್‌ನಲ್ಲಿ ಅತಿ ದೊಡ್ಡ ಹಾಗೂ ದುಬಾರಿ ಕ್ಯಾನ್ಸರ್ ಎಂದೇ ಕುಖ್ಯಾತಿಯಾಗಿರುವ ಮೂತ್ರಕೋಶದ ಕ್ಯಾನ್ಸರನ್ನು ಕೇವಲ 30 ನಿಮಿಷದಲ್ಲಿ ಪತ್ತೆ ಹಚ್ಚುವಂತಹ ಸಾಧನವನ್ನು ಬ್ರಿಟನ್ ವಿಜ್ಞಾನಿಗಳು ಈಗ ಅಭಿವೃದ್ಧಿಪಡಿಸಿದ್ದಾರೆ. ಲಿವರ್ ಪೂಲ್ ವಿಶ್ವವಿದ್ಯಾನಿಲಯ ಹಾಗೂ ಪಶ್ಚಿಮ ಇಂಗ್ಲೆಂಡ್‌ನ ವಿಶ್ವವಿದ್ಯಾನಿಲಯದ ವಿಜ್ಞಾನಿಗಳ ತಂಡ `ಓಡೋರೀಡರ್' ಎಂಬ ಉಪಕರಣವನ್ನು ರೂಪಿಸಿದ್ದು, ಇದು ಮೂತ್ರಕೋಶದ ಕ್ಯಾನ್ಸರನ್ನು ಅತ್ಯಂತ ಕರಾರುವಾಕ್ಕಾಗಿ ಕೇವಲ 30 ನಿಮಿಷದಲ್ಲಿ ಪತ್ತೆ ಹಚ್ಚುತ್ತದೆ.

**ರೋಗ ಪತ್ತೆಹಚ್ಚುವುದು ಹೇಗೆ?**

ಮುಖ್ಯವಾಗಿ ಈ ಸಾಧನದಲ್ಲಿ ಸಂವೇದಕವೊಂದನ್ನು ಅಳವಡಿಸಲಾಗಿದ್ದು, ಇದು ಮೂತ್ರದಿಂದ ಹೊರ ಬರುವ ಅನಿಲವನ್ನು ವಿಶ್ಲೇಷಿಸಿ ಮೂತ್ರಕೋಶದಲ್ಲಿ ಕ್ಯಾನ್ಸರ್ ಕೋಶಗಳಿವೆಯೋ ಇಲ್ಲವೋ ಎಂಬುದನ್ನು ನಿರ್ಣಯಿಸುತ್ತದೆ ಎಂದು ಇದನ್ನು ರೂಪಿಸಿರುವ ವಿಜ್ಞಾನಿಗಳು ಹೇಳಿದ್ದಾರೆ. ಮೂತ್ರಕೋಶದಲ್ಲಿ ಕ್ಯಾನ್ಸರ್ ಕಣಗಳಿದ್ದಲ್ಲಿ ಮೂತ್ರದಲ್ಲಿ ಒಂದು ವಿಧದ ರಾಸಾಯನಿಕಗಳ ಅನಿಲ ಸೇರಿಕೊಂಡಿರುತ್ತದೆ. ಈ ಅನಿಲವನ್ನು ಪತ್ತೆಹಚ್ಚಲು ಈ ಹೊಸ ಉಪಕರಣ ನೆರವಾಗುತ್ತದೆ ಎಂಬುದು ವಿಜ್ಞಾನಿಗಳ ಅಭಿಮತ. ಒಂದು ಸಣ್ಣ ಬಾಟಲಿಯಲ್ಲಿ ಮೂತ್ರವನ್ನು ತುಂಬಿಸಿ ಈ ಉಪಕರಣದಲ್ಲಿ ಇಟ್ಟರಾಯಿತು. ಕೇವಲ ಅರ್ಧಗಂಟೆಯಲ್ಲಿ ಪರೀಕ್ಷೆಯ ವರದಿಯನ್ನು ಕಂಪ್ಯೂಟರ್ ಪರದೆ ಮೇಲೆ ಮೂಡಿಸುತ್ತದೆ. ಈ ಮೂಲಕ ಮೂತ್ರದ ಮಾದರಿ ನೀಡಿದ ವ್ಯಕ್ತಿಯಲ್ಲಿ ಮೂತ್ರಕೋಶದ ಕ್ಯಾನ್ಸರ್ ಇದೆಯೇ ಇಲ್ಲವೇ ಎಂಬುದನ್ನು ಸ್ಪಷ್ಟವಾಗಿ ತಿಳಿಸಿಕೊಡುತ್ತದೆ.

**"ಶ್ವಾನ"ದಿಂದ ಸಂಶೋಧನೆಗೆ ಸ್ಫೂರ್ತಿ:**

ಸೋಜಿಗದ ಸಂಗತಿ ಎಂದರೆ ಈ ಸಂಶೋಧನೆಗೆ ಸ್ಪೂರ್ತಿಯಾಗಿದ್ದು ಶ್ವಾನ! ಹೌದು, ಅಸಾಧ್ಯ ವಾಸನಾಗ್ರಹಣ ಶಕ್ತಿಯನ್ನು ಪಡೆದುಕೊಂಡಿರುವ ನಾಯಿಗಳು ಯಾವ ರೀತಿ ವಾಸನೆಯನ್ನು ರಾಸಾಯನಿಕಗಳ ಅನಿಲಗಳ ಮೂಲಕ ಗ್ರಹಿಸುತ್ತವೆಯೋ ಹಾಗೆಯೇ ಈ ಸಾಧನವೂ ಕೂಡ ಗ್ರಹಿಸುತ್ತದೆ ಎನ್ನುತ್ತಾರೆ ಸಂಶೋಧನಕರು. ಸದ್ಯ ಪ್ರಾಥಮಿಕ ಹಂತದಲ್ಲಿ 98 ಮೂತ್ರಗಳ ಮಾದರಿಯನ್ನು ಪರೀಕ್ಷಿಸಲಾಗಿದ್ದು, ಅದರಲ್ಲಿ 24 ಮಂದಿಯ ಮೂತ್ರಕೋಶದಲ್ಲಿ ಕ್ಯಾನ್ಸರ್ ರೋಗಾಣು ಇರುವುದು ಈ ಸಾಧನದಿಂದ ಪತ್ತೆಯಾಯಿತು. ನಂತರ ರೋಗಿಗಳನ್ನು ವಿವರವಾಗಿ ಪರೀಕ್ಷಿಸಿದಾಗ ಅವರಿಗೆ ಕ್ಯಾನ್ಸರ್ ಇರುವುದು ದೃಢಪಟ್ಟಿದೆ. ಹೀಗಾಗಿ ಇದು ಶೇ 100ರಷ್ಟು ಕರಾರುವಕ್ಕಾಗಿ ಫಲಿತಾಂಶ ನೀಡಬಲ್ಲದ್ದಾಗಿದೆ ಎಂದು ಸಂಶೋಧನಾ ತಂಡದ ಪ್ರಮುಖರು ಹೇಳಿದ್ದಾರೆ.

**ರಾಷ್ಟ್ರೀಯ ಸೈಬರ್ ಭದ್ರತಾ ನೀತಿ ಪ್ರಕಟಿಸಿದ ಕೇಂದ್ರ ಸರ್ಕಾರ**

ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಕಪಿಲ್ ಸಿಬಲ್ `ರಾಷ್ಟ್ರೀಯ ಸೈಬರ್ ಭದ್ರತಾ ನೀತಿ'ಯನ್ನು ಪ್ರಕಟಿಸಿದ್ದಾರೆ. ಈ ನೀತಿಯ ಕರಡು 2011ರ ಮೇ ತಿಂಗಳಲ್ಲೇ ರೂಪುಗೊಂಡಿತ್ತು. ಸೈಬರ್ ಸುರಕ್ಷತೆಯನ್ನು ಉಲ್ಲಂಘಿಸಿದ 13 ಸಾವಿರಕ್ಕೂ ಹೆಚ್ಚಿನ ಪ್ರಕರಣಗಳು ಭಾರತದಲ್ಲಿ 2011ರಲ್ಲೇ ನಡೆದಿದ್ದವು. 2012ರಲ್ಲಿ ಭಾರತದ ಉನ್ನತ ಇಲಾಖೆಗಳ 12 ಸಾವಿರ ಮಂದಿಯ ಇ-ಮೇಲ್ ಖಾತೆಗಳಿಗೆ ಕನ್ನ ಹಾಕಲಾಗಿತ್ತು.. ಮೂಲಗಳ ಪ್ರಕಾರ 420 ಲಕ್ಷ ಸೈಬರ್ ಅಪರಾಧ ಪ್ರಕರಣಗಳು ಭಾರತದಲ್ಲಿ

ನಡೆಯುತ್ತಿವೆ. ಪ್ರತಿ ನಿಮಿಷಕ್ಕೆ 85 ಮಂದಿ ಭಾರತದಲ್ಲಿ ಹಲವು ವಿಧದ ಸೈಬರ್ ವಂಚನೆಗಳಿಗೆ ಒಳಗಾಗುತ್ತಿದ್ದಾರೆ ಎಂಬ ಬೆಚ್ಚಿ ಬೀಳಿಸುವ ಸಂಗತಿಯನ್ನು ವರದಿ ಪ್ರಸ್ತಾಪಿಸಿದೆ.

**ಸರ್ಕಾರ ಬಿಡುಗಡೆ ಮಾಡಿರುವ `ರಾಷ್ಟ್ರೀಯ ಸೈಬರ್ ಭದ್ರತಾ ನೀತಿ'ಯತ್ತ ಒಂದು ಪಕ್ಷಿನೋಟ:**

- ಸೈಬರ್ ಭದ್ರತಾ ವಲಯದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗೆ ಆದ್ಯತೆ ನೀಡುವುದು.
- ಮುಂದಿನ 5 ವರ್ಷಗಳಲ್ಲಿ ಸೈಬರ್ ಭದ್ರತಾ ನೈಪುಣ್ಯತೆಯುಳ್ಳ 5 ಲಕ್ಷ ಮಂದಿ ವೃತ್ತಿಪರರನ್ನು ರೂಪಿಸುವುದು. (ಸದ್ಯ ಇಂತಹ ಕೌಶಲಯುಕ್ತ ತಂತ್ರಜ್ಞರ ಸಂಖ್ಯೆ 22 ಸಾವಿರ).
- ದಿನದ 24 ತಾಸೂ ಕಾರ್ಯನಿರ್ವಹಿಸುವ ರಾಷ್ಟ್ರೀಯ ಮಟ್ಟದ ಕಂಪ್ಯೂಟರ್ ತುರ್ತು ಸ್ಪಂದನಾ ತಂಡವನ್ನು (ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್) ಕಟ್ಟುವುದು.
- ಈ ತಂಡ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಒಂದು ನೋಡಲ್ ಏಜೆನ್ಸಿ ಸ್ಥಾಪಿಸುವುದು. ಸಂದಿಗ್ಧ ಸಮಯದ ನಿರ್ವಹಣೆಯ ಜವಾಬ್ದಾರಿಯನ್ನು ಇದಕ್ಕೆ ವಹಿಸುವುದು.
- ಸೈಬರ್ ಭದ್ರತೆ ಕುರಿತಂತೆ ಮುನ್ನಚ್ಚರಿಕೆ ನೀಡುವುದಕ್ಕೆ ಹಾಗೂ ಭದ್ರತಾ ಬೆದರಿಕೆಗಳಿಗೆ ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸುವುದಕ್ಕೆ, ಅಪಾಯಕ್ಕೆ ತುತ್ತಾಗುವಂತಹ ಸಂದಿಗ್ಧ ಸಮಯದ ನಿರ್ವಹಣೆ ಮಾಡುವುದಕ್ಕಾಗಿಯೇ ಒಂದು ಯಾಂತ್ರಿಕ ವ್ಯವಸ್ಥೆಯ ರಚನೆ.
- ಸೈಬರ್ ಭದ್ರತೆ ಕುರಿತಂತೆ ತಂತ್ರಜ್ಞಾನದ ಸುಧಾರಣೆ.
- ಸೈಬರ್ ಭದ್ರತೆಗೆ ಸಂಬಂಧಿಸಿದಂತೆ ತರಬೇತಿಗಾಗಿ ಮೂಲಸೌಕರ್ಯಗಳನ್ನು ಸರ್ಕಾರ-ಖಾಸಗಿ ಸಹಭಾಗಿತ್ವದಲ್ಲಿ ದೇಶಾದ್ಯಂತ ಒದಗಿಸುವುದು.
- ಸೈಬರ್ ಭದ್ರತೆ ಕುರಿತಂತೆ ಒಂದು ಸೂಕ್ತ ನಿಯಂತ್ರಣಾತ್ಮಕ ಚೌಕಟ್ಟನ್ನು ರೂಪಿಸುವುದು.

ಭಾರತದಲ್ಲಿ ಮುಖ್ಯವಾಗಿ ಮಕ್ಕಳಲ್ಲಿ ಇದಕ್ಕೆ ಸಂಬಂಧಿಸಿದಂತೆ ಸೂಕ್ತ ಮಾಹಿತಿಯ ಕೊರತೆಯಿದೆ. ಇದನ್ನು ಮನಗಂಡೇ ಪ್ರಸಕ್ತ ನೀತಿಯು ರಾಷ್ಟ್ರೀಯ ಮಟ್ಟದಲ್ಲಿ ಅಂತರ್ಜಾಲವನ್ನು ಸುರಕ್ಷಿತವಾಗಿ ಬಳಸುವುದಕ್ಕೆ ಸಂಬಂಧಪಟ್ಟ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವುದು, ಶಾಲಾ-ಕಾಲೇಜುಗಳಲ್ಲೇ ಇದಕ್ಕೆ ಸೂಕ್ತ ತರಬೇತಿ ನೀಡುವ ಗುರಿಯನ್ನು ಹೊಂದಿದೆ.

**ದೇಶದ ಮೊಟ್ಟಮೊದಲ 'ರಾಜೀವ್‌ಗಾಂಧಿ ಸಾರ್ವಜನಿಕ ಆರೋಗ್ಯ ಸಂಸ್ಥೆ ಮತ್ತು ರೋಗಗಳ ನಿಯಂತ್ರಣ ಕೇಂದ್ರ' ಆರಂಭ**

ಜನರಲ್ಲಿ ರೋಗ ಹರಡುವಿಕೆ ತಡೆಗಟ್ಟುವ ಸಂಬಂಧ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ದೇಶದಲ್ಲೇ ಮೊಟ್ಟಮೊದಲ 'ರಾಜೀವ್‌ಗಾಂಧಿ ಸಾರ್ವಜನಿಕ ಆರೋಗ್ಯ ಸಂಸ್ಥೆ ಮತ್ತು ರೋಗಗಳ ನಿಯಂತ್ರಣ ಕೇಂದ್ರ'ವನ್ನು ಆರಂಭಿಸಿದೆ. ಸಾಮಾನ್ಯವಾಗಿ ಶೇ.42ರಷ್ಟು ಸಾಂಕ್ರಾಮಿಕ ಹಾಗೂ ಶೇ.48ರಷ್ಟು ಒಬ್ಬರಿಂದ ಒಬ್ಬರಿಗೆ ಹರಡದ ರೋಗಗಳು ತಾಂಡವವಾಡುತ್ತಿವೆ. ಮುಂದಿನ ದಿನಗಳಲ್ಲಿ ಇಂತಹ ರೋಗಗಳನ್ನು ನಿಯಂತ್ರಿಸುವುದು ಹಾಗೂ ಈ ಬಗ್ಗೆ ಅರಿವು ಮೂಡಿಸುವುದು ಸವಾಲಿನ ಕೆಲಸ. ಹೀಗಾಗಿ, ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ, ಸಾರ್ವಜನಿಕ ಆರೋಗ್ಯ ದೃಷ್ಟಿಯಿಂದ ಅಗತ್ಯ ಕ್ರಮ ಕೈಗೊಳ್ಳಲು ಮುಂದಾಗಿದೆ.

**ರೋಗ ನಿಯಂತ್ರಣ ಕೇಂದ್ರದ ಬಗ್ಗೆ:**

- ವಿಶ್ವ ಆರೋಗ್ಯ ಸಂಸ್ಥೆಯ ತಾಂತ್ರಿಕ ಬೆಂಬಲದಿಂದ ನೂತನ 'ರಾಜೀವ್‌ಗಾಂಧಿ ಸಾರ್ವಜನಿಕ ಆರೋಗ್ಯ ಸಂಸ್ಥೆ ಮತ್ತು ರೋಗ ನಿಯಂತ್ರಗಳ ಕೇಂದ್ರ'ಕ್ಕೆ ಚಾಲನೆ ನೀಡಲಾಗುವುದು ಎಂದು ತಿಳಿಸಲಾಗಿದೆ.
- ಆರೋಗ್ಯ ರಕ್ಷಣೆಗೆ ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ವೃತ್ತಿಪರತೆ ಹೊಂದಿರುವ ಮಾನವ ಸಂಪನ್ಮೂಲದ ಅವಶ್ಯಕತೆ ಇದೆ. ಸಂಶೋಧನೆ, ಶಿಕ್ಷಣ ಹಾಗೂ ತರಬೇತಿ ವಿಧಾನಗಳ ಮೂಲಕ ಪುನಶ್ಚೇತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.
- ಜತೆಗೆ 2014ರ ಜನವರಿ ವೇಳೆಗೆ, ಸಾರ್ವಜನಿಕ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಡಿಪ್ಲೊಮಾ ಮತ್ತು ಸ್ನಾತಕೋತ್ತರ ಕೋರ್ಸ್‌ಗಳನ್ನು ಆರಂಭಿಸಲಾಗುತ್ತಿದೆ ಎಂದು ತಿಳಿಸಿದರು.

# ಪರಿಸರ

**ಜುಲೈ 11: "ವಿಶ್ವ ಜನಸಂಖ್ಯಾ ದಿನ (World Population Day)"**

ವಿಶ್ವ ಜನಸಂಖ್ಯಾ ದಿನವನ್ನು ಪ್ರತಿವರ್ಷ ಜುಲೈ 11 ರಂದು ಜಗತ್ತಿನಾದ್ಯಂತ ಆಚರಿಸಲಾಗುತ್ತದೆ. "Focus is on Adolescent Pregnancy" ಇದು ಈ ವರ್ಷದ ಜನಸಂಖ್ಯಾ ದಿನದ ಥೀಮ್. ಜನಸಂಖ್ಯಾ ಸ್ಫೋಟದ ಬಗ್ಗೆ ವಿಶ್ವದಾದ್ಯಂತ ಅರಿವು ಮೂಡಿಸಿ, ಯಾವುದೇ ಎಗ್ಗಿಲ್ಲದೇ ಏರುತ್ತಿರುವ ಜನಸಂಖ್ಯೆಗೆ ಕಡಿವಾಣ ಹಾಕುವುದು ಈ ದಿನದ ಮುಖ್ಯ ಉದ್ದೇಶ.

- ವಿಶ್ವ ಸಂಸ್ಥೆಯ "ಯುನೈಟೆಡ್ ನೇಷನ್ ಡೆವಲಪ್ ಮೆಂಟ್ ಪ್ರೋಗ್ರಾಂ (UNDP)" 1989 ರಲ್ಲಿ ಕೈಗೊಂಡ ನಿರ್ಣಯದಂತೆ ಜುಲೈ 11 ನ್ನು ವಿಶ್ವಜನಸಂಖ್ಯಾ ದಿನವನ್ನಾಗಿ ಆಚರಿಸಲಾಗುತ್ತಿದೆ.
- 1950 ರಲ್ಲಿ ಕೇವಲ 2.5 ಬಿಲಿಯನ್ ನಷ್ಟಿದ್ದ ವಿಶ್ವದ ಜನಸಂಖ್ಯೆ ಇಂದು 7 ಬಿಲಿಯನ್ ನಷ್ಟಿದೆ.

**ಭಾರತದಲ್ಲಿ ವಿಶ್ವ ಜನಸಂಖ್ಯಾ ದಿನದ ಆಚರಣೆ**:

- ಜನಸಂಖ್ಯಾ ಸ್ಥಿರತಾ ಕೋಶ್ (JSK), ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಒಂದು ಸ್ವಾಯುತ್ತತ ಸಂಸ್ಥೆಯಾಗಿದ್ದು, ದೇಶದಲ್ಲಿ ಜನಸಂಖ್ಯೆ ಬೆಳವಣಿಗೆಯನ್ನು ಸಾಧ್ಯವಾದಷ್ಟು ನಿಯಂತ್ರಿಸಲು ಶ್ರಮಿಸುತ್ತಿದೆ.
- ವಿಶ್ವ ಜನಸಂಖ್ಯಾದಿನದ ಅಂಗವಾಗಿ ಜನಸಂಖ್ಯೆ ನಿಯಂತ್ರಣದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ದೆಹಲಿಯ ಇಂಡಿಯಾ ಗೇಟ್ ನಿಂದ ವಿಜಯಾ ಚೌಕ್ ವರೆಗೂ ಕಾಲುನಡಿಗೆ ಜಾಥಾ ಕಾರ್ಯಕ್ರಮವನ್ನು ಈ ಸಂಸ್ಥೆ ಹಮ್ಮಿಕೊಂಡಿತ್ತು. ಈ ಮಹತ್ವದ ಕಾರ್ಯಕ್ರಮಕ್ಕೆ ಕೇಂದ್ರ ಆರೋಗ್ಯ ಸಚಿವ ಗುಲಾಂ ನಬಿ ಆಜಾದ್ ಅವರು ಚಾಲನೆ ನೀಡಿದರು.
- 2011 ರ ಜನಗಣತಿಯ ಅಂಕಿ-ಅಂಶಗಳ ಪ್ರಕಾರ ಭಾರತದ ಜನಸಂಖ್ಯೆ 121 ಕೋಟಿ.

**ಪ್ರವಾಹ ಪೀಡಿತ ಉತ್ತರಾಖಂಡದಲ್ಲಿ ಉಚಿತ 'ಸೋಲಾರ್ ಲಾಟೀನು' (Lantern) ವಿತರಣೆ**

ಕೇಂದ್ರ ಸರ್ಕಾರದ ನೂತನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯವು ಪ್ರವಾಹ ಪೀಡಿತ ಉತ್ತರಾಖಂಡ ಪ್ರದೇಶದ ಕುಟುಂಬಗಳಿಗೆ ಉಚಿತವಾಗಿ ಸುಮಾರು 20000 ಸೋಲಾರ್ ಲಾಟೀನುಗಳನ್ನು ವಿತರಿಸಲು 4.4 ಕೋಟಿ ರೂಪಾಯಿಗಳ ಹಣಕಾಸು ನೆರವು ಮಂಜೂರು ಮಾಡಿದೆ. ಪ್ರತಿ ಸೋಲಾರ್ ಲಾಟೀನಿನ ಬೆಲೆ ರೂ.2200 ಆಗಿದೆ. ಪ್ರವಾಹ ಪೀಡಿತ ಪ್ರದೇಶದ ಜನರಿಗೆ ವಿತರಿಸಲು ನಿರ್ಧರಿಸಿರುವ ಲಾಟೀನುಗಳ ಸಂಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸಲಿದೆ.

ಉತ್ತರಾಖಂಡದ ಹಲವಾರು ಪ್ರದೇಶಗಳು ಮಹಾಮಳೆಗೆ ತತ್ತರಿಸಿದ ಹಿನ್ನೆಲೆಯಲ್ಲಿ ಪರಿಹಾರ ಮತ್ತು ಮರು ನಿರ್ಮಾಣ ಕಾರ್ಯದಲ್ಲಿ ಸಹಕಾರಿಯಾಗಲು ಈ ಘೋಷಣೆ ಮಾಡಿದೆ. ಉತ್ತಾರಾಖಂಡ ರಾಜ್ಯ ಸರ್ಕಾರದ ಮನವಿ ಮೇರೆಗೆ ಸೋಲಾರ್

ಲಾಟೀನುಗಳನ್ನು ಪೂರೈಸಲಾಗುತ್ತಿದೆ ಎಂದು ನೂತನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯದ ಮಂತ್ರಿ ಡಾ.ಫಾರೂಕ್ ಅಬ್ದುಲ್ಲಾ ತಿಳಿಸಿದ್ದಾರೆ.

**ಇತ್ತೀಚಿನ ವರ್ಷಗಳಲ್ಲಿ ನೂತನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯವು ವಿತರಿಸಿದ ಲಾಟೀನ್ ಗಳ ವರದಿ ಹೀಗಿದೆ:-**

- ‘ಲೈಲಾ’ ಚಂಡಮಾರುತದಿಂದ ಪ್ರವಾಹಕ್ಕೆ ಒಳಗಾದ ಪಶ್ಚಿಮ ಬಂಗಾಳದ ಜನರಿಗೆ 2009-10 ರಲ್ಲಿ 14000 ಲಾಟೀನ್ ವಿತರಿಸಲಾಗಿದೆ
- 2010-11 ರಲ್ಲಿ  ಅತಿವೃಷ್ಟಿಯಿಂದ ಸಂಕಷ್ಟಕ್ಕೊಳಗಾದ ಲೇಹ್ ಪ್ರದೇಶದ ಜನರಿಗೆ 1000 ಸೋಲಾರ್ ಲಾಟೀನ್ ವಿತರಿಸಲಾಗಿದೆ
- 2011-12 ರಲ್ಲಿ ಭೂಕಂಪದಿಂದ ಹಾನಿಗೊಳಗಾದ ಸಿಕ್ಕಿಂ ರಾಜ್ಯದ ಜನತೆಗೆ 14900 ಸೋಲಾರ್ ಲಾಟೀನ್ ವಿತರಿಸಲಾಗಿದೆ.

**ಭಾರತದ ದುಬಾರಿ ನಗರವಾಗಿ “ಕೊಲ್ಕತ್ತಾ”: ಸಮೀಕ್ಷೆ**

ದೇಶದ ಅತ್ಯಂತ ದುಬಾರಿ ನಗರವಾಗಿ ಕೊಲ್ಕತ್ತಾ ಹೊರಹೊಮ್ಮಿದೆ. ದೇಶದ ಪ್ರಮುಖ ಮೆಟ್ರೋಪಾಲಿಟನ್ ನಗರಗಳಲ್ಲಿ “ಟ್ರಾವೆಲ್ ಪ್ರೈಸ್ ಇಂಡೆಕ್ಸ್” ನಡೆಸಿರುವ “ಟ್ರಿಪ್ ಇಂಡೆಕ್ಸ್ (TripIndex)” ಸಮೀಕ್ಷೆಯಲ್ಲಿ ಮುಂಬೈಯನ್ನು ಹಿಂದಿಕ್ಕಿ ಕೊಲ್ಕತ್ತಾ ದೇಶದ ದುಬಾರಿ ನಗರವೆಂಬ ಖ್ಯಾತಿಗೆ ಪಾತ್ರವಾಗಿದೆ.

- ಇದೇ ವೇಳೆ ಅಹಮದಬಾದ್ ದೇಶದ ಬಜೆಟ್ ಸ್ನೇಹಿ ನಗರವೆಂಬ ಕೀರ್ತಿಗೆ ಪಾತ್ರವಾಗಿದೆ.
- ಸಮೀಕ್ಷೆಯ ಪ್ರಕಾರ ಕೊಲ್ಕತ್ತಾದಲ್ಲಿ ಎರಡು ರಾತ್ರಿ ತಂಗಲು ರೂ 10,115 ಗಳು ಬೇಕಾದರೆ, ಮುಂಬೈಯಲ್ಲಿ 10,074 ರೂಗಳು ಬೇಕು ಎನ್ನಲಾಗಿದೆ. ಆದರೆ ಅಹಮದಾಬಾದ್ ನಲ್ಲಿ ಎರಡು ರಾತ್ರಿ ತಂಗಲು ರೂ 6, 406 ಸಾಕು ಎಂದು ಸಮೀಕ್ಷೆಯಿಂದ ತಿಳಿದು ಬಂದಿದೆ.

**ಕಾರ್ಯಾರಂಭ ಮಾಡಿದ ಕೂಡಕುಳಂ ಅಣು ವಿದ್ಯುತ್ ಸ್ಥಾವರ**

ಸಾರ್ವಜನಿಕರು, ಸಂಘಟನೆಗಳು ಮತ್ತು ಪರಿಸರವಾದಿಗಳ ಪ್ರತಿಭಟನೆಯಿಂದ ವಿಳಂಬವಾಗಿದ್ದ ಕೂಡಕುಳಂ ಅಣು ವಿದ್ಯುತ್ ಸ್ಥಾವರ ಕೊನೆಗೂ ಕಾರ್ಯಾರಂಭ ಮಾಡಿದೆ. ಭಾರತದ 21ನೇ ಅಣು ವಿದ್ಯುತ್ ಸ್ಥಾವರವಾದ ಕೂಡುಕುಳಂನಲ್ಲಿ ವಿದ್ಯುತ್ ಉತ್ಪಾದನೆ ಆರಂಭಗೊಂಡಿದ್ದು ಸರಾಗವಾಗಿ ನಡೆಯುತ್ತಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಅಂದುಕೊಂಡಂತೆ ನಡೆದರೆ ಮುಂದಿನ 30-45 ದಿನಗಳಲ್ಲಿ ದಕ್ಷಿಣ ಗ್ರಿಡ್ ಗೆ ಸ್ಥಾವರವನ್ನು ಸಂಪರ್ಕಿಸಬಹುದು ಎನ್ನಲಾಗಿದೆ.

**ಕೂಡಕುಳಂ ಅಣು ವಿದ್ಯುತ್ ಸ್ಥಾವರ**:

- ತಮಿಳುನಾಡಿನ ತಿರುವೆನ್ನೆಲ್ಲಿ ಜಿಲ್ಲೆಯಲ್ಲಿ ನಿರ್ಮಿಸಲಾಗಿರುವ ಕೂಡಕುಳಂ ಅಣು ವಿದ್ಯುತ್ ಘಟಕದ ಕಾಮಗಾರಿಯನ್ನು 2002 ರಲ್ಲೇ ಆರಂಭಿಸಲಾಯಿತು. ಪ್ರತಿಭಟನೆ, ಸಂಘ ಸಂಸ್ಥೆಗಳ ವಿರೋಧದ ಕಾರಣ ಈ ಯೋಜನೆ ಅನೇಕ ವರ್ಷಗಳ ವರೆಗೆ ನೆನೆಗುದಿಗೆ ಬಿದ್ದಿತ್ತು.
- ಕೂಡಕುಳಂ ಅಣು ವಿದ್ಯುತ್ ಸ್ಥಾವರದ ನಿರ್ಮಾಣಕ್ಕಾಗಿ 1988 ರಲ್ಲಿ ಅಂದಿನ ಪ್ರಧಾನಿ ರಾಜೀವ್ ಗಾಂಧಿ ಮತ್ತು ರಷ್ಯಾದ ಅಧ್ಯಕ್ಷ ಮೈಕೆಲ್ ಗೋರ್ಬಚೇವ್ ನಡುವೆ ಒಪ್ಪಂದಕ್ಕೆ ಸಹಿಹಾಕಲಾಗಿತ್ತು.
- ಪ್ರಸ್ತುತ ಚಾಲನೆ ನೀಡಲಾಗಿರುವ ಅಣು ಘಟಕವು 1,000 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ. ಅಲ್ಲದೇ ಇದು ದೇಶದ ಮೊದಲ "ಪ್ರೆಶರೈಸ್ಡ್ ವಾಟರ್ ರಿಯಾಕ್ಟರ್ (Pressurised Water Reactor)" ಆಗಿದೆ.

**ಭಾರತದ ಪ್ರಥಮ ಧೂಮಪಾನ ಮುಕ್ತ ರಾಜ್ಯವಾಗಿ ಹಿಮಾಚಲ ಪ್ರದೇಶ ಘೋಷಣೆ**

ಜುಲೈ 2, 2013 ರಂದು ಹಿಮಾಚಲ ಪ್ರದೇಶವನ್ನು ಭಾರತದ ಪ್ರಥಮ ಧೂಮಪಾನ ಮುಕ್ತ ರಾಜ್ಯವೆಂದು ಘೋಷಣೆ ಮಾಡಲಾಯಿತು. ಇದನ್ನು 'ಸಿಗರೇಟ್ ಮತ್ತು ಇತರೆ ತಂಬಾಕು ಉತ್ಪನ್ನ ಕಾಯ್ದೆ (Cigarette and Other tobacco Products Act) 2003 ರ ಪರಿಚ್ಛೇದ 4 ರನ್ವಯ ಘೋಷಣೆ ಮಾಡಿದೆ. ಹಿಮಾಚಲ ಪ್ರದೇಶವು ಶೇ. 85.42 ಪ್ರತಿಶತ ಧೂಮಪಾನ ಮುಕ್ತ ಮಾನದಂಡವನ್ನು ಸಾಧಿಸಿದಕ್ಕಾಗಿ ಈ ಸ್ಥಾನ ಲಭಿಸಿದೆ. ತಂಬಾಕು ಉತ್ಪನ್ನಗಳನ್ನು ಬಳಕೆಯನ್ನು ರಾಜ್ಯದಲ್ಲಿ ಅಂತ್ಯಗೊಳಿಸುವ ಉದ್ದೇಶದಿಂದ ತಂಬಾಕು ಉತ್ಪನ್ನಗಳ ಮೇಲಿನ ತೆರಿಗೆಯನ್ನು 2012-13 ಮತ್ತು 2013-14 ರ ರಾಜ್ಯ ಬಜೆಟ್ ನಲ್ಲಿ ಕ್ರಮವಾಗಿ ಶೇ. 11 ರಿಂದ 18 ಮತ್ತು ಶೇ. 22 ರಿಂದ 36 ಕ್ಕೆ ಹೆಚ್ಚಿಸಲಾಗಿದೆ.

**ಸಿಗರೇಟ್ ಮತ್ತು ಇತರೆ ತಂಬಾಕು ಉತ್ಪನ್ನ ಕಾಯ್ದೆ (Cigarette and Other tobacco Products Act) 2003:**

ಪ್ರತಿ ವರ್ಷ ತಂಬಾಕು ಸೇವನೆಯಿಂದ ಸಂಭವಿಸುತ್ತಿರುವ ಅಪಾರ ಸಾವು-ನೋವು ನಿಯಂತ್ರಿಸಲು ಮತ್ತು ತಂಬಾಕು ಉದ್ಯಮವನ್ನು ನಿಯಂತ್ರಣದಲ್ಲಿಡಲು ಕೇಂದ್ರ ಸರ್ಕಾರ 2003 ರಲ್ಲಿ "ಸಿಗರೇಟ್ ಮತ್ತು ಇತರೆ ತಂಬಾಕು ಉತ್ಪನ್ನ ಕಾಯ್ದೆ"ಯನ್ನು ಜಾರಿಗೆ ತರಲಾಯಿತು. ಈ ಕಾಯ್ದೆಯು ವಿಶಾಲ ಭಾರತದಲ್ಲಿ ಉತ್ಪಾದಿಸುವ ತಂಬಾಕು ಹಾಗೂ ತಂಬಾಕಿನ ಅಂಶವಿರುವ ಇತರ ಯಾವುದೇ ಉತ್ಪನ್ನಗಳಿಗೆ ಅನ್ವಯಿಸುತ್ತದೆ.

**ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ- ತಂಬಾಕು ನಿಯಂತ್ರಣ ಕಾಯ್ದೆ, 2003 ರ ಪರಿಚ್ಛೇದ 4:**

- ಎಲ್ಲಾ ರೀತಿಯ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ-ಈ ಕಾಯ್ದೆಯನ್ವಯ " ಸಾರ್ವಜನಿಕ ಸ್ಥಳ" ಎಂದರೆ ಸಾರ್ವಜನಿಕರು ಓಡಾಡುವ ಎಲ್ಲಾ ಸ್ಥಳಗಳು ಅಂದರೆ, ರಂಗಮಂದಿರ, ಆಸ್ಪತ್ರೆ ಕಟ್ಟಡ, ರೈಲ್ವೆ ಕಾಯುವ ಕೊಠಡಿ, ಮನರಂಜನಾ ಕೇಂದ್ರ, ಹೋಟೆಲ್ , ಸಾರ್ವಜನಿಕ ಕಚೇರಿ, ನ್ಯಾಯಾಲಯದ ಕಟ್ಟಡ, ಶಿಕ್ಷಣ ಸಂಸ್ಥೆ, ಗ್ರಂಥಾಲಯ ಇತರೆ ಸಾರ್ವಜನಿಕರು ಓಡಾಡುವ ಸ್ಥಳಗಳು.

- ಧೂಮಪಾನಕ್ಕಾಗಿ ಸ್ಥಳವನ್ನು ನಿಗದಿಪಡಿಸುವುದು- ರೆಸ್ಟೊರೆಂಟ್ ಗಳಲ್ಲಿ, ಹೋಟೆಲ್ ಮತ್ತು ವಿಮಾನ ನಿಲ್ದಾಣಗಳಲ್ಲಿ ಧೂಮಪಾನ ನಿಷೇಧಿಸಿದ ಸ್ಥಳಕ್ಕೆ ಯಾವುದೇ ತೊಂದರೆಯಾಗದಂತೆ ಪ್ರತ್ಯೇಕವಾಗಿ ಧೂಮಪಾನಕ್ಕಾಗಿ ಸ್ಥಳವನ್ನು ನಿಗದಿಪಡಿಸಬೇಕೆಂದು ಕಾಯ್ದೆಯಲ್ಲಿ ತಿಳಿಸಲಾಗಿದೆ.
- "ಧೂಮಪಾನ ನಿಷೇಧಿಸಿದೆ"- ಎಂಬ ಜಾಹಿರಾತನ್ನು ಅಥವಾ ಪ್ರದರ್ಶನ ಫಲಕವನ್ನು ಧೂಪಪಾನ ನಿಷೇಧಿತ ಸ್ಥಳಗಳಲ್ಲಿ ಕಡ್ಡಾಯವಾಗಿ ಪ್ರದರ್ಶಿಸಲು ಆದೇಶಿಸಿದೆ.
- ತಂಬಾಕು ನಿಯಂತ್ರಣ ಕಾಯ್ದೆ, 2003 ರ ಪರಿಚ್ಛೇದ 5 ರನ್ವಯ ತಂಬಾಕು ಉತ್ಪನ್ನಗಳ ಜಾಹಿರಾತನ್ನು ರೇಡಿಯೋ, ದೂರದರ್ಶನ ಮತ್ತು ಪತ್ರಿಕೆಗಳಲ್ಲಿ ಹೊರಡಿಸಲು ನಿರ್ಬಂಧಿಸಿದೆ. ಅಲ್ಲದೆ ತಂಬಾಕು ಕಂಪನಿಗಳು ಯಾವುದೇ ಸಾಂಸ್ಕೃತಿಕ ಮತ್ತು ಕ್ರೀಡಾ ಕಾರ್ಯಕ್ರಮಗಳನ್ನು ಪ್ರಾಯೋಜಿಸುವಂತಿಲ್ಲ
- ತಂಬಾಕು ನಿಯಂತ್ರಣ ಕಾಯ್ದೆ, 2003 ರ ಪರಿಚ್ಛೇದ 6 (a) ರನ್ವಯ 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ತಂಬಾಕು ಉತ್ಪನ್ನಗಳನ್ನು ಮಾರುವಂತಿಲ್ಲ ಹಾಗೂ ತಂಬಾಕು ಉತ್ಪನ್ನ ಮಾರಾಟಗಾರರು ಕಡ್ಡಾಯವಾಗಿ ಈ ಬಗ್ಗೆ ಜಾಹಿರಾತನ್ನು ಪ್ರದರ್ಶಿಸಬೇಕು.
- ತಂಬಾಕು ನಿಯಂತ್ರಣ ಕಾಯ್ದೆ, 2003 ರ ಪರಿಚ್ಛೇದ 7 ರನ್ವಯ ಎಲ್ಲಾ ತಂಬಾಕು ಉತ್ಪನ್ನಗಳು ಆರೋಗ್ಯ ಸಂಬಂಧಿ ಎಚ್ಚರಿಕೆಯ ಚಿತ್ರವನ್ನೊಳಗೊಂಡಿರಬೇಕು, ಹಾಗೂ ತಂಬಾಕು ಸೇವನೆ ಆರೋಗ್ಯಕ್ಕೆ ಹಾನಿಕರ ಎಂಬ ಸಂದೇಶ ಹೊಂದಿರಬೇಕು.

**ರಾಷ್ಟ್ರವ್ಯಾಪ್ತಿ ತಂಬಾಕು ನಿಯಂತ್ರಣ ಅಭಿಯಾನ "ಟಿಯರ್ ಯು ಅಪಾರ್ಟ್ (Tear You Apart)" ಗೆ ಚಾಲನೆ**

ತಂಬಾಕು ಬಳಕೆ ಮತ್ತು ಅದರಿಂದಾಗುವ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿ, ತಂಬಾಕು ಬಳಕೆ ಮೇಲೆ ನಿಯಂತ್ರಣ ತರುವ ಉದ್ದೇಶದಿಂದ ಹೊಸ ಅಭಿಯಾನಕ್ಕೆ ಇತ್ತೀಚೆಗೆ ಚಾಲನೆ ನೀಡಲಾಯಿತು. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ರೂಪಿಸಿರುವ ಈ ಅಭಿಯಾನಕ್ಕೆ "ಟಿಯರ್ ಯು ಅಪಾರ್ಟ್" ಎಂದು ಹೆಸರಿಡಲಾಗಿದೆ. ದೇಶದಾದ್ಯಂತ ಅಪರಿಮಿತ ಸಂಖ್ಯೆಯಲ್ಲಿ ಬಳಸುತ್ತಿರುವ ಹೊಗೆರಹಿತ ತಂಬಾಕಿಗೆ ನಿಯಂತ್ರಣ ತರುವುದು ಈ ಅಭಿಯಾನದ ಮುಖ್ಯ ಉದ್ದೇಶ.

**ಹೊಗೆರಹಿತ ತಂಬಾಕು?**

- ಹೊಗೆ ರಹಿತ ತಂಬಾಕು ಭಾರತದಲ್ಲಿ ಅತಿ ಹೆಚ್ಚಾಗಿ ಬಳಸುವ ತಂಬಾಕಿನ ಉತ್ಪನ್ನ. ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಜನ ಸಮುದಾಯ ಅತಿ ಹೆಚ್ಚಾಗಿ ಈ ಉತ್ಪನ್ನವನ್ನು ಬಳಸುತ್ತಾರೆ. ಗುಟ್ಕಾ, ಜರ್ದಾ, ಪಾನ್ ಮಸಾಲ, ಖೈನಿ ಇವೇ ಪ್ರಮುಖ ಹೊಗೆ ರಹಿತ ತಂಬಾಕು ಉತ್ಪನ್ನಗಳು.
- ಗ್ಲೋಬಲ್ ಆಡಿಟ್ ತಂಬಾಕು ಸರ್ವೇಯ ಅಂಕಿ ಅಂಶಗಳ ಪ್ರಕಾರ ಭಾರತದಲ್ಲಿ ಸುಮಾರು 21 ಕೋಟಿ ಜನರು ಹೊಗೆ ರಹಿತ ತಂಬಾಕು ಉತ್ಪನ್ನಗಳನ್ನು ಸೇವಿಸುತ್ತಿರುವುದಾಗಿ ತಿಳಿದುಬಂದಿದೆ. ಭಾರತದಲ್ಲಿ ಶೇ 26 ರಷ್ಟು ವಯಸ್ಕರು ತಂಬಾಕು ಬಳಸುತ್ತಿದ್ದಾರೆ.

**ಅಭಿಯಾನದ ಬಗ್ಗೆ:**

- ರಾಷ್ಟ್ರೀಯ ತಂಬಾಕು ನಿಯಂತ್ರಣ ಅಭಿಯಾನ (ಟೆಯರ್ ಯು ಅಪಾರ್ಟ್)ದ ರೂಪರೇಷೆಯನ್ನು "ವರ್ಲ್ಡ್ ಲಂಗ್ ಫೌಂಡೇಶನ್" ಸಹಯೋಗದೊಂದಿಗೆ ಅಭಿವೃದ್ಧಿಪಡಿಸಲಾಗಿದೆ.
- ತಂಬಾಕು ಮತ್ತು ನಿಕೋಟಿನ್ ಯುಕ್ತ ಆಹಾರ ಪದಾರ್ಥಗಳ ಬಳಕೆ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ.
- ದೇಶದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಈ ಅಭಿಯಾನವನ್ನು ಕಡ್ಡಾಯಗೊಳಿಸಲು ಈಗಾಗಲೇ ಆದೇಶಿಸಲಾಗಿದೆ. ಅದರಂತೆ ಕೆಲವು ರಾಜ್ಯಗಳು ಈಗಾಗಲೇ ಗುಟ್ಕಾ, ಪಾನ್ ಮಾರಾಟ ಮತ್ತು ಬಳಕೆ ಮೇಲೆ ನಿಷೇಧ ವಿಧಿಸಿವೆ.

**<u>"ನೀರಾ" ಉತ್ಪಾದನೆಗೆ ಕೇರಳ ಸರ್ಕಾರ ಸಮ್ಮತಿ</u>**

ತೆಂಗು ಬೆಳೆಗಾರರ ಹಿತದೃಷ್ಟಿಯನ್ನು ಕಾಯುವ ಸಲುವಾಗಿ ತೆಂಗಿನ ಮರಗಳಿಂದ "ನೀರಾ"ವನ್ನು ಉತ್ಪಾದಿಸಲು ಕೇರಳ ಸರ್ಕಾರ ಇತ್ತೀಚೆಗೆ ಅನುಮತಿ ನೀಡಿದೆ. ತಿರುವನಂತಪುರಂ ನಲ್ಲಿ ನಡೆದ ಸಚಿವರ ಸಭೆಯಲ್ಲಿ ಈ ಪ್ರಮುಖ ನಿರ್ಣಯವನ್ನು ಕೈಗೊಳ್ಳಲಾಯಿತು. ರಾಜ್ಯವ್ಯಾಪ್ತಿ ಈ ಅನುಮತಿ ಅನ್ವಯವಾಗಲಿದ್ದು, ಕಂಗಲಾಗಿದ್ದ ತೆಂಗು ಬೆಳಗಾರರಿಗೆ ಸರ್ಕಾರದ ಈ ನಿರ್ಧಾರ ವರದಾನವಾಗಲಿದೆ ಎನ್ನಲಾಗಿದೆ.

- "ನೀರಾ" ಉತ್ಪಾದನೆ ಸಂಬಂಧ ಕೇರಳ ಅಬಕಾರಿ ಕಾನೂನಿನಲ್ಲೂ ಸಹ ತಿದ್ದುಪಡಿ ತರಲಾಗಿದೆ. ತೆಂಗು ಅಭಿವೃದ್ಧಿ ಮಂಡಳಿಯಿಂದ ಮಾನ್ಯತೆ ಪಡೆದ ಸಂಸ್ಥೆಗಳು ಮಾತ್ರ ನೀರಾ ಉತ್ಪಾದಿಸುವ ಹಕ್ಕನ್ನು ಪಡೆಯಲಿವೆ.
- ಪ್ರತಿ ಜಿಲ್ಲೆಯ ಸುಮಾರು 1500 ತೆಂಗಿನ ಮರದಲ್ಲಿ ಪ್ರಾತ್ಯಕ್ಷಿಕವಾಗಿ ನೀರಾವನ್ನು ಉತ್ಪಾದಿಸಲಾಗುವುದು. ಬಳಿಕ ಎಲ್ಲೆಡೆಗೂ ವಿಸ್ತರಿಸಲಾಗುವುದು.
- ನೀರಾ ಉತ್ಪಾದನೆಯಲ್ಲಿ ಪರಿಣಿತರಿಗೆ ಮೊದಲ ಪ್ರಾಶಸ್ತ್ಯ ನೀಡಲಾಗುವುದು.

**<u>ನವೆಂಬರ್ 19: "ವಿಶ್ವ ಶೌಚಾಲಯ ದಿನ"ವೆಂದು ಆಚರಿಸಲು ವಿಶ್ವಸಂಸ್ಥೆ ಅಂಗೀಕಾರ</u>**

ನವೆಂಬರ್ 19 ರಂದು "ವಿಶ್ವ ಶೌಚಾಲಯ ದಿನ (World Toilet Day)"ವೆಂದು ಆಚರಿಸಲು ವಿಶ್ವಸಂಸ್ಥೆ ಅಧಿಕೃತವಾಗಿ ಘೋಷಿಸಿದೆ. ಇತ್ತೀಚೆಗೆ ನಡೆದ ವಿಶ್ವಸಂಸ್ಥೆ ಸಾಮಾನ್ಯ ಸಭೆಯಲ್ಲಿ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ. ನೈರ್ಮಲೀಕರಣ ಪ್ರತಿಯೊಬ್ಬರ ಹಕ್ಕಾಗಿದ್ದು, ಶುಚಿತ್ವದ ಬಗ್ಗೆ ಅರಿವು ಮೂಡಿಸಲು ಈ ದಿನ ಅತ್ಯಂತ ಸಹಕಾರಿಯಾಗಲಿದೆ.

- ವಿಶ್ವದಾದ್ಯಂತ ಸುಮಾರು 2.5 ಬಿಲಿಯನ್ ಜನರು ತಮ್ಮ ನಿತ್ಯಕರ್ಮಗಳಿಗೆ ಶೌಚಾಲಯವನ್ನು ಸಮರ್ಪಕವಾಗಿ ಬಳಸುತ್ತಿಲ್ಲ. 1.1 ಬಿಲಿಯನ್ ಜನಸಂಖ್ಯೆ ಬಯಲಲ್ಲಿ ಮಲ ವಿಸರ್ಜನೆ ಮಾಡುತ್ತಿರುವುದ ಶೋಚನೀಯ ಸಂಗತಿ. ಭಾರತ

ಸಹ ಇದರಿಂದ ಹೊರತಾಗಿಲ್ಲ. ಭಾರತದಲ್ಲಿ ಕೇವಲ 40 ಕೋಟಿ ಜನರು ಮಾತ್ರ ಶೌಚಾಲಯವನ್ನು ಬಳಸುತ್ತಿರುವುದಾಗಿ ಅಂಕಿ-ಅಂಶಗಳಿಂದ ತಿಳಿದುಬಂದಿದೆ. ಭಾರತವನ್ನು 2017 ರ ವೇಳೆಗೆ ಸಂಪೂರ್ಣ ಬಯಲು ಮಲ ವಿಸರ್ಜನೆ ಮುಕ್ತ ದೇಶವನ್ನಾಗಿಸುವ ಉದ್ದೇಶದಿಂದ "ನಿರ್ಮಲ ಭಾರತ ಅಭಿಯಾನ" ಎಂಬ ಮಹತ್ವಾಕಾಂಕ್ಷಿ ಯೋಜನೆಯನ್ನು ಸರ್ಕಾರ ಈಗಾಗಲೇ ಜಾರಿಗೊಳಿಸಿದೆ. ಈ ಯೋಜನೆಯಡಿ ಶೌಚಾಲಯ ನಿರ್ಮಾಣಕ್ಕೆ ರೂ 4,500 ಪ್ರೋತ್ಸಾಹ ಧನವನ್ನು ನೀಡಲಾಗುವುದು.

- ಬಯಲು ಮಲ ವಿಸರ್ಜನೆಯಿಂದ ಉಂಟಾಗುವ ರೋಗರುಜಿನಗಳಿಂದ ವಿಶ್ವದಾದ್ಯಂತ ಪ್ರತಿ ವರ್ಷ 2,00,000 ಲಕ್ಷಕ್ಕೂ ಹೆಚ್ಚಿನ ಮಕ್ಕಳು ಸಾವಿಗೀಡಗಾಗುತ್ತಿದ್ದಾರೆ.

**ವಿಶ್ವ ಶೌಚಾಲಯ ದಿನ**:

- "ವಿಶ್ವ ಶೌಚಾಲಯ ಒಕ್ಕೂಟ (WTO)" 2001 ರಲ್ಲೇ ನವೆಂಬರ್ 19 ನ್ನು ವಿಶ್ವ ಶೌಚಾಲಯ ದಿನವೆಂದು ಘೋಷಿಸಿತ್ತು. ಆದರೆ ಕೇವಲ 19 ರಾಷ್ಟ್ರಗಳು ಮಾತ್ರ ಈ ದಿನವನ್ನು ಆಚರಿಸುತ್ತಿದ್ದವು.
- ವಿಶ್ವ ಶೌಚಾಲಯದ ದಿನದ ಕಲ್ಪನೆಯನ್ನು ಮೊದಲ ಬಾರಿಗೆ ಸಿಂಗಾಪುರದ "ಜಾಕ್ ಸಿಮ್" ಎನ್ನುವವರು ಮುಂದಿಟ್ಟಿದ್ದರು. ಸಿಂಗಾಪುರದಲ್ಲಿ ಮಿಸ್ಟರ್. ಟಾಯ್ಲೆಟ್ ಎಂದೇ ಪ್ರಸಿದ್ದಿ ಹೊಂದಿರುವ ಇವರು ಜಗತ್ತಿನಾದ್ಯಂತ ನೈರ್ಮಲೀಕರಣವನ್ನು ಸಾಧಿಸುವ ಕನಸನ್ನು ಹೊಂದಿದ್ದರು.

**ಜುಲೈ 28: "ವಿಶ್ವ ಹೆಪಟೈಟಿಸ್ ದಿನ (World Hepatitis Day)"**

ಜುಲೈ 28 ವಿಶ್ವ ಹೆಪಟೈಟಿಸ್ ದಿನವೆಂದು ಆಚರಿಸಲಾಗುತ್ತದೆ. ಪ್ರತಿ ವರ್ಷ ಈ ದಿನದಂದು ಹೆಪಟೈಟಿಸ್-ಬಿ ಮತ್ತು ಹೆಪಟೈಟಿಸ್-ಸಿ ಕಾಯಿಲೆಯ ನಿರ್ಮೂಲನೆ ಜೊತೆಗೆ ಚಿಕಿತ್ಸೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ವಿಶ್ವದಾದ್ಯಂತ ಹಮ್ಮಿಕೊಳ್ಳಲಾಗುತ್ತದೆ.

**ಈ ವರ್ಷದ ಥೀಮ್**:

- "ದಿಸ್ ಈಸ್ ಹೆಪಟೈಟಿಸ್, ನೊ ಇಟ್, ಕಂಫ್ರಂಟ್ ಇಟ್ (This is hepatitis, Know it, Confront It)"

ಹೆಪಟೈಟಿಸ್ ದಿನದ ಬಗ್ಗೆ:

- ಮೇ 2010ರಲ್ಲಿ ನಡೆದ ವಿಶ್ವ ಆರೋಗ್ಯ ಸಭೆಯಲ್ಲಿ ಜುಲೈ 28 ರಂದು ವಿಶ್ವ ಹೆಪಟೈಟಿಸ್ ದಿನವನ್ನು ಆಚರಿಸುವ ನಿರ್ಣಯಕ್ಕೆ ಜಾಗತಿಕ ಮಟ್ಟದಲ್ಲಿ ಸಹಿ ಹಾಕಲಾಯಿತು.
- ಹೆಪಟೈಟಿಸ್ ಬಿ ವೈರಸನ್ನು ಮೊದಲ ಬಾರಿಗೆ ಸಂಶೋಧಿಸಿದ ನೊಬೆಲ್ ವಿಜೇತ "ಬರುಚ್ ಸಮ್ಯೂಲ್ ಲಂಬರ್ಗ್" ರವರ ಹುಟ್ಟುದಿನವಾದ ಜುಲೈ 28 ನ್ನು ವಿಶ್ವ ಹೆಪಟೈಟಿಸ್ ದಿನವೆಂದು ಆಚರಿಸಲಾಗುತ್ತಿದೆ.

- ಹೆಪಟೈಟಿಸ್ ರೋಗವನ್ನು ತಡೆಯುವುದು ಸೇರಿದಂತೆ ಚಿಕಿತ್ಸೆ ಮತ್ತು ಕಾಯಿಲೆಯ ಬಗ್ಗೆ ಅರಿವು ಮೂಡಿಸುವುದು ಈ ದಿನದ ಮುಖ್ಯ ಉದ್ದೇಶ.

**ಏನಿದು ಹೆಪಟೈಟಿಸ್**:

- ಹೆಪಟೈಟಿಸ್ ಒಂದು ವೈರಸ್ ಸಂಬಂಧಿ ಕಾಯಿಲೆ. ಸಾಮಾನ್ಯವಾಗಿ ಮನುಷ್ಯನ ಯಕೃತ್ ಅಂಗಕ್ಕೆ ಈ ವೈರಸ್ ಸೋಂಕನ್ನು ತಂದೊಡ್ಡುತ್ತದೆ. ಹೆಪಟೈಟಿಸ್ ಬಾಧಿತ ವ್ಯಕ್ತಿ ಕಾಯಿಲೆಯನ್ನು ನಿರ್ಲಕ್ಷಿಸಿದ್ದೇ ಆದರೆ ಅಥವಾ ಸರಿಯಾದ ಸಮಯದಲ್ಲಿ ಸೂಕ್ತ ಚಿಕಿತ್ಸೆ ಪಡೆಯದೇ ಇದ್ದಲ್ಲಿ ಅಪಾಯ ಕಟ್ಟಿಟ್ಟ ಬುತ್ತಿ. ಅದರಲ್ಲೂ ಯಕೃತ್ ಕ್ಯಾನ್ಸರ್ ಅಥವಾ ಯಕೃತ್ ವೈಫಲ್ಯದ ಸಂದರ್ಭಗಳು ಅತ್ಯಂತ ಹೆಚ್ಚು.
- ಹೆಪಟೈಟಿಸ್ ಅನ್ನು ಹೆಪಟೈಟಿಸ್ ಎ, ಬಿ, ಸಿ, ಡಿ ಮತ್ತು ಇ ಎಂದು ಗುರುತಿಸಲಾಗಿದೆ. ಇವುಗಳಲ್ಲಿ ಹೆಪಟೈಟಿಸ್ ಸಿ ಹೆಚ್ಚು ಅಪಾಯಕಾರಿ.
- ಒಂದು ಅಂದಾಜಿನ ಪ್ರಕಾರ ವಿಶ್ವದಾದ್ಯಂತ ಸುಮಾರು 350 ಮಿಲಿಯನ್ ಜನರು ವಾರ್ಷಿಕವಾಗಿ ಹೆಪಟೈಟಿಸ್ ಬಿ ಕಾಯಿಲೆಯ ಸೋಂಕಿಗೆ ಒಳಗಾಗುತ್ತಿದ್ದಾರೆ. ಹಾಗೂ 150 ಮಿಲಿಯನ್ ಜನರು ಹೆಪಟೈಟಿಸ್ ಸಿ ಸೋಂಕಿಗೆ ಒಳಗಾಗುತ್ತಿದ್ದಾರೆ ಎನ್ನಲಾಗಿದೆ.

**ರಾಯಲ್ ಬೆಂಗಲ್ ಟೈಗರ್ಸ್ ಸಂರಕ್ಷಣೆಗೆ ಹೊಸ ಕಾರ್ಯಕ್ರಮ ರೂಪಿಸಿದ ಬಾಂಗ್ಲದೇಶ**

ವಿಶ್ವ ಹುಲಿ ದಿನದ ಅಂಗವಾಗಿ ಮಾನವರಿಂದ ಅಪಾಯ ಹೆದರಿಸುತ್ತಿರುವ ಪ್ರಸಿದ್ಧ ಬಂಗಾಳ ಹುಲಿ ಸಂತತಿಯನ್ನು ಸಂರಕ್ಷಿಸುವ ಸಲುವಾಗಿ ಬಾಂಗ್ಲದೇಶ ಹೊಸ ಕಾರ್ಯಕ್ರಮವೊಂದನ್ನು ರೂಪಿಸಿದೆ.

- ಭಾರತ ಮತ್ತು ಬಾಂಗ್ಲ ಗಡಿ ಭಾಗದಲ್ಲಿ ಅತಿ ಹೆಚ್ಚಾಗಿ ಕಂಡು ಬರುವ "ರಾಯಲ್ ಬೆಂಗಲ್ ಟೈಗರ್ಸ್" ಗಳನ್ನು ಅಕ್ರಮ ಸಾಗಾಣಿಕೆ ಮತ್ತು ಬೇಟೆಯನ್ನು ನಿಗ್ರಹಿಸುವ ಸಲುವಾಗಿ "ವನ್ಯಜೀವಿ ಅಪರಾಧ ನಿಯಂತ್ರಣ ಘಟಕ"ಗಳನ್ನು ಸ್ಥಾಪಿಸಲು ಬಾಂಗ್ಲದೇಶ ಅರಣ್ಯ ಇಲಾಖೆ ನಿರ್ಧರಿಸಿದೆ.
- ಭಾರತ ಮತ್ತು ಬಾಂಗ್ಲದೇಶದ ನಡುವೆ ವಿಶಾಲವಾಗಿ ಹಬ್ಬಿರುವ ಮ್ಯಾಂಗ್ರೋವ್ಸ್ ಅರಣ್ಯ ಬಂಗಾಳ ಹುಲಿಗಳ ಪ್ರಮುಖ ಆಶ್ರಯ ತಾಣವೆನಿಸಿದೆ.
- 2004 ರಲ್ಲಿ ಭಾರತ-ಬಾಂಗ್ಲ ಜಂಟಿಯಾಗಿ ನಡೆಸಿದ ಹುಲಿ ಜನಗಣತಿಯಲ್ಲಿ ಈ ಭಾಗದಲ್ಲಿ 450 ಕ್ಕೂ ಹೆಚ್ಚು ಹುಲಿಗಳು ಇರುವುದಾಗಿ ತಿಳಿದುಬಂದಿತ್ತು. ಆದರೆ ಕಳೆದ ಕೆಲವು ವರ್ಷಗಳಲ್ಲಿ 30 ಕ್ಕೂ ಹೆಚ್ಚು ಹುಲಿಗಳು ಅಕ್ರಮ ಸಾಗಾಣಿಕೆ ಮತ್ತು ಬೇಟೆಗೆ ತುತ್ತಾಗಿರುವುದು ಕಂಡು ಬಂದಿದೆ.
- ಹುಲಿಗಳ ಸಂತತಿಯನ್ನು ರಕ್ಷಿಸುವ ಸಲುವಾಗಿ ಈ ವನ್ಯಜೀವಿ ಅಪರಾಧ ನಿಯಂತ್ರಣ ಘಟಕಗಳನ್ನು ಒಟ್ಟು 7 ಕಡೆ ಸ್ಥಾಪಿಸಲಾಗುವುದು. ಒಂದು ತಂಡ 10 ಜನರನ್ನು ಹೊಂದಿರಲಿದೆ.

**ರೈತರಿಗೆ ಎಸ್.ಎಮ್.ಎಸ್.,ಮೂಲಕ ಕೃಷಿ ಮಾಹಿತಿ ನೀಡಲು "ಕಿಸಾನ್ ಪೋರ್ಟಲ್" ಪ್ರಾರಂಭ**

ರಾಷ್ಟ್ರದ ಎಲ್ಲಾ ರಾಜ್ಯಗಳ ರೈತರಿಗೆ ಏಕ ಕಾಲದಲ್ಲಿ ಎಸ್.ಎಮ್.ಎಸ್., ಮೂಲಕ ಕೃಷಿ ಸಂಬಂಧಿತ ಮಾಹಿತಿಯನ್ನು ಕಳುಹಿಸಿಕೊಡಲು "ಕಿಸಾನ್ ಪೋರ್ಟಲ್" ಅನ್ನು ರಾಷ್ಟ್ರಪತಿ ಪ್ರಣಬ್ ಮುಖರ್ಜಿಯವರು ಇತ್ತೀಚೆಗೆ ಉದ್ಘಾಟಿಸಿದರು. ಕಿಸಾನ್ ಪೋರ್ಟಲ್ ನ ಮೂಲಕ ಕೃಷಿ ಮತ್ತು ಹವಾಮಾನ ಮುನ್ಸೂಚನೆಗೆ ಸಂಬಂಧಿಸಿದ ಮಾಹಿತಿ, ಸಲಹೆ ಮತ್ತು ಸೇವೆಗಳನ್ನು ದೇಶದ ಸುಮಾರು 12 ಕೋಟಿ ರೈತರಿಗೆ ಅತ್ಯಂತ ತ್ವರಿತವಾಗಿ ರವಾನಿಸಲು ಅನೂಕೂಲವಾಗಲಿದೆ. ರೈತರು ಈ ಸೇವೆಯನ್ನು ಪಡೆಯಲು ಮೊದಲು ಕಿಸಾನ್ ಕಾಲ್ ಸೆಂಟರ್ ನ ಟೋಲ್ ಫ್ರೀ ಸಂಖ್ಯೆ 1800-180-1551 ಗೆ ಕರೆ ಮಾಡಿ ಅಥವಾ ಅಂತರ್ಜಾಲ ತಾಣಕ್ಕೆ ಭೇಟಿ ನೀಡಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗುತ್ತದೆ.

**ಎಸ್.ಎಮ್.ಎಸ್. ಸೇವೆಯ ಉಪಯೋಗಗಳು:**

- ಈ ಎಸ್.ಎಮ್.ಎಸ್.,ನ ಸಲಹೆ-ಸೂಚನೆಗಳು ರೈತರಿಗೆ ಕೃಷಿಯ ವಿವಿಧ ಆಯಾಮಗಳಾದ ಕೃಷಿ ಉತ್ಪಾದನೆ, ಕೃಷಿ ಮಾರುಕಟ್ಟೆ ವ್ಯವಸ್ಥೆ, ಪಶುಸಂಗೋಪನೆ, ಮೀನುಗಾರಿಗೆ ಮತ್ತು ಹೈನುಗಾರಿಕೆ ಬಗ್ಗೆ ಅಗತ್ಯ ಮಾಹಿತಿ ನೀಡಲಿದೆ
- ರೈತರ ಅನುಕೂಲಕ್ಕೆ ತಕ್ಕಂತೆ ಎಸ್.ಎಮ್.ಎಸ್. ಮಾಹಿತಿಯನ್ನು ಪಡೆಯಬಹುದಾಗಿದೆ
- ಹವಾಮಾನ ಮುನ್ಸೂಚನೆಗೆ ಸಂಬಂಧಿಸಿದ ಎಸ್.ಎಮ್.ಎಸ್. ಮಾಹಿತಿಯಿಂದ ರೈತರು ತಮ್ಮ ಕೃಷಿ ಚಟುವಟಿಕೆಗಳ ಬಗ್ಗೆ ಸರಿಯಾದ ನಿರ್ಧಾರ ತೆಗೆದುಕೊಳ್ಳಬಹುದಾಗಿದೆ, ಇದರಿಂದ ಹವಾಮಾನ ವೈಪರಿತ್ಯದಿಂದ ಸಂಭವಿಸಬಹುದಾದ ಅನೇಕ ನಷ್ಟವನ್ನು ತಡೆಗಟ್ಟಬಹುದಾಗಿದೆ
- ಈ ಎಸ್.ಎಮ್.ಎಸ್. ಮಾಹಿತಿಯಿಂದ ಬೆಳೆಗಳಿಗೆ ಮತ್ತು ಪ್ರಾಣಿಗಳಿಗೆ ಸಂಬಂಧಿಸಿದ ರೋಗಗಳ ಬಗ್ಗೆ ಮತ್ತು ಕೀಟ ಬಾಧೆಗಳ ಬಗ್ಗೆ ಅತ್ಯಂತ ತ್ವರಿತವಾಗಿ ತಿಳಿದುಕೊಂಡು ಸೂಕ್ತ ಮುನ್ನೆಚ್ಚರಿಕೆ ವಹಿಸಲು ಕ್ರಮ ಕೈಗೊಳ್ಳಲು ಸಹಾಯಕವಾಗಲಿದೆ, ಅಲ್ಲದೆ ಯಾವ ಕಾಲದಲ್ಲಿ ಯಾವ ಬೆಳೆ ಸೂಕ್ತ, ಯಾವ ತಳಿಯಿಂದ ಹೆಚ್ಚು ಲಾಭದಾಯಕ ಎಂಬುದರ ಮಾಹಿತಿಯಿಂದ ರೈತರು ತಮ್ಮ ಆದಾಯ ಹೆಚ್ಚಿಸಿಕೊಳ್ಳಬಹುದಾಗಿದೆ
- ಸೂಕ್ತ ಕೃಷಿ ಮಾರುಕಟ್ಟೆ ವ್ಯವಸ್ಥೆ ಬಗ್ಗೆ ಎಸ್.ಎಮ್.ಎಸ್. ಮೂಲಕ ಮಾಹಿತಿ ನೀಡುವುದರಿಂದ ರೈತರು ತಮ್ಮ ಬೆಳೆಗೆ ತಕ್ಕ ಬೆಲೆಯನ್ನು ಪಡೆಯಬಹುದಾಗಿದೆ
- ಈ ಎಸ್.ಎಮ್.ಎಸ್. ಮೂಲಕ ಮಣ್ಣಿನ ಪರೀಕ್ಷೆಗಳ ಫಲಿತಾಂಶಗಳು, ಸೂಕ್ತ ರಸಗೊಬ್ಬರಗಳ ಆಯ್ಕೆ ಹಾಗೂ ಸರ್ಕಾರದ ವಿವಿಧ ಕೃಷಿ ಸಂಬಂಧಿತ ಕಾರ್ಯಕ್ರಮಗಳು ಮತ್ತು ಯೋಜನೆಗಳ ಮಾಹಿತಿ ಲಭ್ಯವಾಗಲಿದೆ.
- ಕೃಷಿ ಸಂಬಂಧಿತ ವಿವಿಧ ಕ್ಷೇತ್ರಗಳ ತಜ್ಞರು, ಸಂಶೋಧನಾ ಕೇಂದ್ರದ ವಿಜ್ಞಾನಿಗಳು ನಿರ್ದಿಷ್ಟ ಬೆಳೆಗೆ ಸಂಬಂಧಿಸಿದಂತೆ ಋತುಮಾನವಾರು ಮಾಹಿತಿಯನ್ನು ಪ್ರಾದೇಶಿಕ ಭಾಷೆಗಳಲ್ಲಿ ನೀಡುವುದರಿಂದ ರೈತರಿಗೆ ಇದರಿಂದ ಬಹಳಷ್ಟು ಅನುಕೂಲವಾಗಲಿದೆ

**ಶ್ರೀರಂಗಪಟ್ಟಣದಲ್ಲಿ ಅಣು ವಿದ್ಯುತ್ ಉತ್ಪಾದನೆಯಲ್ಲಿ ಬಳಸುವ ಖನಿಜ ಪತ್ತೆ**

ಅಣು ವಿದ್ಯುತ್ ಉತ್ಪಾದನೆಯಲ್ಲಿ ಬಳಸುವ ಕೊಲಂಬೈಟ್, ಟ್ಯಾಂಟಲೈಟ್, ನಿಯೋಮಿಯಂ ಟ್ಯಾಂಟಲಮ್ ಹಾಗೂ ಪೆಗಾಟೈಟ್ ಖನಿಜ ನಿಕ್ಷೇಪ ಶ್ರೀರಂಗಪಟ್ಟಣದ ಅಲ್ಲಾಪಟ್ಟಣದಲ್ಲಿ ಪತ್ತೆಯಾಗಿದೆ. ದೇಶದ ಛತ್ತೀಸ್‌ಘಡ್ ರಾಜ್ಯ ಹೊರತು ಪಡಿಸಿದರ ಕರ್ನಾಟಕ ರಾಜ್ಯದ ಶ್ರೀರಂಗಪಟ್ಟಣ ತಾಲೂಕಿನ ಅಲ್ಲಾಪಟ್ಟಣದಲ್ಲಿ ಮಾತ್ರ ಈ ಖನಿಜ ಲಭ್ಯವಿದೆ. ಭಾರತ ಸರ್ಕಾರದ ಅಣು ವಿದ್ಯುತ್ ಇಲಾಖೆ (ಡಿಎಇ) ವ್ಯಾಪ್ತಿಗೆ ಬರುವ ಅಟಾಮಿಕ್ ಮಿನರಲ್ಸ್ ಡೈರಕ್ಟರೇಟ್ ಫಾರ್ ಎಕ್ಸ್‌ಪ್ಲೋರೇಷನ್ ಆಂಡ್ ರೀಸರ್ಚ್ ಸಿಬ್ಬಂದಿ ಅಲ್ಲಾಪಟ್ಟಣದಲ್ಲಿ ಖನಿಜ ನಿಕ್ಷೇಪ ತೆಗೆಯುತ್ತಿದ್ದಾರೆ. ಅಲ್ಲಾಪಟ್ಟಣ ಹಾಗೂ ಮರಳಾಗಾಲ ಗ್ರಾಮದಲ್ಲಿ ಬೀಡು ಬಿಟ್ಟಿರುವ ಅಧಿಕಾರಿಗಳ ತಂಡ ಈ ಪ್ರದೇಶಕ್ಕೆ ಹೊಂದಿಕೊಂಡಂತಿರುವ ಐನೂರಕ್ಕೂ ಹೆಚ್ಚು ಎಕರೆ ಪ್ರದೇಶದ (ಗೋಮಾಳ) ಜಮೀನಲ್ಲಿ ಗಣಿಗಾರಿಕೆ ನಡೆಸಿ ಖನಿಜ ಸಂಪತ್ತು ಕ್ರೋಢೀಕರಿಸುವ ಕೆಲಸದಲ್ಲಿ ತೊಡಗಿದ್ದಾರೆ.

**ಚಿನ್ನದಷ್ಟೇ ಭಾರ**:

ಚಿನ್ನದಷ್ಟೇ ಭಾರವಾಗಿರುವ ನಿಯೋಮಿಯಂ ಟ್ಯಾಂಟಲಮ್ ಎಂಬ ಖನಿಜ, ಕಪ್ಪು ಬಣ್ಣದಲ್ಲಿ ಸಣ್ಣ ಕಲ್ಲಿನ ರೂಪದಲ್ಲಿ ದೊರೆಯುತ್ತಿದೆ. ಇದು ಮೇಲ್ಭಾಗದಲ್ಲಿ ಕಪ್ಪು ಬಣ್ಣದಲ್ಲಿದ್ದರೂ, ಒಳ ಭಾಗದಲ್ಲಿ ಚಿನ್ನದ ಹೊಳಪನ್ನು ಹೊಂದಿರುತ್ತದೆ. ಇದು ಅಣು ವಿದ್ಯುತ್ ಉತ್ಪಾದನೆಯಲ್ಲಿ ಬಳಸಲ್ಪಡುವ ಅಪರೂಪದ ಖನಿಜವಾಗಿದೆ.

**ಶೇಖರಣೆ ಹೇಗೆ:**

ಕಳೆದ 30 ವರ್ಷಗಳ ಹಿಂದೆಯೇ ಇಲ್ಲಿ ಕೊಲಂಬೈಟ್, ಟ್ಯಾಂಟಲೈಟ್, ನಿಯೋಮಿಯಂ ಟ್ಯಾಂಟಲಮ್ ಹಾಗೂ ಪೆಗಾಟೈಟ್ ಖನಿಜ ನಿಕ್ಷೇಪವಿರುವ ಬಗ್ಗೆ ಮಾಹಿತಿ ಹೊಂದಿದ್ದ ಕೇಂದ್ರ ಸರ್ಕಾರ 1998ರ ವರೆಗೆ 15 ವರ್ಷಗಳ ಕಾಲ ಈ ಪ್ರದೇಶದಲ್ಲಿ ಖನಿಜ ನಿಕ್ಷೇಪ ಹೊರ ತೆಗೆದಿತ್ತು. 15 ವರ್ಷಗಳ ಬಳಿಕ ಮತ್ತೊಮ್ಮೆ ಇಲ್ಲಿ ಅಟಾಮಿಕ್ ಮಿನರಲ್ಸ್ ಡೈರಕ್ಟರೇಟ್ ಫಾರ್ ಎಕ್ಸ್‌ಪ್ಲೋರೇಷನ್ ಅಂಡ್ ರೀಸರ್ಚ್‌ನ ಅಧಿಕಾರಿಗಳ ತಂಡ ಭೂಮಿಯ ಆಳದಲ್ಲಿ ಎಷ್ಟು ಅಡಿಗಳವರೆಗೆ ಈ ಖನಿಜ ನಿಕ್ಷೇಪದ ಸಂಪತ್ತು ಲಭ್ಯವಾಗಲಿದೆ ಎಂಬ ಬಗ್ಗೆ ಪರಿಶೀಲನೆ ನಡೆಸುತ್ತಿದೆ.

**ಮತ್ತೆ ಆದೇಶ:**

ಈ ಹಿಂದೆ ಇಲ್ಲಿ ಅಣು ವಿದ್ಯುತ್ ಉತ್ಪಾದನೆಗೆ ಬೇಕಾದ ಖನಿಜವನ್ನು ಇಲ್ಲಿ ತೆಗೆಯಲಾಗುತ್ತಿತ್ತು. ಕೆಲಕಾಲ ಕಾಮಗಾರಿ ಸ್ಥಗಿತಗೊಳಿಸಲಾಗಿತ್ತು. ಈಗ ಕೇಂದ್ರ ಸರ್ಕಾರದ ಆದೇಶ ಮೇರೆಗೆ ಮತ್ತೆ ಖನಿಜ ತೆಗೆಲಾಗುತ್ತಿದೆ. ಇಲ್ಲಿ ತೆಗೆಯುತ್ತಿರುವ ಕೊಲಂಬೈಟ್, ಟ್ಯಾಂಟಲೈಟ್, ನಿಯೋಮಿಯಂ ಟ್ಯಾಂಟಲಮ್ ಹಾಗೂ ಪೆಗಾಟೈಟ್ ಖನಿಜ ನಿಕ್ಷೇಪಗಳನ್ನು ಅಣು ವಿದ್ಯುತ್ ಉತ್ಪಾದನೆಯಲ್ಲಿ ಬಳಲಾಗುತ್ತದೆ. ಇವು ಯುರೇನಿಯಂ ಅಥವಾ ಥೋರಿಯಂ ನಂತಹ ಉತ್ಪನ್ನವಲ್ಲ. ಇಲ್ಲಿ ವಿಕಿರಣ ಹೊರಸೂಸುವ ಯಾವುದೇ ಉತ್ಪನ್ನಗಳು ಈ ಪ್ರದೇಶದಲ್ಲಿ ಇಲ್ಲ ಎಂದು ಸ್ಪಷ್ಟಪಡಿಸಿರುವ ಅಧಿಕಾರಿ, ಇಲ್ಲಿ ಲಭ್ಯವಿರುವ ಖನಿಜದ ಪ್ರಮಾಣದ ಬಗ್ಗೆ ಅಂದಾಜು ಮಾಡಿಲ್ಲ ಎಂದು ಮಾಹಿತಿ ನೀಡಿದ್ದಾರೆ.

## ಮಂಗಳೂರಿನ ನಿಡ್ಡೋಡಿಯಲ್ಲಿ ಬೃಹತ್ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪಿಸಲು ಕೇಂದ್ರ ಸರ್ಕಾರ ಒಪ್ಪಿಗೆ

ತದಡಿಯಲ್ಲಿ ಅನಿಲ ವಿದ್ಯುತ್ ಉತ್ಪಾದನಾ ಘಟಕ ಆರಂಭವಾಗುವ ಸುದ್ದಿ ಹೊರಬಿದ್ದ ಬೆನ್ನಲ್ಲೇ ಅದಕ್ಕಿಂತ ಬೃಹತ್ ಉಷ್ಣ ವಿದ್ಯುತ್ ಸ್ಥಾವರ ಕರಾವಳಿ ಪ್ರದೇಶಕ್ಕೆ ಕಾಲಿಡುವುದು ನಿಶ್ಚಿತವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ನಿಡ್ಡೋಡಿ ಎಂಬಲ್ಲಿ ಕೇಂದ್ರ ಸರ್ಕಾರದ ಇಂಧನ ಇಲಾಖೆಗೆ ಸೇರಿದ ಸುಮಾರು 4,000 ಮೆ.ವಾ. ಸಾಮರ್ಥ್ಯದ ಅಲ್ಟ್ರಾ ಮೆಗಾ ಪವರ್ ಪ್ರಾಜೆಕ್ಟ್ (ಯುಎಂಪಿಪಿ) ತಲೆ ಎತ್ತಲಿದ್ದು, ವಿದೇಶಿ ಕಲ್ಲಿದ್ದಲು ಆಧಾರಿತ ಈ ಯೋಜನೆಯು ಸಮುದ್ರ ತೀರಕ್ಕೆ ಅತ್ಯಂತ ಸಮೀಪದಲ್ಲಿ ಸ್ಥಾಪನೆಯಾಗಲಿದೆ.

ಇದರಿಂದಾಗಿ ಪರಿಸರವಾದಿಗಳ ಪ್ರತಿಭಟನೆ ನಡುವೆಯೂ ಕರಾವಳಿ ಪ್ರದೇಶದಲ್ಲೇ ಎರಡು ಬೃಹತ್ ವಿದ್ಯುತ್ ಉತ್ಪಾದನಾ ಯೋಜನೆಗಳು ಬಂದಂತಾಗುತ್ತದೆ. ಕೇಂದ್ರ ಸರ್ಕಾರ ದೇಶದ ವಿವಿಧ ರಾಜ್ಯಗಳಲ್ಲಿ ಒಟ್ಟು 12 ಅಲ್ಟ್ರಾ ಮೆಗಾ ಉಷ್ಣ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲು ನಿರ್ಧರಿಸಿದ್ದು, ಈ ಪೈಕಿ ಒಂದು ಸ್ಥಾವರ ಕರ್ನಾಟಕಕ್ಕೂ ಲಭ್ಯವಾಗಿದೆ. ಉಷ್ಣ ವಿದ್ಯುತ್ ಸ್ಥಾವರ ಯುಎಂಪಿಪಿ ಯೋಜನೆಯು ಪ್ರಾಥಮಿಕ ಹಂತದಲ್ಲಿದ್ದು, ಕೇಂದ್ರದ ತಂಡ ನಿಡ್ಡೋಡಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ತಂಡದ ಸಲಹೆ-ಸೂಚನೆಗಳಿಗೆ ಅನುಗುಣವಾಗಿ ಕೆಐಎಡಿಬಿ (ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ) ಜತೆ ಸಮಾಲೋಚನೆ ನಡೆಸಿ, ಭೂಮಿಯ ಲಭ್ಯತೆ ಬಗ್ಗೆ ಪರಿಶೀಲಿಸಲಾಗುತ್ತಿದೆ. ಭೂಮಿಯ ಸೂಕ್ತತೆ ಮತ್ತು ಪರಿಸರ ಅಧ್ಯಯನ ವರದಿಗಳನ್ನು ಆಧರಿಸಿ, ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆ ಅನುಮೋದನೆ ಪಡೆದು, ಯೋಜನೆ ಅನುಷ್ಠಾನದ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ವಿದ್ಯುತ್ ದರ ಅತ್ಯಂತ ಕಡಿಮೆ ಮಾಡುವ ಉದ್ದೇಶದಿಂದ ಅಲ್ಟ್ರಾ ಮೆಗಾ ಪವರ್ ಪ್ರಾಜೆಕ್ಟ್ ಅನ್ನು ಕಲ್ಲಿದ್ದಲು ದೊರೆಯುವ ಪ್ರದೇಶ ಅಥವಾ ಸಮುದ್ರ ತೀರಕ್ಕೆ ಸಮೀಪ ಸ್ಥಾಪಿಸಬೇಕು ಎಂಬ ನಿಯಮವಿದೆ. ಹಾಗಾಗಿ, 4,000 ಸಾವಿರ ಮೆ.ವಾ. ಸಾಮರ್ಥ್ಯದ ಈ ಯೋಜನೆಯನ್ನು ನಿಡ್ಡೋಡಿಯಲ್ಲಿ ಸ್ಥಾಪಿಸುವ ಬಗ್ಗೆ ಅಧ್ಯಯನ ನಡೆಸಲಾಗುತ್ತಿದೆ

**ಕೇಂದ್ರ ತಂಡದ ಪರಿಶೀಲನಾ ವರದಿಯಲ್ಲಿ ಯೋಜನೆಗೆ ನೀಡಿದ ಸಲಹೆ, ಸೂಚನೆಗಳು ಹೀಗಿವೆ:**

- ಮುಖ್ಯ ವಿದ್ಯುತ್ ಸ್ಥಾವರಕ್ಕೆ 600ರಿಂದ 700 ಎಕರೆ ಜಾಗ ಬೇಕಾಗಿದ್ದು, ಅದು ಖಾಸಗಿ ಕೃಷಿ ಭೂಮಿ ಮತ್ತು ತೋಟಗಳನ್ನು ಹೊರತುಪಡಿಸಿ ಸರ್ಕಾರಿ ಭೂಮಿ, ಕೃಷಿಯೇತರ ಭೂಮಿ, ಬಂಜರು ಭೂಮಿ ಹಾಗೂ ಖುಷ್ಕಿ ಭೂಮಿಯನ್ನು ಗುರುತಿಸಬೇಕು.
- ಬೂದಿ ಹೊಂಡಕ್ಕಾಗಿ ಅಗತ್ಯವಿರುವ 250 ಎಕರೆ ಜಾಗವನ್ನು ಸ್ಥಾವರದಿಂದ 10 ಕಿ.ಮೀ. ವ್ಯಾಪ್ತಿಯಲ್ಲಿ ಆದಷ್ಟು ಸರ್ಕಾರಿ ಭೂಮಿ ಗುರುತಿಸಬೇಕು.
- ವಿದ್ಯುತ್ ಸ್ಥಾವರದ ಟೌನ್‌ಶಿಪ್‌ಗೆ ಬೇಕಾಗುವ 100 ಎಕರೆ ಜಾಗವನ್ನು ಮುಖ್ಯ ವಿದ್ಯುತ್ ಸ್ಥಾವರದಿಂದ 10 ಕಿ.ಮೀ. ವ್ಯಾಪ್ತಿಯಲ್ಲಿ ಗುರುತಿಸಬೇಕು.
- ಉದ್ದೇಶಿತ ಯೋಜನಾ ಸ್ಥಳದ ಉತ್ತರ ದಿಕ್ಕಿಗೆ ಇರುವ ಅರಣ್ಯ ಭೂಮಿ ಎಂದು ಹೇಳಲಾಗುವ ಭೂಮಿಯ ಬಗ್ಗೆ ಖಾತ್ರಿಪಡಿಸಿಕೊಂಡು, ಆ ಭೂಮಿಯನ್ನು ಉಪಯೋಗಿಸಿಕೊಳ್ಳಬೇಕು.

- ಯುಪಿಸಿಎಲ್ ಸ್ಥಾವರಕ್ಕೆ ಸಂಬಂಧಿಸಿದಂತೆ ಪರಿಸರ ಮತ್ತು ಪುನರ್‌ವಸತಿ ಬಗ್ಗೆ ಸ್ವತಂತ್ರ ಪರಿಸರ ಅಧ್ಯಯನ ಸಂಸ್ಥೆಯಿಂದ ವರದಿ ಪಡೆದು, ಅದರ ಸಾರಾಂಶವನ್ನು ಸ್ಥಳೀಯರಿಗೆ ಮನವರಿಕೆ ಮಾಡಿಕೊಡಬೇಕು.

ಕರುನಾಡು ಎಗ್ಸಾಮ್ಸ್

# ಕ್ರೀಡೆ

**ಕಾನ್ಫೆಡರೇಷನ್ಸ್ ಕಪ್: ಬ್ರೆಜಿಲ್ ಗೆ ಒಲಿದ ಪ್ರಶಸ್ತಿ**

ವಿಶ್ವದ ಎರಡು ಪ್ರಮುಖ ಫುಟ್ಬಾಲ್ ತಂಡಗಳಾದ ಫ್ರಾನ್ಸ್ ಮತ್ತು ಬ್ರೆಜಿಲ್ ನಡುವೆ ನಡೆದ ಕಾನ್ಫೆಡರೇಷನ್ ಫೈನಲ್ ಪಂದ್ಯದಲ್ಲಿ ಬ್ರೆಜಿಲ್ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತ್ತು. ಇತ್ತ ಫ್ರಾನ್ಸ್ ಸೋಲನ್ನು ಕಂಡು ನಿರಾಸೆಯನ್ನು ಅನುಭವಿಸಿದರೆ, ಅತ್ತ ಬ್ರೆಜಿಲ್ ಸತತ ಮೂರನೇ ಬಾರಿಗೆ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಮುಡಿಗೇರಿಸಿಕೊಳ್ಳುವ ಮೂಲಕ ಸಂಭ್ರಮದ ಅಲೆಯಲ್ಲಿ ತೇಲಿತು.

- ಫ್ರೆಡ್ ದಾಖಲಿಸಿದ ಎರಡು ಮತ್ತು ನೇಮಾರ್ ದಾಖಲಿಸಿದ ಒಂದು ಮಹತ್ವದ ಗೋಲಿನ ನೆರವಿನಿಂದ ಬ್ರೆಜಿಲ್ ತಂಡ ಫ್ರಾನ್ಸ್ ತಂಡವನ್ನು 3-0 ಅಂತರದಿಂದ ಮಣಿಸಿತು.
- ಬ್ರೆಜಿಲ್ ಗೆ ಇದು ಸತತ ಮೂರನೇ ಬಾರಿಗೆ ದೊರೆಯುತ್ತಿರುವ ಪ್ರಶಸ್ತಿಯಾದರೆ. 2010 ರಲ್ಲಿ ವಿಶ್ವಕಪ್ ನಲ್ಲಿ ಸ್ವಿಟ್ಜರ್ಲ್ಯಾಂಡ್ ವಿರುದ್ಧದ ಪಂದ್ಯದಿಂದ ಹಿಡಿದು, ಸ್ಪರ್ಧಾತ್ಮಕ ಪಂದ್ಯದಲ್ಲಿ ಸೋಲನುಭವಿಸಿದ ಸ್ಪೇನ್ ಫೈನಲ್ ಪಂದ್ಯದಲ್ಲಿ ಸೋಲುವ ಮೂಲಕ ಪ್ರಶಸ್ತಿಯಿಂದ ವಂಚಿತವಾಯಿತು.

**ಬ್ರೆಜಿಲ್ ಆಟಗಾರ ನೇಮಾರ್ ಗೆ "ಗೋಲ್ಡನ್ ಬಾಲ್" ಪ್ರಶಸ್ತಿ:** ಬ್ರೆಜಿಲ್ ಫುಟ್ಬಾಲ್ ತಂಡದ ಆಟಗಾರ ನೇಮಾರ್ ಅವರು ಪಂದ್ಯಾವಳಿಯ ಗೋಲ್ಡನ್ ಬಾಲ್ ಪ್ರಶಸ್ತಿಗೆ ಭಾಜನರಾದರು. ನೇಮಾರ್ ಅವರು ಈ ಪಂದ್ಯಾವಳಿಯಲ್ಲಿ ಒಟ್ಟು ನಾಲ್ಕು ಗೋಲ್ ಗಳನ್ನು ಬಾರಿಸಿದರು.

**"ಗೋಲ್ಡನ್ ಬೂಟ್" ಪ್ರಶಸ್ತಿ:** ಅತಿ ಹೆಚ್ಚು ಗೋಲ್ ಗಳಿಸಿದವರಿಗೆ ನೀಡುವ ಗೋಲ್ಡನ್ ಬೂಟ್ ಪ್ರಶಸ್ತಿಗೆ ಸ್ಪೇನ್ ಆಟಗಾರ ಫೆರ್ನಾಂಡೊ ಟೊರೆಸ್ ತಮ್ಮದಾಗಿಸಿಕೊಂಡರು.

**ಇಟಲಿಗೆ ಮೂರನೇ ಸ್ಥಾನ:** ಪೆನಾಲ್ಟಿ ಶೂಟೌಟ್ ನಲ್ಲಿ ಉರುಗ್ವೆ ತಂಡವನ್ನು 3-2 ಗೋಲುಗಳಿಂದ ಮಣಿಸಿದ ಇಟಲಿ ತಂಡ ಮೂರನೇ ಸ್ಥಾನವನ್ನು ಪಡೆದುಕೊಂಡು ಕಂಚಿನ ಪದಕಕ್ಕೆ ತೃಪ್ತಿಪಟ್ಟುಕೊಂಡಿತು.

**"ಐಐಸಿ ಟೆಸ್ಟ್ ಶ್ರೇಣಿ (ICC Test Ranking)": ಎರಡನೇ ಸ್ಥಾನಕ್ಕೆ ಕುಸಿದ ಭಾರತ**

ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಜುಲೈ 8, 2013 ರಂದು ಬಿಡುಗಡೆಗೊಳಿಸಿರುವ ಟೆಸ್ಟ್ ಶ್ರೇಣಿ ಪಟ್ಟಿಯಲ್ಲಿ ಭಾರತ ಎರಡನೇ ಸ್ಥಾನವನ್ನು ಪಡೆದುಕೊಂಡಿದೆ. ದಕ್ಷಿಣ ಆಫ್ರಿಕಾ ನಂ.1 ಸ್ಥಾನಕ್ಕೆ ಜಿಗಿದಿದೆ.

- ದಕ್ಷಿಣ ಆಫ್ರಿಕಾ ಒಟ್ಟು 135 ಪಾಯಿಂಟ್ ಗಳಿಂದ ಪಟ್ಟಿಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಭಾರತ ಒಟ್ಟು 116 ಪಾಯಿಂಟ್ ಗಳನ್ನು ಗಳಿಸುವ ಮೂಲಕ ದ್ವಿತೀಯ ಸ್ಥಾನಕ್ಕೆ ತಳ್ಳಲ್ಪಟ್ಟಿದೆ.

- ಇಂಗ್ಲೆಂಡ್ ಪಟ್ಟಿಯಲ್ಲಿ ಮೂರನೇ ಸ್ಥಾನವನ್ನು ಪಡೆದುಕೊಂಡಿದೆ. ಆಸ್ಟ್ರೇಲಿಯಾ ತಂಡದ ಮೇಲೆ ಮುಂದಿನ ದಿನಗಳಲ್ಲಿ ನಡೆಯಲಿರುವ ಟೆಸ್ಟ್ ಟೂರ್ನಿಯಲ್ಲಿ ಇಂಗ್ಲೆಂಡ್ 3-0 ಅಂತರದಿಂದ ಗೆಲುವು ಸಾಧಿಸಿದರೆ ಎರಡನೇ ಸ್ಥಾನವನ್ನು ಗಳಿಸಲಿದೆ.

**ವಿಂಬಲ್ಡನ್ ಗ್ರ್ಯಾನ್ ಸ್ಲಾಮ್ 2013: ಆಂಡ್ರ್ಯೂ ಮರ್ರೆ ಮತ್ತು ಬಾತೊಲಿ ಚಾಂಪಿಯನ್**

**ಪುರುಷರ ಸಿಂಗಲ್ಸ್**: ಆಂಡ್ರ್ಯೂ ಮರ್ರೆ 77 ವರ್ಷಗಳ ಬಳಿಕ ವಿಂಬಲ್ಡನ್ ಗ್ರ್ಯಾನ್ ಸ್ಲಾಮ್ ಪ್ರಶಸ್ತಿಯನ್ನು ಎತ್ತಿಹಿಡಿದ ಬ್ರಿಟನ್ ಆಟಗಾರ ಎನಿಸಿಕೊಂಡರು. ಆಲ್ ಇಂಗ್ಲೆಂಡ್ ಕ್ಲಬ್ ನಲ್ಲಿ ನಡೆದ ಪುರುಷರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಮರ್ರೆ ವಿಶ್ವದ ಮತ್ತೊಬ್ಬ ಶ್ರೇಷ್ಠ ಆಟಗಾರ ಸೆರ್ಬಿಯಾದ ನೊವಾಕ್ ಜೊಕೊವಿಕ್ ಅವರನ್ನು ಸೋಲಿಸಿ ವಿಜಯಿ ಶಾಲಿಯಾದರು.

- ತಮ್ಮ ಅಭಿಮಾನಿಗಳ ನಿರೀಕ್ಷೆಯನ್ನು ಹುಸಿಗೊಳಿಸದ ಮರ್ರೆ ಅವರು 6-4, 7-5, 6-4 ನೇರ ಸೆಟ್ ಗಳಿಂದ ನೊವಾಕ್ ಜೊಕೊವಿಕ್ ವಿರುದ್ಧ ಗೆಲುವು ಸಾಧಿಸಿದರು.
- 1936 ರಲ್ಲಿ ಫ್ರೆಡ್ ಪೆರ್ರಿ ವಿಂಬಲ್ಡನ್ ಗೆದ್ದ ನಂತರ 77 ವರ್ಷಗಳ ವರೆಗೆ ವಿಂಬಲ್ಡನ್ ತವರಿನ ಆಟಗಾರರಿಗೆ ಮರೀಚಿಕೆಯಾಗಿತ್ತು. ಫ್ರೆಡ್ ಸತತವಾಗಿ ಮೂರು ಬಾರಿ ವಿಂಬಲ್ಡನ್ ಗೆದ್ದಿದ್ದರು.
- ಮರ್ರೆ ಈ ಹಿಂದೆ 2008 ಮತ್ತು 2012 ರಲ್ಲಿ ವಿಂಬಲ್ಡನ್ ಫೈನಲ್ ತಲುಪಿದ್ದರು. ಆದರೆ ಎರಡು ಬಾರಿಯೂ ರನ್ನರ್ ಆಪ್ ಸ್ಥಾನಕ್ಕೆ ಮಾತ್ರ ತೃಪ್ತಿಪಟ್ಟುಕೊಂಡಿದ್ದರು.

**ಮಹಿಳಾ ಸಿಂಗಲ್ಸ್ ಪ್ರಶಸ್ತಿ:** ಫ್ರಾನ್ಸ್ ನ ಮರಿಯೊನ್ ಬಾತೊಲಿ ವಿಂಬಲ್ಡನ್ ಟೆನ್ನಿಸ್ ಟೂರ್ನಿಯ ವನಿತೆಯರ ಸಿಂಗಲ್ಸ್ ನ ನೂತನ ರಾಣಿಯಾಗಿ ಹೊರಹೊಮ್ಮಿದ್ದಾರೆ. ವೃತ್ತಿ ಜೀವನದಲ್ಲಿ ಮೊದಲ ಗ್ರ್ಯಾನ್ ಸ್ಲಾಮ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಳ್ಳುವ ಮೂಲಕ ಇತಿಹಾಸ ಬರೆದರು.

- ಮಹಿಳೆಯರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಬಾತೊಲಿ 6-1, 6-4 ನೇರ ಸೆಟ್ ಗಳಿಂದ ಜರ್ಮನಿಯ ಸಬಿನ್ ಲಿಸಿಕಿ ಅವರನ್ನು ಮಣಿಸುವ ಮೂಲಕ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.
- 2007 ರಲ್ಲಿ ವಿಂಬಲ್ಡನ್ ಫೈನಲ್ ಪ್ರವೇಶಿಸಿದ್ದ ಬಾತೊಲಿ ಸೆರೆನಾ ವಿಲಿಯಂ ವಿರುದ್ಧ ಸೋಲುವ ಮೂಲಕ ರನ್ನರ್ ಆಪ್ ಆಗಿದ್ದರು.

**ಮಿಶ್ರ ಡಬ್ಬಲ್ಸ್ ಪ್ರಶಸ್ತಿ:** ಡೆನಿಯಲ್ ನೆಸ್ಟರ್ ಮತ್ತು ಕ್ರಿಸ್ಟಿನ ಲಡೆನೊವಿಕ್ 5-7, 6-2, 8-6 ನೇರ ಸೆಟ್ ಗಳಿಂದ ಲಿಸಾ ರೆಮಂಡ್ ಮತ್ತು ಬ್ರುನೊ ಸೊರೆಸ್ ಅವರನ್ನು ಮಣಿಸುವ ಮೂಲಕ ಪ್ರಶಸ್ತಿಯನ್ನು ಗೆದ್ದುಕೊಂಡರು

**ರಾಷ್ಟ್ರೀಯ ಹಾಕಿ ತಂಡಕ್ಕೆ "ಮಹಾರಾಜ ಕೃಷ್ಣನ್ ಕೌಶಿಕ್" ಕೋಚ್ ಆಗಿ ನೇಮಕ**

ಒಲಂಪಿಯನ್ ಮಹರಾಜನ್ ಕೃಷ್ಣನ್ ಕೌಶಿಕ್ ಭಾರತ ಹಾಕಿ ತಂಡದ ನೂತನ ಕೋಚ್ ಆಗಿ ನೇಮಕಗೊಂಡಿದ್ದಾರೆ. ಕಳಪೆ ಪ್ರದರ್ಶನದ ಹಿನ್ನಲೆಯಲ್ಲಿ ಆಸ್ಟ್ರೇಲಿಯಾದ ಮೈಕಲ್ ನಾಬ್ಸ್ ಅವರನ್ನು ಕೋಚ್ ಸ್ಥಾನದಿಂದ ತೆರವುಗೊಳಿಸಿದ ಬೆನ್ನಲ್ಲೇ ಕೌಶಿಕ್ ಅವರನ್ನು ಕೋಚ್ ಆಗಿ ನೇಮಕ ಮಾಡಲಾಗಿದೆ.

- ಕೌಶಿಕ್ ಅವರು ಭಾರತ ಕೊನೆಯ ಬಾರಿಗೆ ಒಲಂಪಿಕ್ಸ್ ನಲ್ಲಿ ಚಿನ್ನದ ಪದಕ ಗೆದ್ದ (ಮಾಸ್ಕೊ 1980) ಭಾರತ ತಂಡವನ್ನು ಪ್ರತಿನಿಧಿಸಿದ್ದರು.
- ಉನ್ನತ ಪ್ರದರ್ಶನ ನಿರ್ದೇಶಕ ರೋಲೆಂಟ್ ಒಲ್ಟಾಮನ್ಸ್ ಅವರ ಸಹಾಯಕರಾಗಿ ಕೌಶಿಕ್ ಸೇವೆ ಸಲ್ಲಿಸಲ್ಲಿದ್ದಾರೆ.
- ಈ ಹಿಂದೆ ಕೌಶಿಕ್ ಕೋಚ್ ಆಗಿದ್ದಾಗ ಭಾರತ ತಂಡ 1998 ರಲ್ಲಿ ಬ್ಯಾಂಕಾಕ್ ನಲ್ಲಿ ನಡೆದ ಏಷ್ಯನ್ ಗೇಮ್ಸ್ ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿತ್ತು. 2006 ರಲ್ಲಿ ದೋಹಾದಲ್ಲಿ ನಡೆದ ಏಷ್ಯನ್ ಗೇಮ್ಸ್ ನಲ್ಲಿ ಕಂಚು ಗಳಿಸಿತ್ತು.
- ಕೌಶಿಕ್ ಅವರಿಗೆ 1998 ರಲ್ಲಿ ಅರ್ಜುನ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

**ರಾಷ್ಟ್ರೀಯ ಕ್ರೀಡಾಭಿವೃದ್ಧಿ ಮಸೂದೆ-2013 ಕರಡು ಹಸ್ತಾಂತರ**

ದೇಶದ ಕ್ರೀಡಾ ಕ್ಷೇತ್ರದಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಕ್ರೀಡಾ ಸಚಿವಾಲಯ ರಚಿಸಿದ್ದ ನ್ಯಾ. ಮುದ್ಗಲ್ ಸಮಿತಿ ರೂಪಿಸಿರುವ ರಾಷ್ಟ್ರೀಯ ಕ್ರೀಡಾಭಿವೃದ್ಧಿ ಕರಡು ಮಸೂದೆ-2013 ಪ್ರತಿಯನ್ನು ಇತ್ತೀಚೆಗೆ ಸರ್ಕಾರಕ್ಕೆ ಸಲ್ಲಿಸಲಾಯಿತು. ಸಮಿತಿಯ ಅಧ್ಯಕ್ಷರಾಗಿದ್ದ ಮುದಗಲ್ ಮುಕಲ್ ಅವರು ಕೇಂದ್ರ ಕ್ರೀಡಾ ಸಚಿವ ಜೀತೇಂದ್ರ ಸಿಂಗ್ ಅವರಿಗೆ ಹಸ್ತಾಂತರಿಸಿದರು.

**ಮಸೂದೆಯಲ್ಲಿರುವ ಪ್ರಮುಖ ಅಂಶಗಳು**:

- ದೇಶದ ಇಡೀ ಕ್ರೀಡಾ ಸಂಸ್ಥೆಗಳನ್ನು ಒಂದೇ ನೀತಿ ಸಂಹಿತೆಯಡಿ ಚೌಕಟ್ಟಿನಲ್ಲಿಡುವ ಸಲಹೆಯನ್ನು ಸಮಿತಿ ಶಿಫಾರಸ್ಸು ಮಾಡಿದೆ ಎನ್ನಲಾಗಿದೆ. ದೇಶದ ಎಲ್ಲಾ ಕ್ರೀಡಾ ಸಂಸ್ಥೆಗಳ ವ್ಯಾಜ್ಯವನ್ನು ಬಗೆಹರಿಸುವ ಸಲುವಾಗಿ ರಾಷ್ಟ್ರಮಟ್ಟದ ಕ್ರೀಡಾ ನ್ಯಾಯಾಧಿಕರಣ, ಎಲ್ಲಾ ಕ್ರೀಡಾ ಸಂಸ್ಥೆಗಳ ಪದಾಧಿಕಾರಿಗಳ ಚುನಾವಣೆಗೆ ಸಂಬಂಧಿಸಿದಂತೆ ರಾಷ್ಟ್ರಮಟ್ಟದಲ್ಲಿ ಕ್ರೀಡಾ ಚುನಾವಣಾ ಆಯೋಗ ಸ್ಥಾಪನೆ, ಭ್ರಷ್ಟಾಚಾರ ಆರೋಪ ಹೊತ್ತ ಕ್ರೀಡಾ ಸಂಸ್ಥೆಗಳ ಪದಾಧಿಕಾರಿಗಳ ಚುನಾವಣೆಗಳಿಗೆ ಸ್ಪರ್ಧಿಸುವುದರ ಮೇಲೆ ನಿಷೇಧ ಹೇರುವುದರ ಮೇಲೆ ಸಮಿತಿ ತನ್ನ ವರದಿಯಲ್ಲಿ ಶಿಫಾರಸ್ಸು ಮಾಡಿದೆ.
- ಕ್ರೀಡಾ ಸಂಸ್ಥೆಗಳಲ್ಲಿ ಆಡಳಿತಾತ್ಮಕ ಹುದ್ದೆಗಳಲ್ಲಿ ಮುಂದುವರೆಯುವ ವ್ಯಕ್ತಿಗಳಿಗೆ ವಯೋಮಿತಿಯನ್ನು ನಿಗದಿಪಡಿಸುವುದು, ಯಾವುದೇ ಪದಾಧಿಕಾರಿಗಳ ಹುದ್ದೆಯಲ್ಲಿ ನಿರ್ದಿಷ್ಟ ವ್ಯಕ್ತಿಯು ಎರಡಕ್ಕಿಂತ ಹೆಚ್ಚು ಬಾರಿ ಚುನಾಯಿತನಾಗಿದ್ದರೆ, ಮೂರನೇ ಬಾರಿ ಸ್ಪರ್ಧಿಸುವುದರ ಮೇಲೆ ನಿರ್ಬಂಧ ಹೇರಲು ಸಮಿತಿ ಶಿಫಾರಸ್ಸು ಮಾಡಿದೆ.

**ಸಮಿತಿ ಬಗ್ಗೆ**

- ರಾಷ್ಟ್ರೀಯ ಕ್ರೀಡಾಭಿವೃದ್ಧಿ ಮಸೂದೆಯನ್ನು ಪರಿಷ್ಕರಿಸುವ ಸಲುವಾಗಿ ಕೇಂದ್ರ ಕ್ರೀಡಾ ಸಚಿವಾಲಯ ಡಿಸೆಂಬರ್, 2011 ರಲ್ಲಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನ ನಿವೃತ್ತ ನ್ಯಾಯಾಧೀಶರಾದ ನ್ಯಾ.ಮುಕಲ್ ಮುದಗಲ್ ಅವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿತ್ತು. ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಅಭಿನವ್ ಬಿಂದ್ರಾ, ಭಾರತ ಪುರುಷರ ತಂಡದ ಮಾಜಿ ನಾಯಕ ವೀರನ್ ರಶ್ಕಿನಾ, ಕ್ರೀಡಾ ಇಲಾಖೆಯ ಕೆಲ ಅಧಿಕಾರಿಗಳು ಮತ್ತು ಕೆಲ ಕಾನೂನು ತಜ್ಞರಿದ್ದರು.

**ತ್ರಿಕೋನ ಏಕದಿನ ಕ್ರಿಕೆಟ್ ಸರಣಿಯನ್ನು ತನ್ನದಾಗಿಸಿಕೊಂಡ ಭಾರತ**

ಪಂದ್ಯದ ಅಂತಿಮ ಓವರ್‌ಗಳಲ್ಲಿ ಉಸಿರು ಬಿಗಿ ಹಿಡಿಸುವಂತಹ ರೋಚಕ ಸಂದರ್ಭದಲ್ಲಿ ಅಮೋಘ ಬ್ಯಾಟಿಂಗ್ ನಡೆಸಿದ ಭಾರತ ಕ್ರಿಕೆಟ್ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ, ಶ್ರೀಲಂಕಾ ವಿರುದ್ಧದ ತ್ರಿಕೋನ ಏಕದಿನ ಸರಣಿಯ ಫೈನಲ್ ಪಂದ್ಯದಲ್ಲಿ ಭಾರತಕ್ಕೆ ರೋಚಕ 1 ವಿಕೆಟ್ ಜಯ ತಂದುಕೊಟ್ಟರು. ಈ ಜಯದ ಮೂಲಕ ಭಾರತ ತಂಡ ವೆಸ್ಟ್ ಇಂಡೀಸ್‌ನಲ್ಲಿ ನಡೆದ ತ್ರಿಕೋನ ಏಕದಿನ ಸರಣಿಯನ್ನು ತನ್ನದಾಗಿಸಿಕೊಂಡಿದೆ. ಅಲ್ಲದೆ ವಿಂಡೀಸ್ ನೆಲದಲ್ಲಿ ಹ್ಯಾಟ್ರಿಕ್ ಏಕದಿನ ಸರಣಿ ಗೆದ್ದ ಸಾಧನೆಯನ್ನು ಭಾರತ ತಂಡ ಮಾಡಿದೆ. ಈ ಹಿಂದೆ 2009 ಹಾಗೂ 2011ರಲ್ಲಿ ವಿಂಡೀಸ್ ಪ್ರವಾಸದಲ್ಲಿ ಭಾರತ ತಂಡ ಏಕದಿನ ಸರಣಿಯನ್ನು ತನ್ನದಾಗಿಸಿಕೊಂಡಿತು. ಈ ಇನಿಂಗ್ಸ್‌ನಲ್ಲಿ ಧೋನಿ ಮತ್ತೊಮ್ಮೆ ತಮ್ಮ ತಾಳ್ಮೆಯ ಆಟ ಪ್ರದರ್ಶಿಸಿದ್ದು, ಪಂದ್ಯ ಪುರಷ ಪ್ರಶಸ್ತಿ ಗಳಿಸಿದರಲ್ಲದೆ ಏಕದಿನ ಕ್ರಿಕೆಟ್‌ನಲ್ಲಿ ಉತ್ತಮ ಫಿನಿಶರ್ ಎಂಬುದನ್ನು ಸಾಬೀತುಪಡಿಸಿದ್ದಾರೆ. ಯುವ ವೇಗಿ ಭುವನೇಶ್ವರ್ ಕುಮಾರ್ ಸರಣಿಯಲ್ಲಿ ಒಟ್ಟಾರೆ 10 ವಿಕೆಟ್ ಪಡೆದ ಸಾಧನೆಗಾಗಿ ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದರು.

**ಕಾಮನ್ ವೆಲ್ತ್ ಚೆಸ್ ಚಾಂಪಿಯನ್ ಷಿಪ್: "ಅಭಿಜಿತ್ ಗುಪ್ತಾ"ಗೆ ಬಂಗಾರ**

ಭಾರತದ ಉದಯೋನ್ಮುಖ ಚೆಸ್ ಆಟಗಾರ "ಅಭಿಜಿತ್ ಗುಪ್ತಾ" ಪೋರ್ಟ್ ಎಲಿಜಬೆತ್ ನಲ್ಲಿ ನಡೆದ 19 ನೇ ಕಾಮನ್ ವೆಲ್ತ್ ಚೆಸ್ ಚಾಂಪಿಯನ್ ಷಿಪ್ ನಲ್ಲಿ ಚಿನ್ನದ ಪದಕವನ್ನು ಗೆದ್ದುಕೊಂಡರು. ದಕ್ಷಿಣ ಆಫ್ರಿಕಾದ ಅಧ್ಯಕ್ಷ ಜಕೊಬ್ ಜುಮಾ ಅವರು ಚಿನ್‌ನದ ಪದಕ ಪ್ರದಾನ ಮಾಡಿದರು.

- ಅಭಿಜಿತ್ ಕಾಮನ್ ವೆಲ್ತ್ ಚೆಸ್ ಚಾಂಪಿಯನ್ ಷಿಪ್ ನ ವಿವಿಧ ವಿಭಾಗಗಳಲ್ಲಿ 20 ಕ್ಕೂ ಹೆಚ್ಚು ಪದಕಗಳನ್ನು ಗೆದ್ದುಕೊಂಡಿದ್ದಾರೆ.
- ಈ ಚಾಂಪಿಯನ್ ಷಿಪ್ ನಲ್ಲಿ ಉಕ್ರೇನ್ ನ ಸೆರ್ಗಿ ಫೆಡೂರ್ ಡಕ್ ಬೆಳ್ಳಿ ಪದಕ ಗೆದ್ದರೆ, ಹಾಲೆಂಡ್ ನ ಸೆರ್ಗಿ ತಿವಿಯಾಕೊವ್ ಕಂಚಿನ ಪದಕಕ್ಕೆ ತೃಪ್ತಿಪಟ್ಟುಕೊಂಡರು.
- ಟೂರ್ನಿಯಲ್ಲಿ 29 ರಾಷ್ಟ್ರಗಳ ಸುಮಾರು 900 ಸ್ಪರ್ಧಿಗಳು ಭಾಗವಹಿಸಿದ್ದರು.

## ವಿಶ್ವಕಪ್ ಆರ್ಚರಿಯಲ್ಲಿ ಭಾರತೀಯ ಮಹಿಳೆಯರ ಬಂಗಾರದ ಸಾಧನೆ

ಭಾರತದ ಸ್ಪರ್ಧಿಗಳು ಕೊಲಂಬಿಯದ ಮೆಡೆಲಿನ್‌ನಲ್ಲಿ ನಡೆದ ವಿಶ್ವಕಪ್ ಆರ್ಚರಿ `ಸ್ಟೇಜ್-3' ಟೂರ್ನಿಯ ರಿಕರ್ವ್ ಸ್ಪರ್ಧೆಯ ಮಹಿಳೆಯರ ತಂಡ ವಿಭಾಗದಲ್ಲಿ ಬಂಗಾರದ ಸಾಧನೆ ಮಾಡಿದ್ದಾರೆ. ಈ ಟೂರ್ನಿಯಲ್ಲಿ ಭಾರತ ಒಟ್ಟು ಮೂರು ಪದಕಗಳೊಂದಿಗೆ (ಒಂದು ಬಂಗಾರ ಹಾಗೂ ಎರಡು ಕಂಚು) ನಾಲ್ಕನೇ ಸ್ಥಾನ ಪಡೆದಿದೆ.

ಫೈನಲ್‌ನಲ್ಲಿ ದೀಪಿಕಾ ಕುಮಾರಿ, ಲೈಶ್ರಾಮ್ ಬೊಂಬ್ಯಾಲ ದೇವಿ ಹಾಗೂ ರಿಮಿಲ್ ಬರಿಯುಲಿ ಅವರನ್ನು ಒಳಗೊಂಡ ಭಾರತದ 201-186ರಲ್ಲಿ ಚೀನಾವನ್ನು ಮಣಿಸಿ ಈ ಸಾಧನೆ ಮಾಡಿತು. ದೀಪಿಕಾ ಕುಮಾರಿ ತೋರಿದ ನಿಖರ ಪ್ರದರ್ಶನ ಭಾರತಕ್ಕೆ ಚಿನ್ನ ಜಯಿಸಲು ಸಹಕಾರಿಯಾಯಿತು. ಟೂರ್ನಿಯ ರಿಕರ್ವ್ ಮಿಶ್ರ ತಂಡ ವಿಭಾಗದಲ್ಲೂ ಭಾರತ ಕಂಚು ಗೆದ್ದಿತು. ದೀಪಿಕಾ ಕುಮಾರಿ ಹಾಗೂ ಅತಾನು ದಾಸ್ 150-132ರಲ್ಲಿ ಮೆಕ್ಸಿಕೊ ಸ್ಪರ್ಧಿಗಳ ವಿರುದ್ಧ ಜಯಿಸಿದರು. ಪ್ಯಾರಿಸ್‌ನಲ್ಲಿ ನಡೆಯಲಿರುವ ಆರ್ಚರಿ ವಿಶ್ವಕಪ್‌ಗೂ ಮುನ್ನ ಹಾಲೆಂಡ್‌ನಲ್ಲಿ ಆಗಸ್ಟ್ 19ರಿಂದ 25ರವರೆಗೆ ವಿಶ್ವಕಪ್ ಆರ್ಚರಿಯ ಅಂತಿಮ ಸುತ್ತಿನ ಸ್ಪರ್ಧೆಗಳು ನಡೆಯಲಿವೆ.

## ಇಂಡಿಯನ್ ಬ್ಯಾಡ್ಮಿಂಟನ್ ಲೀಗ್ (ಐ.ಬಿ.ಎಲ್) ಟೂರ್ನಿ ಹರಾಜಿನಲ್ಲಿ ಹೆಚ್ಚು ಮೊತ್ತಕ್ಕೆ ಮಾರಾಟವಾದ ಸೈನಾ ನೆಹ್ವಾಲ್

ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸೈನಾ ನೆಹ್ವಾಲ್ ಅವರು ತೀವ್ರ ಕುತೂಹಲಕ್ಕೆ ಕಾರಣವಾಗಿದ್ದ ಇಂಡಿಯನ್ ಬ್ಯಾಡ್ಮಿಂಟನ್ ಲೀಗ್ (ಐ.ಬಿ.ಎಲ್.) ಟೂರ್ನಿಯ ಹರಾಜಿನಲ್ಲಿ ಅತಿ ಹೆಚ್ಚು ಮೊತ್ತಕ್ಕೆ ಮಾರಾಟವಾದ ಭಾರತದ ಆಟಗಾರ್ತಿ ಎನಿಸಿದರು. ಐ.ಬಿ.ಎಲ್. ಆಟಗಾರರ ಹರಾಜು ಪ್ರಕ್ರಿಯೆಯಲ್ಲಿ ಸೈನಾ 72 ಲಕ್ಷ ರೂಪಾಯಿ ಮೊತ್ತಕ್ಕೆ ಹೈದರಾಬಾದ್ ಹಾಟ್‌ಷಾಟ್ ಫ್ರಾಂಚೈಸ್ ಪಾಲಾದರು.

**ಮಲೇಷ್ಯಾದ ಲೀ ಚೋಂಗ್ ವೀ ಅತೀ ಹೆಚ್ಚು ಮೊತ್ತಕ್ಕೆ ಹರಾಜಾದ ಆಟಗಾರ:**

- ಆದರೆ ಈ ಹರಾಜಿನಲ್ಲಿ ಅತಿ ಹೆಚ್ಚು ಮೊತ್ತಕೆ ಮಾರಾಟವಾಗಿದ್ದು ವಿಶ್ವ ಅಗ್ರ ಶ್ರೇಣಿಯ ಆಟಗಾರ ಮಲೇಷ್ಯಾದ ಲೀ ಚೋಂಗ್ ವೀ. ಅವರಿಗೆ 81 ಲಕ್ಷ ರೂಪಾಯಿ ನೀಡಿ ಮುಂಬೈ ಮಾಸ್ಟರ್ಸ್ ಫ್ರಾಂಚೈಸ್ ಖರೀದಿಸಿತು. ಸೈನಾ ಹಾಗೂ ಚೋಂಗ್ ಅವರ ಮೂಲಬೆಲೆಯನ್ನು 50 ಲಕ್ಷ ರೂಪಾಯಿಗೆ ನಿಗದಿಪಡಿಸಲಾಗಿತ್ತು.
- ಐಪಿಎಲ್ ಮಾದರಿಯಲ್ಲೇ ಆರಂಭಗೊಳ್ಳುತ್ತಿರುವ ಬ್ಯಾಡ್ಮಿಂಟನ್ ಲೀಗ್ ಆಗಸ್ಟ್ 14ರಿಂದ 31ರವರೆಗೆ ನಡೆಯಲಿದೆ.
- ಲಂಡನ್ ಒಲಿಂಪಿಕ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದ ಪಿ.ಕಶ್ಯಪ್ ಅವರನ್ನು ಬೆಂಗಳೂರಿನ ಬಾಂಗಾ ಬೀಟ್ಸ್ ಫ್ರಾಂಚೈಸ್ ಖರೀದಿಸಿತು. ಕಶ್ಯಪ್ ಅವರಿಗೆ ಈ ಫ್ರಾಂಚೈಸ್ ನೀಡಿದ ಹಣ 45 ಲಕ್ಷ ರೂಪಾಯಿ. ಕರ್ನಾಟಕದವರೇ ಆದ ಅರವಿಂದ್ ಭಟ್, ಅನೂಪ್ ಶ್ರೀಧರ್, ಆದಿತ್ಯ ಪ್ರಕಾಶ್ ಕೂಡ ಹರಾಜಿನಲ್ಲಿ ವಿವಿಧ ತಂಡಗಳ ಪಾಲಾದರು.
- ಇತ್ತೀಚಿನ ದಿನಗಳಲ್ಲಿ ಅಮೋಘ ಪ್ರದರ್ಶನದ ಮೂಲಕ ಮಿಂಚಿನ ಸಂಚಲನಕ್ಕೆ ಕಾರಣವಾಗಿರುವ ಪಿ.ವಿ.ಸಿಂಧು 48 ಲಕ್ಷ ರೂಪಾಯಿ ಮೊತ್ತಕ್ಕೆ ಸಹಾರಾ ಸಮೂಹದ ಲಖನೌ ವಾರಿಯರ್ಸ್ ಪಾಲಾದರು.
- ಚೋಂಗ್ ಅವರನ್ನು ಖರೀದಿಸಲು ಮುಂಬೈ ಮಾಸ್ಟರ್ಸ್ ಹಾಗೂ ದೆಹಲಿ ಸ್ಮ್ಯಾಷರ್ಸ್ ತಂಡಗಳು ಪೈಪೋಟಿಗಿಳಿದವು. ಆದರೆ ಮಲೇಷ್ಯಾದ ಈ ಆಟಗಾರ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಸುನಿಲ್ ಗಾವಸ್ಕರ್ ಅವರ ಜಂಟಿ ಮಾಲೀಕತ್ವದ ಮುಂಬೈ ಮಾಸ್ಟರ್ಸ್ ಪಾಲಾದರು.

- ಅಷ್ಟೇನು ಹೆಸರು ಮಾಡಿರದ ಪ್ರದ್ಯಾ ಗಾದ್ರೆ ಹಾಗೂ ಕೆ.ಮನೀಷಾ ಅನಿರೀಕ್ಷಿತ ಮೊತ್ತಕ್ಕೆ ಮಾರಾಟವಾದರು. ಪ್ರದ್ಯಾ 27.6 ಲಕ್ಷ ರೂಪಾಯಿ ಮೊತ್ತಕ್ಕೆ ಹೈದರಾಬಾದ್ ಹಾಟ್‌ಷಾಟ್ ತಂಡ ಸೇರಿಕೊಂಡರು. ಮನೀಷಾ 15.6 ಲಕ್ಷ ರೂಪಾಯಿಗೆ ಲಖನೌ ವಾರಿಯರ್ಸ್ ಪಾಲಾದರು.
- ಹೈದರಾಬಾದ್‌ನ ಜ್ವಾಲಾ ಅವರಿಗೆ 18.6 ಲಕ್ಷ ರೂಪಾಯಿ ನೀಡಿ ದೆಹಲಿ ಸ್ಮ್ಯಾಷರ್ಸ್ ಫ್ರಾಂಚೈಸ್ ಖರೀದಿಸಿತು. ಕರ್ನಾಟಕದ ಅಶ್ವಿನಿ ಅವರನ್ನು ಪುಣೆ ಪಿಸ್ಟನ್ಸ್ ಫ್ರಾಂಚೈಸ್ ತನ್ನದಾಗಿಸಿಕೊಂಡಿತು. ಆದರೆ ಕೇವಲ 15 ಲಕ್ಷ ರೂಪಾಯಿ ನೀಡಿತು. ಅಶ್ವಿನಿ ಹಾಗೂ ಜ್ವಾಲಾ ಈ ಟೂರ್ನಿಯಲ್ಲಿ ಕೇವಲ ಮಿಶ್ರ ಡಬಲ್ಸ್ ವಿಭಾಗದಲ್ಲಿ ಆಡಲಿದ್ದಾರೆ. ಈ ಕಾರಣ ಫ್ರಾಂಚೈಸ್‌ಗಳು ಅವರತ್ತ ಹೆಚ್ಚು ಗಮನ ಹರಿಸಲಿಲ್ಲ.

**ಟೂರ್ನಿಯ ಸ್ವರೂಪ:**

- ಈ ಟೂರ್ನಿಯಲ್ಲಿ ಮಹಿಳಾ ಡಬಲ್ಸ್ ಪಂದ್ಯಗಳು ಇಲ್ಲ. ಬದಲಾಗಿ ಪುರುಷರ ಎರಡು ಸಿಂಗಲ್ಸ್ ಪಂದ್ಯಗಳು, ಮಹಿಳೆಯರ ಒಂದು ಸಿಂಗಲ್ಸ್ ಪಂದ್ಯ, ಪುರುಷರ ಒಂದು ಡಬಲ್ಸ್ ಹಾಗೂ ಒಂದು ಮಿಶ್ರ ಡಬಲ್ಸ್ ಪಂದ್ಯ ನಡೆಯಲಿವೆ.
- ಪ್ರತಿ ಫ್ರಾಂಚೈಸ್ ಮುಖಾಮುಖಿ ವೇಳೆ ಒಟ್ಟು ಐದು ಪಂದ್ಯಗಳನ್ನು ಆಡಲಿವೆ.
- ಫೈನಲ್: ಆಗಸ್ಟ್ 31 (ಮುಂಬೈ) ಒಟ್ಟು ಬಹುಮಾನ ಒಂದು ಮಿಲಿಯನ್ ಡಾಲರ್ (ಸುಮಾರು 5.5 ಕೋಟಿ). ಇದು ವಿಶ್ವದಲ್ಲಿಯೇ ಅತಿ ಹೆಚ್ಚು ಬಹುಮಾನ ಹೊಂದಿರುವ ಬ್ಯಾಡ್ಮಿಂಟನ್ ಟೂರ್ನಿ. ವಿಜೇತ ತಂಡಕ್ಕೆ ಬಹುಮಾನ ಮೊತ್ತದ ಶೇಕಡಾ 65 ರಷ್ಟು ಹಾಗೂ ರನ್ನರ್ ಅಪ್‌ಗೆ ಶೇಕಡಾ 35 ರಷ್ಟು ಹಣ ಲಭಿಸಲಿದೆ.

**ವಿಕಲಚೇತನ ವಿಶ್ವ ಚೆಸ್ ಚಾಂಪಿಯನ್ ಆಗಿ ಹೊರಹೊಮ್ಮಿದ ಭಾರತದ ಜೆ.ಜೆನ್ನಿತಾ ಆಯಂಟೋ**

ಜೆಕ್ ಗಣರಾಜ್ಯದ ವೆಲ್ಕೆ ಲೊಸಿನಿಯಲ್ಲಿ ನಡೆದ 13ನೇ ಐಪಿಸಿಎ ವಿಶ್ವ ಮಹಿಳಾ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಜಯಗಳಿಸಿದ ಭಾರತದ ಕೆ.ಜೆನ್ನಿತಾ ಆಯಂಟೊ, ವಿಕಲಚೇತನ ವಿಶ್ವ ಚೆಸ್ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ತಮಿಳುನಾಡು ಮೂಲದ ಜೆನ್ನಿತಾ 9 ಪಂದ್ಯಗಳಲ್ಲಿ 3 ಪಂದ್ಯಗಳಲ್ಲಿ ಗೆಲವು ಸಾಧಿಸಿ, 3 ಪಂದ್ಯಗಳಲ್ಲಿ ಸೋಲು ಹಾಗೂ 3 ಪಂದ್ಯಗಳನ್ನು ಡ್ರಾ ಮಾಡಿಕೊಳ್ಳುವ ಮೂಲಕ 4.5 ಅಂಕಗಳನ್ನು ಪಡೆದುಕೊಂಡಿದ್ದಾರೆ.

ಜೆನ್ನಿತಾ ಪುರುಷ ಹಾಗೂ ಮಹಿಳಾ ಮಿಶ್ರ ವಿಭಾಗದಲ್ಲಿ ಸ್ಪರ್ಧಿಸಿದ್ದು, ಮಹಿಳೆಯರಲ್ಲಿ ಅತಿ ಹೆಚ್ಚು ಅಂಕ ಪಡೆದ ಹಿನ್ನೆಲೆಯಲ್ಲಿ ಐಪಿಸಿಎ ಮಹಿಳಾ ಪ್ರಶಸ್ತಿ ಈಕೆಯ ಮುಡಿಗೇರಿತು. ಈಕೆಯೊಂದಿಗೆ ರಷ್ಯಾದ ಇಬ್ಬರು ಆಟಗಾರ್ತಿಯರು ಸಮಾನ ಅಂಕಗಳಿಸಿ ಪೈಪೋಟಿ ನೀಡಿದ್ದರು. ಆದರೆ ಹೆಚ್ಚು ಸರಾಸರಿ ಅಂಕ ಪಡೆದಿದ್ದ ಜೆನ್ನಿತಾ ಪ್ರಶಸ್ತಿ ಪಡೆಯುವಲ್ಲಿ ಯಶಸ್ವಿಯಾದರು. ಇದರ ಜತೆಗೆ ಈಕೆ ಮಹಿಳಾ ಅಂತಾರಾಷ್ಟ್ರೀಯ ಮಾಸ್ಟರ್ ಕಿರೀಟವನ್ನು ಪಡೆದಿದ್ದು, ಈ ಮೂಲಕ ಜೆನ್ನಿತಾ ಪ್ರಿಮಿಯರ್ ಪಂದ್ಯಾವಳಿ ಹೊರತುಪಡಿಸಿ ಉಳಿದ ರಾಷ್ಟ್ರೀಯ ಪಂದ್ಯಾವಳಿಯಲ್ಲಿ ನೇರ ಪ್ರವೇಶ ಪಡೆಯಲಿದ್ದಾರೆ. ಈ ಪಂದ್ಯಾವಳಿಯಲ್ಲಿ 15 ದೇಶಗಳಿಂದ ಒಟ್ಟು 49 ವಿಕಲಚೇತನ ಸ್ಪರ್ಧಿಗಳು ಭಾಗವಹಿಸಿದ್ದರು.

**2015 ವಿಶ್ವಕಪ್ ಕ್ರಿಕೆಟ್ ಆತಿಥ್ಯಕ್ಕೆ ನ್ಯೂಜಿಲ್ಯಾಂಡ್ ಮತ್ತು ಆಸ್ಟ್ರೇಲಿಯಾ ಸಜ್ಜು**

ಇಡೀ ವಿಶ್ವವೇ ಎದುರು ನೋಡುತ್ತಿರುವ 2015 ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಗಳು ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ನಲ್ಲಿ ನಡೆಯಲಿದ್ದು, ಆತಿಥ್ಯವನ್ನು ವಹಿಸಲು ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ಸಜ್ಜಾಗುತ್ತಿವೆ. ಪ್ರತಿ ನಾಲ್ಕು ವರ್ಷಗಳಿಗೊಮ್ಮೆ

ನಡೆಯುವ ವಿಶ್ವಕಪ್ ಕ್ರಿಕೆಟ್ ಪಂದ್ಯಗಳು 2015 ರಲ್ಲಿ ಫೆಬ್ರವರಿ ಮತ್ತು ಮಾರ್ಚ್ ನಲ್ಲಿ ನಡೆಯಲಿವೆ. ಇಂತಹ ಮೈನರಳಿಸುವ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಗಳ ಪ್ರಮುಖ ಅಂಶಗಳು ಇಲ್ಲಿವೆ.

- ಈ ಬಾರಿಯ ವಿಶ್ವಕಪ್ ನಲ್ಲಿ ಒಟ್ಟು 14 ತಂಡಗಳು ಭಾಗವಹಿಸಲಿವೆ ಎನ್ನಲಾಗಿದೆ. ಇದರಲ್ಲಿ ಹತ್ತು ಟೆಸ್ಟ್ ಪಂದ್ಯಗಳನ್ನು ಆಡುವ ತಂಡಗಳು ಇರಲಿವೆ. ಅವುಗಳೆಂದರೆ ಭಾರತ, ಬಾಂಗ್ಲದೇಶ, ಇಂಗ್ಲೆಂಡ್, ನ್ಯೂಜಿಲ್ಯಾಂಡ್, ಪಾಕಿಸ್ತಾನ, ದಕ್ಷಿಣ ಆಫ್ರಿಕಾ, ಶ್ರೀಲಂಕಾ, ವೆಸ್ಟ್ ಇಂಡೀಸ್, ಆಸ್ಟ್ರೇಲಿಯಾ ಮತ್ತು ಜಿಂಬಾಬ್ವೆ. ಇವುಗಳಲ್ಲದೇ ಐರ್ಲ್ಯಾಂಡ್ ಸಹ ಅರ್ಹತೆಯನ್ನುಗಳಿಸಿದೆ. ಉಳಿದಂತೆ ಸ್ಕಾಟ್ ಲ್ಯಾಂಡ್, ನೆದರ್ ಲ್ಯಾಂಡ್, ಕೀನ್ಯಾ ಅಥವಾ ಕೆನಡಾ ವಿಶ್ವಕಪ್ ನಲ್ಲಿ ಭಾಗವಹಿಸಲಿರುವ ಇತರೆ ರಾಷ್ಟ್ರಗಳು.
- 44 ದಿನಗಳ ಕಾಲ ನಡೆಯುವ ಈ ಪಂದ್ಯಾವಳಿಯಲ್ಲಿ ಒಟ್ಟು 44 ಪಂದ್ಯಗಳು ಇರಲಿವೆ.
- ಫೈನಲ್ ಪಂದ್ಯ ಮಾರ್ಚ್ 29, 2015 ರಂದು ಆಸ್ಟ್ರೇಲಿಯಾದ ಮೆಲ್ಬರ್ನ್ ನಲ್ಲಿ ನಡೆಯಲಿದೆ.

**ವಿಶ್ವಕಪ್ ಕ್ರಿಕೆಟ್:**

- 1975 ರಲ್ಲಿ ನಡೆದ ಮೊದಲ ವಿಶ್ವಕಪ್ ಕ್ರಿಕೆಟ್ ಟೂರ್ನಿಯನ್ನು ಇಂಗ್ಲೆಂಡ್ ನಲ್ಲಿ ಆಯೋಜಿಸಲಾಗಿತ್ತು. ಫೈನಲ್ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ತಂಡ ಆಸ್ಟ್ರೇಲಿಯಾ ತಂಡವನ್ನು ಮಣಿಸುವ ಮೂಲಕ ಮೊದಲ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು. 1979 ರಲ್ಲಿ ನಡೆದ ಎರಡನೇ ವಿಶ್ವಕಪ್ ಪಂದ್ಯಾವಳಿಯಲ್ಲೂ ಸಹ ವೆಸ್ಟ್ ಇಂಡೀಸ್ ತಂಡ ಇಂಗ್ಲೆಂಡ್ ತಂಡವನ್ನು ಸೋಲಿಸುವ ಮೂಲಕ ಎರಡನೇ ಬಾರಿಗೆ ವಿಶ್ವಕಪ್ ಅನ್ನು ತನ್ನದಾಗಿಸಿಕೊಂಡಿತು. ಆದರೆ ಆ ಬಳಿಕ ನಡೆದ ವಿಶ್ವಕಪ್ ಪಂದ್ಯಾವಳಿಗಳಲ್ಲಿ ಪ್ರಶಸ್ತಿಯನ್ನು ಗೆಲ್ಲಲ್ಲು ವೆಸ್ಟ್ ಇಂಡೀಸ್ ಗೆ ಸಾಧ್ಯವಾಗಿಲ್ಲ.
- ಆಸ್ಟ್ರೇಲಿಯಾ ಒಟ್ಟು ನಾಲ್ಕು ಬಾರಿ ವಿಶ್ವಕಪ್ ಅನ್ನು ಗೆಲ್ಲುವ ಮೂಲಕ ಹೆಚ್ಚು ಬಾರಿ ವಿಜಯಿಶಾಲಿಯಾದ ರಾಷ್ಟ್ರವೆಂಬ ಖ್ಯಾತಿಯನ್ನು ಹೊಂದಿದೆ.
- 2011 ರಲ್ಲಿ ನಡೆದ ವಿಶ್ವಕಪ್ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಸೋಲಿಸಿ ಭಾರತ ಗೆಲುವಿನ ರುಚಿಯನ್ನು ಸವಿಯಿತು. ಇದು ಭಾರತಕ್ಕೆ ಎರಡನೇ ಗೆಲುವು. ಈ ಹಿಂದೆ 1983 ರಲ್ಲಿ ಭಾರತ ಮೊದಲ ಬಾರಿಗೆ ವಿಶ್ವಕಪ್ ಅನ್ನು ಗೆದ್ದುಕೊಂಡಿತ್ತು.

## ವಿಶ್ವ ಸ್ನೂಕರ್ ಗೇಮ್ಸ್ ನಲ್ಲಿ ಭಾರತದ ಆದಿತ್ಯ ಮೆಹ್ತಾಗೆ ಬಂಗಾರದ ಪದಕ

ಭಾರತದ ನಂ.1 ಸ್ನೂಕರ್ ಆಟಗಾರ ಆದಿತ್ಯ ಮೆಹ್ತಾ ಅವರು, ಕೊಲಂಬಿಯಾದಲ್ಲಿ ನಡೆಯುತ್ತಿದ್ದ ವಿಶ್ವ ಸ್ನೂಕರ್ ಗೇಮ್ಸ್‌ನಲ್ಲಿ ಬಂಗಾರದ ಪದಕ ಗೆಲ್ಲುವ ಮೂಲಕ, ಭಾರತ ಹೆಮ್ಮೆಪಡುವ ಸಾಧನೆ ಮಾಡಿದ್ದಾರೆ. ಫೈನಲ್ ಪಂದ್ಯದಲ್ಲಿ, ಆದಿತ್ಯ ಅವರು, ಚೀನಾದ ಲಿಯಾಂಗ್ ವೆಂಬೊ ಅವರನ್ನು 3-0 ಅಂತರದಲ್ಲಿ ಸೋಲಿಸಿ, ಚಿನ್ನದ ಗೌರವವನ್ನು ತಮ್ಮದಾಗಿಸಿಕೊಂಡರು.

ತೀವ್ರ ಪೈಪೋಟಿಯಿಂದ ಕೂಡಿದ್ದ ಪಂದ್ಯದಲ್ಲಿ, ಮೆಹ್ತಾ ಅವರು ಎದುರಾಳಿಯಿಂದ ತೀವ್ರವಾದ ಆಕ್ರಮಣ ಎದುರಿಸಬೇಕಾಯಿತು. ಆದರೂ, ಅಂತಿಮ ಹಂತದಲ್ಲಿ 3-0 ಅಂಕಗಳ ಆಧಾರದಲ್ಲಿ ಪಂದ್ಯ ಗೆಲ್ಲುವಲ್ಲಿ ಅವರು ಯಶಸ್ವಿಯಾದರು. ಪಂದ್ಯಾವಳಿಯನ್ನು

ಗೆಲ್ಲುವ ಫೇವರಿಟ್ ಎಂದೇ ಪರಿಗಣಿಸಲ್ಪಟ್ಟಿದ್ದ ಲಿಯಾಂಗ್ ಅವರನ್ನು ಪದಕದ ಸುತ್ತಿನಲ್ಲಿ ಮಣಿಸಿದ ಆದಿತ್ಯ, ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಪೂಮ್‌ಜೆಂಗ್ ಅವರು, ಕ್ವಾರ್ಟರ್ ಫೈನಲ್ ಹಂತದಲ್ಲಿ, ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ ಮತ್ತೊಬ್ಬ ಭಾರತೀಯ ಆಟಗಾರ ಪಂಕಜ್ ಆಡ್ವಾಣಿ ಅವರನ್ನು 3-1 ಅಂತರದಲ್ಲಿ ಸೋಲಿಸಿ, ಸೆಮೀಸ್‌ಗೆ ಕಾಲಿಟ್ಟಿದ್ದರು. ಆದರೆ, ಸೆಮೀಸ್‌ನಲ್ಲಿ ಆದಿತ್ಯ ಅವರ ವಿರುದ್ಧ ಪರಾಭವಗೊಂಡ ಅವರು ಕಂಚಿನ ಪದಕಕ್ಕೆ ತೃಪ್ತಿಪಡಬೇಕಾಯಿತು.

ಕರುನಾಡು ಎಗ್ಸಾಮ್ಸ್

## ಸುದ್ಧಿಯಲ್ಲಿರುವ ವ್ಯಕ್ತಿಗಳು

### ವಿಶ್ವದ ಪ್ರಸಿದ್ಧ ಹೆಗ್ಗುರುತುಗಳಲ್ಲಿ (Landmark): ತಾಜ್ ಮಹಲ್ ಗೆ ಮೂರನೇ ಸ್ಥಾನ

ಅಮರ ಪ್ರೇಮದ ಸ್ಮಾರಕ ಎನಿಸಿಕೊಂಡಿರುವ ತಾಜ್ ಮಹಲ್ ವಿಶ್ವದ ಮೂರು ಅತ್ಯುನ್ನತ ಹೆಗ್ಗುರುತುಗಳಲ್ಲಿ ಒಂದು ಎನಿಸಿಕೊಂಡಿದೆ. ಟ್ರಿಪ್ ಅಡ್ವೈಸರ್ (TripAdviser) ಸಂಸ್ಥೆ ನಡೆಸಿದ ಜಾಗತಿಕ ಸಮೀಕ್ಷೆಯಲ್ಲಿ ವಿಶ್ವದ ಏಳು ಅದ್ಭುತಗಳಲ್ಲಿ ಒಂದಾದ ತಾಜ್ ಮಹಲ್ ಗೆ ಮೂರನೇ ಸ್ಥಾನ ದೊರೆತಿದೆ.

- ಈ ಸಮೀಕ್ಷೆಯಲ್ಲಿ ಪೆರು ದೇಶದ ಮಾಚು ಪಿಚು ಮೊದಲ ಸ್ಥಾನ ಪಡೆದುಕೊಂಡಿದ್ದರೆ, ಕಾಂಬೋಡಿಯಾದ ಅಂಕೋರ್ ವಾಟ್ ಎರಡನೇ ಸ್ಥಾನವನ್ನು ಪಡೆದುಕೊಂಡಿದೆ.
- ಜಾಗತಿಕ ಮಟ್ಟದಲ್ಲಿ ಒಟ್ಟು 25 ಸ್ಥಳಗಳನ್ನು ಆಯ್ಕೆ ಮಾಡಿ ಅವುಗಳಿಗೆ ಪ್ರವಾಸಿಗರಿಂದ ಅಭಿಪ್ರಾಯವನ್ನು ಸಂಗ್ರಹಿಸಲಾಗಿತ್ತು. ಪ್ರವಾಸಿಗರು ನೀಡಿದ ಅಭಿಪ್ರಾಯಗಳ ಆಧಾರದ ಮೇಲೆ ಈ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ.

ತಾಜ್ ಮಹಲ್:

- ತಾಜ್ ಮಹಲ್ ಅನ್ನು ಆಗ್ರಾ ಬಳಿ ಯಮುನಾ ನದಿಯ ದಂಡೆಯ ಮೇಲೆ ನಿರ್ಮಿಸಲಾಗಿದೆ.
- ಮೊಘಲ್ ದೊರೆ ಶಹಜಾಹನ್ ತನ್ನ ಪ್ರೀತಿಯ ರಾಣಿ ಮುಮ್ತಜ್ ಮಹಲ್ ಸ್ಮರಣಾರ್ಥ ಇದನ್ನು ನಿರ್ಮಿಸಿದ.
- ವಾರ್ಷಿಕ 2-4 ಮಿಲಿಯನ್ ಪ್ರವಾಸಿಗರನ್ನು ಆಕರ್ಷಿಸುವ ತಾಜ್ ಮಹಲನ್ನು 1983 ರಲ್ಲಿ ಯುನೆಸ್ಕೊ ವಿಶ್ವ ಪಾರಂಪರಿಕ ಪಟ್ಟಿಗೆ ಸೇರ್ಪಡೆಗೊಳಿಸಲಾಯಿತು.

### ಕಂಪ್ಯೂಟರ್ ಮೌಸ್ ಜನಕ ಡೌಗ್ಲಸ್ ಎಂಗೆಲ್ ಬರ್ಟ್ (Douglas Engelbert) ನಿಧನ

ಕಂಪ್ಯೂಟರ್ ಮೌಸ್ ಅನ್ವೇಷಿಸಿ ಕಂಪ್ಯೂಟರ್ ಕ್ಷೇತ್ರದಲ್ಲಿ ಆವಿಷ್ಕಾರದ ಅಲೆ ಸೃಷ್ಟಿಸಿದ ಅಮೆರಿಕಾದ ಸಂಶೋಧಕ ಡೌಗ್ಲಸ್ ಎಂಗೆಲ್ ಬರ್ಟ್ ಅವರು ನಿಧನರಾದರು. 88 ವರ್ಷ ವಯಸ್ಸಿನ ಡೌಗ್ಲಸ್ ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದರು.

- ಅಮೆರಿಕಾ ನೌಕ ದಳದಲ್ಲಿ ಎಲೆಕ್ಟ್ರಾನಿಕ್ ರಡಾರ್ ಟೆಕ್ನಿಷಿಯನ್ ಆಗಿ ಸೇವೆ ಸಲ್ಲಿಸಿದ್ದ ಡೌಗ್ಲಸ್ 1950 ರಲ್ಲಿ ಸ್ಟಾಂಡರ್ಡ್ ರಿಸರ್ಚ್ ಇನ್ ಸ್ಟಿಟ್ಯೂಟ್ ಸೇರ್ಪಡೆಗೊಳ್ಳುವ ಮೂಲಕ ಕಂಪ್ಯೂಟರ್ ಕ್ಷೇತ್ರದಲ್ಲಿ ಸಂಶೋಧನೆಯತ್ತ ತಮ್ಮ ಗಮನ ಹರಿಸಿದರು.
- ಬಳಿಕ ಡೌಗ್ ಎಂಗೆಲ್ ಬರ್ಟ್ 1963 ರಲ್ಲಿ ಸ್ಟಾಂಡರ್ಡ್ ರಿಸರ್ಚ್ ಇನ್ ಸ್ಟಿಟ್ಯೂಟ್ ನಲ್ಲಿ ಕಂಪ್ಯೂಟರ್ ಮೌಸ್ ಅನ್ನು ಆವಿಷ್ಕರಿಸಿದ್ದರು. ಡೌಗ್ಲಸ್ ಸೃಷ್ಟಿಸಿದ್ದ ಮೌಸ್ ಕಬ್ಬಿಣದ ಪೆಟ್ಟಿಗೆಯಂತಿದ್ದು ಗಾಲಿಗಳನ್ನು ಹೊಂದಿತ್ತು. ಈ ಅನ್ವೇಷಣೆ ಮುಂದೆ ಕಂಪ್ಯೂಟರ್ ಕ್ಷೇತ್ರದಲ್ಲಿ ಮಹತ್ವದ ಕೊಡುಗೆಯಾಯಿತು.
- 1970 ರ ದಶಕದಲ್ಲಿ ಡೌಗ್ಲಸ್ ಅವರ ಸ್ಟಾಂಡರ್ಡ್ ರಿಸರ್ಚ್ ಇನ್ ಸ್ಟಿಟ್ಯೂಟ್ ಮೌಸ್ ನ ಈ ಆವಿಷ್ಕಾರಕ್ಕಾಗಿ ಪೇಟೆಂಟ್ ಪಡೆದುಕೊಂಡಿತು.

- ಕೇವಲ ಮೌಸ್ ಅಲ್ಲದೇ ಕಂಪ್ಯೂಟರ್ ಕ್ಷೇತ್ರದಲ್ಲಿ ಸಂಶೋಧನೆಯತ್ತ ದೂರದೃಷ್ಟಿಯನ್ನು ಹೊಂದಿದ್ದರು. ಮಲ್ಟಿವಿಂಡೋಸ್ ಸಂಶೋಧನೆ, ಡಿಸ್ ಪ್ಲೇ ಎಡಿಟಿಂಗ್ ಮತ್ತು ಆನ್ ಲೈನ್ ಪ್ರೊಸೆಸಿಂಗ್ ಬಗ್ಗೆ ಅವರು ಮೊದಲೇ ಆಲೋಚನೆ ಹೊಂದಿದ್ದರು.

**"ನಾಸ್ಕಂ (NASSCOM)" ಅಧ್ಯಕ್ಷರಾಗಿ ಆರ್.ಚಂದ್ರಶೇಖರ್ ನೇಮಕ**

ಮಾಜಿ ದೂರಸಂಪರ್ಕ ಇಲಾಖೆ ಕಾರ್ಯದರ್ಶಿ ಆರ್. ಚಂದ್ರಶೇಖರ್ ಅವರನ್ನು ಮಾಹಿತಿ ತಂತ್ರಜ್ಞಾನ ಸೇವಾ ಸಂಸ್ಥೆ "ನಾಸ್ಕಂ (ನ್ಯಾಷನಲ್ ಅಸೋಸಿಯೇಷನ್ ಆಫ್ ಸಾಫ್ಟ್ ವೇರ್ ಅಂಡ್ ಸರ್ವೀಸ್ ಕಂಪನೀಸ್)" ನ ಮುಂದಿನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ನಾಸ್ಕಂ ನ ಪ್ರಸ್ತುತ ಅಧ್ಯಕ್ಷರಾಗಿರುವ ಸೋಮ್ ಮಿತ್ತಲ್ ಅವರು ಜನವರಿ 2014 ರಂದು ಈ ಹುದ್ದೆಯಿಂದ ಕೆಳಗಿಳಿಯಲಿದ್ದು ಅವರ ಸ್ಥಾನವನ್ನು ಚಂದ್ರಶೇಖರ್ ತುಂಬಲಿದ್ದಾರೆ. ಇತ್ತೀಚೆಗೆ ನಡೆದ "ನಾಸ್ಕಂ" ನ ಕಾರ್ಯಕಾರಿ ಮಂಡಳಿಯ ಸಭೆಯಲ್ಲಿ ಈ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ.

- 1976 ಬ್ಯಾಚ್ ನ ಐಎಎಸ್ ಅಧಿಕಾರಿಯಾದ ಚಂದ್ರಶೇಖರ್ ಅವರು ದೂರಸಂಪರ್ಕ ಆಯೋಗದ ಅಧ್ಯಕ್ಷರಲ್ಲದೆ ದೂರಸಂಪರ್ಕ ಇಲಾಖೆಯ ಕಾರ್ಯದರ್ಶಿಯಾಗಿ ಮಾರ್ಚ್ 2013 ರಲ್ಲಿ ನಿವೃತ್ತಿ ಹೊಂದುವ ವರೆಗೆ ಸೇವೆ ಸಲ್ಲಿಸಿದ್ದರು.
- ಆಂಧ್ರಪ್ರದೇಶದಲ್ಲಿ ಮಾಹಿತಿ ತಂತ್ರಜ್ಞಾನ ಇಲಾಖೆಯನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಚಂದ್ರಶೇಖರ್ 1997 ರಿಂದ 1998 ರವರೆಗೆ ಈ ಇಲಾಖೆಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು.
- ಪ್ರಸುತ್ತ ನಾಸ್ಕಂ ಅಧ್ಯಕ್ಷರಾಗಿರುವ ಸೋಮ್ ಮಿತ್ತಲ್ ಅವರ ಅಧಿಕಾರ ಅವಧಿ ಜನವರಿ 3, 2014 ಕ್ಕೆ ಕೊನೆಗೊಳ್ಳಲಿದೆ. ಮಿತ್ತಲ್ ಅವರು ಕಳೆದ ಆರು ವರ್ಷಗಳಿಂದ ನಾಸ್ಕಂ ನ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಮೇಘಾಲಯ ಮತ್ತು ಸಿಕ್ಕಿಂ ರಾಜ್ಯಗಳಿಗೆ ನೂತನ ರಾಜ್ಯಪಾಲರ ನೇಮಕ**

**ಮೇಘಾಲಯ**: ನಿವೃತ್ತ ದೆಹಲಿ ಪೊಲೀಸ್ ಮುಖ್ಯಸ್ಥ ಕೆ.ಕೆ.ಪಾಲ್ ಅವರನ್ನು ಮೇಘಾಲಯ ರಾಜ್ಯದ ರಾಜ್ಯಪಾಲರನ್ನಾಗಿ ರಾಷ್ಟ್ರಪತಿಗಳು ನೇಮಿಸಿದ್ದಾರೆ. ಮೇಘಾಲಯದ ಮುಖ್ಯ ನ್ಯಾಯಮೂರ್ತಿಗಳಾದ ಟಿ.ಮೀನಾ ಕುಮಾರಿ ಅವರು ಕೆ.ಕೆ.ಪಾಲ್ ಅವರಿಗೆ ಪ್ರಮಾಣ ವಚನ ಭೋದಿಸಿದರು.

**ಕೆ.ಕೆ.ಪಾಲ್**:

- 1970 ರಲ್ಲಿ ಐಪಿಎಸ್ ಅಧಿಕಾರಿಯಾಗಿ ಸೇರ್ಪಡೆಗೊಂಡ ಕೆ.ಕೆ.ಪಾಲ್ ಅವರು ಇಂಟೆಲಿಜೆನ್ಸ್ ಬ್ಯೂರೋ ಮತ್ತು ರಿಸರ್ಚ್ ಅಂಡ್ ಅನಾಲಿಸಿಸ್ ವಿಂಗ್ (RAW) ನಲ್ಲೂ ಸೇವೆ ಸಲ್ಲಿಸಿದ್ದಾರೆ.
- ಪಾಲ್ ಜುಲೈ 2004 ರಿಂದ ಜುಲೈ 2007 ರ ವರೆಗೆ ದೆಹಲಿ ಪೊಲೀಸ್ ಕಮೀಷನರ್ ಆಗಿ ಕಾರ್ಯನಿರ್ವಹಿಸಿದ್ದರು. ಬಳಿಕ 2007 ರಲ್ಲಿ ಕೇಂದ್ರ ಲೋಕಸೇವಾ ಆಯೋಗದ ಸದಸ್ಯರಾಗಿ ನೇಮಕಗೊಂಡಿದ್ದರು.

**ಸಿಕ್ಕಿಂ:** ಲೋಕಸಭೆಯಲ್ಲಿ ಮಹಾರಾಷ್ಟ್ರದ ಸತಾರ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಶ್ರೀನಿವಾಸ್ ದಾದಾಸಾಹೇಬ್ ಪಾಟೀಲ್ ಅವರನ್ನು ಸಿಕ್ಕಿಂ ನ ರಾಜ್ಯಪಾಲರಾಗಿ ನೇಮಕ ಮಾಡಲಾಗಿದೆ. ಪಾಟೀಲ್ ಅವರು ಬಿ.ಪಿ,ಸಿಂಗ್ ಸ್ಥಾನವನ್ನು ತುಂಬಲಿದ್ದಾರೆ. ನಿವೃತ್ತ ಐಎಎಸ್ ಅಧಿಕಾರಿಯಾದ ಇವರು 14 ಮತ್ತು 15 ನೇ ಲೋಕಸಭೆಗೆ ಆಯ್ಕೆಯಾಗಿದ್ದರು.

**"ಹವಾಮಾನ ಸೇವೆಗಳ ಅಂತರಸರ್ಕಾರ ಮಂಡಳಿ"ಯ ಸಹ-ಉಪಾಧ್ಯಕ್ಷರಾಗಿ ಲಕ್ಷಣ್ ರಾಥೋಡ್ ನೇಮಕ**

ಭಾರತೀಯ ಪವನಶಾಸ್ತ್ರ ಸಂಸ್ಥೆಯ ಡೈರೆಕ್ಟರ್ ಜನರಲ್ ಮತ್ತು ವಿಶ್ವ ಪವನಶಾಸ್ತ್ರ ಸಂಸ್ಥೆ (World Meteorological Organization)ಗೆ ಭಾರತದ ಖಾಯಂ ಪ್ರತಿನಿಧಿಯಾದ ಲಕ್ಷಣ್ ರಾಥೋಡ್ ಅವರು "ಹವಾಮಾನ ಸೇವೆಗಳ ಅಂತರಸರ್ಕಾರ ಮಂಡಳಿ (Intergovernmental Board of Climate Service)"ಗೆ ಸಹ-ಉಪಾಧ್ಯಕ್ಷರಾಗಿ ನೇಮಕ ಮಾಡಲಾಗಿದೆ. ಜಿನೀವಾದಲ್ಲಿ ಇತ್ತೀಚೆಗೆ ನಡೆದ ಮಂಡಳಿಯ ಮೊದಲ ಸಭೆಯಲ್ಲಿ ರಾಥೋಡ್ ಅವರನ್ನು ಈ ಹುದ್ದೆಗೆ ನೇಮಕ ಮಾಡಲಾಯಿತು.

- ರಾಥೋಡ್ ಅವರು ಇತ್ತೀಚೆಗಷ್ಟೇ ವಿಶ್ವ ಪವನಶಾಸ್ತ್ರ ಸಂಸ್ಥೆಯ ಕಾರ್ಯಕಾರಿ ಮಂಡಳಿಗೆ ಸದಸ್ಯರಾಗಿ ನೇಮಕಗೊಂಡಿದ್ದರು. ಕೃಷಿ ಪವನಶಾಸ್ತ್ರ ಆಯೋಗದ ಅಧ್ಯಕ್ಷರಾಗಿಯೂ ಇವರು ಸೇವೆ ಸಲ್ಲಿಸಿದ್ದಾರೆ.
- ನಾರ್ವೆ ಪವನಶಾಸ್ತ್ರ ಸಂಸ್ಥೆಯ ಡೈರೆಕ್ಟರ್ ಜನರಲ್ ಆದ ಅನ್ ಟನ್ ಎಲಿಯಸೆನ್ ಅವರನ್ನು ಹವಾಮಾನ ಸೇವೆಗಳ ಅಂತರಸರ್ಕಾರ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಕಮಾಡಲಾಗಿದೆ. ದಕ್ಷಿಣ ಆಫ್ರಿಕಾದ ಲಿಂಡಾ ಮಕುಲೆನಿ ಅವರನ್ನು ಈ ಮಂಡಳಿಯ ಮತ್ತೊಬ್ಬ ಸಹ ಉಪಾಧ್ಯಕ್ಷರನ್ನಾಗಿ ನೇಮಕಮಾಡಲಾಗಿದೆ.
- ವಿಶ್ವ ಪವನಶಾಸ್ತ್ರ ಸಂಸ್ಥೆ "ವರ್ಲ್ಡ್ ಕ್ಲೇಮೆಟ್ ಕಾನ್ ಫೆರೆನ್ಸ್-3" ಎಂಬ ಮಹತ್ವದ ಯೋಜನೆಯನ್ನು ರೂಪಿಸಿದ್ದು, ಹವಾಮಾನ ಬದಲಾವಣೆ ಕುರಿತಾಗಿ ವಿಶ್ವ ಪವನಶಾಸ್ತ್ರ ಸಂಸ್ಥೆ ನಡೆಸುತ್ತಿರುವ ಈ ಅಧ್ಯಯನದಲ್ಲಿ ರಾಥೋಡ್ ಅವರು ಪ್ರಮುಖ ಪಾತ್ರವಹಿಸಲಿದ್ದಾರೆ.

**ವಿಶ್ವಸಂಸ್ಥೆ ಮಹಿಳಾ ಸಬಲೀಕರಣ ಸಂಸ್ಥೆಯ ಮುಖ್ಯಸ್ಥರಾಗಿ: "ಪೂಮ್ಜೈಲ್ ಲಂಬೊ ಕುಕ (Phumzile Mlambo Ngcuka)"**

ದಕ್ಷಿಣ ಆಫ್ರಿಕಾದ ಮಾಜಿ ಉಪಾಧ್ಯಕ್ಷೆ ಮತ್ತು ಪ್ರಸಿದ್ಧ ವಕೀಲೆಯಾದ "ಪೂಮ್ಜೈಲ್ ಲಂಬೊ ಕುಕ" ಅವರನ್ನು ವಿಶ್ವಸಂಸ್ಥೆಯ ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣ ಸಂಸ್ಥೆಯ ಮುಖ್ಯಸ್ಥರನ್ನಾಗಿ ವಿಶ್ವಸಂಸ್ಥೆಯ ಕಾರ್ಯದರ್ಶಿ ಬಾನ್-ಕಿ-ಮೂನ್ ಅವರು ನೇಮಕ ಮಾಡಿದ್ದಾರೆ. ಕುಕ ಅವರು ಚಿಲಿಯ ಮಾಜಿ ಅಧ್ಯಕ್ಷರಾದ ಮತ್ತು ವಿಶ್ವಸಂಸ್ಥೆಯ ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣ ಸಂಸ್ಥೆಯ ಮೊದಲ ಮುಖ್ಯಸ್ಥೆಯಾದ ಮೈಕೆಲ್ ಬ್ಲಾಚೆಟ್ ಅವರ ಉತ್ತರಾಧಿಕಾರಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

**"ಪೂಮ್ಝೈಲ್ ಲಂಬೊ ಕುಕ"**

- ಪೂಮ್ಝೈಲ್ ಕುಕ ದಕ್ಷಿಣ ಆಫ್ರಿಕಾದ ಉಪಾಧ್ಯಕ್ಷೆ ಸ್ಥಾನವನ್ನು ಅಲಂಕರಿಸಿದ ಪ್ರಥಮ ಮಹಿಳೆ ಎನಿಸಿದ್ದಾರೆ. ಕುಕ ಅವರು 2005 ರಿಂದ 2008 ರ ವರೆಗೆ ದಕ್ಷಿಣ ಆಫ್ರಿಕಾದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಅಲ್ಲದೇ, ವ್ಯಾಪಾರ ಮತ್ತು ಕೈಗಾರಿಕೆ ಹಾಗೂ ಖನಿಜ ಮತ್ತು ಇಂಧನ ಖಾತೆ ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದಾರೆ.
- ಕೇವಲ ರಾಜಕೀಯವಾಗಿ ಅಲ್ಲದೇ ತಮ್ಮ ಸಮಾಜ ಸೇವೆಯಿಂದಲೂ ಕಾರ್ಯಪ್ರಮುಖರಾಗಿರುವ ಕುಕ ಅವರು 2008 ರಲ್ಲಿ ಉಮ್ಲಮ್ಬೊ ಫೌಂಡೇಶನ್ ಅನ್ನು ಸ್ಥಾಪಿಸಿದ್ದಾರೆ. ಈ ಸಂಸ್ಥೆ ಇಂದು ಆರ್ಥಿಕವಾಗಿ ಹಿಂದುಳಿದಿರುವ ಪ್ರದೇಶಗಳಲ್ಲಿ ಶಾಲಾ ಶಿಕ್ಷಕರಿಗೆ ತರಬೇತಿಯನ್ನು ನೀಡುವ ಮೂಲಕ ಉತ್ತಮ ಶಿಕ್ಷಣಕ್ಕೆ ತಳಪಾಯ ಹಾಕಿಕೊಟ್ಟಿದೆ.

**ವಿಶ್ವಸಂಸ್ಥೆ ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣ ಸಂಸ್ಥೆ:**

- ಮಹಿಳಾ ಹಕ್ಕುಗಳನ್ನು ಉತ್ತೇಜಿಸುವ ಉದ್ದೇಶದಿಂದ ಮತ್ತು ಜಾಗತಿಕ ವ್ಯವಹಾರಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸುವುದನ್ನು ಬೆಂಬಲಿಸುವ ಕಾರಣಕ್ಕಾಗಿ ವಿಶ್ವಸಂಸ್ಥೆ ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣ ಸಂಸ್ಥೆಯನ್ನು ಜುಲೈ 2010 ರಲ್ಲಿ ಸ್ಥಾಪಿಸಲಾಗಿದೆ.

**ಬೋಸ್ ಆಡಿಯೋ ಸಿಸ್ಟಂ ಕಂಪನಿ ಅಮರ್ ಜಿ ಬೋಸ್ ನಿಧನ**

ಮನೆ, ಸಭಾಗೃಹ ಮತ್ತು ಆಟೋಮೊಬೈಲ್ ಕ್ಷೇತ್ರದಲ್ಲಿ ಸಾರ್ವತ್ರಿಕವಾಗಿ ಬಳಸಲ್ಪಡುವ ಉನ್ನತ ಗುಣಮಟ್ಟದ ಬೋಸ್ ಆಡಿಯೋ ಸಿಸ್ಟಂ ಮತ್ತು ಸ್ಪೀಕರ್ ಗಳನ್ನು ಅನ್ವೇಷಿಸಿದ್ದ ಭಾರತೀಯ ಅಮೆರಿಕನ್ ಉದ್ಯಮಿ ಅಮರ್ ಜಿ ಬೋಸ್ ನಿಧನರಾದರು. ಇವರಿಗೆ 83 ವರ್ಷ ವಯಸ್ಸಾಗಿತ್ತು.

- 1929 ರಲ್ಲಿ ನವೆಂಬರ್ 2 ರಂದು ಫಿಲಡೆಲ್ಫಿಯಾದಲ್ಲಿ ಜನಿಸಿದ್ದ ಅಮರ್ ಬೋಸ್ ಅವರ ತಂದೆ ನೋನಿ ಗೋಪಾಲ್ ದಾಸ್ ಅವರು ಬಂಗಾಳಿ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. 1920 ರಿಂದ ಬ್ರಿಟಿಷರಿಂದ ತಪ್ಪಿಸಿಕೊಳ್ಳುವ ಸಲುವಾಗಿ ನೋನಿ ಅವರು ಅಮೆರಿಕಾಗೆ ವಲಸೆ ಬಂದರು.
- 13ರ ಹರೆಯದಲ್ಲಿಯೇ ಅಮರ್ ಬೋಸ್ ರೇಡಿಯೋ ಸೆಟ್ ಗಳ ರಿಪೇರಿ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದರು. ಖಾಸಗಿ ಮಾಲಿಕತ್ವದ ಕಂಪೆನಿಯ ಸ್ಥಾಪಕ ಮತ್ತು ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಲೇ ಅವರು ಶ್ರವಣ ವಿಜ್ಞಾನ ಕ್ಷೇತ್ರದತ್ತ ತಮ್ಮ ಸಂಶೋಧನಾ ದೃಷ್ಟಿಯನ್ನು ಹರಿಸಿದ್ದರ ಫಲವಾಗಿ ಬೋಸ್ ಸಿಸ್ಟಂನ್ನು ಹುಟ್ಟುಹಾಕಿದರು.
- ಧ್ವನಿವಿಜ್ಞಾನ ಕ್ಷೇತ್ರದಲ್ಲಿ ತನ್ನ ದೂರದೃಷ್ಟಿಯ ಮೂಲಕ ಹಲವಾರು ಸಂಶೋಧನೆಗಳನ್ನು ನಡೆಸಿದ್ದ ಅಮರ್ ಬೋಸ್, 50 ವರ್ಷಗಳ ಹಿಂದೆ ಬೋಸ್ ಕಾರ್ಪೋರೇಶನ್ ನನ್ನು ಹುಟ್ಟುಹಾಕಿದ್ದರು.

**ಬೋಫೋರ್ಸ್ ಹಗರಣದ ಪ್ರಮುಖ ರೂವಾರಿ ಒಟ್ಟಾವಿಯೋ ಕ್ವಟ್ರೋಚಿ ನಿಧನ**

80 ರ ದಶಕದಲ್ಲಿ ಭಾರತದಲ್ಲಿ ಭಾರಿ ಸಂಚಲನ ಹುಟ್ಟಿಸಿದ್ದ ಬೋಫೋರ್ಸ್ ಲಂಚ ಹಗರಣದ ಪ್ರಮುಖ ರೂವಾರಿ ಎಂದೇ ಬಿಂಬಿಸಲಾಗಿದ್ದ ಇಟಲಿಯ ಒಟ್ಟಾವಿಯೋ ಕ್ವಟ್ರೋಚಿ ಅವರು ನಿಧನರಾದರು. ಇದರೊಂದಿಗೆ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಲಂಚ ಪಡೆದಿದ್ದಾರೆ ಎಂಬ ಪ್ರಕರಣದ ಕೊನೆಯೂ ಸಾಕ್ಷಿಯೂ ಇಲ್ಲದಂತಾಗಿದೆ. ಕ್ವಟ್ರೋಚಿ ಅವರು ನರ ಸಂಬಂಧಿ ಖಾಯಿಲೆಯಿಂದ ಬಳಲುತ್ತಿದ್ದರು ಎನ್ನಲಾಗಿದೆ.

**ಬೋಫೋರ್ಸ್ ಹಗರಣ**:

- 1986 ಮಾರ್ಚ್ 24 ರಂದು ಫ್ರಾನ್ಸ್ ಮೂಲದ ಬೋಫೋರ್ಸ್ ಸಂಸ್ಥೆ, ಭಾರತಕ್ಕೆ ರೂ 1500 ಕೋಟಿ ಮೊತ್ತದ ಹೌವಿಟ್ಜರ್ ಗನ್ ಪೂರೈಸುವ ಒಪ್ಪಂದಕ್ಕೆ ಸಹಿಹಾಕಿತ್ತು. ಈ ನಡುವೆ 1987 ಏಪ್ರಿಲ್ 17 ರಂದು ಸ್ವೀಡಿಷ್ ರೇಡಿಯೋ, ಒಪ್ಪಂದದಲ್ಲಿ ಅವ್ಯವಹಾರ ನಡೆದಿರುವುದಾಗಿ ಸುದ್ದಿ ಬಿತ್ತರಿಸಿತು. ಒಪ್ಪಂದವನ್ನು ಕುದುರಿಸಲು ರೂ 64 ಕೋಟಿ ಲಂಚವನ್ನು ಸಂಸ್ಥೆ ನೀಡಿರುವುದಾಗಿ ರೇಡಿಯೋ ಬಿತ್ತರಿಸಿತ್ತು.
- ಈ ಕುರಿತು ಮಾಧ್ಯಮಗಳು ನಡೆಸಿದ ತನಿಖೆಯಲ್ಲಿ ಇಟಲಿಯ ಉದ್ಯಮಿ ಹಾಗೂ ರಾಜೀವ್ ಗಾಂಧಿ ಅವರಿಗೆ ಕುಟುಂಬಕ್ಕೆ ಆಪ್ತರಾಗಿದ್ದ ಕ್ವಟ್ರೋಚಿ ಅವರು ಈ ಹಗರಣದ ಮಧ್ಯಸ್ಥಿಕೆ ವಹಿಸಿರುವುದಾಗಿ ತಿಳಿದುಬಂದಿತ್ತು. ಈ ಸುದ್ದಿ ಬಿಸಿಬಿಸಿ ಚರ್ಚೆಗೆ ಗ್ರಾಸವಾದ ಹಿನ್ನೆಲೆಯಲ್ಲೇ ಕಾಂಗ್ರೆಸ್ ಪಕ್ಷ 1989 ರ ಲೋಕಸಭಾ ಚುನಾವಣೆಯಲ್ಲಿ ಸೋಲನ್ನು ಅನುಭವಿಸಿತ್ತು. ಆದರೆ ರಾಜೀವ್ ಗಾಂಧಿ ಅವರು ಮಾತ್ರ ಈ ಆರೋಪವನ್ನು ನಿರಾಕರಿಸಿದ್ದರು.

**ತನಿಖೆ:**

- ಬೋಫೋರ್ಸ್ ಹಗರಣದ ಕುರಿತು ತನಿಖೆ ನಡೆಯುತ್ತಿರುವಾಗಲೇ ರಾಜೀವ್ ಗಾಂಧಿ ಅವರು ಹತ್ಯೆಗೊಳಗಾದರು. ಬಂಧನ ತಪ್ಪಿಸಿಕೊಳ್ಳಲು ಕ್ವಟ್ರೋಚಿ ಭಾರತದಿಂದ 1993 ರಲ್ಲಿ ಪಲಾಯನಗೈದಿದ್ದ. ಆತ ಮುಂದೆಂದು ಸಿಬಿಐ ಹಿಡಿತಕ್ಕೆ ಸಿಗಲೇ ಇಲ್ಲ. ಹಾಗಿದ್ದರೂ ತನಿಖೆ ಮುಂದುವರೆಸಿದ ಸಿಬಿಐ 1999 ರಲ್ಲಿ ಅಧಿಕಾರಕ್ಕೆ ಬಂದ NDA ಸರ್ಕಾರದಲ್ಲಿ ಚಾರ್ಜ್ ಶೀಟ್ ನ್ನು ದಾಖಲಿಸಿತು. ಇದರಲ್ಲಿ ರಾಜೀವ್ ಗಾಂಧಿ, ಕ್ವಟ್ರೋಚಿ ಮತ್ತು ಆತನ ಪತ್ನಿ ಮಾರಿಯಾ ಹಾಗೂ ಬೊಫೋರ್ಸ್ ಸಂಸ್ಥೆಯ ಭಾರತೀಯ ಶಾಖೆಯ ಮುಖ್ಯಸ್ಥ ನವೀನ್ ಛಡ್ಡಾ ಅವರನ್ನು ಆರೋಪಿಗಳೆಂದು ದಾಖಲಿಸಿತ್ತು.
- ಆದರೆ ಕ್ವಟ್ರೋಚಿಯನ್ನು ಬಂಧಿಸಲು ಸಿಬಿಐ ವಿಫಲವಾಯಿತು. ಪ್ರಕರಣದ ತನಿಖೆಗೆ ಮುಖವೊಡ್ಡದೇ ತಪ್ಪಿಸಿಕೊಳ್ಳುವಲ್ಲಿ ಕ್ವಟ್ರೋಚಿ ಯಶಸ್ವಿಯಾದ. ಈ ಪ್ರಕರಣದ ತನಿಖೆಯನ್ನು ಮುಚ್ಚಲು ದೆಹಲಿ ಹೈಕೋರ್ಟ್ 2011 ರಲ್ಲಿ ಸಿಬಿಐಗೆ ಸೂಚಿಸಿತು. ಇದರಂತೆ ಪ್ರಕರಣದಲ್ಲಿ ಭಾಗಿಯಾದ ಯಾರೊಬ್ಬರಿಗೂ ಶಿಕ್ಷೆಯಾಗದೇ ಪ್ರಕರಣ ಅಂತ್ಯ ಕಂಡಿದ್ದು ದುರಂತವೇ ಸರಿ.

**ಜಾರ್ಖಂಡ್ ಮುಖ್ಯಮಂತ್ರಿಯಾಗಿ "ಹೇಮಂತ್ ಸೊರೇನ್" ಅಧಿಕಾರ ಸ್ವೀಕಾರ**

ರಾಜಕೀಯ ಕ್ಷಿಪ್ರಕ್ರಾಂತಿಗಳಿಂದಲೇ ಅಪಖ್ಯಾತಿಗೀಡಾಗಿರುವ ಜಾರ್ಖಂಡದ 9ನೇ ಮುಖ್ಯಮಂತ್ರಿಯಾಗಿ ಜಾರ್ಖಂಡ್ ಮುಕ್ತಿ ಮೋರ್ಚ ಪಕ್ಷದ ಅಧಿನಾಯಕ ಹೇಮಂತ್ ಸೊರೇನ್ ಅವರು ಪ್ರಮಾಣ ವಚನ ಸ್ವೀಕರಿಸಿದರು. ಹೇಮಂತ್ ಸೊರೇನ್ ಅವರು ಜಾರ್ಖಂಡ್ ಮುಕ್ತಿ ಮೋರ್ಚ ಪಕ್ಷದ ನಾಯಕ ಮತ್ತು ಜಾರ್ಖಂಡ್ ನ ಮಾಜಿ ಮುಖ್ಯಮಂತ್ರಿ ಶಿಬು ಸೊರೇನ್ ಅವರು ಮಗ. ಶಿಬು ಸೊರೇನ್ 2005 ರಿಂದ 2010 ರ ವರೆಗೆ ಮೂರು ಬಾರಿ ಅಲ್ಪಾವಧಿಗೆ ಶಿಬು ಮುಖ್ಯಮಂತ್ರಿಯಾಗಿದ್ದರು.

- 37 ವರ್ಷದ "ಹೇಮಂತ್ ಸೊರೇನ್" ಅವರು ದೇಶದ ಅತ್ಯಂತ ಕಿರಿಯ ಮುಖ್ಯಮಂತ್ರಿಯಾಗಿದ್ದಾರೆ. ಈ ಪಟ್ಟ ಇಷ್ಟು ದಿನ ಉತ್ತರ ಪ್ರದೇಶದ ಮುಖ್ಯಮಂತ್ರಿಗಳಾದ ಅಖಿಲೇಶ್ ಯಾಧವ್ ಅವರಿಗೆ ಇತ್ತು.
- ಜನವರಿಯಿಂದ ಆರು ತಿಂಗಳ ಮಟ್ಟಿಗೆ ಹೇರಲಾಗಿದ್ದ ರಾಷ್ಟ್ರಪತಿ ಆಳ್ವಿಕೆಗೆ ಶುಕ್ರವಾರ ತೆರೆ ಬಿದ್ದ ಹಿನ್ನಲೆಯಲ್ಲಿ ರಾಜ್ಯಪಾಲರು ಸರ್ಕಾರ ರಚಿಸಲು ಹೇಮಂತ್ ಸೊರೇನ್ ಅವರಿಗೆ ಆಹ್ವಾನ ಮಾಡಿದ್ದರು. ಅದರಂತೆ ಕಾಂಗ್ರೆಸ್, ಆರ್ ಜೆಡಿ ಮಿತ್ರಕೂಟಗಳ ಇಬ್ಬರು ನಾಯಕರ ಜೊತೆಗೂಡಿ ಹೇಮಂತ್ ಪ್ರಮಾಣ ವಚನ ಸ್ವೀಕರಿಸಿದರು.

**ತೆರೆಮರೆಗೆ ಸರಿದ ದಾದಾ ಸಾಹೇಬ್ ಪಾಲ್ಕೆ ಪ್ರಶಸ್ತಿ ಪುರಸ್ಕೃತ "ಪ್ರಾಣ್"**

ದಾದಾ ಸಾಹೇಬ್ ಪ್ರಶಸ್ತಿ ಪುರಸ್ಕೃತ ಬಾಲಿವುಡ್ ಬ್ಲ್ಯಾಕ್ ಗೋಲ್ಡ್ ಎಂದೇ ಖ್ಯಾತರಾಗಿದ್ದ ಹಿರಿಯ ನಟ ಪ್ರಾಣ್ ಅವರು ನಿಧನರಾದರು. 93 ವರ್ಷದ ಪ್ರಾಣ್ ಅವರು ವಯೋಸಹಜ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದರು. ಆರೋಗ್ಯದಲ್ಲಿ ಸುಧಾರಣೆ ಕಾಣದೇ ಹೋದ ಹಿನ್ನಲೆಯಲ್ಲಿ ಮುಂಬೈನ ಲೀಲಾವತಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

- "ಪ್ರಾಣ್ ಕ್ರಿಶನ್ ಸಿಕಂದ್ (Pran Krishan Sikand)" ಹೆಸರಿನ ನಟ ಪ್ರಾಣ್ ಆಗಿ ಜನಪ್ರಿಯರಾಗಿದ್ದರು. ಮೂಲತಃ ಫೋಟೊಗ್ರಾಫರ್ ಆಗಿದ್ದ ಪ್ರಾಣ್ ಅವರು ಅದೃಷ್ಟವಶಾತ್ ಕ್ಯಾಮೆರಾ ಮುಂದೆ ನಿಂತರು.
- 1940 ರಲ್ಲಿ ಬಿಡುಗಡೆಗೊಂಡ ಪಂಜಾಬಿ ಚಿತ್ರ "ಯಮ್ಲ ಜಾಟ್" ಮೂಲಕ ಸಿನಿಮಾ ಕ್ಷೇತ್ರ ಪದಾರ್ಪಣೆ ಮಾಡಿದ ಪ್ರಾಣ್ 1990ರ ವರೆಗೂ ಹಿಂದಿ ಚಿತ್ರರಂಗದಲ್ಲಿ ಖಳನಾಯಕನ ಪಾತ್ರದ ಮೂಲಕ ಪ್ರೇಕ್ಷಕರನ್ನು ರಂಜಿಸಿದ್ದರು. ಪ್ರಾಣ್ ಸುಮಾರು 400 ಕ್ಕೂ ಹೆಚ್ಚು ಸಿನಿಮಾಗಳಲ್ಲಿ ತಮ್ಮ ಪ್ರಬುದ್ಧ ನಟನೆಯಿಂದ ಕಂಗೊಳಿಸಿದ್ದರು.
- 1948 ರಲ್ಲಿ ಬಿಡುಗಡೆಯಾದ ಬಾಲಿವುಡ್ ಚಿತ್ರ "ಜಿದ್ದಿ" ಪ್ರಾಣ್ ಅವರ ಜೀವನದ ದಿಕ್ಕನ್ನೇ ಬದಲಿಸಿತು. 1962 ರಿಂದ 1982 ರ ವರೆಗೆ ಬಾಲಿವುಡ್ ನಲ್ಲಿ ಅತಿ ಹೆಚ್ಚು ಸಂಭಾವನೆ ಪಡೆದ ಪೋಷಕ ನಟ ಎಂಬ ಖ್ಯಾತಿಯನ್ನು ಪ್ರಾಣ್ ಪಡೆದಿದ್ದರು.
- ಪ್ರಾಣ್ ಅವರು ಕನ್ನಡದ "ಹೊಸರಾಗ (1991)" ಚಿತ್ರದಲ್ಲಿ ಅಭಿನಯಸಿದ್ದಾರೆ. ಕನ್ನಡ ಭಾಷೆಯನ್ನು ಕಬ್ಬಿಣದ ಕಡಲೆಯೆಂದು ತಿಳಿದ ಪ್ರಾಣ್ ಮತ್ತೆ ಕನ್ನಡ ಚಿತ್ರಗಳಲ್ಲಿ ನಟಿಸಲು ಮನಸ್ಸು ಮಾಡಲಿಲ್ಲ.
- ರಾಮ್ ಔರ್ ಶಾಮ್, ಪುರಬ್ ಔರ್ ಪಶ್ಚಿಮ್, ಕರ್ಝ್, ಉಪ್ ಕಾರ್ ಶರಾಬಿ, ಝಂಜೀರ್ ಚಿತ್ರಗಳು ಪ್ರಾಣ್ ಗೆ ಕೀರ್ತಿ ತಂದ ಪ್ರಮುಖ ಚಿತ್ರಗಳು. 2007 ರಲ್ಲಿ ತೆರೆಕಂಡ "ದೋಶ್" ಚಿತ್ರ ಪ್ರಾಣ್ ಅಭಿನಯದ ಕೊನೆಯ ಚಿತ್ರ.

**ಪ್ರಶಸ್ತಿಗಳು:**

- ಪ್ರಾಣ್ ಅವರ ಅತ್ಯುತ್ತಮ ಪೋಷಕ ನಟನೆಗಾಗಿ 1967, 1969 ಮತ್ತು 1972 ರಲ್ಲಿ ಫಿಲಂಫೇರ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. 1997 ರಲ್ಲಿ ಅವರಿಗೆ ಫಿಲಂಫೇರ್ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಲಾಗಿದೆ.
- 2000 ರಲ್ಲಿ ಪ್ರಾಣ್ ಅವರು ಸ್ಟಾರ್ ಡಸ್ಟ್ ವತಿಯಿಂದ ಶತಮಾನದ ವಿಲನ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.
- ಸಿನಿಮಾ ಕ್ಷೇತ್ರಕ್ಕೆ ಪ್ರಾಣ್ ನೀಡಿರುವ ಗಣನೀಯ ಸೇವೆಯನ್ನು ಗಮನಿಸಿ ಭಾರತ ಸರ್ಕಾರ ಅವರಿಗೆ 2001 ರಲ್ಲಿ ಪದ್ಮಭೂಷಣ ಪ್ರಶಸ್ತಿ ಮತ್ತು 2013 ರಲ್ಲಿ ದಾದಾ ಸಾಹೇಬ್ ಪಾಲ್ಕೆ ಪ್ರಶಸ್ತಿಯನ್ನು ನೀಡಿದೆ.

**ಭಾರತದ ಮುಂದಿನ ವಿದೇಶಾಂಗ ಕಾರ್ಯದರ್ಶಿಯಾಗಿ: "ಸುಜಾತ ಸಿಂಗ್" ನೇಮಕ**

ಭಾರತದ ಜರ್ಮನಿ ರಾಯಭಾರಿಯಾಗಿರುವ 59 ವರ್ಷ ವಯಸ್ಸಿನ "ಸುಜಾತ ಸಿಂಗ್" ಅವರನ್ನು ಮುಂದಿನ ವಿದೇಶಾಂಗ ಕಾರ್ಯದರ್ಶಿ ನೇಮಕ ಮಾಡಲು ಪ್ರಧಾನಿ ಮನಮೋಹನ್ ಸಿಂಗ್ ಒಪ್ಪಿಗೆ ಸೂಚಿಸಿದ್ದಾರೆ. ಪ್ರಸ್ತುತ ವಿದೇಶಾಂಗ ಕಾರ್ಯದರ್ಶಿಯಾಗಿರುವ ರಂಜನ್ ಮಾಥಯ್ ಅವರು ಜುಲೈ 31, 2013 ರಂದು ನಿವೃತ್ತಿ ಹೊಂದಲ್ಲಿದ್ದು, ಅವರ ಸ್ಥಾನವನ್ನು ಸುಜಾತ ಸಿಂಗ್ ತುಂಬಲಿದ್ದಾರೆ.

**ಸುಜಾತ ಸಿಂಗ್:**

- ಸುಜಾತ್ ಸಿಂಗ್ 1976 ನೇ ಬ್ಯಾಚ್ ನ ಐಎಫ್ಎಸ್ ಅಧಿಕಾರಿ
- ಭಾರತದ ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ಮೂರನೇ ಮಹಿಳೆ. ಈ ಹಿಂದೆ ಚೊಕಿಲಾ ಅಯ್ಯರ್ ಮತ್ತು ನಿರುಪಮಾ ರಾವ್ ಈ ಹುದ್ದೆಯನ್ನು ನಿಭಾಯಿಸಿದ್ದರು.
- ನೇಪಾಳ ಸೇರಿದಂತೆ ಯುರೋಪಿಯನ್ ರಾಷ್ಟ್ರಗಳಾದ ಇಟಲಿ ಮತ್ತು ಫ್ರಾನ್ಸ್ ನಲ್ಲಿ ರಾಯಭಾರಿಯಾಗಿ ಸೇವೆ ಸಲ್ಲಿಸಿದ್ದಾರೆ.

**ಇಂಕಿಯಾನ್ ನಗರಕ್ಕೆ "ವರ್ಲ್ಡ್ ಬುಕ್ ಕ್ಯಾಪಿಟಲ್-2015" ಸ್ಥಾನ**

ದಕ್ಷಿಣ ಕೊರಿಯಾದ ಇಂಕಿಯಾನ್ (Incheon) ನಗರವನ್ನು "ವರ್ಲ್ಡ್ ಬುಕ್ ಕ್ಯಾಪಿಟಲ್ (World Book Capital)-2015" ಎಂದು ಯುನೆಸ್ಕೊ ಘೋಷಿಸಿದೆ. ಅಂತರರಾಷ್ಟ್ರೀಯ ಪುಸ್ತಕ ಪ್ರಕಾಶಕರನ್ನು ಪ್ರತಿನಿಧಿಸಿದ್ದ ಸಮಿತಿ ಮತ್ತು ಯುನೆಸ್ಕೊ ಜಂಟಿಯಾಗಿ ಜುಲೈ 16 ರಂದು ಯುನೆಸ್ಕೊದ ಕೇಂದ್ರ ಕಛೇರಿಯಾದ ಪ್ಯಾರಿಸ್ ನಲ್ಲಿ ನಡೆದ ಸಭೆಯಲ್ಲಿ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ.

- ಇಂಕಿಯಾನ್ ನಗರ "ವಿಶ್ವ ಪುಸ್ತಕ ರಾಜಧಾನಿ" ಹಿರಿಮೆಗೆ ಪಾತ್ರವಾಗುತ್ತಿರುವ 15 ನೇ ನಗರವಾಗಿದೆ.

- ಪುಸ್ತಕ ಮಾರಾಟ ಮತ್ತು ಓದುವಿಕೆಯ ಮೇಲೆ ಇಂಕಿಯಾನ್ ನಗರ ಅತ್ಯಂತ ಪ್ರಭಾವ ಬೀರುವ ನಗರವೆನಿಸಿರುವ ಕಾರಣ ಈ ನಗರವನ್ನು ಆಯ್ಕೆಮಾಡಲಾಗಿದೆ ಎಂದು ಯುನೆಸ್ಕೊದ ನಿರ್ದೇಶಕರಾದ ಇರಿನಾ ಬೊಕೊವಾ ರವರು ಹೇಳಿದ್ದಾರೆ.

**"ವಿಶ್ವ ಪುಸ್ತಕ ರಾಜಧಾನಿ"**:

- ಪುಸ್ತಕ ಮಾರಾಟ ಮತ್ತು ಪುಸ್ತಕಗಳ ಓದುವಿಕೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಪ್ರತಿ ವರ್ಷ ವಿಶ್ವದ ಒಂದು ನಗರವನ್ನು ವಿಶ್ವ ಪುಸ್ತಕ ರಾಜಧಾನಿಯೆಂದು ಯುನೆಸ್ಕೊ ಗುರುತಿಸುತ್ತದೆ.
- "ವಿಶ್ವ ಪುಸ್ತಕ ಮತ್ತು ಕಾಫಿರೈಟ್" ದಿನವಾದ ಏಪ್ರಿಲ್ 23 ರಿಂದ ಮುಂದಿನ ಏಪ್ರಿಲ್ 22 ರ ತನಕ ಈ ಖ್ಯಾತಿಯನ್ನು ಆಯ್ಕೆಯಾದ ನಗರ ಹೊಂದಿರುತ್ತದೆ.
- ವಿಶ್ವದೆಲ್ಲೆಡೆಯಿಂದ ಬರುವ ಅರ್ಜಿಗಳನ್ನು ಪರಿಶೀಲಿಸಿದ ಬಳಿಕ ಒಂದು ನಗರವನ್ನು ಯುನೆಸ್ಕೊ ಮತ್ತು ಅಂತರರಾಷ್ಟ್ರೀಯ ಪುಸ್ತಕ ಪ್ರಕಾಶಕರ ಸಮಿತಿ ಅಂತಿಮಗೊಳಿಸುತ್ತದೆ.
- 2001 ರಲ್ಲಿ ಪ್ರಥಮ ಬಾರಿಗೆ "ಮ್ಯಾಡ್ರಿಡ್" ನಗರವನ್ನು ವಿಶ್ವ ಪುಸ್ತಕ ರಾಜಧಾನಿಯಾಗಿ ಆಯ್ಕೆಮಾಡಲಾಗಿತ್ತು. ಆ ಬಳಿಕ ಇದುವರೆಗೂ ಒಟ್ಟು 15 ನಗರಗಳನ್ನು ವಿಶ್ವ ಪುಸ್ತಕ ರಾಜಧಾನಿಯೆಂದು ಗುರುತಿಸಲಾಗಿದೆ.
- 2013 ರಲ್ಲಿ ಬ್ಯಾಕಾಂಕ್ ಮತ್ತು 2014 ರಲ್ಲಿ ಪೋರ್ಟ್ ಹಾರ್ಕೋರ್ಟ್ (Port Harcourt) ನಗರಗಳನ್ನು ವಿಶ್ವ ಪುಸ್ತಕ ರಾಜಧಾನಿಗಳೆಂದು ಆಯ್ಕೆಮಾಡಲಾಗಿದೆ.

**ಬ್ರಿಟನ್ ಹೌಸ್ ಆಫ್ ಲಾರ್ಡ್ಸ್ ಅಧ್ಯಕ್ಷರಾಗಿ ಭಾರತೀಯ ಮೂಲದ ಅಜಯ್ ಕಾಕರ್ ನೇಮಕ**

ಬ್ರಿಟನ್‌ನ ಹೌಸ್ ಆಫ್ ಲಾರ್ಡ್ಸ್‌ನ ಸ್ವತಂತ್ರ ಸದಸ್ಯರನ್ನು ಆಯ್ಕೆ ಮಾಡುವ ಅಧಿಕಾರವನ್ನು ಹೊಂದಿರುವ ಸದನದ ನೇಮಕಾತಿ ಆಯೋಗದ ಅಧ್ಯಕ್ಷರನ್ನಾಗಿ ಭಾರತೀಯ ಮೂಲದ ಅಜಯ್ ಕಾಕರ್ ಅವರನ್ನು ಬ್ರಿಟನ್ ಪ್ರಧಾನಿ ಡೇವಿಡ್ ಕ್ಯಾಮರಾನ್ ನೇಮಕ ಮಾಡಿದ್ದಾರೆ. ಅಜಯ್ ಕಾಕರ್ ಅವರ ಅಧಿಕಾರಾವಧಿ 5 ವರ್ಷಗಳಾಗಿದ್ದು, ಅಕ್ಟೋಬರ್ 1ರಿಂದ ಜಾರಿಗೆ ಬರುವಂತೆ ಈ ನೇಮಕಾತಿಯನ್ನು ಮಾಡಲಾಗಿದೆ. ಕಾಕರ್ ಅವರ ಅಗಾಧ ಅನುಭವ ಮತ್ತು ಪ್ರಾಮಾಣಿಕತೆ ಈ ಹುದ್ದೆಗೆ ನ್ಯಾಯ ದೊರಕಿಸಿಕೊಡಲಿದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿರುವ ಪ್ರಧಾನಿ ಕ್ಯಾಮರಾನ್, ಕಳೆದ ಐದು ವರ್ಷಗಳ ಅವಧಿಯಲ್ಲಿ ಹೌಸ್ ಆಫ್ ಲಾರ್ಡ್ಸ್‌ನ ಸದಸ್ಯರಾಗಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ್ದಾರೆ ಎಂದು ತನ್ನ ಹೇಳಿಕೆಯಲ್ಲಿ ಪ್ರಶಂಸಿಸಿದ್ದಾರೆ. ಕಾಕರ್ ನೇತೃತ್ವದ ಆಯೋಗ ಹೌಸ್ ಆಫ್ ಲಾರ್ಡ್ಸ್‌ನ ಸ್ವತಂತ್ರ ಸದಸ್ಯರನ್ನು ಆಯ್ಕೆ ಮಾಡಲಿದೆ. ಯುನಿವರ್ಸಿಟಿ ಕಾಲೇಜ್ ಲಂಡನ್‌ನಲ್ಲಿ ಶಸ್ತ್ರಚಿಕಿತ್ಸಾ ವಿಭಾಗದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಅಜಯ್ ಕಾಕರ್ ಅವರು 2011ರಿಂದೀಚೆಗೆ ಯುನಿವರ್ಸಿಟಿ ಕಾಲೇಜ್ ಲಂಡನ್ ಆಸ್ಪತ್ರೆಯ ಎನ್‌ಎಚ್‌ಎಸ್ ಫೌಂಡೇಶನ್ ಟ್ರಸ್ಟ್‌ನ ಸಲಹಾ ಸರ್ಜನ್ ಆಗಿಯೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ. 2010ರಲ್ಲಿ ಹೌಸ್ ಆಫ್ ಲಾರ್ಡ್ಸ್‌ಗೆ ರಾಜಕೀಯೇತರ ಸದಸ್ಯರಾಗಿ ನೇಮಕಗೊಂಡಿದ್ದರು.

**ಅಮೆರಿಕಾದ "ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ (FBI)" ನ ನಿರ್ದೇಶಕರಾಗಿ ಆಗಿ ಜೇಮ್ಸ್ ಕೊಮೆ**

ಅಮೆರಿಕಾದ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ ನ ನಿರ್ದೇಶಕರಾಗಿ ಜೇಮ್ಸ್ ಕೊಮೆ ಆಯ್ಕೆ ಖಚಿತವಾಗಿದೆ. ಕಳೆದ ತಿಂಗಳು ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮ ಅವರು ಕೊಮೆ ಅವರನ್ನು ನಿರ್ದೇಶಕರ ಸ್ಥಾನಕ್ಕೆ ನಾಮನಿರ್ದೇಶನ ಮಾಡಿದ್ದರು. ಜೇಮ್ಸ್ ಕೊಮೆ ಅವರ ನಾಮನಿರ್ದೇಶನವನ್ನು ಅಮೆರಿಕಾದ ಸೆನೆಟ್ 93-1 ಮತಗಳಿಂದ ಬೆಂಬಲಿಸಿದ್ದು, ಶೀಘ್ರದಲ್ಲಿ ಕೊಮೆ ನಿರ್ದೇಶಕರಾಗಿ ಅಧಿಕಾರವನ್ನು ವಹಿಸಿಕೊಳ್ಳಲಿದ್ದಾರೆ.

- 2001 ರಿಂದ FBI ನ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವ ರಾಬರ್ಟ್ ಮುಲ್ಲರ್ ಅವರ ಉತ್ತರಾಧಿಕಾರಿಯಾಗಿ ಜೇಮ್ಸ್ ಕೊಮೆ ಅಧಿಕಾರವಹಿಸಿಕೊಳ್ಳಲಿದ್ದಾರೆ.
- ಕೊಮೆ ಈ ಹಿಂದೆ ಜಾರ್ಜ್ ಬುಷ್ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಡೆಪ್ಯೂಟಿ ಅಟಾರ್ನಿ ಜನರಲ್ ಆಗಿ ಡಿಸೆಂಬರ್ 2003 ರಿಂದ ಆಗಸ್ಟ್ 2005 ರವರೆಗೆ ಕಾರ್ಯನಿರ್ವಹಿಸಿದ್ದರು.

**ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್:**

- FBI ಅಮೆರಿಕಾದ ನ್ಯಾಯಾಂಗ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಪ್ರಮುಖ ಸಂಸ್ಥೆ.
- 1908 ರಲ್ಲಿ ಇದನ್ನು ಸ್ಥಾಪಿಸಲಾಗಿದ್ದು, ಮೊದಲು "ಬ್ಯೂರೋ ಆಫ್ ಇನ್ವೆಸ್ಟಿಗೇಷನ್" ಎಂದು ಕರೆಯಲಾಗುತ್ತಿತ್ತು. ಬಳಿಕ 1935 ರಲ್ಲಿ ಇದಕ್ಕೆ "ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್" ಎಂದು ಮರುನಾಮಕರಣ ಮಾಡಲಾಯಿತು.
- FBI ನ ಕೇಂದ್ರ ಕಚೇರಿ ವಾಷಿಂಗ್ಟನ್ ನಲ್ಲಿದೆ.

**ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿ ನ್ಯಾಯಮೂರ್ತಿ ಪಿ.ಸದಾಶಿವಂ ಪ್ರಮಾಣ ವಚನ**

ನ್ಯಾಯಮೂರ್ತಿ ಪಿ. ಸದಾಶಿವಂ ಅವರು ಸರ್ವೋಚ್ಚ ನ್ಯಾಯಾಲಯದ 40ನೇ ಮುಖ್ಯ ನ್ಯಾಯಮೂರ್ತಿಯಾಗಿ ರಾಷ್ಟ್ರಪತಿ ಅವರಿಂದ ಪ್ರಮಾಣ ವಚನ ಸ್ವೀಕರಿಸಿದರು. 64 ವರ್ಷ ಪ್ರಾಯದ ನ್ಯಾಯಮೂರ್ತಿ ಪಿ. ಸದಾಶಿವಂ ಅವರು ನ್ಯಾಯಮೂರ್ತಿ ಅಲ್ತಮಸ್ ಕಬೀರ್ ಅವರ ಉತ್ತರಾಧಿಕಾರಿಯಾಗಿದ್ದಾರೆ. ಕಬೀರ್ ಅವರು 9 ತಿಂಗಳಿಗೂ ಹೆಚ್ಚು ಕಾಲದಿಂದ ದೇಶದ ಶ್ರೇಷ್ಠ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ್ದಾರೆ. ನ್ಯಾಯಮೂರ್ತಿಯ ಹುದ್ದೆಯಲ್ಲಿ ಅವರು 2014ರ ಎಪ್ರಿಲ್ 26ರ ತನಕ ಕರ್ತವ್ಯ ನಿರ್ವಹಿಸುವರು. ಪಿ.ಸದಾಶಿವಂ ಈ ಸ್ಥಾನಕ್ಕೆ ನೇಮಕಗೊಂಡ ತಮಿಳುನಾಡು ಮೂಲದ ಪ್ರಥಮ ವ್ಯಕ್ತಿಯಾಗಿದ್ದಾರೆ. ಈರೋಡ್ ಜಿಲ್ಲೆಯ ಭವಾನಿ ಪಟ್ಟಣದ ಬಳಿಯ ಕಡಪ್ಪನಲ್ಲೂರು ಎಂಬ ಗ್ರಾಮದ ರೈತ ಕುಟುಂಬದ ಸದಾಶಿವಂ ಅವರು 1996ರಲ್ಲಿ ಮದ್ರಾಸ್ ಹೈಕೋರ್ಟ್ ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿಕೊಂಡಿದ್ದರು. ನಂತರ 2007ರವರೆಗೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ್ದರು. 2007ರ ಆಗಸ್ಟ್‌ನಲ್ಲಿ ಸುಪ್ರೀಂಕೋರ್ಟ್ ನ್ಯಾಯಾಧೀಶರಾಗಿ ಅಧಿಕಾರ ವಹಿಸಿಕೊಂಡಿದ್ದರು.

**ಜೆ.ಕೆ. ರೋಲಿಂಗ್ "ದಿ ಕುಕ್ಕೂಸ್ ಕಾಲಿಂಗ್" ಪತ್ತೇದಾರಿ ಕಾದಂಬರಿಯ ಲೇಖಕಿ: ಬಹಿರಂಗಗೊಂಡ ಮಾಹಿತಿ**

ಹ್ಯಾರಿ ಪಾಟರ್ ಸರಣಿ ಕಥೆಗಳಿಂದ ವಿಶ್ವದಾದ್ಯಂತ ಜನಪ್ರಿಯತೆ ಗಳಿಸಿರುವ ಜೆ.ಕೆ. ರೋಲಿಂಗ್ ಅವರು `ದಿ ಕುಕ್ಕೂಸ್ ಕಾಲಿಂಗ್' ಪತ್ತೇದಾರಿ ಕಾದಂಬರಿಯ ಲೇಖಕಿ ಎನ್ನುವ ವಿಷಯ ಇದೀಗ ಬಹಿರಂಗಗೊಂಡಿದೆ. ಈ ವಿಷಯ ಬಹಿರಂಗವಾಗುತ್ತಿದ್ದಂತೆಯೇ ಕಾದಂಬರಿಗೆ ಭಾರಿ ಬೇಡಿಕೆ ಬಂದಿದೆ. ಸೇನೆಯಲ್ಲಿದ್ದ ರಾಬರ್ಟ್ ಗಲ್‌ಬ್ರೇತ್ ಈ ಪುಸ್ತಕದ ಲೇಖಕರು ಎಂದು ಪ್ರಕಾಶಕರು ಮುದ್ರಿಸಿದ್ದರು. ಪುಸ್ತಕದ ಕುರಿತು ಸಕಾರಾತ್ಮಕ ವಿಮರ್ಶೆ ಮೂಡಿಬಂದಿದ್ದವು. ಆದರೆ, ಹೇಳಿಕೊಳ್ಳುವಷ್ಟು ಪುಸ್ತಕ ಮಾರಾಟವಾಗಿರಲಿಲ್ಲ. ಬಹುತೇಕ ಪುಸ್ತಕ ಅಂಗಡಿಗಳವರು ಮಾರಾಟವಾಗದೇ ಇದ್ದ ಪ್ರತಿ ವಾಪಸ್ ಕಳುಹಿಸುವ ಸಿದ್ಧತೆಯಲ್ಲಿದ್ದರು. ಆದರೆ, ಪುಸ್ತಕದ ಲೇಖಕಿ ರೋಲಿಂಗ್ ಎನ್ನುವುದು ಜಗಜ್ಜಾಹೀರಾಗುತ್ತಿದ್ದಂತೆ ಪುಸ್ತಕಗಳೆಲ್ಲ ಖಾಲಿಯಾಗಿವೆ.

ಭಾರಿ ಬೇಡಿಕೆ ಕಾರಣ ಲಿಟ್ಲ್, ಬ್ರೌನ್ ಅಂಡ್ ಕಂಪೆನಿ 3 ಲಕ್ಷ ಹೆಚ್ಚುವರಿ ಪ್ರತಿ ಪ್ರಕಟಿಸಲು ಮುಂದಾಗಿದೆ. ಆನ್‌ಲೈನ್ ಮಾರಾಟ ತಾಣ ಅಮೆ ಜಾನ್‌ನಲ್ಲಿ ಪುಸ್ತಕಕ್ಕೆ ಈಗ ನಂಬರ್ 1 ಸ್ಥಾನ. ಪುಸ್ತಕದ ಲೇಖಕಿ ರೋಲಿಂಗ್ ಎನ್ನುವ ವಿಷಯ ಬಹಿರಂಗ ಪಡಿಸಿರುವುದು ಅವರ ಕಡೆಯವರೇ ಎಂದು ಹೇಳಲಾಗಿದೆ. ಮಾರುಕಟ್ಟೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹೀಗೆ ಮಾಡಿಲ್ಲ ಎಂದು ರೋಲಿಂಗ್ ಅವರ ವಕ್ತಾರೆ ನಿಕ್ಕಿ ಸ್ಟೋನ್‌ಹಿಲ್ ಸ್ಪಷ್ಟಪಡಿಸಿದ್ದಾರೆ.

**ಕರ್ನಾಟಕದ ಮಾಜಿ ರಾಜ್ಯಪಾಲ ಖುರ್ಷಿದ್ ಆಲಂ ಖಾನ್ ವಿಧಿವಶ**

1991 ರಿಂದ 1999ರ ನಡುವೆ ಎಂಟು ವರ್ಷ ಕರ್ನಾಟಕದ ರಾಜ್ಯಪಾಲರಾಗಿದ್ದ ಹಿರಿಯ ಕಾಂಗ್ರೆಸ್ ನಾಯಕ ಖುರ್ಷಿದ್ ಆಲಂ ಖಾನ್ ಅವರು ನವದಹಲಿಯಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಖಾನ್ ಅವರು ವಿದೇಶಾಂಗ ಸಚಿವ ಸಲ್ಮಾನ್ ಖುರ್ಷೀದ್ ಅವರ ತಂದೆ. 1919ರ ಫೆಬ್ರವರಿ 5 ರಂದು ಉತ್ತರ ಪ್ರದೇಶದ ಫರುಖಾಬಾದ್ ಜಿಲ್ಲೆಯ ಪಿತೌರಾ ಗ್ರಾಮದಲ್ಲಿ ಜನಿಸಿದ ಖುರ್ಷೀದ್ ಆಲಂ ಖಾನ್ ಅವರು ಆಗ್ರಾ ವಿಶ್ವವಿದ್ಯಾಲಯದ ಪ್ರತಿಷ್ಠಿತ ಸೇಂಟ್ ಜಾನ್ಸ್ ಕಾಲೇಜಿನಲ್ಲಿ ಪದವಿ ಪಡೆದ ಅವರು, ಮುಂದೆ ಅಮೆರಿಕಾದ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದಲ್ಲಿ ಮ್ಯಾನೇಜ್ಮೆಂಟ್ ಸ್ಟಡೀಸ್ ನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು. ಕರ್ನಾಟಕದ ರಾಜ್ಯಪಾಲರಾಗುವ ಮೊದಲು ಅವರು 1998 ರಿಂದ 1991ರ ನಡುವೆ ಗೋವಾದ ರಾಜ್ಯಪಾಲರೂ ಆಗಿದ್ದರು. ಇದಕ್ಕೂ ಮೊದಲು ಅವರು ಕೇಂದ್ರ ವಿದೇಶಾಂಗ ಖಾತೆಯನ್ನು ಅಲಂಕರಿಸಿದ್ದರು. ರಾಜ್ಯಸಭಾ ಸದಸ್ಯರಾಗಿ, ಸಂಸದರಾಗಿ ಕೂಡ ಅವರು ಸೇವೆ ಸಲ್ಲಿಸಿದ್ದರು. ಭಾರತದ ಮೂರನೇ ರಾಷ್ಟ್ರಪತಿ ಡಾ. ಜಾಕಿರ್ ಹುಸೇನ್ ಅವರ ಮಗಳನ್ನು ಮದುವೆಯಾಗಿದ್ದರು.

**ಪಾಕಿಸ್ತಾನದ 12ನೇ ಅಧ್ಯಕ್ಷರಾಗಿ ಭಾರತ ಸಂಜಾತ ಮ್ಯಾಮ್ನೂನ್ ಹುಸೇನ್ ಆಯ್ಕೆ**

ಭಾರತ ಸಂಜಾತ ಮ್ಯಾಮ್ನೂನ್ ಹುಸೇನ್ ಪಾಕಿಸ್ತಾನದ 12ನೇ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇವರು ಪಾಕ್ ಪ್ರಧಾನಿ ನವಾಜ್ ಷರೀಫ್ ಅವರ ನಿಕಟವರ್ತಿಯಾಗಿದ್ದಾರೆ. ಈಗಿನ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಅವರ ಅವಧಿ ಇದೇ ಸೆಪ್ಟೆಂಬರ್‌ನಲ್ಲಿ ಮುಕ್ತಾಯವಾಗಲಿದೆ. ನಂತರದ ಅವಧಿಗೆ ಮ್ಯಾಮ್ನೂನ್ ಅವರು ಅತ್ಯುನ್ನತ ಹುದ್ದೆಯನ್ನು ಅಲಂಕರಿಸಲಿದ್ದಾರೆ. ಪಾಕಿಸ್ತಾನ್ ತೆಹ್ರೀಕ್-ಇ-ಇನ್ಸಾಫ್ ಪಕ್ಷದ ಅಭ್ಯರ್ಥಿ ಹಾಗೂ ನಿವೃತ್ತ ನ್ಯಾಯಾಧೀಶ ವಾಜಿಯುದ್ದೀನ್ ಅಹ್ಮದ್ ಅವರನ್ನು ಮ್ಯಾಮ್ನೂನ್ ಅವರು ಚುನಾವಣೆಯಲ್ಲಿ ಪರಾಭವಗೊಳಿಸಿದರು. ಇನ್ನೊಂದು ಪ್ರಮುಖ ಪಕ್ಷ ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ ಮತದಾನದ ದಿನ ಬದಲಾಯಿಸಿದ್ದನ್ನು ಖಂಡಿಸಿ ಚುನಾವಣೆ ಬಹಿಷ್ಕರಿಸಿತ್ತು. ಆಡಳಿತಾರೂಢ ಪಾಕಿಸ್ತಾನ ಮುಸ್ಲಿಮ್ ಲೀಗ್- ನವಾಜ್ ಪಕ್ಷವು ಹುಸೇನ್

ಅವರನ್ನು ಕಣಕ್ಕಿಳಿಸಿತ್ತು. ಸಂಸತ್ತು ಹಾಗೂ ನಾಲ್ಕು ಪ್ರಾಂತೀಯ ಅಸೆಂಬ್ಲಿಯ ಸಾವಿರಕ್ಕೂ ಹೆಚ್ಚು ಸದಸ್ಯರು ಮತದಾನದಲ್ಲಿ ಪಾಲ್ಗೊಂಡಿದ್ದರು.

**ಮುಖ್ಯಾಂಶಗಳು:**

- ಭಾರತದ ಐತಿಹಾಸಿಕ ನಗರಿ ಆಗ್ರಾದಲ್ಲಿ 1940ರಲ್ಲಿ ಹುಸೇನ್ ಜನಿಸಿದರು. ಆದರೆ 1947ರ ದೇಶ ವಿಭಜನೆ ಸಮಯದಲ್ಲಿ ಅವರ ಪಾಲಕರು ಪಾಕಿಸ್ತಾನಕ್ಕೆ ವಲಸೆ ಹೋದರು.
- ಪಾಕಿಸ್ತಾನದಲ್ಲಿ ಈವರೆಗೆ 11 ಅಧ್ಯಕ್ಷರು ಕಾರ್ಯನಿರ್ವಹಿಸಿದ್ದು, ಈ ಪೈಕಿ ಐವರು ಸೇನೆಯ ಮುಖ್ಯಸ್ಥರು. ಅವರ ಪೈಕಿ ನಾಲ್ವರು ಕ್ಷಿಪ್ರ ಬಂಡಾಯದ ಮೂಲಕ ಅಧಿಕಾರ ಹಿಡಿದುಕೊಂಡಿದ್ದರು.
- ಮ್ಯಾಮ್ನೂನ್ ಗಡ್ಡ ಬಿಡದೇ ಇರುವುದರಿಂದ ಅಧ್ಯಕ್ಷ ಹುದ್ದೆಗೆ ಅವರ ನಾಮಪತ್ರ ತಿರಸ್ಕರಿಸಬೇಕು. ಗಡ್ಡ ಬಿಡದೇ ಇರುವುದು ಇಸ್ಲಾಂ ಧರ್ಮ ವಿರೋಧಿ ಎಂದು ಆರೋಪಿಸಿ ಮ್ಯಮ್ನೂನ್ ವಿರುದ್ಧ ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸಲಾಗಿತ್ತಾದರೂ, ಅದನ್ನು ಚುನಾವಣಾ ಆಯೋಗ ತಿರಸ್ಕರಿಸಿತ್ತು.

ಕರುನಾಡು ಎಗ್ಸಾ

## ಪ್ರಶಸ್ತಿಗಳು

**"ಅಂತರರಾಷ್ಟ್ರೀಯ ಭಾರತೀಯ ಸಿನಿಮಾ ಪ್ರಶಸ್ತಿ (ಐಐಎಫ್ಎ)-2013": ಬರ್ಫಿ ಅತ್ಯುತ್ತಮ ಚಿತ್ರ**

14 ನೇ "ಅಂತರರಾಷ್ಟ್ರೀಯ ಭಾರತೀಯ ಸಿನಿಮಾ ಪ್ರಶಸ್ತಿ" ಸಮಾರಂಭವನ್ನು "ವೆನಿಟಿಯನ್ ಮಾಕು" ಚೀನಾದಲ್ಲಿ ಜುಲೈ 4 ರಿಂದ 6 ರವರೆಗೆ ಆಯೋಜಿಸಲಾಗಿತ್ತು. ಈ ವರ್ಣರಂಜಿತ ಸಮಾರಂಭದಲ್ಲಿ ಬಾಲಿವುಡ್ ನಟ ನಟಿಯರು ಸಂಭ್ರಮದಿಂದ ಪಾಲ್ಗೊಂಡಿದ್ದರು. ಈ ಸಮಾರಂಭದಲ್ಲಿ ವಿತರಿಸಲಾದ ಪ್ರಶಸ್ತಿಗಳ ವಿವರ ಇಲ್ಲಿದೆ.

- **ಅತ್ಯುತ್ತಮ ಚಿತ್ರ ಪ್ರಶಸ್ತಿ**: ರಣಬೀರ್ ಕಪೂರ್ ಅಭಿನಯದ "ಬರ್ಫಿ" ಚಿತ್ರ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ ಭಾಜನವಾಯಿತು. ಇದಲ್ಲದೇ ಬರ್ಫಿ ಚಿತ್ರ ತಾಂತ್ರಿಕ ವರ್ಗದಲ್ಲಿ ಒಟ್ಟು 9 ಪ್ರಶಸ್ತಿಗಳನ್ನು ಸಮಾರಂಭದಲ್ಲಿ ತನ್ನದಾಗಿಸಿಕೊಂಡಿತು.
- **ಅತ್ಯುತ್ತಮ ನಟ**: ಬರ್ಫಿ ಚಿತ್ರದಲ್ಲಿನ ಅಮೋಘ ಅಭಿನಯಕ್ಕಾಗಿ "ರಣಬೀರ್ ಕಪೂರ್" ಅವರು ಅತ್ಯುತ್ತಮ ನಟ ಪ್ರಶಸ್ತಿಯನ್ನು ಪಡೆದುಕೊಂಡರು.
- **ಅತ್ಯುತ್ತಮ ನಟಿ**: ಕಹಾನಿ ಚಿತ್ರದಲ್ಲಿನ ಅಭಿನಯಕ್ಕಾಗಿ ಪ್ರೇಕ್ಷಕರಿಂದ ಪ್ರಶಂಸೆಗಳಿಸಿದ್ದ ನಟಿ "ವಿದ್ಯಾ ಬಾಲನ್" ಅವರಿಗೆ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದುಕೊಂಡರು.
- **ಅತ್ಯುತ್ತಮ ಸಾಹಸ ಮತ್ತು ಸಂಭಾಷಣೆ**: "ಗಂಗಸ್ ಆಫ್ ವಾಸ್ಸೆಪುರ್" ಚಿತ್ರ ಅತ್ಯುತ್ತಮ ಸಂಭಾಷಣೆ ಮತ್ತು ಅತ್ಯುತ್ತಮ ಆಕ್ಷನ್ ಚಿತ್ರಕ್ಕಾಗಿ ನೀಡುವ ಪ್ರಶಸ್ತಿಯನ್ನು ಪಡೆದುಕೊಂಡಿತು.
- **ಸ್ಪೇಷಲ್ ಎಫೆಕ್ಟ್ ಚಿತ್ರ**: ಅತ್ಯತ್ತಮ ಸ್ಪೆಷಲ್ ಎಫೆಕ್ಟ್ ಚಿತ್ರಕ್ಕಾಗಿ ನೀಡುವ ಪ್ರಶಸ್ತಿಗೆ "ಏಕ್ತಾ ಟೈಗರ್" ಭಾಜನವಾಯಿತು.

**ಮುಂದಿನ "ಐಐಎಫ್ಎ" ಸಮಾರಂಭ**:

- 15 ನೇ "ಅಂತರರಾಷ್ಟ್ರೀಯ ಭಾರತೀಯ ಸಿನಿಮಾ ಪ್ರಶಸ್ತಿ" 2015 ರಲ್ಲಿ ಅಮೆರಿಕಾದ ಫ್ಲೋರಿಡಾ ದಲ್ಲಿ ನಡೆಯಲಿದೆ.

**ಸಾಂಸ್ಕೃತಿಕ ಸಾಮರಸ್ಯಕ್ಕೆ ನೀಡಲಾಗುವ ಠಾಗೋರ್ ಪ್ರಶಸ್ತಿ: ಜುಬಿನ್ ಮೆಹ್ತ ಆಯ್ಕೆ**

ಸಾಂಸ್ಕೃತಿಕ ಸಾಮರಸ್ಯಕ್ಕೆ ಶ್ರಮಿಸಿದವರಿಗೆ ನೀಡಲಾಗುವ 2013 ನೇ ಸಾಲಿನ ಠಾಗೋರ್ ಪ್ರಶಸ್ತಿಗೆ ಹೆಸರಾಂತ ಸಂಗೀತಗಾರ ಜುಬಿನ್ ಮೆಹ್ತಾ ಅವರನ್ನು ಆಯ್ಕೆಮಾಡಲಾಗಿದೆ. ಪ್ರಸ್ತಕ ಸಾಲಿನ ಪ್ರಶಸ್ತಿ ಠಾಗೋರ್ ಅವರ ಹೆಸರಿನಡಿ ನೀಡಲಾಗುತ್ತಿರುವ ಎರಡನೇ ಪ್ರಶಸ್ತಿಯಾಗಿದೆ.

- ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಅಧ್ಯಕ್ಷರಾಗಿ, ಸುಪ್ರೀಂ ಕೋರ್ಟ್ ನ ಮುಖ್ಯನ್ಯಾಯಮೂರ್ತಿ ಅಲ್ತಮಸ್ ಕಬೀರ್, ಲೋಕಸಭೆಯ ವಿರೋಧ ಪಕ್ಷದ ನಾಯಕಿ ಸುಷ್ಮಾ ಸ್ವರಾಜ್ ಮತ್ತು ಗೋಪಾಲಕೃಷ್ಣ ಗಾಂಧಿ ಅವರನ್ನು ಒಳಗೊಂಡ ಆಯ್ಕೆಸಮಿತಿ "ಜುಬಿನ್ ಮೆಹ್ತ" ಅವರನ್ನು ಈ ಪ್ರಶಸ್ತಿಗೆ ಆಯ್ಕೆಮಾಡಿದೆ.

- ಸಾಂಸ್ಕೃತಿಕ ಸಾಮರಸ್ಯಕ್ಕೆ ಈ ನೀಡಲಾಗುವ ಈ ಪ್ರಶಸ್ತಿಯನ್ನು ಪಡೆಯುತ್ತಿರುವವರಲ್ಲಿ ಜುಬಿನ್ ಮೆಹ್ತಾ ಎರಡನೆಯವರು. 2012 ರಲ್ಲಿ ಸಿತಾರ್ ಮಾಂತ್ರಿಕ ರವಿಶಂಕರ್ ಅವರಿಗೆ ಪ್ರಥಮ ಬಾರಿಗೆ ಈ ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಲಾಗಿತ್ತು.

<u>ಪ್ರಶಸ್ತಿಯ ಬಗ್ಗೆ</u>:

- ಗುರುದೇವ ರವೀಂದ್ರನಾಥ್ ಠಾಗೋರ್ ಅವರ 150 ನೇ ಜನ್ಮದಿನದ ಅಂಗವಾಗಿ ಭಾರತ ಸರ್ಕಾರ ಈ ಪ್ರಶಸ್ತಿಯನ್ನು ಸ್ಥಾಪಿಸಿತು.
- ಪ್ರಶಸ್ತಿಯು 1 ಕೋಟಿ ರೂ ನಗದು, ಉಲ್ಲೇಖ ಮತ್ತು ಫಲಕವನ್ನು ಒಳಗೊಂಡಿದೆ.
- ಯಾವುದೇ ರಾಷ್ಟ್ರೀಯತೆ, ಜನಾಂಗ, ಭಾಷೆ ಮತ್ತು ಜಾತಿಗೆ ಈ ಪ್ರಶಸ್ತಿಯು ಮುಕ್ತವಾಗಿದೆ.

**"<u>ಜುಬಿನ್ ಮೆಹ್ತ</u>":**

- ಜುಬಿನ್ ಮೆಹ್ತ ಅವರು ಬಾಂಬೆ ಸಿಂಫೊನಿ ಸ್ಥಾಪಕ ಮತ್ತು ಅಮೆರಿಕನ್ ಯೂತ್ ಸಿಂಫೊನಿ ಲಾಸ್ ಏಂಜಲೀಸ್ ನ ನಿರ್ದೇಶಕರಾಗಿದ್ದ ಮೆಹ್ಲಿ ಮೆಹ್ತ ಅವರ ಮಗ.
- ಬಾಂಬೆಯಲ್ಲಿ ಜನಿಸಿದ ಮೆಹ್ತ ಮೊದಲಿಗೆ ವೈದ್ಯಕೀಯ ವೃತ್ತಿಯತ್ತ ಒಲವು ತೋರಿದರಾದರು, ತಮ್ಮ 18 ನೇ ವರ್ಷದಲ್ಲಿ ಇದನ್ನು ತ್ಯಜಿಸಿ ವಿಯೆನ್ನಾದ ಅಕಾಡೆಮಿ ಆಫ್ ಮ್ಯೂಸಿಕ್ ಗೆ ಸೇರ್ಪಡೆಗೊಂಡರು.
- ವಿಶ್ವದ ಶ್ರೇಷ್ಠ ಸಂಗೀತಗಾರರಾಗಿ ಹೆಸರು ಗಳಿಸಿರುವ ಮೆಹ್ತ, ಅನೇಕ ಸಮಾರಂಭಗಳಲ್ಲಿ ತಮ್ಮ ಸಂಗೀತ ಸುಧೆಯನ್ನು ಹರಿಸಿದ್ದಾರೆ.
- ಮಂಟ್ರೆಯಲ್ ಸಿಂಫೊನಿ, ಇಸ್ರೇಲ್ ಸಿಂಫೊನಿ ಸೇರಿದಂತೆ ಅನೇಕ ಸಂಗೀತಾ ಸಂಸ್ಥೆಗಳ ನಿರ್ದೇಶಕರಾಗಿ ಸೇವೆ ಸಲ್ಲಿಸಿರುವ ಮೆಹ್ತಗೆ ವಿಶ್ವದ ಅನೇಕ ಶ್ರೇಷ್ಠ ಪ್ರಶಸ್ತಿಗಳು ಲಭಿಸಿವೆ.

<u>ಭಾರತ ಸಂಜಾತೆ ವಂದನಾ ಗಾಂಧಿಯವರಿಗೆ ದುಬೈ ಸರ್ಕಾರದ "ಎಮಿರೇಟ್ಸ್ ವುಮನ್ ಪ್ರಶಸ್ತಿ" **(Emirates Woman Award)**</u>

ವಂದನಾ ಗಾಂಧಿಯವರು ದುಬೈ ಸರ್ಕಾರ ವ್ಯವಹಾರದಲ್ಲಿ ಶ್ರೇಷ್ಠತೆ ಸಾಧಿಸಿದವರಿಗೆ ಪ್ರದಾನ ಮಾಡುವ "ಎಮಿರೇಟ್ಸ್ ವುಮನ್ ಪ್ರಶಸ್ತಿ"ಗೆ ಭಾಜನರಾದ ಪ್ರಥಮ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈ ಪ್ರಶಸ್ತಿಯನ್ನು ಅವರು ವ್ಯವಹಾರ ವಿಭಾಗದಲ್ಲಿ ಪ್ರೀ ಸ್ಕೂಲ್ ನಲ್ಲಿ ತರಲಾದ ಹೊಸ ಆವಿಷ್ಕಾರ ಮತ್ತು ಶ್ರೇಷ್ಠತೆ ಸಾಧಿಸಿದಕ್ಕಾಗಿ ನೀಡಲಾಗಿದೆ. ಆಯ್ಕೆದಾರರು ನಾಯಕತ್ವ, ಕೌಶಲ್ಯ, ಸಮುದಾಯ ಸೇವೆ ಮತ್ತು ಹೊಸತನ ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿ ಆಯ್ಕೆ ಮಾಡಲಾಗಿದೆ. ವಂದನಾ ಗಾಂಧಿಯವರು ಮಧ್ಯ ಪ್ರಾಚ್ಯದ ಏಕೈಕ ಐ.ಎಸ್.ಓ. (ISO) ಪ್ರಮಾಣ ಪತ್ರ ಪಡೆದ 'ಬ್ರಿಟಿಷ್ ಆರ್ಚರ್ಡ್ ನರ್ಸರಿ' ಶಾಲಾ ಸಮೂಹದ ಸಂಸ್ಥಾಪಕ ಕಾರ್ಯನಿರ್ವಹಕ ಅಧಿಕಾರಿಯಾಗಿದ್ದಾರೆ.

**ಎಮಿರೇಟ್ಸ್ ವುಮನ್ಸ್ ಪ್ರಶಸ್ತಿ ಬಗ್ಗೆ:**

ಈ ಪ್ರಶಸ್ತಿಯನ್ನು ದುಬೈ ಕ್ವಾಲಿಟಿ ಗ್ರೂಪ್ (DQG) 2003 ರಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್ ನ ನಾಗರಿಕರಿಗೆ ಮತ್ತು ಅಲ್ಲಿನ ವಾಸವಾಗಿರುವ ಮಹಿಳೆಯರಿಗಾಗಿಯೇ ನೀಡುವ ಪ್ರಶಸ್ತಿಯಾಗಿದೆ. ಈ ಪ್ರಶಸ್ತಿಯನ್ನು ತನ್ನ ದೇಶದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ವ್ಯಕ್ತಿಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಸ್ಥಾಪನೆಗೊಂಡ ಪ್ರಶಸ್ತಿಯಾಗಿದೆ. ದುಬೈ ಕ್ವಾಲಿಟಿ ಗ್ರೂಪ್ ಒಂದು ಸರ್ಕಾರೇತರ ಸಂಸ್ಥೆಯಾಗಿದ್ದು, ಇದು ಜ್ಞಾನಾಭಿವೃದ್ಧಿಗೆ, ಗುಣಾತ್ಮಕ ಮತ್ತು ವ್ಯವಹಾರಿಕ ಶ್ರೇಷ್ಠತೆ ಸಾಧನೆಗಾಗಿ ಪ್ರೋತ್ಸಾಹ ನೀಡುತ್ತಿದೆ.

ಈ ಸಂಸ್ಥೆ ಭವಿಷ್ಯದ ಮಹಿಳಾ ನಾಯಕರನ್ನು ಉತ್ತೇಜಿಸಲು ಹಾಗೂ ಅವರು ಸಮಾಜದಲ್ಲಿ ಯಾವುದೇ ಅಂಜಿಕೆ ಇಲ್ಲದೆ ಪೂರ್ಣ ಪ್ರಮಾಣದಲ್ಲಿ ತಮ್ಮ ಸಾಮರ್ಥ್ಯವನ್ನು ಸಾದರಪಡಿಸಲು ಸಹಾಯ ಮಾಡುತ್ತಿದೆ. ಆಯ್ಕೆದಾರರು ಹಲವಾರು ಮಾನದಂಡಗಳನ್ನು ಓರೆಗೆ ಹಚ್ಚಿ ಒಟ್ಟು ಎರಡು ವಿಭಾಗಗಳಲ್ಲಿ ಈ ಪ್ರಶಸ್ತಿಗೆ ಆಯ್ಕೆ ಮಾಡುತ್ತಾರೆ.

**ವಂದನಾ ಗಾಂಧಿ:**

- ವಂದನಾ ಗಾಂಧಿಯವರು ಉನ್ನತ ಶ್ರೇಣಿಯಲ್ಲಿ ಶಿಕ್ಷಣ ವಿಷಯದಲ್ಲಿ ಸ್ನಾತಕೊತ್ತರ ಪದವಿ ಪಡೆದಿದ್ದಾರೆ. ಸದ್ಯ ಅವರು ಬರ್ಮಿಂಗ್ ಹ್ಯಾಮ್ ವಿಶ್ವವಿದ್ಯಾಲಯದಲ್ಲಿ (ಯು.ಕೆ) ಶಿಕ್ಷಣದ ಬಗ್ಗೆ ಡಾಕ್ಟರೇಟ್ ಅಧ್ಯಯನ ನಡೆಸುತ್ತಿದ್ದಾರೆ.
- ಅವರು ವಿಶೇಷವಾಗಿ ಮಕ್ಕಳಿಗಾಗಿಯೇ ಮೀಸಲಾದ "ಜಿಮ್ ಜೂನಿಯರ್ಸ್"- ಎಂಬ ಜಿಮ್ ಕೇಂದ್ರವನ್ನು ಆವಿಷ್ಕರಿಸಿದ್ದಾರೆ.
- ಯು.ಎ.ಇ., ಸರ್ಕಾರದ ರಸ್ತೆ ಸಾರಿಗೆ ಸಂಸ್ಥೆ ಮತ್ತು ದುಬೈ ನೀರು ಮತ್ತು ವಿದ್ಯುತ್ ಪ್ರಾಧಿಕಾರದ ಮಹಿಳಾ ಉದ್ಯೋಗಿಗಳ ಮಕ್ಕಳಿಗಾಗಿ ಉಚಿತ ನರ್ಸರಿ ವ್ಯವಸ್ಥೆಯ ಸ್ಥಾಪನೆ ಮಾಡಿದ್ದಾರೆ.

**ಪ್ರಖ್ಯಾತ ಸಂಗೀತಗಾರ "ಬೊನೊ" ಗೆ ಫ್ರಾನ್ಸ್ ನ ಅತ್ಯುತ್ತಮ ಪ್ರಶಸ್ತಿ**

ಬೊನೊ ಎಂದೇ ಚಿರಪರಿಚಿತರಾಗಿರುವ ಖ್ಯಾತ ರಾಕ್ ಬ್ಯಾಂಡ್ U2 ಸಂಗೀತಗಾರ ಮತ್ತು ಬಡತನ ನಿವಾರಣೆಗೆ ಹೋರಾಡುತ್ತಿರುವ "ಪಾಲ್ ಹೆವ್ ಸನ್ (Paul Hewson)" ಅವರಿಗೆ ಫ್ರಾನ್ಸ್ ಸರ್ಕಾರ ನೀಡುವ ಅತ್ಯುನ್ನತ "ಕಮಾಂಡರ್ ಆಫ್ ದಿ ಆರ್ಡರ್ ಆಫ್ ಆರ್ಟ್ಸ್ ಅಂಡ್ ಲೆಟರ್ಸ್" ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

- ಈ ಹಿಂದೆ ಈ ಪ್ರಶಸ್ತಿಯನ್ನು ಖ್ಯಾತ ತಾರೆಯರಾದ ಶಕೀರ, ಡೇವಿಡ್ ಬೊವಿ, ರೊಜರ್ ಮೂರೆ, ಬ್ರೂಸ್ ವಿಲ್ಲಿಸ್, ಬಾಬ್ ಡೈಲನ್ ಮತ್ತು ಸೀನ್ ಕೊನ್ನೆರಿ ಅವರಗಳು ಪಡೆದುಕೊಂಡಿದ್ದರು.
- "ದಿ ಕಮಾಂಡರ್ ಆಫ್ ದಿ ಆರ್ಡರ್ ಆಫ್ ಆರ್ಟ್ಸ್ ಅಂಡ್ ಲೆಟರ್ಸ್" ಪ್ರಶಸ್ತಿಯನ್ನು 1957 ರಿಂದ ಕೊಡಲಾಗುತ್ತಿದೆ.

**"ಪಾಲ್ ಹೆವ್ ಸನ್ (ಬೊನೊ)":**

- ವಿಶ್ವಪ್ರಸಿದ್ಧ ಬ್ಯಾಂಡ್ U2 ಸಂಗೀತ ಸಂಸ್ಥಾಪಕರಾದ ಬೊನೊ ಈ ಹಿಂದೆ ಸಹ ಈ ಪ್ರಶಸ್ತಿಗೆ ಭಾಜರಾಗಿದ್ದರು. ಸಂಗೀತಾ ಕ್ಷೇತ್ರದಲ್ಲದೇ ಬಡತನ ನಿವಾರಣೆಗೆ ಸದಾ ಮುಂದಿರುವ ಬೊನೊ ಅವರ ಸಾಧನೆಯನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.
- ಹಲವಾರು ಬಾರಿ ನೊಬೆಲ್ ಶಾಂತಿ ಪ್ರಶಸ್ತಿಗೆ ನಾಮಾಂಕಿತಗೊಂಡಿರುವ ಬೊನೊ 2005 ರಲ್ಲಿ ಟೈಮ್ಸ್ ಮ್ಯಾಗ್ಜೈನ್ ಪರ್ಸನ್ ಆಫ್ ದಿ ಇಯರ್ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

**ಪ್ರಶಸ್ತಿ ಬಗ್ಗೆ:**

- ಸಾಂಸ್ಕೃತಿಕ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಿದವರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.
- ಸಾಂಸ್ಕೃತಿಕ ಕ್ಷೇತ್ರದ ಅತ್ಯಂತ ಶ್ರೇಷ್ಠ ಪ್ರಶಸ್ತಿಯಾದ ಇದನ್ನು ಮೇ 2, 1957 ರಂದು ಸ್ಥಾಪಿಸಲಾಯಿತು.

**ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ ಪ್ರಕಟ: ಆಫ್ಘಾನಿಸ್ತಾನದ ಮೊದಲ ಮಹಿಳಾ ಗವರ್ನರ್ "ಹಬಿಬಿ ಸರಬಿ" ಗೆ ಪ್ರಶಸ್ತಿ**

ಏಷ್ಯಾದ ನೊಬೆಲ್ ಎಂದೇ ಖ್ಯಾತಿ ಹೊಂದಿರುವ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿಯನ್ನು ಪ್ರಕಟಗೊಳಿಸಲಾಗಿದೆ. ಫಿಲಿಫೈನ್ಸ್ ನ ರಾಜಧಾನಿ ಮನಿಲಾ ಮೂಲದ ರಾಮನ್ ಮ್ಯಾಗ್ಸೆಸೆ ಆವಾರ್ಡ್ ಫೌಂಡೇಶನ್ ಪ್ರಶಸ್ತಿಗೆ ಆಯ್ಕೆಯಾದವರ ಪಟ್ಟಿಯನ್ನು ಬಿಡುಗಡೆಗೊಳಿಸಿದ್ದು, ಈ ಬಾರಿ ಮೂವರು ಗಣ್ಯ ವ್ಯಕ್ತಿಗಳು ಸೇರಿದಂತೆ ಎರಡು ಸಂಸ್ಥೆಗಳನ್ನು ಈ ಪ್ರತಿಷ್ಠಿತ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಪ್ರಶಸ್ತಿಗೆ ಆಯ್ಕೆಯಾದವರ ವಿವರ ಇಲ್ಲಿದೆ.

**"ಹಬಿಬಿ ಸರಬಿ (Hababi Sarabi)":** ಆಫ್ಘಾನಿಸ್ತಾನದ ಮೊದಲ ಮಹಿಳಾ ಹಾಗೂ ಏಕೈಕ ಮಹಿಳಾ ಗವರ್ನರ್ ಆಗಿರುವ ಹಬಿಬಿ ಸರಬಿ ಅವರಿಗೆ ಈ ಪ್ರತಿಷ್ಠಿತ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಆಫ್ಘಾನಿಸ್ತಾನದ ಬಮ್ಯಾನ್ ಪ್ರಾಂತ್ಯದಲ್ಲಿ ಸ್ಥಳೀಯ ಸರ್ಕಾರ ರಚನೆ ಮಾಡಿ, ಮಹಿಳೆಯರ ಶಿಕ್ಷಣ ಮತ್ತು ಹಕ್ಕುಗಳನ್ನು ಕಾಪಾಡಲು ಹಬಿಬಿ ಅವರು ಸಾಕಷ್ಟು ಶ್ರಮವಹಿಸಿರುವುದನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

**"ಲಹಪೈ ಸೆಂಗ್ (Lahpai Seng)":** 64 ವರ್ಷದ ವಿಧವೆ ಲಹಪೈ ಸೆಂಗ್ ಅವರು ಕೋಮು ಗಲಭೆ ಮತ್ತು ಸೇನಾಡಳಿತದ ಪರಮಾಧಿಕಾರದಿಂದ ತತ್ತರಿಸ ಹೋಗಿದ್ದ ಸಮುದಾಯವನ್ನು ಮತ್ತೆ ಮೊದಲ ಸ್ಥಿತಿಗೆ ತರುವಲ್ಲಿ ಅಪಾರ ಶ್ರಮವಹಿಸಿರುವ ಕಾರಣ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

**"ಎರ್ನೆಸ್ಟೊ ಡೊಮಿನ್ಗೊ (Ernest Domingo)":** ಫಿಲಿಫೈನ್ಸ್ ನಲ್ಲಿ ವೈದ್ಯರಾಗಿರುವ 76 ವರ್ಷದ ಎರ್ನೆಸ್ಟೊ ಡೊಮಿನ್ಗೊ ಅವರು ತಮ್ಮ ಸಮಾಜ ಸೇವೆಯಿಂದ ಬಡವರಿಗೆ ಉಚಿತವಾಗಿ ಸೇವೆ ನೀಡಿ ವಿಶ್ವ ಪ್ರಸಿದ್ಧರಾಗಿದ್ದಾರೆ. ಹೆಪಟೈಟಿಸ್ ಗೆ ಸಂಬಂಧಿಸಿದ ಲಸಿಕೆಯನ್ನು ಉಚಿತವಾಗಿ ನೀಡುವ ಸಾವಿರಾರು ಜನರ ಪ್ರಾಣವನ್ನು ಉಳಿಸಿದ್ದಾರೆ.

**ಶಕ್ತಿ ಸಮೂಹ:** ವಿಶ್ವದ ಮೊದಲ ಬಾರಿಗೆ ಮಾನವ ಸಾಗಾಣಿಕೆಗೆ ಒಳಗಾದವರಿಂದ ಸ್ಥಾಪಿಸಲಾಗಿರುವ ನೇಪಾಳದ NGO ಶಕ್ತಿ ಸಮೂಹ ಅಥವಾ ಪವರ್ ಗ್ರೂಪ್ NGO ವನ್ನು ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಮಾನವ ಸಾಗಾಣಿಕೆಯನ್ನು ತಡೆಗಟ್ಟುವಲ್ಲಿ ಈ NGO ಬಹಳಷ್ಟು ಕಾರ್ಯಪ್ರವೃತವಾಗಿದ್ದು, ಇಂದು ಅನೇಕ ಜನರನ್ನು ಅದರಲ್ಲೂ ಯುವತಿಯರನ್ನು ರಕ್ಷಿಸಿದೆ.

**ಇಂಡೋನೇಷಿಯಾದ ಭ್ರಷ್ಟಾಚಾರ ನಿರ್ಮೂಲ ಆಯೋಗ:** ಇಂಡೋನೇಷಿಯಾದ Komisi Pemberantasan Korupsi ಅಥವಾ ಭ್ರಷ್ಟಾಚಾರ ನಿರ್ಮೂಲ ಆಯೋಗ ಇಂಡೋನೇಷಿಯಾದಲ್ಲಿ ನಡೆಸುತ್ತಿರುವ ಭ್ರಷ್ಟಾಚಾರ ನಿರ್ಮೂಲನ ಹೋರಾಟವನ್ನು ಗಮನಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಅನೇಕ ವರ್ಷಗಳಿಂದ ಕಾರ್ಯಾಚರಣೆ ನಡೆಸುತ್ತಿರುವ ಈ ಆಯೋಗವು ಇಂದು ಸುಮಾರು 80 ಮಿಲಿಯನ್ ಡಾಲರ್ ಅಕ್ರಮ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

**ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ:**

- ರಾಮನ್ ಮ್ಯಾಗ್ಸೆಸೆ ಪ್ರಶಸ್ತಿಯನ್ನು 1957 ರಲ್ಲಿ ಸ್ಥಾಪಿಸಲಾಗಿದೆ.
- ಫಿಲಿಫೈನ್ಸ್ ಅಧ್ಯಕ್ಷರಾಗಿದ್ದ ರಾಮನ್ ಮ್ಯಾಗ್ಸೆಸೆ ಅವರು 1957 ರಲ್ಲಿ ವಿಮಾನ ಅಪಘಾತ ದುರಂತದಲ್ಲಿ ಕೊನೆಯುಸಿರೆಳದ ಕಾರಣ ಅವರ ಹೆಸರಿನಡಿ ಈ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ. ನ್ಯಾಯ, ನಿಷ್ಠೆ ಮತ್ತು ಬಡವರ ಮೇಲಿನ ಕಾಳಜಿಯಿಂದ ಮ್ಯಾಗ್ಸೆಸೆ ಅವರು ಅಪಾರ ಹೆಸರನ್ನು ಗಳಿಸಿದ್ದರು.
- ಪ್ರಶಸ್ತಿಯನ್ನು ಮೊದಲ ಬಾರಿಗೆ ಆಗಸ್ಟ್ 31, 1958 ರಲ್ಲಿ ಪ್ರಧಾನ ಮಾಡಲಾಯಿತು.
- ಮ್ಯಾಗ್ಸೆಸೆ ಪ್ರಶಸ್ತಿಯನ್ನು ಒಟ್ಟು ಆರು ವಿಭಾಗಗಳಿಗೆ ನೀಡಲಾಗುತ್ತದೆ. ಅವುಗಳೆಂದರೆ ಉತ್ತಮ ಸಾರ್ವಜನಿಕ ಸೇವೆ, ಆಡಳಿತ ಸೇವೆ, ಪತ್ರಿಕೋದ್ಯಮ, ಸಮುದಾಯ ಮುಂದಾಳತ್ವ ಸೇವೆ ಮತ್ತು ಶಾಂತಿ, ಅಂತರರಾಷ್ಟ್ರೀಯ ಬಾಂದವ್ಯ ಬೆಸೆಯಲು ಶ್ರಮಿಸಿದವರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

**"ಎಡ್ವರ್ಡ್ ಸ್ನೊಡೆನ್" ಗೆ ಜರ್ಮನಿಯ ಪ್ರತಿಷ್ಠಿತ ಪ್ರಶಸ್ತಿ**

ಅಮೆರಿಕಾದ "ರಾಷ್ಟ್ರೀಯ ಭದ್ರತಾ ಏಜೆನ್ಸಿ (NSA)" ರಹಸ್ಯವಾಗಿ ನಡೆಸುತ್ತಿದ್ದ ಜಾಗತಿಕ ಅಂತರ್ಜಾಲ ಮತ್ತು ದೂರವಾಣಿ ಕದ್ದಾಲಿಕೆ ಕಾರ್ಯಾಚರಣೆಯನ್ನು ಜಗತ್ತಿಗೆ ತೆರೆದಿಟ್ಟು ಇತ್ತೀಚೆಗೆ ಭಾರಿ ಸುದ್ದಿಯಲ್ಲಿದ್ದ "ಎಡ್ವರ್ಡ್ ಸ್ನೊಡೆನ್" ಅವರಿಗೆ ಜರ್ಮನಿಯ ಪ್ರತಿಷ್ಠಿತ "ಜರ್ಮನಿ ವಿಜ್ಜಲ್ ಬ್ಲೋವರ್ ಪ್ರಶಸ್ತಿ (Germany Whistle Blower)"ಯನ್ನು ನೀಡಲಾಗಿದೆ. ಪ್ರಶಸ್ತಿಯು 3,900 ಅಮೆರಿಕನ್ ಡಾಲರ್ ನಗದನ್ನು ಒಳಗೊಂಡಿದ್ದು, ಸ್ನೊಡೆನ್ ಅವರ ಅನುಪಸ್ಥಿತಿಯಲ್ಲಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ.

- ಜಾಗತಿಕ ಇಂಟರ್ನೆಟ್ ಮತ್ತು ದೂರವಾಣಿ ಕದ್ದಾಲಿಕೆಯಂತಹ ರಹಸ್ಯ ಕಾರ್ಯಾಚರಣೆಯಿಂದ ಜಗತ್ತನ್ನು ವಂಚಿಸುತ್ತಿದ್ದ ಅಮೆರಿಕಾದ ನಿಜ ಬಣ್ಣವನ್ನು ವಿಶ್ವಕ್ಕೆ ತೆರೆದಿಟ್ಟು ಸ್ನೊಡೆನ್ ಅತ್ಯುತ್ತಮ ಸಾರ್ವಜನಿಕ ಸೇವೆಯನ್ನು ಮಾಡಿರುವುದಾಗಿ ಆಯ್ಕೆಸಮಿತಿ ತಿಳಿಸಿದೆ.

**ಪ್ರಶಸ್ತಿ ಬಗ್ಗೆ:**

- "ಇಂಟರ್ ನ್ಯಾಷನಲ್ ಅಸೋಸಿಯೇಷನ್ ಆಫ್ ಲಾಯರ್ಸ್ ಎಗೆನೆಸ್ಟ್ ನ್ಯೂಕ್ಲಿಯರ್ ಆರ್ಮ್ಸ್" ಮತ್ತು "ಅಸೋಸಿಯೇಷನ್ ಆಫ್ ಜರ್ಮನ್ ಸೈಂಟಿಸ್ಟ್" ಈ ಪ್ರಶಸ್ತಿಯನ್ನು 1999 ರಲ್ಲಿ ಸ್ಥಾಪಿಸಿದೆ.
- ವಿಷ್ಲಿಲ್ ಬ್ಲೋವರ್ ಪ್ರಶಸ್ತಿಯನ್ನು ಪ್ರತಿ ಎರಡು ವರ್ಷಕ್ಕೊಮೆ ಕೊಡಲಾಗುತ್ತದೆ.
- ಜೀವ ಭಯವನ್ನು ಲೆಕ್ಕಿಸದೆ ಸಮಾಜವನ್ನು ವಂಚಿಸುವ ರಹಸ್ಯ ಕಾರ್ಯಾಚರಣೆಯನ್ನು ಬಯಲಿಗೆಳೆಯುವ ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

**ಲೋಕಮಾನ್ಯ ತಿಲಕ್ ಪ್ರಶಸ್ತಿ-2013: ಮೆಟ್ರೋ ಮನ್ "ಶ್ರೀಧರನ್" ಆಯ್ಕೆ**

2013 ನೇ ಸಾಲಿನ ಪ್ರತಿಷ್ಠಿತ ಲೋಕಮಾನ್ಯ ತಿಲಕ್ ಪ್ರಶಸ್ತಿಗೆ ದೇಶದಲ್ಲಿ ಮೆಟ್ರೋ ರೈಲಿನ ರೂವಾರಿ ಎನಿಸಿರುವ ಈ ಶ್ರೀಧರನ್ ಅವರನ್ನು ಆಯ್ಕೆಮಾಡಲಾಗಿದೆ. ಸಮಾಜಕ್ಕೆ ಈ ಶ್ರೀಧರನ್ ನೀಡಿರುವ ಶ್ಲಾಘನೀಯ ಸೇವೆಯನ್ನು ಗಮನಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

- ಶ್ರೀಧರನ್ ಅವರು ದೇಶದ ರಾಜಧಾನಿ ದೆಹಲಿ ಮೆಟ್ರೋ ರೈಲಿನ ಪ್ರಮುಖ ಶಿಲ್ಪಿ ಎನಿಸಿದ್ದಾರೆ. ಅಲ್ಲದೇ ಅಸಾಧ್ಯವೆನಿಸಿದ್ದ ಕೊಂಕಣ ರೈಲ್ವೇಯ ರೂವಾರಿ ಸಹ ಆಗಿದ್ದಾರೆ. ಅವರ ಈ ಅಸಾಧಾರಣ ಸಾಧನೆಯಿಂದ ಸಮಾಜಕ್ಕೆ ಅತ್ಯಂತ ಉಪಯೋಗವಾಗಿರುವ ಕಾರಣ ಈ ಪ್ರತಿಷ್ಠಿತ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.
- ಪ್ರಶಸ್ತಿಯು ಚಿನ್ನದ ಪದಕ, ಫಲಕ ಮತ್ತು ಒಂದು ಲಕ್ಷ ನಗದನ್ನು ಒಳಗೊಂಡಿದೆ. ಪ್ರಶಸ್ತಿಯನ್ನು ಆಗಸ್ಟ್ 1 ರಂದು ವಿತರಿಸಲಾಗುವುದು.

**ಸರೋದ್ ಮಾಂತ್ರಿಕ ಅಮ್ಜದ್ ಅಲಿ ಖಾನ್ ಗೆ ರಾಜೀವ್ ಸದ್ಭಾವನಾ ಪ್ರಶಸ್ತಿ**

ಖ್ಯಾತ ಸರೋದ್ ವಾದಕ ಅಮ್ಜದ್ ಅಲಿ ಖಾನ್ ಅವರನ್ನು ಪ್ರತಿಷ್ಠಿತ 21ನೇ ರಾಜೀವ್ ಸದ್ಭಾವನಾ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಕೋಮು ಸೌಹಾರ್ದ ಮತ್ತು ಶಾಂತಿಗಾಗಿ ಖಾನ್ ನೀಡಿರುವ ಕೊಡುಗೆಯನ್ನು ಗಮನಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಿರುವುದಾಗಿ ಆಯ್ಕೆ ಸಮಿತಿ ತಿಳಿಸಿದೆ.

- ರಾಜೀವ್ ಗಾಂಧಿ ಅವರ ಜನ್ಮದಿನವಾದ ಆಗಸ್ಟ್ 20 ರಂದು ಈ ಪ್ರಶಸ್ತಿಯನ್ನು ವಿತರಣೆ ಮಾಡಲಾಗುವುದು. ಆಗಸ್ಟ್ 20 ರಾಜೀವ್ ಸದ್ಭಾವನಾ ದಿನವೆಂತಲೂ ಆಚರಿಸಲಾಗುತ್ತದೆ.
- ಪ್ರಶಸ್ತಿಯು 5 ಲಕ್ಷ ನಗದು, ಫಲಕ ಮತ್ತು ಸನ್ಮಾನ ಪತ್ರವನ್ನು ಒಳಗೊಂಡಿದೆ.
- ಈ ಹಿಂದೆ ಮದರ್ ಥೆರೇಸಾ, ಬಿಸ್ಮಿಲ್ಲಾ ಖಾನ್, ತೀಸ್ತಾ ಸಟಲ್ವಾಡ್, ಹರ್ಷ ಮಂದರ್, ಸುನೀಲ್ ದತ್ ಮತ್ತು ಸ್ವಾಮಿ ಅಗ್ನಿವೇಶ್ ಸೇರಿದಂತೆ ಕೋಮು ಸೌಹಾರ್ದಕ್ಕೆ ಶ್ರಮಿಸಿರುವ ಪ್ರಮುಖರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ.

**ಪ್ರಶಸ್ತಿಯ ಬಗ್ಗೆ:**

- ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಖಿಲ ಭಾರತ ಕಾಂಗ್ರೆಸ್ ಸಮಿತಿ ರಾಜೀವ್ ಸದ್ಭಾವನಾ ಪ್ರಶಸ್ತಿಯನ್ನು 1992 ರಲ್ಲಿ ಸ್ಥಾಪಿಸಲಾಗಿದ್ದು, ಕೋಮು ಸೌಹಾರ್ದತೆ, ರಾಷ್ಟ್ರೀಯ ಐಕ್ಯತೆ ಮತ್ತು ಶಾಂತಿಗಾಗಿ ಶ್ರಮಿಸಿದವರಿಗಾಗಿ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.
- ಈ ಪ್ರಶಸ್ತಿಯನ್ನು ಪ್ರತಿ ವರ್ಷ ಭಾರತದ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಜನ್ಮದಿನವಾದ ಆಗಸ್ಟ್ 20 ರಂದು ನೀಡಲಾಗುತ್ತಿದೆ. ಪ್ರಶಸ್ತಿಯು 5 ಲಕ್ಷ ನಗದು, ಫಲಕ ಮತ್ತು ಸನ್ಮಾನ ಪತ್ರವನ್ನು ಒಳಗೊಂಡಿದೆ.
- 2012 ನೇ ಸಾಲಿನ ಈ ಪ್ರಶಸ್ತಿಯನ್ನು ಡಿ.ಆರ್. ಮೆಹ್ತಾ ಅವರಿಗೆ ನೀಡಲಾಗಿತ್ತು.

**ಏಷ್ಯಾ ಉದ್ಯಮ ನಾಯಕ ಪ್ರಶಸ್ತಿಗೆ ಆಯ್ಕೆಯಾದ ಅಜೀಂ ಪ್ರೇಮ್ ಜಿ**

ಬೆಂಗಳೂರು ಮೂಲದ ಮಾಹಿತಿ ತಂತ್ರಜ್ಞಾನ ಕಂಪನಿ 'ವಿಪ್ರೋ' ಸಂಸ್ಥಾಪಕ ಅಜೀಂ ಪ್ರೇಮ್‌ಜಿಗೆ ಪ್ರಸಕ್ತ ಸಾಲಿನ 'ಏಷ್ಯಾ ಉದ್ಯಮ ನಾಯಕ' ಪ್ರಶಸ್ತಿ ಘೋಷಿಸಲಾಗಿದೆ. ಅತ್ಯುತ್ತಮ ಔದ್ಯಮಿಕ ನಿಲವುಗಳ ಮೂಲಕ ಸಮಾಜಕ್ಕೆ ಸೇವೆ ಸಲ್ಲಿಸಿದ ಹಿನ್ನೆಲೆಯಲ್ಲಿ ಗಮನಿಸಿ ಪ್ರೇಂಜಿ ಅವರಿಗೆ ಲಂಡನ್ ಮೂಲದ ಏಷ್ಯಾ ಹೌಸ್ ಈ ಪ್ರಶಸ್ತಿ ಘೋಷಿಸಿದೆ. ಅ.14ರಂದು ಲಂಡನ್‌ನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಏಷ್ಯಾ ಹೌಸ್, ಸರ್ಕಾರೇತರ ಸಂಘಟನೆಯಾಗಿದ್ದು, ಉದ್ಯಮ, ನೀತಿ ಮತ್ತು ಸಂಸ್ಕೃತಿ ಮೂಲಕ ಭಾರತ ಮತ್ತು ಬ್ರಿಟನ್ ಸಂಬಂಧವನ್ನು ಸುಧಾರಿಸುವ ಕೆಲಸದಲ್ಲಿ ತೊಡಗಿಸಿಕೊಂಡಿದೆ. ಈ ಹಿಂದೆ ಟಾಟಾ ಸಮೂಹದ ನಿವೃತ್ತ ಅಧ್ಯಕ್ಷ ರತನ್ ಟಾಟಾ ಕೂಡಾ ಈ ಪ್ರಶಸ್ತಿಗೆ ಭಾಜನರಾಗಿದ್ದರು.

**ಚೂರು-ಪಾರು ಸುದ್ಧಿಗಳು**

- **ದ್ವಿಪಕ್ಷೀಯ ವಹಿವಾಟು ದ್ವಿಗುಣಗೊಳಿಸುವತ್ತ ಭಾರತ-ಶ್ರೀಲಂಕಾ:** ಭಾರತ-ಶ್ರೀಲಂಕಾ ನಡುವಿನ ದ್ವಿಪಕ್ಷೀಯ ವಹಿವಾಟನ್ನು ದ್ವಿಗುಣಗೊಳಿಸಲು ಉಭಯ ದೇಶಗಳು ಇತ್ತೀಚೆಗೆ ಮಹತ್ವದ ನಿರ್ಣಯ ಕೈಗೊಂಡವು. ಕೊಲೊಂಬೊದಲ್ಲಿ ಉಭಯ ದೇಶಗಳ ನಡುವಿನ ಪ್ರತಿನಿಧಿಗಳೊಂದಿಗೆ ನಡೆದ ಮಾತುಕತೆಯಲ್ಲಿ ಮುಂದಿನ ಮೂರು ವರ್ಷದ ಅವಧಿಯೊಳಗೆ ಎರಡು ದೇಶಗಳ ನಡುವಿನ ವ್ಯಾಪಾರ ವಹಿವಾಟನ್ನು 10 ಬಿಲಿಯನ್ ಡಾಲರ್ ಗೆ ಹೆಚ್ಚಿಸಲು ತೀರ್ಮಾನಿಸಲಾಯಿತು. ಪ್ರಸ್ತುತ ಭಾರತ ಮತ್ತು ಶ್ರೀಲಂಕಾ ನಡುವಿನ ವ್ಯಾಪಾರ ವಹಿವಾಟ 5 ಬಿಲಿಯನ್ ಡಾಲರಷ್ಟಿದೆ.

- **ನಟ "ಜಿಮ್ ಕೆಲ್ಲಿ" ನಿಧನ:** "ಎಂಟರ್ ದಿ ಡ್ರಾಗನ್" ಸಿನಿಮಾದಲ್ಲಿ "ಬ್ರೂಸ್ ಲಿ" ಅವರೊಂದಿಗೆ ನಟಿಸಿ ಖ್ಯಾತಿರಾಗಿದ್ದ ನಟ ಜಿಮ್ ಕೆಲ್ಲಿ ನಿಧನರಾದರು. ಅವರು ಕ್ಯಾನ್ಸರ್ ನಿಂದ ಬಳಲುತ್ತಿದ್ದರೆಂದು ಕುಟುಂಬ ಮೂಲಗಳು ತಿಳಿಸಿವೆ. ವಿಶಿಷ್ಟ ಹೇರ್ ಸ್ಟೈಲ್ ನಿಂದ ಖ್ಯಾತಿ ಹೊಂದಿದ್ದ ಕೆಲ್ಲಿ "ಬ್ಲಾಕ್ ಬೆಲ್ಟ್ ಜೋನ್ಸ್", ತ್ರಿ ದ ಹಾರ್ಡ್ ವೇ", ಮತ್ತು "ಬ್ಲಾಕ್ ಸಮುರಾಯ್" ಚಿತ್ರಗಳು ಸೇರಿದಂತೆ ಅನೇಕ ಚಿತ್ರಗಳಲ್ಲಿ ನಟಿಸಿದ್ದರು.

- **ಅಮೆರಿಕಾ ವಿದೇಶಾಂಗ ಕಾರ್ಯದರ್ಶಿ "ಜಾನ್ ಕೆರ್ರಿ" ಭಾರತ ಭೇಟಿ:** ಅಮೆರಿಕಾ ವಿದೇಶಾಂಗ ಕಾರ್ಯದರ್ಶಿ ಜಾನ್ ಕೆರ್ರಿ ಅವರು ಜೂನ್ 23, ರಿಂದ ಜೂನ್ 25 ರವರೆಗೆ ಭಾರತಕ್ಕೆ ಪ್ರವಾಸ ಕೈಗೊಂಡಿದ್ದರು. ಮೂರು ದಿನಗಳ ಈ ಪ್ರವಾಸದಲ್ಲಿ ಅವರು ಭಾರತದ ಪ್ರಧಾನಿಯೊಂದಿಗೆ ಫಲಪ್ರದವಾದ ಚರ್ಚೆಯನ್ನು ನಡೆಸಿದರು. ದ್ವಿಪಕ್ಷೀಯ ಹೂಡಿಕೆ ಒಪ್ಪಂದ, ವೀಸಾ ಸಮಸ್ಯೆ, ಬಾಹ್ಯಕಾಶ ಸಹಕಾರ, ಅಂತರರಾಷ್ಟ್ರೀಯ ಭದ್ರತೆ ಸೇರಿದಂತೆ ಹಲವು ಪ್ರಮುಖ ಕ್ಷೇತ್ರಗಳಲ್ಲಿ ಒಪ್ಪಂದಕ್ಕೆ ಉಭಯ ದೇಶಗಳು ಸಹಿ ಹಾಕಿದವು.

- **"ನಜೀಬ್ ಜಂಗ್" ದೆಹಲಿಯ ಲೆಫ್ಟಿನೆಂಟ್ ಗವರ್ನರ್**: ಜಾಮೀಯಾ ಮಿಲಿಯಾ ವಿಶ್ವವಿದ್ಯಾಲದ ನಿವೃತ್ತ ಉಪಕುಲಪತಿ ನಜೀಬ್ ಜಂಗ್ ಅವರನ್ನು ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಆಗಿ ನೇಮಕಮಾಡಲಾಗಿದೆ. ಇದೇ ವೇಳೆ ಎ.ಕೆ.ಸಿಂಗ್ ಅವರನ್ನು ಅಂಡಮಾನ್ ಮತ್ತು ನಿಕೋಬರ್ ದ್ವೀಪದ ಲೆಫ್ಟಿನೆಂಟ್ ಗವರ್ನರ್ ಆಗಿ ಮತ್ತು ಪಂಜಾಬ್ ಕಾಂಗ್ರೆಸ್ ನಾಯಕ ವಿರೇಂದ್ರ ಕಟಾರಿಯಾ ಅವರನ್ನು ಪುಚೇರಿಯ ಲೆಫ್ಟಿನೆಂಟ್ ಜನರಲ್ ಆಗಿ ನೇಮಕಮಾಡಲಾಗಿದೆ.

- **ಏಷಿಯನ್ ಅಥ್ಲೇಟಿಕ್ಸ್ ಸಂಸ್ಥೆಯ (ಎಎಎ) ಅಧ್ಯಕ್ಷರಾಗಿ ಅಲ್-ಹಮದ್:** ಏಷಿಯನ್ ಅಥ್ಲೆಟಿಕ್ ಸಂಸ್ಥೆಯ ಅಧ್ಯಕ್ಷರಾಗಿ ದಹ್ಲನ್ ಜುಮಾನ್ ಅಲ್-ಹಮದ್ ಅವರು ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಈ ಮೂಲಕ ನಾಲ್ಕನೇ ಬಾರಿಗೆ

ಅಧ್ಯಕ್ಷ ಗಾದಿಗೆ ಹಂಬಲಿಸುತ್ತಿದ್ದ ಸುರೇಶ್ ಕಲ್ಮಾಡಿಗೆ ನಿರಾಸೆಯಾಗಿದೆ. ಎಎಎ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸುರೇಶ್ ಕಲ್ಮಾಡಿ ಅವರು ಸೋಲು ಅನುಭವಿಸಿದರು.

- **CSIR ನಿಂದ ಬೆಂಗಳೂರಿನಲ್ಲಿ ಸೂಪರ್ ಕಂಪ್ಯೂಟರ್**: ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಸಂಸ್ಥೆ (ಸಿಎಸ್ಐಆರ್) ಸೂಪರ್ ಕಂಪ್ಯೂಟರ್ ಒಂದನ್ನು ಬೆಂಗಳೂರಿನ ಬೃಹತ್ ಮಾಹಿತಿ ವಿಜ್ಞಾನ ಸಂಸ್ಥೆಯಲ್ಲಿ ಸ್ಥಾಪಿಸಲಿದೆ. 360 ಟೆರಾ ಫ್ಲಾಪ್ ವೇಗದಲ್ಲಿ ಕಾರ್ಯನಿರ್ವಹಿಸುವ ಈ ಕಂಪ್ಯೂಟರ್ ದೇಶದ ನಾಲ್ಕನೇ ಅತಿ ವೇಗದ ಕಂಪ್ಯೂಟರ್ ಎನ್ನಲಾಗಿದೆ.

- **ವಿಕಾಸ್ ಗೌಡಗೆ ಚಿನ್ನ**: ಕರ್ನಾಟಕದ ಚಿನ್ನದ ಹುಡುಗ ವಿಕಾಸ್ ಗೌಡ ಅವರು ಪುಣೆಯಲ್ಲಿ ನಡೆಯುತ್ತಿರುವ ಏಷ್ಯಾ ಅಥ್ಲೆಟಿಕ್ ಚಾಂಪಿಯನ್ ಷಿಪ್ ನಲ್ಲಿ ಭಾರತಕ್ಕೆ ಮೊದಲ ಬಂಗಾರದ ಪದಕ ತಂದು ಕೊಟ್ಟರು. ವಿಕಾಸ್ ಅವರು ತಮ್ಮ ನಾಲ್ಕನೇ ಯತ್ನದಲ್ಲಿ 64.90 ಮೀಟರ್ ದೂರ ಡಿಸ್ಕಸ್ ಎಸೆದು ಈ ಸಾಧನೆ ಮಾಡಿದರೆ.

- **UTI ಮ್ಯಾನೇಜಿಂಗ್ ಡೈರೆಕ್ಟರ್ ಆಗಿ "ಲಿಯೋ ಪುರಿ":** ಯುನೈಟೆಡ್ ಟ್ರಸ್ಟ್ ಆಫ್ ಇಂಡಿಯಾ (UTI) ಮ್ಯೂಚಯಲ್ ಫಂಡ್ ನ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಲಿಯೋ ಪುರಿ ಅವರನ್ನು ನೇಮಕಮಾಡಲಾಗಿದೆ. ಯುನೈಟೆಡ್ ಮ್ಯೂಚುಯಲ್ ಫಂಡ್ ದೇಶದ ಅತಿ ದೊಡ್ಡ ಮ್ಯೂಚುಯಲ್ ಫಂಡ್ ಸಂಸ್ಥೆಯಾಗಿದ್ದು 74, 706 ಕೋಟಿ ವಾರ್ಷಿಕ ವಹಿವಾಟು ನಡೆಸುತ್ತಿದೆ.

- **ವಿಶ್ವದ ಮೊದಲ "ಫೈರ್ ಫಾಕ್ಸ್" ಅಪರೇಟೆಡ್ ಸ್ಮಾರ್ಟ್ ಫೋನ್ ಬಿಡುಗಡೆ:** ಸ್ಪೇನ್ ನ "ಟೆಲೆಫೋನಿಕ (Telefonica)" ಸಂಸ್ಥೆ ವಿಶ್ವದ ಮೊದಲ "ಫೈರ್ ಫಾಕ್ಸ್ (Fire Fox)" ಅಪರೇಟಿಂಗ್ ಸಿಸ್ಟಂವುಳ್ಳ ಸ್ಮಾರ್ಟ್ ಫೋನನ್ನು ಅನಾವರಣಗೊಳಿಸಿದೆ. ಗೂಗಲ್ ನ ಆಂಡ್ರಾಯಿಡ್ ಮತ್ತು ಆಪಲ್ ನ ಐಸ್ ಕ್ರೀಂ ಅಪರೇಟಿಂಗ್ ಸಿಸ್ಟಂಗೆ ಇದು ಸ್ಪರ್ಧೆ ಒಡ್ಡಲಿದೆ ಎನ್ನಲಾಗಿದೆ.

- **RTI ಅಡಿಯಲ್ಲಿ "ಬೆಂಗಳೂರು ಟರ್ಫ್ ಕ್ಲಬ್":** ಮಾಹಿತಿ ಹಕ್ಕು ಕಾಯಿದೆಯಡಿ ಬೆಂಗಳೂರು ಟರ್ಫ್ ಕ್ಲಬ್ ಕೂಡ ಬರಲಿದೆ ಎಂಬ ಮಹತ್ವದ ತೀರ್ಪನ್ನು ಕರ್ನಾಟಕ ಮಾಹಿತಿ ಹಕ್ಕು ಆಯೋಗ ನೀಡಿದೆ. ಬೆಂಗಳೂರು ಟರ್ಫ್ ಕ್ಲಬ್ ಸಹ ಸಾರ್ವಜನಿಕ ಪ್ರಾಧಿಕಾರವಾಗಿದ್ದು ಮಾಹಿತಿ ಹಕ್ಕು ಕಾಯಿದೆಯ ಸೆಕ್ಷನ್ 2(h),(d) ಯ ಅಡಿಯಲ್ಲಿ ಬರಲಿದೆ ಎಂದು ಆಯೋಗ ಹೇಳಿದೆ. ಉಮಾಪತಿ ಎನ್ನುವವರು ಟರ್ಫ್ ಕ್ಲಬ್ ದಾಖಲೆಗಳ ಬಗ್ಗೆ ಮಾಹಿತಿ ಹಕ್ಕು ಕಾಯಿದೆಯಡಿ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಟರ್ಫ್ ಕ್ಲಬ್ ನಿರಾಕರಿಸಿತ್ತು. ಅರ್ಜಿದಾರರು ಈ ವಿಚಾರದ ಸಲುವಾಗಿ ಆಯೋಗದ ಮೆಟ್ಟಿಲೇರಿದ್ದರು.

- **<u>ಭಾರತೀಯ ವಾಯು ಸೇನೆಗೆ ಇತ್ತೀಚೆಗಷ್ಟೆ ಸೇರ್ಪಡೆಗೊಂಡ 'ಸಿ-7 ಗ್ಲೋಬ್ ಮಾಸ್ಟರ್ III'</u>** ಪ್ರಥಮ ವಿಮಾನವನ್ನು ಅಂಡಮಾನ್ ಮತ್ತು ನಿಕೋಬರ್ ದ್ವೀಪದಲ್ಲಿ ಇಳಿಸಲಾಯಿತು. ಸುಮಾರು 28000 ಅಡಿ ಎತ್ತರದಲ್ಲಿ, ಸತತ 2400 ನಾಟಿಕಲ್ ಮೈಲಿಗಳಷ್ಟು ದೂರ ಹಾರಿ ಅಂಡಮಾನ್ ನಿಕೋಬರ್ ದ್ವೀಪಕ್ಕೆ ಸೇನಾ ತುಕಡಿಯನ್ನು ಇಳಿಸಿತು. ಮೆಸರ್ಸ್ ಬೋಯಿಂಗ್ ಅಮೆರಿಕಾ ಸಂಸ್ಥೆ ಈ ಸಿ-7 ಗ್ಲೋಬ್ ಮಾಸ್ಟರ್ III ವಿಮಾನಗಳ ಉತ್ಪಾದಕರಾಗಿದ್ದು, ಇದು ಅಮೆರಿಕಾ ಮಿಲಿಟರಿ ವ್ಯವಸ್ಥೆಗೆಂದೇ ತಯಾರಿಸಲಾದ ಅತಿ ದೊಡ್ಡ ರಕ್ಷಣಾ ವಿಮಾನವಾಗಿದೆ. ಅಲ್ಲದೇ ಭಾರತ ಈ ಸುಸಜ್ಜಿತ ವಿಮಾನಗಳನ್ನು ಅತಿ ದೊಡ್ಡ ಸಂಖ್ಯೆ ಯಲ್ಲಿ ಆಮದು ಮಾಡಿಕೊಳ್ಳುತ್ತಿರುವ ರಾಷ್ಟ್ರವಾಗಿದೆ. ಈ ವಿಮಾನ 174 ಅಡಿ ಉದ್ದವಿದ್ದು, 265350 ಕಿ.ಗ್ರಾ. ತೂಕವನ್ನು ಹೊತ್ತೊಯ್ಯಬಲ್ಲ ಸಾಮರ್ಥ್ಯ ಹೊಂದಿದೆ.

- **<u>ಪೊಪೊಕಟೆಪೆಟ್ಲ್ (Popocatepetl) ಜ್ವಾಲಾಮುಖಿ ಸ್ಫೋಟ:</u>** ಪೊಪೊಕಟೆಪೆಟ್ಲ್ ಮೆಕ್ಸಿಕೊದ ಒಂದು ಅತ್ಯಂತ ಕ್ರಿಯಾ ಶೀಲ ಜ್ವಾಲಮುಖಿ. ಇತ್ತೀಚೆಗೆ ಈ ಜ್ವಾಲಾಮುಖಿ ಸ್ಫೋಟಗೊಂಡು ಆಕಾಶದೆತ್ತರ ಹೊಗೆ ಮತ್ತು ಆವಿಯನ್ನು ಚಿಮ್ಮುತ್ತಿರುವ ಕಾರಣ ಸುದ್ದಿಯಲ್ಲಿತ್ತು. ಈ ಜ್ವಾಲಾಮುಖಿಯ ಸ್ಫೋಟದಿಂದಾಗಿ ಅಮೆರಿಕಾ ಮತ್ತು ಮೆಕ್ಸಿಕೊ ನಡುವಿನ ವಿಮಾನ ಪ್ರಯಾಣವನ್ನು ರದ್ದುಗೊಳಿಸಲಾಗಿತ್ತು. ಪೊಪೊಕಟೆಪೆಟ್ಲ್ ಮೆಕ್ಸಿಕೊದ ಎರಡನೇ ಅತಿ ದೊಡ್ಡ ಎತ್ತರದ ಪ್ರದೇಶ. ಪಿಕೊ ಡೆ ಓರಿಝಬ (5,636) ಮೆಕ್ಸಿಕೊದ ಅತ್ಯಂತ ಎತ್ತರದ ಪ್ರದೇಶ.

- **<u>ದಾನೀಶ್ ಕನೇರಿಯಾಗೆ ಅಜೀವ ನಿಷೇಧ:</u>** ಇಂಗ್ಲೀಷ್ ಕೌಂಟಿ ಕ್ರಿಕೆಟ್ ನಲ್ಲಿ ಭಾಗಿಯಾಗಿರುವ ಪಾಕಿಸ್ತಾನದ ಸ್ಪಿನ್ನರ್ ದಾನೀಶ್ ಕನೇರಿಯಾಗೆ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಅಜೀವ ನಿಷೇಧ ಹೇರಿದೆ. 2009 ರಲ್ಲಿ ಇಂಗ್ಲೀಷ್ ಕೌಂಟಿ ಕ್ರಿಕೆಟ್ ನಲ್ಲಿ ಕನೆರಿಯಾ ಸ್ಪಾಟ್ ಫಿಕ್ಸಿಂಗ್ ಭಾಗಿಯಾದ್ದ ಆರೋಪಕ್ಕೆ ಗುರಿಯಾಗಿದ್ದ ಹಿನ್ನಲೆಯಲ್ಲಿ 2010 ರಿಂದ ಕನೆರಿಯಾ ಕ್ರಿಕೆಟ್ ನಿಂದ ದೂರ ಉಳಿಯಬೇಕಾಗಿತ್ತು. ಆದರೆ ಪಾಕ್ ಕ್ರಿಕೆಟ್ ಮಂಡಳಿಯ ಈ ನಿರ್ಧಾರ ಅವರು ಮತ್ತೆ ತಂಡಕ್ಕೆ ತೆರಳುವ ಆಸೆಗೆ ತಣ್ಣೀರು ಎರೆಚಿದೆ.

- **<u>"ಸುಧೀರ್ ಕುಮಾರ್ ಜೈನ್" ಸಿಂಡಿಕೇಟ್ ಬ್ಯಾಂಕ್ ಚೇರಮನ್ ಅಂಡ್ ಮ್ಯಾನೇಜಿಂಗ್ ಡೈರೆಕ್ಟರ್:</u>** ಬ್ಯಾಂಕ್ ಆಫ್ ಬರೋಡಾದ ಕಾರ್ಯನಿರ್ವಾಹಕ ನಿರ್ದೇಶಕರಾದ "ಸುಧೀರ್ ಕುಮಾರ್ ಜೈನ್" ಅವರನ್ನು ಸಿಂಡಿಕೇಟ್ ಬ್ಯಾಂಕ್ ನ ನೂತನ ಚೇರಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಕೇಂದ್ರ ಸರ್ಕಾರ ನೇಮಕಮಾಡಿದೆ. ಸುಧೀರ್ ಕುಮಾರ್ ಜೈನ್ ಅವರು ಐದು ವರ್ಷಗಳ ಕಾಲ ಈ ಹುದ್ದೆಯಲ್ಲಿ ಮುಂದುವರೆಯಲಿದ್ದಾರೆ. ಇದೇ ವೇಳೆ ಎಲ್ಐಸಿ ಯ ಕಾರ್ಯನಿರ್ವಾಹಕ ನಿರ್ದೇಶಕರಾದ ಎಸ್.ಬಿ. ಮೈನಾಕ್ ಅವರು ಎಲ್ಐಸಿ ಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ನೇಮಕಗೊಂಡಿದ್ದಾರೆ.

- **ಭಾರತದ ಸೀನಿಯರ್ ಮಹಿಳಾ ಬಾಸ್ಕೆಟ್ ಬಾಲ್ ತಂಡದ ಕೋಚ್ ಆಗಿ "ಫ್ರಾನ್ಸಿಸ್ಕೊ" :** ಸ್ಪೇನ್ ನ ಫ್ರಾನ್ಸಿಸ್ಕೊ ಗರ್ಸಿಯಾ ಅವರು ಭಾರತದ ಸೀನಿಯರ್ ಮಹಿಳಾ ಬಾಸ್ಕೆಟ್ ಬಾಲ್ ತಂಡದ ಕೋಚ್ ಆಗಿ ನೇಮಕಗೊಂಡಿದ್ದಾರೆ. ಸ್ಪೇನ್ ನ ಹಲವು ಬಾಸ್ಕೆಟ್ ಬಾಲ್ ಫೆಡರೇಶನ್ ಗೆ ಕೋಚ್ ಆಗಿ ಕಾರ್ಯನಿರ್ವಹಿಸಿರುವ ಅನುಭವವನ್ನು ಫ್ರಾನ್ಸಿಸ್ಕೊ ಹೊಂದಿದ್ದಾರೆ.

- **ಚೀನಾದ ಮಾಜಿ ರೈಲ್ವೆ ಸಚಿವನಿಗೆ ಗಲ್ಲು:** ಭ್ರಷ್ಟಾಚಾರ ಮತ್ತು ಅಧಿಕಾರದ ದುರುಪಯೋಗಕ್ಕಾಗಿ ಚೀನಾದ ಮಾಜಿ ರೈಲ್ವೇ ಸಚಿವ ಲಿಯು ಝಿಂಜನ್ ಅವರಿಗೆ ನ್ಯಾಯಾಲಯವೊಂದು ಅಮಾನತುಗೊಳಿಸಲಾದ ಮರಣದಂಡನೆಯನ್ನು ವಿಧಿಸಿದೆ. ಲಿಯು 25 ವರ್ಷಗಳ ಅವಧಿಯಲ್ಲಿ 10.53 ದಶಲಕ್ಷ ಡಾಲರ್ ಲಂಚವನ್ನು ಪಡೆದಿದ್ದಾರೆ ಎನ್ನಲಾಗಿದೆ.

- **ರೋಹನ್ ಬೋಪಣ್ಣಗೆ 5 ನೇ ಸ್ಥಾನ:** ಪ್ರತಿಷ್ಠಿತ ವಿಂಬಲ್ಡನ್ ಟೆನಿಸ್ ಚಾಂಪಿಯನ್ ಷಿಪ್ ಪುರುಷರ ಡಬ್ಬಲ್ಸ್ ವಿಭಾಗದಲ್ಲಿ ಸೆಮಿ ಫೈನಲ್ ಪ್ರವೇಶಿಸಿದ ಭಾರತದ ರೋಹನ್ ಬೋಪಣ್ಣ ವಿಶ್ವ ಶ್ರೇಣಿ ಪಟ್ಟಿಯಲ್ಲಿ 5 ನೇ ಸ್ಥಾನಕ್ಕೇರಿದ್ದಾರೆ. ಇದು ಬೋಪಣ್ಣ ಅವರ ವೃತ್ತಿ ಜೀವನದಲ್ಲಿ ಶ್ರೇಷ್ಠ ಸಾಧನೆಯಾಗಿದೆ.

- **ದಲೈಲಾಮಗೆ 78 ನೇ ಹುಟ್ಟುಹಬ್ಬದ ಸಂಭ್ರಮದ:** ಟಿಬೆಟಿಯನ್ನರ ಧರ್ಮ ಗುರು ದಲೈಲಾಮ ಅವರ 78 ನೇ ಹುಟ್ಟುಹಬ್ಬವನ್ನು ಧರ್ಮಶಾಲದಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಭಾರತ ಸೇರಿದಂತೆ ವಿಶ್ವದ ನಾನಾ ಕಡೆಯಿಂದ ಆಗಮಿಸಿದ್ದ ಬೌದ್ಧ ಬಿಕ್ಷುಗಳು ಈ ಸಡಗರಕ್ಕೆ ಸಾಕ್ಷಿಯಾದರು. ಪ್ರಸುತ್ತ ಇರುವ ದಲೈಲಾಮ 14 ನೇ ದಲೈ ಲಾಮ ಆಗಿದ್ದು, ತೆಂಝಿನ್ ಗೆಟ್ಸೊ ಇದು ಇವರ ಧಾರ್ಮಿಕ ಹೆಸರು.

- **ಏಷ್ಯನ್ ಬಾಕ್ಸಿಂಗ್ "ಶಿವ ಥಾಪ"ಗೆ ಚಿನ್ನ**: ಭಾರತದ ಯುವ ಬಾಕ್ಸರ್ ಶಿವ ಥಾಪ ಅವರು ಏಷ್ಯನ್ ಬಾಕ್ಸಿಂಗ್ ಚಾಂಪಿಯನ್ ಶಿಪ್ ಪಂದ್ಯಾವಳಿಯಲ್ಲಿ ಫೈನಲ್ ನಲ್ಲಿ ಗೆಲುವು ಸಾಧಿಸಿ ಚಿನ್ನದ ಪದಕವನ್ನು ಗೆದ್ದುಕೊಂಡರು. ಶಿವ ಥಾಪ (56 ಕೆಜಿ) ಜತೆಗೆ ಎಲ್.ದೇವೆಂದ್ರೊ ಸಿಂಗ್ (49 ಕೆಜಿ ವಿಭಾಗ) ಮತ್ತು ಮಂದೀಪ್ ಜಾಂಗ್ರಾ ಫೈನಲ್ ಪ್ರವೇಶಿಸಿದ್ದರಾದರೂ ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟುಕೊಂಡರು.

- **"ಫರ್ವೇಜ್ ರಸೂಲ್" ಭಾರತ ಕ್ರಿಕೆಟ್ ತಂಡಕ್ಕೆ ಆಯ್ಕೆಯಾದ ಮೊದಲ ಜಮ್ಮು ಕಾಶ್ಮೀರ ಆಟಗಾರ**: ಜಮ್ಮು ಕಾಶ್ಮೀರದಿಂದ ಭಾರತ ತಂಡಕ್ಕೆ ಆಯ್ಕೆಯಾದ ಮೊದಲ ಕ್ರಿಕೆಟ್ ಆಟಗಾರ ಎಂಬ ಖ್ಯಾತಿಗೆ "ಫರ್ವೇಜ್ ರಸೂಲ್" ಪಾತ್ರರಾಗಿದ್ದಾರೆ. ಭಾರತ ತಂಡ ಜುಲೈ 24 ರಿಂದ ಆಗಸ್ಟ್ 3 ರವರೆಗೆ ಹರಾರೆ ಮತ್ತು ಬುಲವಾಯೊನಲ್ಲಿ ಏಕದಿನ ಸರಣಿಯನ್ನಾಡಲಿದ್ದು, ಈ ಸರಣಿಗೆ ಯುವ ತಂಡವನ್ನು ಕಳುಹಿಸಲು ಆಯ್ಕೆ ಸಮಿತಿ ನಿರ್ಧರಿಸಿತ್ತು. ಅದರಂತೆ ರಸೂಲ್ ಅವರಿಗೆ ತಂಡದಲ್ಲಿ ಸ್ಥಾನ ನೀಡಲಾಗಿದೆ. ಆಲ್ ರೌಂಡರ್ ಆಗಿರುವ ರಸೂಲ್ 17 ಪ್ರಥಮ ದರ್ಜೆ ಪಂದ್ಯಗಳಲ್ಲಿ 46 ವಿಕೆಟ್ ಕಬಳಿಸಿದ್ದು, ಬ್ಯಾಟಿಂಗ್ ನಲ್ಲಿ 38.57 ಸರಾಸರಿಯಲ್ಲಿ 1003 ರನ್ ಗಳಿಸಿದ್ದಾರೆ.

- **ಸೆಬಾಸ್ಟಿಯನ್ ವೆಟ್ಟಲ್ ಮಡಿಲಿಗೆ ಜರ್ಮನ್ ಗ್ರ್ಯಾನ್ ಪ್ರೀ:** ವಿಶ್ವ ಚಾಂಪಿಯನ್ ಸೆಬಾಸ್ಟಿಯಲ್ ವೆಟ್ಟಾಲ್ ಅವರು ಇತ್ತೀಚೆಗೆ ನಡೆದ ಜರ್ಮನ್ ಗ್ರ್ಯಾನ್ ಪ್ರೀ ರೇಸ್ ನಲ್ಲಿ ಮೊದಲಿಗರಾಗಿ ಹೊರಹೊಮ್ಮಿದರು. ಈ ಮೂಲಕ ತಾವು ಪ್ರತಿನಿಧಿಸುವ ರೆಡ್ ಬುಲ್ ತಂಡಕ್ಕೆ ಮೊದಲ ಸ್ಥಾನವನ್ನು ದಕ್ಕಿಸುವಲ್ಲಿ ಯಶಸ್ವಿಯಾದರು.

- **"ಶೇನ್ ವಾರ್ನ್" ಗೆ ಹಾಲ್ ಆಫ್ ಫೇಮ್ ಗೌರವ:** ಆಸ್ಟ್ರೇಲಿಯಾದ ಮಾಜಿ ಸ್ಪಿನ್ನರ್ ಶೇನ್ ವಾರ್ನ್ ಅವರನ್ನು ಪ್ರತಿಷ್ಠಿತ "ಐಸಿಸಿ ಕ್ರಿಕೆಟ್ ಹಾಲ್ ಆಫ್ ಫೇಮ್" ಯಾದಿಗೆ ಸೇರಿಸಿಕೊಳ್ಳಲು ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ ತೀರ್ಮಾನಿಸಿದೆ. ಲಾರ್ಡ್ಸ್ ನಲ್ಲಿ ಜುಲೈ 19 ರಂದು ನಡೆಯಲಿರುವ ಆ್ಯಶಸ್ ಸರಣಿಯ ದ್ವಿತೀಯ ಟೆಸ್ಟ್ ಪಂದ್ಯದ ವಿರಾಮದ ವೇಳೆ ನಡೆಯಲಿರುವ ಸಮಾರಂಭದಲ್ಲಿ ವಾರ್ನ್ ಅವರಿಗೆ ಈ ಗೌರವವನ್ನು ಪ್ರಧಾನ ಮಾಡಲಿರುವುದಾಗಿ ಐಸಿಸಿ ತಿಳಿಸಿದೆ. ಶೇನ್ ವಾರ್ನ್ ಅವರು ಈ ಗೌರವಕ್ಕೆ ಪಾತ್ರರಾದ 69 ನೇ ಪುರುಷ ಸದಸ್ಯ. 1992 ರಿಂದ 2007 ನಡುವೆ 145 ಟೆಸ್ಟ್ ಪಂದ್ಯಗಳಲ್ಲಿ ಕಾಣಿಸಿಕೊಂಡಿರುವ ಶೇನ್ ವಾರ್ನ್ 700 ವಿಕೆಟ್ ಉರುಳಿಸಿದ ಪ್ರಥಮ ಸಾಧಕನೆಂಬುದು ವಿಶೇಷ. 194 ಏಕದಿನ ಪಂದ್ಯಗಳಲ್ಲಿ 293 ವಿಕೆಟ್ ಗಳನ್ನು ವಾರ್ನೆ ಕಬಳಿಸಿದ್ದಾರೆ.

- **ಶೂಟಿಂಗ್ ವಿಶ್ವಕಪ್: ಲಜ್ಜಾ ಗೋಸ್ವಾಮಿಗೆ ಬೆಳ್ಳಿ:** ಸ್ಪೇನ್ ನ ಗ್ರನಾಡದಲ್ಲಿ ನಡೆಯುತ್ತಿರುವ ಶೂಟಿಂಗ್ ವಿಶ್ವಕಪ್ ಪಂದ್ಯಾವಳಿಯ ಮಹಿಳಾ 50 ಮೀ ರೈಫಲ್ 3 ನೇ ಪೊಸಿಷನ್ ವಿಭಾಗದಲ್ಲಿ ಭಾರತದ ಲಜ್ಜಾ ಗೋಸ್ವಾಮಿ ಅವರು ಬೆಳ್ಳಿ ಪದಕಗಳಿಸಿದ್ದಾರೆ. 24 ವರ್ಷದ ಲಜ್ಜಾ 2010 ರಲ್ಲಿ ಕಾಮನ್ ವೆಲ್ತ್ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಪಡೆದಿದ್ದರು.

- **ಲೇಖಕಿ ನಿರುಪಮಾ ನಿಧನ:** ಕನ್ನಡದ ಹೆಸರಾಂತ ಲೇಖಕಿ ನಿರುಪಮಾ ಅವರು ನಿಧನರಾದರು. 118 ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದ ಅವರು ಕನ್ನಡ ಸಾಹಿತ್ಯ ಲೋಕಕ್ಕೆ ತನ್ನದೇ ಆದ ಕೊಡುಗೆ ನೀಡಿದ್ದರು. 1985 ರಲ್ಲಿ ಮಕ್ಕಳ ಸಾಹಿತ್ಯ ಪರಿಷತ್ ಸ್ಥಾಪಿಸುವಲ್ಲಿ ಅವರು ಅಪಾರ ಶ್ರಮವಹಿಸಿದ್ದರು.

- **ಬ್ರಿಟನ್ ನಲ್ಲಿ ಶಾಖೆ ತೆರೆಯಲಿರುವ ಆಕ್ಸಿಸ್ ಬ್ಯಾಂಕ್:** ಖಾಸಗಿ ವಲಯದಲ್ಲಿ ದೇಶದ ಮೂರನೇ ಅತಿ ದೊಡ್ಡ ಬ್ಯಾಂಕ್ ಎನಿಸಿರುವ ಆಕ್ಸಿಸ್ ಬ್ಯಾಂಕ್ ಬ್ರಿಟನ್ ನ ಲಂಡನ್ ನಲ್ಲಿ ಶಾಖೆಯನ್ನು ತೆರೆಯಲು ಬ್ರಿಟನ್ ಸರ್ಕಾರದ ಆರ್ಥಿಕ ಇಲಾಖೆಯಿಂದ ಅನುಮತಿ ಪಡೆದಿರುವುದಾಗಿ ಹೇಳಿದೆ. ಠೇವಣಿ, ಸಾಲ ವಿತರಣೆ ಮತ್ತು ಬಂಡವಾಳ ಹೂಡಿಕೆಯಲ್ಲಿ ಬ್ಯಾಂಕ್ ತನ್ನ ಕಾರ್ಯವನ್ನು ನಿರ್ವಹಿಸಲಿದೆ.

- **ಉತ್ತರಾಖಂಡ ಪುನರ್ ನಿರ್ಮಾಣಕ್ಕೆ ಸಚಿವ ಸಮಿತಿ ರಚನೆ:** ಮಹಾಮಳೆಗೆ ಬಲಿಯಾಗಿ ತತ್ತರಿಸಿ ಹೋಗಿರುವ ಉತ್ತರಾಖಂಡದ ಪುನರ್ ನಿರ್ಮಾಣಕ್ಕೆ ಮಾರ್ಗದರ್ಶನ ನೀಡುವ ಸಲುವಾಗಿ ಪ್ರಧಾನಿ ಮನಮೋಹನ್ ಸಿಂಗ್ ಅವರು ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ. ಪ್ರಧಾನಮಂತ್ರಿಯಲ್ಲದೇ ರಕ್ಷಣಾ ಸಚಿವ ಎ.ಕೆ.ಆಂಟೋನಿ,

ಗೃಹಮಂತ್ರಿ ಸುಶೀಲ್ ಕುಮಾರ್ ಶಿಂಧೆ, ಗ್ರಾಮೀಣಾಭಿವೃದ್ಧಿ ಸಚಿವ ಜೈರಾಮ್ ರಮೇಶ್, ಹೆದ್ದಾರಿ ಸಚಿವ ಆಸ್ಕರ್ ಫರ್ನಾಂಡೀಸ್, ದೂರಸಂಪರ್ಕ ಸಚಿವ ಕಪಿಲ್ ಸಿಬಲ್, ಜಲ ಸಂಪನ್ಮೂಲ ಸಚಿವ ಹರೀಶ್ ರವಾತ್ ಮತ್ತು ವಸತಿ ಮತ್ತು ನಗರ ಬಡತನ ನಿರ್ಮೂಲನ ಸಚಿವ ಗಿರಿಜಾ ವ್ಯಾಸ್ ಅವರನ್ನು ಒಳಗೊಂಡಿದೆ. ಮೂಲಸೌಕರ್ಯ ವ್ಯವಸ್ಥೆ, ಭದ್ರತೆ ಸಂಬಂಧಿಸಿದ ವಿಷಯಗಳ ಸಲುವಾಗಿ ಈ ಸಮಿತಿ ಮಾರ್ಗದರ್ಶನ ನೀಡಲಿದೆ.

- **ಚೀನಾದಲ್ಲಿ ವಿಶ್ವದ ಬೃಹತ್ ಕಟ್ಟಡ ಬಳಕೆಗೆ ಮುಕ್ತ**: ಚೀನಾದ ಚೆಂಗ್ಡುವಿನಲ್ಲಿ ನಿರ್ಮಾಣಗೊಂಡಿರುವ ವಿಶ್ವದ ಅತಿ ದೊಡ್ಡ ಕಟ್ಟಡ "ನ್ಯೂ ಸೆಂಚುರಿ ಗ್ಲೋಬಲ್ ಸೆಂಟರ್" ಅನ್ನು ಇತ್ತೀಚೆಗೆ ಬಳಕೆಗೆ ಮುಕ್ತಗೊಳಿಸಲಾಯಿತು. ಶಾಪಿಂಗ್ ಮಾಲ್, ಕಚೇರಿ, ಸಮಾವೇಶ ಕೇಂದ್ರ, ಎರಡು ಪಂಚತಾರಾ ಹೋಟೆಲ್ ಒಳಗೊಂಡಿರುವ ಈ ಬೃಹತ್ ಕಟ್ಟಡವನ್ನು 17 ಲಕ್ಷ ಚದರ ಮೀಟರ್ ವಿಸ್ತೀರ್ಣದಲ್ಲಿ ಸ್ಥಾಪಿಸಲಾಗಿದೆ.

- **ವಿದೇಶಿ ಬ್ಯಾಂಕ್ ಗಳ ಲಾಭಗಳಿಕೆ "ಸ್ವಾಂಡರ್ಡ್ ಚಾರ್ಟೆಡ್ ಬ್ಯಾಂಕ್" ನಂ.1**: ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದೇಶಿ ಬ್ಯಾಂಕ್ ಗಳ ಪೈಕಿ ಅತ್ಯಂತ ಲಾಭದಾಯಕ ಬ್ಯಾಂಕ್ ಆಗಿ ಸ್ವಾಂಡರ್ಡ್ ಚಾರ್ಟೆಡ್ ಬ್ಯಾಂಕ್ ಮತ್ತೆ ನಂ.1 ಸ್ಥಾನಕ್ಕೆ ಏರಿದೆ. ಹೆಚ್ಚು ಬಡ್ಡಿ, ಕಠಿಣ ನಿಯಮಗಳ ಜಾರಿ, ನಿಯಮಿತ ಸಾಲ ವಿತರಣೆ ಕ್ರಮದಿಂದಾಗಿ ಸ್ವಾಂಡರ್ಡ್ ಚಾರ್ಟೆಡ್ ಬ್ಯಾಂಕ್ ಲಾಭದಾಯಕ ಬ್ಯಾಂಕ್ ಆಗಿ ಹೊರಹೊಮ್ಮಿದೆ. HSBC ಮತ್ತು ಸಿಟಿ ಬ್ಯಾಂಕ್ ನಂತರದ ಸ್ಥಾನವನ್ನು ಗಳಿಸಿವೆ.

- **ಸಾಗರ ಸುರಕ್ಷೆಗೆ ತ್ರಿಪಕ್ಷೀಯ ಒಪ್ಪಂದ**: ಹಿಂದೂ ಮಹಾಸಾಗರದಲ್ಲಿ ಭದ್ರತೆ ಮತ್ತು ಸುರಕ್ಷತೆಗೆ ಸಂಬಂಧಿಸಿದಂತೆ ಪರಸ್ಪರ ಸಹಕಾರ ಮತ್ತು ಮಾಹಿತಿ ವಿನಿಮಯ ಸಲುವಾಗಿ ಭಾರತ, ಶ್ರೀಲಂಕಾ ಮತ್ತು ಮಾಲ್ಡೀವ್ಸ್ ರಾಷ್ಟ್ರಗಳು ತ್ರಿಪಕ್ಷೀಯ ಒಪ್ಪಂದಕ್ಕೆ ಸಹಿ ಹಾಕಿದವು. ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಶಿವಶಂಕರ್ ಮೆನನ್, ಲಂಕಾದ ರಕ್ಷಣಾ ಸಚಿವ ಗೊಟಬಯ ರಾಜಪಕ್ಷ ಮತ್ತು ಮಾಲ್ಡೀವ್ಸ್ ನ ರಕ್ಷಣಾ ಸಚಿವ ಮೊಹಮ್ಮದ್ ನಜೀಮ್ ಅವರ ಸಮ್ಮುಖದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು.

- **ಖ್ಯಾತ ಕರ್ನಾಟಿಕ್ ಸಂಗೀತ ಗಾಯಕ "ನೂಕಲ ಚಿನ್ನ ಸತ್ಯನಾರಾಯಣ" ನಿಧನ:** ಖ್ಯಾತ ಕರ್ನಾಟಿಕ್ ಸಂಗೀತ ವಿದ್ವಾಂಸ ಮತ್ತು ಪದ್ಮ ಪ್ರಶಸ್ತಿ ವಿಜೇತ ನೂಕಲ ಚಿನ್ನ ಸತ್ಯನಾರಾಯಣ ಅವರು ಸಿಕಂದ್ರಬಾದ್ ನಲ್ಲಿ ನಿಧನರಾದರು. ಅವರಿಗೆ 90 ವರ್ಷ ವಯಸ್ಸಾಗಿತ್ತು. ಸತ್ಯನಾರಾಯಣ ಅವರು ದೇಶ ವಿದೇಶಗಳಲ್ಲಿ ಸಂಗೀತ ಕಾರ್ಯಕ್ರಮವನ್ನು ನೀಡಿ ಜನಮನ್ನಣೆಗಳಿಸಿದ್ದರು. ಪದ್ಮಶ್ರೀ ಪ್ರಶಸ್ತಿ ಸೇರಿದಂತೆ ವಿವಿಧ ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದರು.

- **<u>"ಜೀನ್-ಕ್ಲಾಡ್-ಜಂಕರ್ (Jean-Claude-Junker)" ರಾಜೀನಾಮೆ:</u>** ಲಂಕ್ಸೆಮ್ ಬರ್ಗ್ ನ ಪ್ರಧಾನ ಮಂತ್ರಿ ಜೀನ್-ಕ್ಲಾಡ್-ಜಂಕರ್ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು. ಜಂಕರ್ ಅವರು ಇತ್ತೀಚೆಗೆ ರಾಷ್ಟ್ರದ ರಹಸ್ಯ ಕಾರ್ಯಚರಣೆಯಲ್ಲಿ ಭಾಗಿಯಾಗಿದ್ದ ಆರೋಪವನ್ನು ಎದುರಿಸುತ್ತಿದ್ದರು. ಯುರೋಪ್ ಖಂಡದಲ್ಲಿ ದೀರ್ಘಕಾಲದಲ್ಲಿ ಆಳ್ವಿಕೆ ನಡೆಸಿದ ಖ್ಯಾತಿಗೆ ಜಂಕರ್ ಪಾತ್ರರಾಗಿದ್ದರು.

- **<u>ಪತ್ರಕರ್ತ "ಟೊಂಗಮ್ ರಿನಾ"ಗೆ ಜರ್ಮನಿಯ ಪ್ರತಿಷ್ಠಿತ ಪ್ರಶಸ್ತಿ</u>**: ಅರುಣಾಚಲ ಪ್ರದೇಶದ ಹಿರಿಯ ಪತ್ರಕರ್ತ ಟೊಂಗಮ್ ರಿನಾ ಅವರಿಗೆ ಜರ್ಮನಿಯ "ಫ್ರೀಡಂ ಅಂಡ್ ಫ್ಯೂಚರ್ ಆಫ್ ದಿ ಮೀಡಿಯಾ-2013" ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ದಿ ಡೈಲಿ ದಿನಪತ್ರಿಕೆಯ ಉಪಸಂಪಾದಕರಾಗಿರುವ ಟೊಂಗಮ್ ಅವರು ಕಳೆದ ವರ್ಷ 2011-12 ನೇ ಸಾಲಿನ ಲಡ್ಲಿ ಮೀಡಿಯಾ ಪ್ರಶಸ್ತಿಗೆ ಭಾಜನರಾಗಿದ್ದರು.

- **<u>ಪುದುಚೇರಿ ಲೆಫ್ಟಿನೆಂಟ್ ಗವರ್ನರ್ ಆಗಿ ವಿರೇಂದ್ರ ಕಟಾರಿಯಾ</u>**: ಕಾಂಗ್ರೆಸ್ ನ ಹಿರಿಯ ಧುರೀಣ ಮತ್ತು ಮಾಜಿ ರಾಜ್ಯಸಭಾ ಸದಸ್ಯ ವಿರೇಂದ್ರ ಕಟಾರಿಯಾ ಅವರು ಪುದುಚೇರಿಯ ಲೆಫ್ಟಿನೆಂಟ್ ಗವರ್ನರ್ ಆಗಿ ಅಧಿಕಾರ ಸ್ವೀಕರಿಸಿದರು. ಕಟಾರಿಯಾ ಅವರು ಪುದುಚೇರಿಯ 21 ನೇ ಲೆಫ್ಟಿನೆಂಟ್ ಗವರ್ನರ್.

- **<u>ಐಸಿಸಿ ಏಕದಿನ ಪಂದ್ಯ ಶ್ರೇಣಿ ಭಾರತ ನಂ.1:</u>** ಸತತ ಗೆಲುವಿನಿಂದ ಬೀಗುತ್ತಿರುವ ಟೀಮ್ ಇಂಡಿಯಾ ಏಕದಿನ ಪಂದ್ಯ ಶ್ರೇಣಿಯಲ್ಲಿ ಮತ್ತೆ ಮೊದಲ ಸ್ಥಾನಕ್ಕೇರಿದೆ. ಜುಲೈ 13 ರಂದು ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ ಬಿಡುಗಡೆಗೊಳಿಸಿರುವ ಏಕದಿನ ಪಂದ್ಯ ಶ್ರೇಣಿಯಲ್ಲಿ ಭಾರತ 122 ಅಂಕಗಳಿಂದ ಅಗ್ರಸ್ಥಾನದಲ್ಲಿದೆ. ಆಸ್ಟ್ರೇಲಿಯಾ (114) ಎರಡನೇ ಸ್ಥಾನದಲ್ಲಿ ಮತ್ತು ಇಂಗ್ಲೆಂಡ್ (112) ಮೂರನೇ ಸ್ಥಾನದಲ್ಲಿದೆ.

- **<u>ಪಾಕ್ ಕ್ರಿಕೆಟ್ ಆಯ್ಕೆ ಸಮಿತಿಗೆ ಮೊಯಿನ್ ಖಾನ್:</u>** ಪಾಕಿಸ್ತಾನದ ಮಾಜಿ ಕ್ರಿಕೆಟ್ ಆಟಗಾರ ಮೊಯಿನ್ ಖಾನ್ ಅವರನ್ನು ಪಾಕ್ ಕ್ರಿಕೆಟ್ ತಂಡದ ಆಯ್ಕೆ ಸಮಿತಿಯ ಮುಖ್ಯಸ್ಥರನ್ನಾಗಿ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಆಯ್ಕೆ ಮಾಡಿದೆ. ಇಕ್ಬಾಲ್ ಕಾಶಿಮ್ ಅವರಿಂದ ತೆರವಾಗಿದ್ದ ಸ್ಥಾನವನ್ನು ಮೊಯಿನ್ ಖಾನ್ ಅವರು ತುಂಬಲ್ಲಿದ್ದಾರೆ. ಕಳೆದ ತಿಂಗಳು ಕಾಶಿಮ್ ಅವರು ಈ ಹುದ್ದೆಗೆ ರಾಜೀನಾಮೆ ನೀಡಿದ್ದರು.

- **<u>ಜೈಲು ಶಿಕ್ಷೆ ಅನುಭವಿಸುತ್ತಿರುವ ಅಥವಾ ಪೊಲೀಸ್ ಬಂಧನದಲ್ಲಿರುವ ವ್ಯಕ್ತಿಗಳು ಚುನಾವಣೆಯಲ್ಲಿ ಸ್ಪರ್ಧಿಸುವಂತಿಲ್ಲ: ಸರ್ವೋಚ್ಚ ನ್ಯಾಯಾಲಯ:-</u>** ಸರ್ವೋಚ್ಚ ನ್ಯಾಯಾಲಯವು ತನ್ನ ಮಹತ್ವದ ತೀರ್ಪಿನಲ್ಲಿ ಇನ್ನು ಮುಂದೆ 'ಜೈಲು ಶಿಕ್ಷೆ ಅನುಭವಿಸುತ್ತಿರುವ ಅಥವಾ ಪೊಲೀಸ್ ಬಂಧನದಲ್ಲಿರುವ ವ್ಯಕ್ತಿಗಳು ಚುನಾವಣೆಯಲ್ಲಿ ಸ್ಪರ್ಧಿಸುವಂತಿಲ್ಲ' ಎಂದು ಆದೇಶ

ಹೊರಡಿಸಿದೆ. ಈ ಆದೇಶದಿಂದ ಹಲವಾರು ವರ್ಷಗಳಿಂದ ವಿಚಾರಣಾಧೀನರಾಗಿ ಜೈಲು ಶಿಕ್ಷೆ ಅನುಭವಿಸುತ್ತಿದ್ದ ವ್ಯಕ್ತಿಗಳು ಜೈಲಿನಲ್ಲಿದ್ದುಕೊಂಡೇ ಚುನಾವಣೆ ಸ್ಪರ್ಧಿಸುವುದಕ್ಕೆ ಕೊನೆ ಹಾಡಲಿದೆ.

- **ಅಮರ್ಥ್ಯ ಸೇನ್ ಮತ್ತು ಜೀನ್ ಡ್ರೇಝ್ ಬರೆದಿರುವ ಪುಸ್ತಕ ಬಿಡುಗಡೆ**: ಖ್ಯಾತ ಅರ್ಥಶಾಸ್ತ್ರ ತಜ್ಞ ಅಮರ್ಥ್ಯ ಸೇನ್ ಮತ್ತು ಸಾಮಾಜಿಕ ಚಿಂತಕರಾದ ಜೀನ್ ಡ್ರೇಝ್ ಅವರು ಬರೆದಿರುವ "An Uncertain Glory: India and Its Contradictions" ಪುಸ್ತಕವನ್ನು ಇತ್ತೀಚೆಗೆ ಬಿಡುಗಡೆಗೊಳಿಸಲಾಯಿತು. ಪೆಂಗ್ವಿನ್ ಬುಕ್ಸ್ ಇಂಡಿಯಾ ಈ ಪುಸ್ತಕವನ್ನು ಪ್ರಕಾಶನಗೊಳಿಸಿದೆ. ಸ್ವಾತಂತ್ರ್ಯ ನಂತರ ಭಾರತ ಸಾಧಿಸಿರುವ ಯಶಸ್ಸು ಮತ್ತು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಭಾರತ ಮುಂದುವರೆಯುತ್ತಿರುವ ಯಶೋಗಾಥೆಯ ಬಗ್ಗೆ ಈ ಪುಸ್ತಕದಲ್ಲಿ ವರ್ಣಿಸಲಾಗಿದೆ.

- **ಸಾಹಿತಿ ವಾಲಿ ನಿಧನ:** ತಮಿಳು ಚಿತ್ರರಂಗದ ಹಿರಿಯ ಸಾಹಿತಿ ವಾಲಿ ನಿಧನರಾದರು. ಅವರಿಗೆ 82 ವರ್ಷ ವಯಸ್ಸಾಗಿತ್ತು. ತಮಿಳು ಚಿತ್ರರಂಗದ ದಿಗ್ಗಜರಾದ ಎಂ.ಜಿ.ರಾಮಚಂದ್ರನ್, ರಜನಿಕಾಂತ್, ಕಮಲ್ ಹಾಸನ್ ಸೇರಿದಂತೆ ಇತ್ತೀಚಿನ ಯುವ ನಾಯಕರ ಚಿತ್ರಗಳಿಗೂ ವಾಲಿ ಅವರು ಸಾಹಿತ್ಯ ರಚಿಸಿದ್ದರು. ಕೇವಲ ಸಾಹಿತಿ ಅಲ್ಲದೇ ಹಲವು ಚಿತ್ರಗಳಲ್ಲಿ ಅವರು ನಟಿಸಿದ್ದರು. ವಾಲಿ ಅವರು ಸುಮಾರು 10,000 ಕ್ಕೂ ಹೆಚ್ಚು ಗೀತೆಗಳನ್ನು ಬರೆದಿದ್ದಾರೆ.

- **ಸಮರ್ ಮುಖರ್ಜಿ ನಿಧನ:** ಹಿರಿಯ ಸ್ವಾತಂತ್ರ ಹೋರಾಟಗಾರ ಮತ್ತು ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ-ಮಾರ್ಕ್ಸಿಸ್ಟ್ (ಸಿಪಿಐ-ಎಂ)ದ ನಾಯಕ ಸಮರ ಮುಖರ್ಜಿ ಅವರು ನಿಧನರಾದರು. 100 ವರ್ಷ ವಯಸ್ಸಿನ ಮುಖರ್ಜಿ ಅವಿವಾಹಿತರಾಗಿಯೇ ಉಳಿದಿದ್ದರು. ಮುಖರ್ಜಿ ಮೂರು ಲೋಕಸಭೆ ಮತ್ತು ಒಂದು ಬಾರಿ ರಾಜ್ಯ ಸಭೆಗೆ ಆಯ್ಕೆಯಾಗಿದ್ದರು.

- ***ಹೆಲಿಕಾಪ್ಟರ್ ಶಾಟ್ ಅನ್ವೇಷಕ ಸಂತೋಷ್ ಲಾಲ್ ನಿಧನ:*** ಜಾರ್ಖಂಡ್ ರಣಜಿ ಕ್ರಿಕೆಟ್ ಸ್ಕ್ವಾಡ್ ಮತ್ತು ಭಾರತ ಕ್ರಿಕೆಟ್ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ ಅವರ ಬಹು ನೆಚ್ಚಿನ "ಹೆಲಿಕಾಪ್ಟರ್ ಶಾಟ್" ಅನ್ವೇಷಕ ಸಂತೋಷ್ ಲಾಲ್ ಅವರು ನಿಧನರಾದರು. ಮಹೇಂದ್ರ ಸಿಂಗ್ ಧೋನಿ ಅವರ ನೆಚ್ಚಿನ ಸ್ನೇಹಿತರಾಗಿದ್ದ ಸಂತೋಷ್ ಅನಾರೋಗ್ಯದಿಂದ ಬಳಲುತ್ತಿದ್ದರು.
- **ಸೆರೆನಾ ಗೆ ಸ್ವೀಡಿಶ್ ಪ್ರಶಸ್ತಿ**: ವಿಶ್ವದ ನಂ.1 ಆಟಗಾರ್ತಿ ಸೆರೆನಾ ವಿಲಿಯಮ್ಸ್ ಅವರು ಸ್ವೀಡಿಶ್ ಓಪನ್ ಪ್ರಶಸ್ತಿಯನ್ನು ಗೆದ್ದುಕೊಂಡರು. ಪ್ರಸ್ತುಕ ಸಾಲಿನಲ್ಲಿ ಸೆರೆನಾ ಅವರಿಗೆ ಲಭಿಸುತ್ತಿರುವ 51 ನೇ ಪ್ರಶಸ್ತಿ ಇದಾಗಿದೆ. ಫೈನಲ್ ಪಂದ್ಯದಲ್ಲಿ ಸೆರೆನಾ 6-4, 6-1 ಸೆಟ್ ಗಳಿಂದ ಜೊಹಾನ್ನಾ ಲಾರ್ಸನ್ ಅವರನ್ನು ಮಣಿಸುವ ಮೂಲಕ ಪ್ರಶಸ್ತಿಯನ್ನು ಗೆದ್ದುಕೊಂಡರು.

- **ಚೀನಾದಿಂದ ಮೂರು ಉಪಗ್ರಹಗಳ ಉಡಾವಣೆ**: ಬಾಹ್ಯಾಕಾಶ ವೈಜ್ಞಾನಿಕ ಅಧ್ಯಯನ ಕೈಗೊಳ್ಳುವ ಉದ್ದೇಶದಿಂದ ಚೀನಾ ಇತ್ತೀಚೆಗೆ ಮೂರು ಉಪಗ್ರಹಗಳನ್ನು ಉಡಾವಣೆ ಮಾಡಿದೆ. ಚೌಂಗ್ ಕ್ಸಿನ್-3, ಶಿಯಾನ್-7 ಮತ್ತು ಶಿಜಿಯನ್-15 ಇವೇ ಈ ಮೂರು ಉಪಗ್ರಹಗಳಾಗಿವೆ.

- **ಪಾಟ್ನಾದಲ್ಲಿ ಅಂತರರಾಷ್ಟ್ರೀಯ ಭೋಜಪುರಿ ಮಹೋತ್ಸವ:** ಬಿಹಾರ್ ರಾಜಧಾನಿ ಪಾಟ್ನಾದಲ್ಲಿ ಅಂತರರಾಷ್ಟ್ರೀಯ ಭೋಜಪುರಿ ಮಹೋತ್ಸವವನ್ನು ಇತ್ತೀಚೆಗೆ ಏರ್ಪಡಿಸಲಾಗಿತ್ತು. ಭೋಜಪುರಿ ಅಕಾಡೆಮಿ ಸ್ಥಾಪನೆಯಾಗಿ 35 ವರ್ಷ ತುಂಬಿದ ಸ್ಮರಣಾರ್ಥ ಈ ಮಹೋತ್ಸವವನ್ನು ಏರ್ಪಡಿಸಲಾಗಿತ್ತು. ದೇಶ ವಿದೇಶಗಳಿಂದ ಆಗಮಿಸಿದ್ದ ಭೋಜಪುರಿ ಭಾಷೆ ಅಭಿಮಾನಿಗಳು ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

- **ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ದೇವೇಂದ್ರಗೆ ಚಿನ್ನ:** ಫ್ರಾನ್ಸ್ ನ ಲಿಯಾನ್ ನಲ್ಲಿ ನಡೆಯುತ್ತಿರುವ ಐಸಿಸಿ ವಿಶ್ವ ಪ್ಯಾರಾ ಅಥ್ಲೆಟಿಕ್ ಚಾಂಪಿಯನ್ ಷಿಪ್ ನಲ್ಲಿ ಭಾರತದ ದೇವೇಂದ್ರ ಜಾಜಾರಿಯಾ ಅವರು ಚಿನ್ನದ ಪದಕವನ್ನು ಗೆದ್ದುಕೊಂಡರು. ಈ ಮೂಲಕ ಈ ಚಾಂಪಿಯನ್ ಷಿಪ್ ನಲ್ಲಿ ಭಾರತಕ್ಕೆ ಮೊದಲ ಪದಕವನ್ನು ದೇವೇಂದ್ರ ಅವರು ತಂದುಕೊಟ್ಟರು. ರಾಜಸ್ತಾನ ಮೂಲದ ದೇವೇಂದ್ರ "ಎಫ್ 46" ವಿಭಾಗದ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಈ ಸಾಧನೆಯನ್ನುಗೈದರು.

- **ನಟಿ ಮಂಜುಳಾ ವಿಜಯ್ ಕುಮಾರ್ ನಿಧನ:** ದಕ್ಷಿಣ ಭಾರತದ ಹೆಸರಾಂತ ನಟಿ ಮಂಜುಳಾ ವಿಜಯ್ ಕುಮಾರ್ ನಿಧನರಾದರು. ಅವರಿಗೆ 59 ವರ್ಷ ವಯಸ್ಸಾಗಿತ್ತು. ಮಂಜುಳಾ ಅವರು ಜಾಂಡೀಸ್ ಕಾಯಿಲೆಯಿಂದ ಬಳಲುತ್ತಿದ್ದರು ಎನ್ನಲಾಗಿದೆ. ತಮಿಳು, ತೆಲುಗು ಮತ್ತು ಕನ್ನಡ ಚಿತ್ರಗಳಲ್ಲಿ ಅವರು ಅಭಿನಯಿಸಿದ್ದರು. ಬಾಲ ನಟಿಯಾಗಿ "'ಶಾಂತಿ ನಿಲಯಂ" ಅವರು ಮೊದಲ ಬಾರಿಗೆ ನಟಿಸಿದ್ದರು. ಬಳಿಕ ತಮಿಳಿನ ಖ್ಯಾತ ನಟ M G ರಾಮಚಂದ್ರನ್ ಅವರ ಜೊತೆ ನಟಿಸಿ ಪ್ರೇಕ್ಷಕರ ಪ್ರಶಂಸೆಯನ್ನು ಗಿಟ್ಟಿಸಿದ್ದರು.

- **"ಟೆನ್ನಿಸ್ ಹಾಲ್ ಆಫ್ ಫೇಮ್" ಗೆ ಮಾರ್ಟಿನಾ ಹಿಂಗೀಸ್ ಸೇರ್ಪಡೆ**: ಸ್ವಿಟ್ಜರ್ಲ್ಯಾಂಡ್ ನ ಪ್ರಖ್ಯಾತ ಟೆನ್ನಿಸ್ ತಾರೆ ಮಾರ್ಟಿನಾ ಹಿಂಗೀಸ್ ಅವರು ಟೆನ್ನಿಸ್ ಹಾಲ್ ಆಫ್ ಫೇಮ್ ಗೆ ಸೇರ್ಪಡೆಗೊಂಡರು. ಈ ಮೂಲಕ ಈ ಗೌರವಕ್ಕೆ ಪಾತ್ರರಾದ ವಿಶ್ವದ ನಾಲ್ಕನೇ ಕಿರಿಯ ಆಟಗಾರ್ತಿ ಎಂಬ ಪ್ರಶಂಸೆಗೂ ಹಿಂಗೀಸ್ ಅವರು ಭಾಜನರಾದರು. ಹಿಂಗೀಸ್ ಆಸ್ಟ್ರೇಲಿಯಾ ಒಪನ್ ಟೆನ್ನಿಸ್ ಟೈಟಲ್ ನ್ನು ಮೂರು ಬಾರಿ ಗೆದ್ದಿದ್ದರು. ಜತೆಗೆ ವಿಂಬಲ್ಡನ್ ಹಾಗೂ ಯು.ಎಸ್ ಒಪನ್ ಟೈಟಲ್ ಅನ್ನು ಒಂದು ಬಾರಿ ಗೆದ್ದಿದ್ದರು.

- **ಭಾರತ-ನೈಜೀರಿಯಾ ಒಪ್ಪಂದ**: ನೈಜೀರಿಯಾದಲ್ಲಿ ಸೋಲಾರ್ ವಿದ್ಯುತ್ ಘಟಕವನ್ನು ಸ್ಥಾಪಿಸುವ ಸಲುವಾಗಿ ಭಾರತ ಮತ್ತು ನೈಜೀರಿಯಾ ಒಪ್ಪಂದಕ್ಕೆ ಸಹಿ ಹಾಕಿದವು. ಈ ಒಪ್ಪಂದಿಂದ ನೈಜೀರಿಯಾದಲ್ಲಿ ವಿದ್ಯುತ್ ಕೊರತೆಯನ್ನು ನೀಗಲಿರುವುದಾಗಿ ಹೇಳಲಾಗಿದೆ. ಭಾರತ ಸರ್ಕಾರದ ಕಾರ್ಯದರ್ಶಿಯಾದ ಸುತನ್ ಬೆಹುರಿಯಾ ಮತ್ತು

ನೈಜೀರಿಯಾದ ಇಂಧನ ಸಚಿವಾಲಯಾದ ಕಾರ್ಯದರ್ಶಿಯಾದ ಗಾಡ್ನೊಸ್ ಇಗಾಲಿ ಅವರ ಉಪಸ್ಥಿತಿಯಲ್ಲಿ ಒಪ್ಪಂದಕ್ಕೆ ಸಹಿಹಾಕಲಾಯಿತು. ಈ ಒಪ್ಪಂದದ ಅನ್ವಯ BHEL ನೈಜೀರಿಯಾದಲ್ಲಿ ಸೋಲಾರ್ ಘಟಕವನ್ನು ಸ್ಥಾಪಿಸುವ ಸಂಬಂಧ ಪೂರ್ವಭಾವಿ ಅಧ್ಯಯನವನ್ನು ಕೈಗೊಳ್ಳಲಿದೆ.

- **<u>ಪದ್ಮಶ್ರೀ ಮತ್ತು ಪದ್ಮಭೂಷಣ ಪ್ರಶಸ್ತಿ ವಿಜೇತ ಸಿ.ಪಿ.ಶ್ರೀನಿವಾಸನ್ ನಿಧನ:</u>**"ಇಂಟರ್ ನ್ಯಾಷನಲ್ ಮೆರಿಟೈಮ್ ಆರ್ಗನೈಸೇಷನ್"ಸೆಕ್ರೆಟರಿ-ಜನರಲ್ ಆಗಿದ್ದ ಹಾಗೂ ಪದ್ಮಶ್ರೀ ಮತ್ತು ಪದ್ಮಭೂಷಣ ಪ್ರಶಸ್ತಿ ವಿಜೇತ ಸಿ.ಪಿ.ಶ್ರೀನಿವಾಸನ್ ಅವರು ನಿಧನರಾದರು. ಶ್ರೀನಿವಾಸನ್ ಅವರು ಇಟಲಿಯಲ್ಲಿ "ವಿಶ್ವ ಮೆರಿಟೈಮ್ ಅಕಾಡೆಮಿ" ಹಾಗೂ ಮಾಲ್ಟಾದಲ್ಲಿ "ಇಂಟರ್ ನ್ಯಾಷನಲ್ ಮೆರಿಟೈಮ್ ಲಾ ಇನ್ ಸ್ಟಿಟ್ಯೂಟ್" ನ ಸಂಸ್ಥಾಪನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು. 1972 ರಲ್ಲಿ ಪದ್ಮಭೂಷಣ ಪ್ರಶಸ್ತಿ ಮತ್ತು 2009 ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ಅವರಿಗೆ ನೀಡಲಾಗಿತ್ತು. ಇದಲ್ಲದೇ ಶ್ರೀನಿವಾಸ್ ಅವರು ಇನ್ನೂ ಅನೇಕ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

- **<u>ಎ.ಆರ್. ರಾಥರ್ GST ನೂತನ ಚೇರಮನ್:</u>** ಜಮ್ಮು ಮತ್ತು ಕಾಶ್ಮೀರದ ಹಣಕಾಸು ಸಚಿವರಾದ ಅಬ್ದುಲ್ ರಹೀಮ್ ರಾಥರ್ ಅವರನ್ನು ಸರಕು ಮತ್ತು ಸೇವಾ ತೆರಿಗೆ (GST) ಕುರಿತಾದ ರಾಜ್ಯ ಹಣಕಾಸು ಸಚಿವರ ಉನ್ನತ ಸಮಿತಿಯ ಅಧ್ಯಕ್ಷರನ್ನಾಗಿ ಆಯ್ಕೆಮಾಡಲಾಗಿದೆ. ಬಿಹಾರದಲ್ಲಿ ಜೆಡಿ-ಯು ಮತ್ತು ಬಿಜೆಪಿ ನಡುವೆ ಬಿರುಕು ಉಂಟಾದ ಹಿನ್ನಲೆಯನ್ನಲ್ಲಿ ಸುಶೀಲ್ ಕುಮಾರ್ ಮೋದಿ ನೀಡಿದ ರಾಜೀನಾಮೆಯಿಂದ ಈ ಸ್ಥಾನ ತೆರವಾಗಿತ್ತು.

- **<u>ಬಿಗ್ ವಾಷ್ ಗೆ ಶೇನ್ ವಾರ್ನ್ ಗುಡ್ ಬೈ:</u>** ಲೆಗ್ ಸ್ಪಿನ್ನರ್ ಶೇನ್ ವಾರ್ನ್ ಆಸ್ಟ್ರೇಲಿಯಾದ ಬಿಗ ಬಾಷ್ ಲೀಗ್ ಗೂ ವಿದಾಯ ಹೇಳಿದ್ದಾರೆ. ಈ ಮೂಲಕ ಎಲ್ಲಾ ಮಾದರಿಯ ಕ್ರಿಕೆಟ್ ಗೆ ಶೇನ್ ವಾರ್ನ್ ವಿದಾಯ ಹೇಳಿದಂತಾಗಿದೆ.

- **<u>ಅಡ್ವರ್ಟೈಸಿಂಗ್ ಏಜೆನ್ಸಿಸ್ ಅಸೋಸಿಯೇಷನ್ ಆಫ್ ಇಂಡಿಯಾದ ಮುಖ್ಯಸ್ಥರಾಗಿ "ಅರವಿಂದ್ ಶರ್ಮಾ":</u>** ಲಿಯೋ ಬರ್ನೆಟ್ ಸಂಸ್ಥೆಯ ಸಿಇಓ ಮತ್ತು ಅಧ್ಯಕ್ಷರಾದ ಅರವಿಂದ್ ಶರ್ಮಾ ಅವರನ್ನು ಅಡ್ವರ್ಟೈಸಿಂಗ್ ಏಜೆನ್ಸಿಸ್ ಅಸೋಸಿಯೇಷನ್ ಆಫ್ ಇಂಡಿಯಾ (AAAI)ದ ಅಧ್ಯಕ್ಷರನ್ನಾಗಿ ನೇಮಿಸಿಲಾಗಿದೆ. ಇದೇ ವೇಳೆ ಎಂ.ಜಿ.ಪರಮೇಶ್ವರನ್ ಅವರನ್ನು ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಎಎಎಐ ರಾಷ್ಟ್ರಮಟ್ಟದಲ್ಲಿ ಅಡ್ವರ್ಟೈಸಿಂಗ್ ಏಜೆನ್ಸಿಗಳನ್ನು ಪ್ರತಿನಿಧಿಸುವ ಸಂಸ್ಥೆಯಾಗಿದ್ದು, ಸ್ವಾತಂತ್ರವಾಗಿ ಕಾರ್ಯನಿರ್ವಹಿಸುತ್ತಿದೆ.

- **<u>ಸ್ಪೈಸ್ ಜೆಟ್ ಗೆ "ನೀಲ್ ಮಿಲ್ಸ್" ವಿದಾಯ:</u>** ಅಗ್ಗ ದರದ ವಿಮಾನಯಾನಕ್ಕೆ ಹೆಸರುವಾಸಿಯಾಗಿರುವ ಸ್ಪೈಸ್ ಜೆಟ್ ವಿಮಾನಯಾನ ಸಂಸ್ಥೆಯ ಸಿಇಓ ಹುದ್ದೆಗೆ "ನೀಲ್ ಮಿಲ್ಸ್" ರಾಜೀನಾಮೆ ನೀಡಿದ್ದಾರೆ. ಇತ್ತೀಚೆಗಷ್ಟೇ ಸಂಸ್ಥೆ ಚೀಫ್ ಕಮರ್ಷಿಯಲ್ ಆಫೀಸರ್ ಆಗಿದ್ದ ಹರೀಶ್ ಮೊಹಿದ್ದೀನ್ ಕುಟ್ಟಿ ಅವರು ಸಹ ರಾಜೀನಾಮೆ ನೀಡಿದ್ದರು.

- **ಫ್ರೂಮ್ 100ನೇ ಟೂರ್ ಡಿ ಫ್ರಾನ್ಸ್ ಚಾಂಪಿಯನ್**: ಬ್ರಿಟನ್ ನ ಕ್ರಿಸ್ಟೋಫರ್ ಫ್ರೂಮ್ 100 ನೇ ಆವೃತ್ತಿಯ ಟೂರ್ ಡಿ ಫ್ರಾನ್ಸ್ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಟೂರ್ ಡಿ ಫ್ರಾನ್ಸ್ ನಲ್ಲಿ ಕೊನೆಯ ಭಾಗವಾದ ರೋಡ್ ರೇಸ್ ನಲ್ಲಿ ಫ್ರೂಮ್ ತಮ್ಮ ಛಾಪು ಮೂಡಿಸಿದರು. ಈ ಮೂಲಕ ಟೂರ್ ಡಿ ಫ್ರಾನ್ಸ್ ಪ್ರಶಸ್ತಿ ಎರಡನೇ ಭಾರಿಗೆ ಬ್ರಿಟನ್ ಪಾಲಾಯಿತು. 2012 ರಲ್ಲಿ ಈ ಪ್ರಶಸ್ತಿಯನ್ನು ಬ್ರ್ಯಾಡ್ಲಿಗ್ಗಿನ್ಸ್ ಗೆದ್ದಿದ್ದರು.

- **ಜುಲೈ 26 ಕಾರ್ಗಿಲ್ ದಿವಸ್**: ಜುಲೈ 26 ಇಡೀ ದೇಶಕ್ಕೆ ಸಂಭ್ರಮದ ದಿನ. ಪಾಕಿಸ್ತಾನ ಸೇನೆಯನ್ನು ಹಿಮಗಟ್ಟಿದ ಕಾರ್ಗಿಲ್ ಪ್ರದೇಶದಿಂದ ಹಿಮ್ಮೆಟ್ಟಿಸಿ ಭಾರತೀಯ ಸೇನೆ ವಿಜಯ ಪತಾಕೆಯನ್ನು ಹಾರಿಸಿದ ಸ್ಮರಣೆಗಾಗಿ ಜುಲೈ 26 ನ್ನು ಕಾರ್ಗಿಲ್ ದಿವಸ್ ಅಥವಾ ವಿಜಯ್ ದಿವಸ್ ಎಂದು ಆಚರಿಸಲಾಗುತ್ತದೆ. ಜುಲೈ 26, 2013 ಈ ದಿವಸಕ್ಕೆ 14 ವರ್ಷ ಸಂದಿದೆ. 1999 ರಲ್ಲಿ 60 ದಿನಗಳ ಕಾಲ ನಡೆದ ಭಾರತ-ಪಾಕ್ ಯುದ್ಧ ಜುಲೈ 26 ರಂದು ಭಾರತ ಗೆಲುವು ಸಾಧಿಸುವ ಮೂಲಕ ಅಂತ್ಯ ಕಂಡಿತು. ದುರಂತವೆಂದರೆ ಈ ಯುದ್ಧದಲ್ಲಿ ಭಾರತದ ಸುಮಾರು 527 ಸೈನಿಕರು ಜೀವತೆತ್ತರು. ಯುದ್ಧದಲ್ಲಿ ಮಡಿದು ಭಾರತಕ್ಕೆ ಗೆಲುವು ತಂದುಕೊಟ್ಟ ಹುತಾತ್ಮ ಯೋಧರಿಗೆ ಈ ದಿನದಂದು ಭಾವಪೂರ್ಣ ನಮನವನ್ನು ಸಲ್ಲಿಸಲಾಗುವುದು.

- **ಒಬೇದ್ ಸಿದ್ದಿಕಿ ನಿಧನ:** ಖ್ಯಾತ ಜೀವವಿಜ್ಞಾನ ವಿಜ್ಞಾನಿ ಮತ್ತು ಬೆಂಗಳೂರಿನ ರಾಷ್ಟ್ರೀಯ ಜೀವವಿಜ್ಞಾನ ಕೇಂದ್ರದ ನಿವೃತ್ತ ನಿರ್ದೇಶಕ ಒಬೇದ್ ಸಿದ್ದಿಕಿ ಅವರು ನಿಧನರಾದರು. ದೇಶದ ಜೀವ ವಿಜ್ಞಾನ ಕ್ಷೇತ್ರಕ್ಕೆ ಸಿದ್ದಿಕಿ ಅವರು ಅಪಾರ ಸೇವೆ ಸಲ್ಲಿಸಿದ್ದರು. 1962 ರಲ್ಲಿ ಹೋಮಿ ಬಾಬಾ ಅವರ ಆಹ್ವಾನದ ಮೇರೆಗೆ ಟಾಟಾ ಇನ್ ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ ನಲ್ಲಿ ಜೀವ ವಿಜ್ಞಾನ ಘಟಕ ಆರಂಭಿಸುವ ಮೂಲಕ ಅನೇಕ ಸಂಶೋಧನೆಯನ್ನು ಕೈಗೊಂಡು ಆಧುನಿಕ ಸಂಶೋಧನ ಪ್ರಕ್ರಿಯೆಗೆ ಹೊಸ ಆಯಾಮ ನೀಡಿದ್ದರು.

- **ಅಂತರರಾಷ್ಟ್ರೀಯ ಕ್ರಿಕೆಟ್ ನಲ್ಲಿ 400 ಸಿಕ್ಸ್ ಆಫ್ರಿದಿ ಸಾಧನೆ:** ಪಾಕಿಸ್ತಾನದ ಹೆಸರಾಂತ ಕ್ರಿಕೆಟ್ ಆಟಗಾರ ಶಾಹೀದ್ ಆಫ್ರಿದಿ ಅಂತರರಾಷ್ಟ್ರೀಯ ಕ್ರಿಕೆಟ್ ನಲ್ಲಿ 400 ಸಿಕ್ಸ್ ಗಳನ್ನು ಪೇರಿಸಿದ ಮೊದಲ ಕ್ರಿಕೆಟ್ ಆಟಗಾರ ಎಂಬ ಕೀರ್ತಿಗೆ ಭಾಜನರಾದರು. ವೆಸ್ಟ್ ಇಂಡೀಸ್ ಮತ್ತು ಪಾಕ್ ತಂಡಗಳ ನಡುವೆ ಇತ್ತೀಚೆಗೆ ನಡೆದ ಟಿ-20 ಕ್ರಿಕೆಟ್ ಪಂದ್ಯಾವಳಿಯಲ್ಲಿ ಆಫ್ರಿದಿ ಈ ಸಾಧನೆಗೈದರು. ಇನ್ನು ವೆಸ್ಟ್ ಇಂಡೀಸ್ ನ ಕ್ರಿಸ್ ಗೇಲ್ 353 ಸಿಕ್ಸ್ ಗಳೊಂದಿಗೆ ಅತಿ ಹೆಚ್ಚು ಸಿಕ್ಸ್ ಬಾರಿಸಿರುವ ಎರಡನೇ ಆಟಗಾರ ಎನಿಸಿದ್ದಾರೆ.

- **ಲತಾ ಮಂಗೇಶ್ಕರ್ ಗೆ ಯಶ್ ಚೋಪ್ರ ಪ್ರಶಸ್ತಿ :** ಹೆಸರಾಂತ ಗಾಯಕಿ ಲತಾ ಮಂಗೇಶ್ಕರ್ ಅವರನ್ನು ಮೊದಲನೇ ನ್ಯಾಷನಲ್ ಯಶ್ ಚೋಪ್ರ ಮೆಮೊರಿಯಲ್ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಬಾಲಿವುಡ್ ಮತ್ತು ಭಾರತ ಸಿನಿಮಾ ರಂಗಕ್ಕೆ ಅಪಾರ ಕೊಡುಗೆ ನೀಡಿ ಕಳೆದ ವರ್ಷ ನಿಧನ ಹೊಂದಿದ ಯಶ್ ಚೋಪ್ರ ಅವರ ಸ್ಮರಣಾರ್ಥ ಈ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ.

- **ಸ್ಯಾಮಸಂಗ್ ವಿಶ್ವದ ಲಾಭದಾಯಕ ಮೊಬೈಲ್ ಹ್ಯಾಂಡ್ ಸೆಟ್ ಮಾರಾಟ ಸಂಸ್ಥೆ:** ವಿಶ್ವದ ಅತ್ಯಂತ ಹೆಚ್ಚು ಲಾಭದಾಯಕ ಮೊಬೈಲ್ ಹ್ಯಾಂಡ್ ಸೆಟ್ ಮಾರಾಟ ಸಂಸ್ಥೆಯಾಗಿ ಸ್ಯಾಮಸಂಗ್ ಹೊರಹೊಮ್ಮಿದೆ. ಕೊರಿಯಾ ಮೂಲದ ಈ ಸಂಸ್ಥೆ ಆಪಲ್ ಸಂಸ್ಥೆಯನ್ನು ಹಿಂದಿಕ್ಕಿ ಈ ಹಿರಿಮೆಗೆ ಪಾತ್ರವಾಗಿದೆ. ಕಳೆದ ನಾಲ್ಕು ವರ್ಷಗಳಿಂದ ಆಪಲ್ ಸಂಸ್ಥೆ ಹೆಚ್ಚು ಲಾಭದಾಯಕ ಸಂಸ್ಥೆ ಎನಿಸಿಕೊಂಡಿತ್ತು.

- **ಅಂಜಲೀನಾ ಜೊಲಿ ಅತ್ಯಂತ ಹೆಚ್ಚು ಸಂಭಾವನೆ ಪಡೆಯುವ ಹಾಲಿವುಡ್ ನಟಿ:** ಫೋರ್ಬ್ಸ್ ನಿಯತಕಾಲಿಕೆ ಪ್ರಕಾರ ಹಾಲಿವುಡ್ ನಲ್ಲಿ ಅತ್ಯಂತ ಹೆಚ್ಚು ಸಂಭಾವನೆ ಪಡೆಯುವ ನಟಿ ಎಂಬ ಖ್ಯಾತಿಗೆ ಅಂಜಲೀನಾ ಜೊಲಿ ಪಾತ್ರರಾಗಿದ್ದಾರೆ. ಅಂದಾಜಿನ ಪ್ರಕಾರ ಜೊಲಿ ಅವರ ಒಟ್ಟು ಸಂಭಾವನೆ 33 ಮಿಲಿಯನ್ ಡಾಲರ್ ಎನ್ನಲಾಗಿದೆ. ಆಸ್ಕರ್ ಪ್ರಶಸ್ತಿ ವಿಜೇತ ಜೆನ್ನಿಫರ್ ಲಾರೆನ್ಸ್ 26 ಮಿಲಿಯನ್ ಡಾಲರ್ ಸಂಭಾವನೆಯೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ. ಕ್ರಿಸ್ಟನ್ ಸ್ಟೀವರ್ಟ್ 22 ಮಿಲಿಯನ್ ಡಾಲರ್ ಗಳಿಕೆಯ ಮೂಲಕ ಮೂರನೇ ಸ್ಥಾನವನ್ನು ಪಡೆದುಕೊಂಡಿದ್ದಾರೆ.

- **ಆಸ್ಟ್ರೇಲಿಯನ್ ನೆಟ್ ವರ್ಕ್ ಮತ್ತು ಪ್ರಸಾರ ಭಾರತಿ ಒಪ್ಪಂದಕ್ಕೆ ಸಹಿ:** ಆಸ್ಟ್ರೇಲಿಯನ್ ನೆಟ್ ವರ್ಕ್ ನಡುವಿನ ಸಂಬಂಧವನ್ನು ಮತ್ತಷ್ಟು ಉತ್ತಮಪಡಿಸುವ ಒಪ್ಪಂದವೊಂದಕ್ಕೆ ಪ್ರಸಾರ ಭಾರತಿ ಇತ್ತೀಚೆಗೆ ಸಹಿ ಹಾಕಿತು. ಪ್ರಸಾರ ಭಾರತಿ ಸಿಇಓ ಜವಹಾರ್ ಸಿರ್ಕಾರ್ ಮತ್ತು ಎಬಿಸಿ ಇಂಟರ್ ನ್ಯಾಷನಲ್ ಸಿಇಓ ಲೈನ್ಲೆ ಮಾರ್ಷಲ್ ಅವರುಗಳ ಸಮ್ಮುಖದಲ್ಲಿ ನವದೆಹಲಿಯಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಈ ಒಪ್ಪಂದದ ಅನ್ವಯ ನವೆಂಬರ್ 1 ರಿಂದ ಎಬಿಸಿ ಇಂಟರ್ ನ್ಯಾಷನಲ್ ಚಾನೆಲ್ ಪ್ರಸಾರ ಭಾರತಿಯಲ್ಲಿ ಬಿತ್ತರಗೊಳ್ಳಲಿದೆ.

- **ಖ್ಯಾತ ಸರೋದ್ ವಾದಕ ಅಮ್ಜದ್ ಅಲಿಖಾನ್ ಅವರಿಗೆ ಈ ಬಾರಿಯ ಪ್ರತಿಷ್ಠಿತ ರಾಜೀವ್ ಗಾಂಧಿ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ:** ಖ್ಯಾತ ಸರೋದ್ ವಾದಕ ಅಮ್ಜದ್ ಅಲಿಖಾನ್ ಅವರಿಗೆ ಈ ಬಾರಿಯ ಪ್ರತಿಷ್ಠಿತ ರಾಜೀವ್ ಗಾಂಧಿ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ ನೀಡಲಾಗುವುದು. ಕೋಮು ಸೌಹಾರ್ದ ಮತ್ತು ಶಾಂತಿಗಾಗಿ ಖಾನ್ ನೀಡಿದ ಗುರುತರ ಕೊಡುಗೆಗಾಗಿ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿ 5 ಲಕ್ಷ ನಗದು, ಸನ್ಮಾನ ಪತ್ರ ಮತ್ತು ಫಲಕವನ್ನೊಳಗೊಂಡಿದೆ. ಮಾಜಿ ಪ್ರಧಾನಿಯವರ ಜನ್ಮದಿನವಾದ ಆ.20ರಂದು ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ಕಾಂಗ್ರೆಸ್ ತಿಳಿಸಿದೆ. ಈ ಹಿಂದೆ ಮದರ್ ಥೆರೇಸಾ, ಬಿಸ್ಮಿಲ್ಲಾ ಖಾನ್, ತೀಸ್ತಾ ಸೆಟಲ್ವಾಡ್, ಸ್ವಾಮಿ ಅಗ್ನಿವೇಶ್ ಸೇರಿದಂತೆ ಪ್ರಮುಖರಿಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

- **ಸವಿತಾ ಕಾನೂನಿಗೆ ಐರ್ಲೆಂಡ್ ರಾಷ್ಟ್ರಾಧ್ಯಕ್ಷರ ಸಹಿ:** ಐತಿಹಾಸಿಕ ಗರ್ಭಪಾತ ಕಾನೂನಿಗೆ ಐರ್ಲೆಂಡ್ ಅಧ್ಯಕ್ಷ ಮೈಕೆಲ್ ಡಿ ಹಿಗ್ಗಿನ್ಸ್ ಸಹಿ ಹಾಕಿದ್ದಾರೆ. ಮಂಗಳವಾರ ಅಧ್ಯಕ್ಷ ಹಿಗ್ಗಿನ್ಸ್ ಪ್ರಮುಖ ಪ್ರತಿನಿಧಿಗಳ ಸಭೆ ಕರೆದು ಸಂಸತ್ನಲ್ಲಿ ಅಂಗೀಕರಿಸಲಾಗಿದ್ದ ಕಾನೂನಿಗೆ ಸಹಿ ಹಾಕಿದರು. ಅಧ್ಯಕ್ಷರು ಸಹಿ ಹಾಕಿದ್ದರಿಂದಾಗಿ ತುರ್ತು ಪರಿಸ್ಥಿತಿಯಲ್ಲಿ ಗರ್ಭಪಾತ ಮಾಡಿಸಿಕೊಂಡು ತಾಯಿಯನ್ನು ಉಳಿಸಿಕೊಳ್ಳಲು ಹಾದಿ ಸುಗಮವಾದಂತಾಗಿದೆ. ಹೊಸ ಕಾನೂನಿನ ಜಾರಿಯಿಂದಾಗಿ

146 ವರ್ಷಗಳಿಂದ ಯಾವುದೇ ಕಾರಣಕ್ಕೂ ಗರ್ಭಪಾತ ಮಾಡಿಸಿಕೊಳ್ಳಬಾರದು ಎಂಬ ಬ್ರಿಟಿಷ್ ನಿಯಮ ತೆರೆಯ ಮರೆಗೆ ಸರಿಯಲಿದೆ. 1867ರಲ್ಲಿ ಹಳೆಯ ಕಾನೂನನ್ನು ಅಂಗೀಕರಿಸಲಾಗಿತ್ತು. ಹಳೆಯ ನಿಯಮ ಪ್ರಕಾರ ಗರ್ಭಪಾತ ಅಪರಾಧಕ್ಕೆ ಜೀವಾವಧಿ ಶಿಕ್ಷೆ ವಿಧಿಸಲಾಗುತ್ತಿತ್ತು. ಇತ್ತೀಚೆಗಷ್ಟೇ ಐರ್ಲೆಂಡ್ ಸಂಸತ್ತಿನಲ್ಲಿ ತುರ್ತು ಪರಿಸ್ಥಿತಿಯಲ್ಲಿ ಗರ್ಭಿಣಿಯರ ಜೀವ ರಕ್ಷಣೆ ಮಸೂದೆಯನ್ನು ಸರ್ವಾನುಮತದಿಂದ ಅಂಗೀಕರಿಸಿತ್ತು. ಕಳೆದ ವರ್ಷದ ಅಕ್ಟೋಬರ್ 28ರಂದು ಕರ್ನಾಟಕದ ಮೂಲದ ದಂತವೈದ್ಯೆ ಸವಿತಾ ಹಲಪ್ಪನವರ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದ ಬಳಿಕ ತುರ್ತು ಪರಿಸ್ಥಿತಿಯಲ್ಲಿ ಗರ್ಭಪಾತ ಮಾಡಿಸಿಕೊಳ್ಳಲು ಅನುಮತಿ ನೀಡಬೇಕೆಂಬ ಕೂಗು ಎದ್ದಿತ್ತು.

- **ಜಗತ್ತಿನ ಅತಿ ದೊಡ್ಡ `ಗಾಮಾ ಕಿರಣಗಳ ದೂರದರ್ಶಕ' ರಷ್ಯಾದಲ್ಲಿ ಸ್ಥಾಪನೆ:** ಜಗತ್ತಿನ ಅತಿ ದೊಡ್ಡ `ಗಾಮಾ ಕಿರಣಗಳ ದೂರದರ್ಶಕ' ಸ್ಥಾಪಿಸುವ ಕಾರ್ಯಕ್ಕೆ ಇರ್ಕುತ್ಸ್ ವಿಶ್ವವಿದ್ಯಾಲಯದ ಖಭೌತ ವಿಜ್ಞಾನಿಗಳು ಮುಂದಾಗಿದ್ದಾರೆ. ರಷ್ಯಾದ ಗಡಿಗೆ ಸಮೀಪವಿರುವ ಟಂಕಾ ಕಣಿವೆಯಲ್ಲಿ ಈ ದೂರದರ್ಶಕ ಸ್ಥಾಪಿಸಲು ನಿರ್ಧರಿಸಲಾಗಿದೆ. ಜಗತ್ತಿನಲ್ಲಿರುವ ಯಾವ ದೂರದರ್ಶಕವನ್ನೂ ಇದು ಹೋಲುವುದಿಲ್ಲ. ಅನಂತ ಆಗಸದಿಂದ ಸೂಸುವ ಶಕ್ತಿ ಕಣಗಳನ್ನು ಇದು ಸಂಗ್ರಹಿಸಿ ದಾಖಲಿಸಿಕೊಳ್ಳಲಿದೆ' ಎಂದು ವಿ.ವಿಪ್ರಕಟಣೆ ತಿಳಿಸಿದೆ. ಇದಕ್ಕೆ ತಗಲುವ ಒಟ್ಟು ವೆಚ್ಚ 920 ಲಕ್ಷ ರೂಬೆಲ್ (ಸುಮಾರು ರೂ 16.80 ಕೋಟಿ) . ವಿಶ್ವವಿದ್ಯಾಲಯದ ಭೌತವಿಜ್ಞಾನ ವಿಭಾಗ ಹಾಗೂ ರಿಸರ್ಚ್ ಇನ್‌ಸ್ಟಿಟ್ಯೂಟ್ ಆಫ್ ಅಪ್ಲೈಡ್ ಫಿಸಿಕ್ಸ್ ವಿಭಾಗದ 25 ವಿದ್ಯಾರ್ಥಿಗಳು, ಸ್ನಾತಕೋತ್ತರ ಪದವೀಧರರು ಹಾಗೂ ಸಂಶೋಧಕರು ಈ ಯೋಜನೆಯಲ್ಲಿ ಪಾಲ್ಗೊಳ್ಳುವರು. ಕಾಸ್ಮಿಕ್ ಹಾಗೂ ಗಾಮಾ ಕಿರಣಗಳ ಕುರಿತ ಸಂಶೋಧನೆಗಳು ಈಗಾಗಲೇ ಟಂಕಾ ಕಣಿವೆಯಲ್ಲಿ ನಡೆಯುತ್ತಿವೆ.